

ಪ್ರಬುದ್ಧ ಕರ್ಣಾಟಕ

ಸಂಪುಟ ೫೨ ಸಂಚಿಕೆ ೪



ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೧

ಲೇಖಕರಿಗೆ ಸೂಚನೆಗಳು

೧. 'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗಾಗಿ ಎಲ್ಲ ಬಗೆಯ ಲೇಖನಗಳಿಗೂ ಸ್ವಾಗತವಿದೆ. ಲೇಖನಗಳು ಸ್ವತಂತ್ರವಾಗಿರಬಹುದು, ಇಲ್ಲವೆ ಅನುವಾದಗಳಾಗಿರಬಹುದು. ಅನುವಾದವಾಗಿದ್ದರೆ ಮೂಲಲೇಖಕರ ಹಾಗೂ ಲೇಖನದ ಹೆಸರನ್ನು ತಪ್ಪದೆ ಸೂಚಿಸಿದ್ದು, ಲೇಖನದ ಜೊತೆಯಲ್ಲಿಯೇ ಮೂಲಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನು ಕಳುಹಿಸಬೇಕು.

೨. ಲೇಖನಗಳನ್ನು ಕಾಗದದ ಒಂದೇ ಮಗ್ಗುಲಿನಲ್ಲಿ ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೇ ಟೈಪ್ ಮಾಡಿರಬೇಕು. ಲೇಖನದೊಂದಿಗೆ ಲೇಖಕರ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು. ಲೇಖಕರಿಗೆ ಕರಡನ್ನು ತಿದ್ದುವ ಅವಕಾಶವಿಲ್ಲದಿರುವುದರಿಂದ ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿರಬಾರದು; ಅಸಂಪೂರ್ಣವಾಗಿರಬಾರದು. ಲೇಖನಗಳು ಸಚಿತ್ರವಾಗಿದ್ದರೆ, ಲೇಖನದಲ್ಲಿ ಚಿತ್ರಗಳು ಇರಬೇಕಾದ ಜಾಗವನ್ನು ನಿರ್ದೇಶಿಸಿರಬೇಕು.

೩. ಲೇಖನಗಳಲ್ಲಿ, ಇಂಗ್ಲಿಷನ್ನುಳಿದ ಅನ್ಯಭಾಷೆಗಳ ಉದ್ಧರಿತ ಭಾಗಗಳು ಕನ್ನಡ ಲಿಪಿಯಲ್ಲೇ ಇರಬೇಕು. ಅಡಿ ಟಿಪ್ಪಣಿಗಳಲ್ಲಿ, ಲೇಖಕರ ಹೆಸರು, ಪುಸ್ತಕ ಅಥವಾ ಲೇಖನಗಳ ಹೆಸರು, ಪ್ರಕಾಶಕರ ಹೆಸರು, ಸ್ಥಳ, ಪ್ರಕಟನೆಯ ವರ್ಷ ಹಾಗೂ ಸಂಬಂಧಿಸಿದ ಪುಟಸಂಖ್ಯೆ ಇವುಗಳನ್ನು ಖಚಿತವಾಗಿ ನಮೂದಿಸಿರಬೇಕು. ಮಾದರಿಗಾಗಿ ಇಲ್ಲಿ ಎರಡು ಉದಾಹರಣೆಗಳನ್ನು ಕೊಟ್ಟಿದೆ:

., ಕನ್ನಡ ಗ್ರಂಥಸಂಪಾದನೆ (ಶಾರದಾಮಂದಿರ,
ಮೈಸೂರು), ೧೯೬೪, ಪು. ೧೬,

'A century and a half of Literary
Activity in Kannada,' Kannada Stu-
dies, Vol. 1, No. 2 (Mysore 1965). p. 62.

ಸಂಸ್ಕೃತ, ತೆಲುಗು ಮತ್ತು ಹಿಂದಿ ಭಾಷೆಗಳ
ಕರಿಸಲಾಗುತ್ತದೆ. ವಿಮರ್ಶೆಗಾಗಿ ಪುಸ್ತಕಗಳನ್ನು
ನ್ನು ಕಳುಹಿಸಬೇಕು.

ಲೇಖನಗಳ ೨೫ ಪ್ರತಿಗಳನ್ನು ಒದಗಿಸಲಾಗು
ನ್ನು ವಹಿಸಿದರೆ ಹೆಚ್ಚಿಗೆ ಪ್ರತಿಗಳನ್ನೂ ಒದಗಿಸ
ಇಲ್ಲವೇ ಎಂಬುದನ್ನು ತಿಳಿಯಬಯಸುವವರು,
ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ

ಗಾಗಿ ಪುಸ್ತಕಗಳನ್ನು, ಸಂಪಾದಕರು,
, ಮಾನಸಗಂಗೋತ್ರಿ, ಮೈಸೂರು-೬,

ಲೇಖಕರಿಗೆ ಸೂಚನೆಗಳು

೧. 'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗಾಗಿ ಎಲ್ಲ ಬಗೆಯ ಲೇಖನಗಳಿಗೂ ಸ್ವಾಗತವಿದೆ. ಲೇಖನಗಳು ಸ್ವತಂತ್ರವಾಗಿರಬಹುದು, ಇಲ್ಲವೆ ಅನುವಾದಗಳಾಗಿರಬಹುದು. ಅನುವಾದವಾಗಿದ್ದರೆ ಮೂಲಲೇಖಕರ ಹಾಗೂ ಲೇಖನದ ಹೆಸರನ್ನು ತಪ್ಪದೆ ಸೂಚಿಸಿದ್ದು, ಲೇಖನದ ಜೊತೆಯಲ್ಲಿಯೇ ಮೂಲಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನು ಕಳುಹಿಸಬೇಕು.

೨. ಲೇಖನಗಳನ್ನು ಕಾಗದದ ಒಂದೇ ಮಗ್ಗುಲಿನಲ್ಲಿ ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೇ ಟೈಪ್ ಮಾಡಿರಬೇಕು. ಲೇಖನದೊಂದಿಗೆ ಲೇಖಕರ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು. ಲೇಖಕರಿಗೆ ಕರಡನ್ನು ತಿದ್ದುವ ಅವಕಾಶವಿಲ್ಲದಿರುವುದರಿಂದ ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿರಬಾರದು ; ಅಸಂಪೂರ್ಣವಾಗಿರಬಾರದು. ಲೇಖನಗಳು ಸಚಿತ್ರವಾಗಿದ್ದರೆ, ಲೇಖನದಲ್ಲಿ ಚಿತ್ರಗಳು ಇರಬೇಕಾದ ಜಾಗವನ್ನು ನಿರ್ದೇಶಿಸಿರಬೇಕು.

೩. ಲೇಖನಗಳಲ್ಲಿ, ಇಂಗ್ಲಿಷನ್ನುಳಿದ ಅನ್ಯಭಾಷೆಗಳ ಉದ್ಧರಿತ ಭಾಗಗಳು ಕನ್ನಡ ಲಿಪಿಯಲ್ಲೇ ಇರಬೇಕು. ಅಡಿ ಟಿಪ್ಪಣಿಗಳಲ್ಲಿ, ಲೇಖಕರ ಹೆಸರು, ಪುಸ್ತಕ ಅಥವಾ ಲೇಖನಗಳ ಹೆಸರು, ಪ್ರಕಾಶಕರ ಹೆಸರು, ಸ್ಥಳ, ಪ್ರಕಟನೆಯ ವರ್ಷ ಹಾಗೂ ಸಂಬಂಧಿಸಿದ ಪುಟಸಂಖ್ಯೆ ಇವುಗಳನ್ನು ಖಚಿತವಾಗಿ ನಮೂದಿಸಿರಬೇಕು. ಮಾದರಿಗಾಗಿ ಇಲ್ಲಿ ಎರಡು ಉದಾಹರಣೆಗಳನ್ನು ಕೊಟ್ಟಿದೆ :

., ಕನ್ನಡ ಗ್ರಂಥಸಂಪಾದನೆ (ಶಾರದಾಮಂದಿರ,
ಮೈಸೂರು), ೧೯೬೪, ಪು. ೧೬,

'A century and a half of Literary
Activity in Kannada,' Kannada Stu-
dies, Vol. 1, No. 2 (Mysore 1965). p. 62.

ಸಂಸ್ಕೃತ, ತೆಲುಗು ಮತ್ತು ಹಿಂದಿ ಭಾಷೆಗಳ
ಕರಿಸಲಾಗುತ್ತದೆ. ವಿಮರ್ಶೆಗಾಗಿ ಪುಸ್ತಕಗಳನ್ನು
ನ್ನು ಕಳುಹಿಸಬೇಕು.

ಲೇಖನಗಳ ೫೦ ಪ್ರತಿಗಳನ್ನು ಒದಗಿಸಲಾಗು
ನ್ನು ವಹಿಸಿದರೆ ಹೆಚ್ಚಿಗೆ ಪ್ರತಿಗಳನ್ನೂ ಒದಗಿಸ
ಇಲ್ಲವೇ ಎಂಬುದನ್ನು ತಿಳಿಯಬಯಸುವವರು,
ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ

ರ್ಗಾಗಿ ಪುಸ್ತಕಗಳನ್ನು, ಸಂಪಾದಕರು,
, ಮಾನಸಗಂಗೋತ್ರಿ, ಮೈಸೂರು-೬,

ಮಾನ್ಯರೆ,

ಈ ಸಂಚಿಕೆಯೊಂದಿಗೆ ಪ್ರಬುದ್ಧ ಕರ್ಣಾಟಕದ 52 ಮುಗಿಯುತ್ತದೆ. 53ನೆಯ ಸಂಪುಟಕ್ಕೆ ತಮ್ಮ ಚಂದಾಹಣವನ್ನು ದಯವಿಟ್ಟು ತಕ್ಷಣವೇ ಕಳಿಸಿಕೊಡಿರಿ. ಹಾಗೆ ಕಳುಹಿಸುವಾಗ ಈ ಹಾಳೆಯ ಮಗ್ಗುಲಿಗಿರುವ ಹಾಳೆಯಲ್ಲಿ ವಿವರಗಳನ್ನು ತುಂಬಿ ಕಳುಹಿಸಿಕೊಡಿರಿ.

ಇಂತೀ ನಮಸ್ಕಾರಗಳು

ಪ್ರಭುಶಂಕರ

ಡೈರೆಕ್ಟರ್

ಮಾನ್ಯರೆ,

ದಯವಿಟ್ಟು ನನ್ನನ್ನು/ಈ ಸಂಸ್ಥೆಯನ್ನು 'ಪ್ರಬುದ್ಧ ಕರ್ಣಾಟಕದ' ಐವತ್ತ ಮೂರನೆಯ ಸಂಪುಟಕ್ಕೆ ಚಂದಾದಾರನನ್ನಾಗಿ ದಾಖಲು ಮಾಡಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ವಾರ್ಷಿಕ ಚಂದಾಹಣ ನಾಲ್ಕು/ಆರು/ಎಂಟು ರೂಪಾಯಿ ಗಳನ್ನು ಮನಿಯಾರ್ಡರ್/ಚೆಕ್/ಡ್ರಾಫ್ಟ್ ಮೂಲಕ ಇಂದು ಕಳುಹಿಸಿದ್ದೇನೆ. ವಿವರಗಳನ್ನು ಕೆಳಗೆ ನಮೂದಿಸಿದ್ದೇನೆ.

ಇಂತೀ

(ರುಜು)

1. ಹೆಸರು ....
[ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ]

2. ವಿಳಾಸ ....
[ವಿದ್ಯಾರ್ಥಿಯಾಗಿದ್ದರೆ ಶಾಲೆ ಅಥವಾ ಕಾಲೇಜಿನ ಹಾಗೂ ಮನೆಯ ವಿಳಾಸಗಳೆರಡನ್ನೂ ನಮೂದಿಸಿರಿ]

3. ಶಿಫಾರಸು ....
[ವಿದ್ಯಾರ್ಥಿಗಳು ತಮ್ಮ ಶಾಲಾ ಕಾಲೇಜುಗಳ ಮುಖ್ಯಸ್ಥ ರಿಂದ ತಾವು ಅಲ್ಲಿ ವ್ಯಾಸಂಗ ಮಾಡುತ್ತಿರುವ ಬಗೆಗೆ ಇಲ್ಲಿ ಶಿಫಾರಸು ಬರೆಸಬೇಕು]

4. ಪತ್ರಿಕೆಯನ್ನು ರಿಜಿಸ್ಟ್ರೇಷನ್ ಮೂಲಕ ಕಳುಹಿಸಬೇಕೆ?....

5. ಕಳೆದ ವರ್ಷ ನನ್ನ ಚಂದಾ ಸಂಖ್ಯೆ ....

ಪ್ರಬುದ್ಧ ಕರ್ಣಾಟಕದಲ್ಲಿ ಆಸಕ್ತಿ ತೋರಿಸಬಹುದಾದ ನನ್ನ ಕೆಲವು ಮಿತ್ರರ ವಿಳಾಸಗಳು :

1.

[ತಿರುಗಿಸಿ

2.

3.

4.

5.

ಪ್ರಬುದ್ಧ ಕರ್ಣಾಟಕ

ಸಂಪುಟ ೫೨ ಸಂಚಿಕೆ ೪

೨೦೬

ಸಾಧಾರಣ ಸಂವತ್ಸರ



ಪುಷ್ಯ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೧

PRABUDDHA KARNATAKA, Kannada Quarterly of the *University of Mysore*. Volume 52, Number 4, January 1971. Edited by C. P. Krishna Kumar and T. V. Venkatachala Sastry.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಸಿ. ಪಿ. ಕೃಷ್ಣಕುಮಾರ್

ಟಿ. ವಿ. ವೆಂಕಟಾಚಲ ಶಾಸ್ತ್ರೀ

ಪ್ರಕಾಶಕರು

ಡಾ. ಪ್ರಭುಶಂಕರ

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಎಚ್. ನರಸಣ್ಣ

ಡೆಪ್ಯೂಟಿ ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ವಿಷಯಸೂಚಿ

		ಶ್ರೀಯುತರಾದ	ಪುಟ
೧.	ಸ್ವಾಮಿ ವಿವೇಕಾನಂದರ ಕೆಲವು ಸ್ಮೃತಿಗಳು....	ಮೇಡಂ ಇ. ಕಾಲ್ವೆ (ಅನು : 'ಇಂ')	೧
೨.	ದೂತವಾಕ್ಯ (ನಾಟಕಾನುವಾದ)	ಎಚ್. ಎಲ್. ಎನ್. ಭಾರತಿ	೭
೩.	ಯಾರ್ಹ್ಯಾರ ನನಗ ನಿನ ಹೊರತ (ಕವನ)	ಚೆನ್ನಣ್ಣ ವಾಲೀಕಾರ	೩೦
೪.	ಅಲಂಕಾರಶಾಸ್ತ್ರ ಪರಿಚಯ (ವಿಚಾರ)	ಎಂ. ಜಿ. ವೆಂಕಟೇಶಯ್ಯ	೩೧
೫.	ಪ್ರಶ್ನೆ (ಕವನ)	ತೀರ್ಥಹಳ್ಳಿ ಜೈಪ್ರಕಾಶ	೪೮
೬.	ನವ್ಯಕಾವ್ಯ : ಒಂದು ವಿವರಣೆ (ವಿಚಾರ)	'ವಿಹಂಗಮ'	೪೯
೭.	ಕನ್ನಡಕಾವ್ಯದಲ್ಲಿ ಕಡಲ ದರ್ಶನ (ವಿಚಾರ) ...	ರಾ. ಲಕ್ಷ್ಮೀನಾರಾಯಣ	೫೯
೮.	ಮುದಿಮರ (ಕವನ)	'ನೇತ್ರಾವತೀತನಯ'	೭೬
೯.	ತೆಲುಗಿನಲ್ಲಿ ರಾಮಾಯಣಗಳು (ಪರಿಚಯ)....	ಎನ್. ಎಸ್. ದಕ್ಷಿಣಾಮೂರ್ತಿ	೭೭
೧೦.	ನರರೆ? (ಕವನ)	ರಾಮಚಂದ್ರ	೮೪
೧೧.	ಗಿರಿಜೆಯ ಮಹಾನೋಂಪಿ (ಸಂಪಾದನ)	ಎಸ್. ಎನ್. ಕೃಷ್ಣಜೋಯಿಸ್	೮೫
೧೨.	ಬಡಿತ (ಕವನ)	ಎಚ್. ಆರ್. ದೊರೆಸ್ವಾಮಿ	೧೦೮
೧೩.	ಖೋಟಾ ನಾಣ್ಯ (ಕತೆ)	ರಾಮದಾಸ್ (ಅನು : ಹ. ಕ. ರಾಜೇಗೌಡ)	೧೦೯
೧೪.	ಬಯಕೆ (ಕವನ)	ಅನಂತಪದ್ಮನಾಭರಾವ್	೧೨೬
೧೫.	ಕಮ್ಮಟದ ಕಿಡಿಗಳು		೧೨೭

ಕೇಶಿರಾಜನ ಪ್ರಯೋಗಗಳ ಆಕರಗಳು—ಎಸ್. ಶಿವಣ್ಣ

೧೬. ಕಾವ್ಯಾವಲೋಕನ ೧೪೩

ಮಾತೃಸಂಹಿತೆ—ಕೆ. ಎಸ್. ಕುಮಾರಸ್ವಾಮಿ; ಸಕಲ ಜೀವಪ್ರೇಮಿ—ಶ್ರೀನಂತ; ಶಿವಲಿಂಗಾರ್ಚನಾರಹಸ್ಯ, ಬಸವಾದಿ ಗಣಚರಿತ್ರೆ ಮತ್ತು ಗಣವಚನ ಮಂಜರಿ—ಎಂ. ಜಿ. ನಂಜುಂಡಾರಾಧ್ಯ; ಯುಗಾವತಾರಿ ಗಾಂಧೀಜಿ—ಜಿ.ವಿ.ಡಿ.; ದೀವಿಗೆ—ಸದಾಶಿವ, ಎಣ್ಣೆಹೊಳೆ

೧೭. ವಸ್ತುಕೋಶ ೧೫೮

೪೭ನೆಯ ಕನ್ನಡ ಸಾಹಿತ್ಯಸಮ್ಮೇಳನ ಮತ್ತು ಕನ್ನಡ ಸಾಹಿತ್ಯಪರಿಷತ್ತಿನ ಸುವರ್ಣ ಮಹೋತ್ಸವ—ಕೆ. ಎಸ್. ನರಸಿಂಗರಾವ್

೧೮. ಸಂಪಾದಕೀಯ ೧೯೯

ಸಾಹಿತ್ಯ ಅಕಾಡೆಮಿ ಬಹುಮಾನ; ಪ್ರೊ. ಮಾಳವಾಡ: ಅರುವತ್ತು; ವೀರಕೇಸರಿಯವರ ನಿಧನ; ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ ಮತ್ತು ೪೭ನೆಯ ಕನ್ನಡ ಸಾಹಿತ್ಯ ಸಮ್ಮೇಳನ.

೧೯. ಸಾದರ ಸ್ವೀಕಾರ ೨೦೩

ಈ ಸಂಚಿಕೆಯ ಲೇಖಕರು

ಶ್ರೀಯುತರಾದ

೧. 'ಇಂ' ....ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಎಂ.ಎ. ಪದವೀಧರೆ, ಕೆ. ಪಿ. ಇಂದುಕಲಾ

೨. ಎಚ್. ಎಲ್. ಎನ್. ಭಾರತಿ....ಮೈಸೂರಿನ ಪ್ರಾಚ್ಯಸಂಶೋಧನಾಲಯದಲ್ಲಿ ಸಂಶೋಧಕರು

೩. ಚೆನ್ನಣ್ಣ ವಾಲೀಕಾರ ....ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಸಂಶೋಧಕರು

೪. ಎಂ. ಜಿ. ವೆಂಕಟೇಶಯ್ಯ ....ಬೆಂಗಳೂರಿನಲ್ಲಿರುವ ಖ್ಯಾತ ಬರಹಗಾರರು

೫ ತೀರ್ಥಹಳ್ಳಿ ಜೈಪ್ರಕಾಶ ....ತೀರ್ಥಹಳ್ಳಿಯ ಪ್ರಥಮದರ್ಜೆ ಕಾಲೇಜಿನ ದ್ವಿತೀಯ ಬಿ.ಎ. ವಿದ್ಯಾರ್ಥಿ, ಎಂ. ಎನ್. ಜೈಪ್ರಕಾಶ್

೬. 'ವಿಹಂಗಮ' ....ಉಜಿರೆಯ ಮಂಜುನಾಥೇಶ್ವರ ಕಾಲೇಜಿನ ಕನ್ನಡ ಅಧ್ಯಾಪಕರಾದ ಜಿ. ಆರ್. ನಂಜುಂಡೇಗೌಡ

೭. ರಾ. ಲಕ್ಷ್ಮೀನಾರಾಯಣ ....ಮಂಗಳೂರಿನ ಸ್ನಾತಕೋತ್ತರ ಕನ್ನಡ ವಿಭಾಗದಲ್ಲಿ ದ್ವಿತೀಯ ಎಂ.ಎ. ವಿದ್ಯಾರ್ಥಿ

೮. 'ನೇತ್ರಾವತೀ ತನಯ' ....ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಥಮ ಎಂ.ಎ. ವಿದ್ಯಾರ್ಥಿ, ಬಿ.ಎನ್. ನಾಗರಾಜಭಟ್

೯. ಎನ್. ಎಸ್. ದಕ್ಷಿಣಾಮೂರ್ತಿ ....ಮಾನಸಗಂಗೋತ್ರಿಯ ಹಿಂದಿ ವಿಭಾಗದಲ್ಲಿ ಅಧ್ಯಾಪಕರು

೧೦. ರಾಮಚಂದ್ರ ....ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಥಮ ಎಂ.ಎ. ವಿದ್ಯಾರ್ಥಿ, ಎಚ್.ಎಸ್. ರಾಮಚಂದ್ರೇಗೌಡ

೧೧. ಎಸ್. ಎನ್. ಕೃಷ್ಣಜೋಯಿಸ್ ....ಕನ್ನಡ ಅಧ್ಯಯನ ಸಂಸ್ಥೆಯ ಗ್ರಂಥಸಂಪಾದನ ವಿಭಾಗದಲ್ಲಿ ಸಂಶೋಧಕರು

೧೨. ಎಚ್. ಆರ್. ದೊರೆಸ್ವಾಮಿ ... ಕನ್ನಡ ಅಧ್ಯಯನ ಸಂಸ್ಥೆಯ ಹರಿದಾಸ ಸಾಹಿತ್ಯ ಸಂಪಾದನ ವಿಭಾಗದಲ್ಲಿ ಸಂಶೋಧಕರು

೧೩. ಹ. ಕ. ರಾಜೇಗೌಡ ....ಕನ್ನಡ ಅಧ್ಯಯನ ಸಂಸ್ಥೆಯ ಗ್ರಂಥ ಸಂಪಾದನ ವಿಭಾಗದಲ್ಲಿ ಸಂಶೋಧಕರು

೧೪. ಅನಂತ ಪದ್ಮನಾಭರಾವ್ ....ಒಬ್ಬ ಉದಯೋನ್ಮುಖ ಕವಿ

೧೫. ಎಸ್. ಶಿವಣ್ಣ ....ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಎಂ.ಎ. ಪದವೀಧರರು, ತರುಣ ಸಂಶೋಧಕರು

೧೬. ಕೆ. ಎಸ್. ಕುಮಾರಸ್ವಾಮಿ ....ಭದ್ರಾವತಿಯ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು

೧೭. ಶ್ರೀನಂತ ....ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯಲ್ಲಿ ಕನ್ನಡ ಅಧ್ಯಾಪಕರು

೧೮. ಎಂ. ಜಿ. ನಂಜುಂಡಾರಾಧ್ಯ ...ಮೈಸೂರಿನ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಪ್ರಾಧ್ಯಾಪಕರು

೧೯. ಜಿ.ವಿ.ಡಿ. ....ಮಂಡ್ಯ ಜಿಲ್ಲೆಯ ಕಾಳಮುದ್ದನದೊಡ್ಡಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿರುವ ಜಿ. ವಿ. ದಾಸೇಗೌಡ

೨೦. ಸದಾಶಿವ ಎಣ್ಣೆಹೊಳೆ ....ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ದ್ವಿತೀಯ ಎಂ.ಎ. ವಿದ್ಯಾರ್ಥಿ

೨೧. ಕೆ. ಎಸ್. ನರಸಿಂಗರಾವ್ ....ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ದ್ವಿತೀಯ ಎಂ.ಎ ವಿದ್ಯಾರ್ಥಿ

ಮೇಡಂ ಇ. ಕಾಲ್ವೆ

ಸ್ವಾಮಿ ವಿವೇಕಾನಂದರ ಕೆಲವು ಸ್ಮೃತಿಗಳು

ಸರ್ವದಾ 'ಭಗವದ್ ಭಾವದಲ್ಲಿಯೆ ಸಂಸ್ಥಿತನಾಗಿದ್ದ' ಸಂತ, ತತ್ವಜ್ಞ ಮತ್ತು ಚಿರಂತನ ಮಿತ್ರನಾದ ಮಹಾನುಭಾವನೊಬ್ಬನ ಸಂಗಸುಯೋಗವು ಲಭಿಸಿದ್ದು ನನ್ನ ಪುಣ್ಯವಿಶೇಷ ಮತ್ತು ನನ್ನ ಜೀವನದ ಅತ್ಯಂತ ಆನಂದದಾಯಕ ಸಂಗತಿ. ನನ್ನ ಆಧ್ಯಾತ್ಮಿಕ ಜೀವನದ ಮೇಲೆ ಆತ ಬೀರಿದ ಪ್ರಭಾವ ಪ್ರಗಾಢವಾದದ್ದು. ನನಗೆ ಆತ ಹೊಸ ದಿಗಂತಗಳನ್ನೆ ತೆರೆದು ತೋರಿದ; ನನ್ನ ಆಧ್ಯಾತ್ಮಿಕ ಭಾವನೆಗಳನ್ನು ಮತ್ತು ಆದರ್ಶಗಳನ್ನು ಹೆಚ್ಚು ಉದಾರವನ್ನಾಗಿ ಮಾಡಿ ಜೀವೋನ್ಮೇಷನಗೊಳಿಸಿದ; ವಿರಾಟ್‌ರೂಪದ ಸತ್ಯಸ್ವರೂಪವನ್ನು ತಿಳಿಸಿದ. ನನ್ನ ಆತ್ಮ ಆತನಿಗೆ ಚಿರಕಾಲವೂ ಋಣಿಯಾಗಿರುತ್ತದೆ.

ಆ ವಿಭೂತಿ—ವ್ಯಕ್ತಿ ವೇದಾಂತದರ್ಶನದ ಅನುಯಾಯಿಯಾದ ಒಬ್ಬ ಹಿಂದೂ ಸಂನ್ಯಾಸಿ. ಅವರು ತಮ್ಮ ಆಧ್ಯಾತ್ಮಿಕ ಉಪನ್ಯಾಸಗಳಿಂದ ಅಮೆರಿಕಾದಲ್ಲೆಲ್ಲಾ ಸ್ವಾಮಿ ವಿವೇಕಾನಂದ ಎಂಬ ಹೆಸರಿನಿಂದ ಸುಪ್ರಸಿದ್ಧರಾಗಿದ್ದರು. ಚಿಕಾಗೋದಲ್ಲಿ ಅವರು ಒಂದು ವರ್ಷಕಾಲ ಉಪನ್ಯಾಸಿಸಿದಾಗ ನಾನೂ ಅಲ್ಲಿಯೆ ಇದ್ದೆ. ಆ ಸಮಯದಲ್ಲಿ ನಾನು ದೈಹಿಕವಾಗಿಯೂ, ಮಾನಸಿಕವಾಗಿಯೂ ದಾರುಣ ಸಂಕಟಕ್ಕೆ ಸಿಲುಕಿದ್ದು, ನನ್ನಂತೆ ಆರ್ತರಾಗಿದ್ದ ನನ್ನ ಕೆಲವು ಆಪ್ತರಿಗೆ ಅವರ ಕೃಪಾಲಾಭವಾಗಿದ್ದ ಕಾರಣ, ನಾನೂ ಅವರನ್ನು ಸಂದರ್ಶಿಸಲು ನಿಶ್ಚಯಿಸಿದೆ.

ನನಗೂ ಅವರನ್ನು ಸಂದರ್ಶಿಸುವ ಸದವಕಾಶವನ್ನು ಮಾಡಿಕೊಡಲಾಯಿತು; ಅವರ ನಿವಾಸದ ಬಳಿ ಬಂದೊಡನೆಯೆ, ನನಗೆ ಅವರ ಓದುಕೊಠಡಿಗೆ ಪ್ರವೇಶ ದೊರಕಿತು. ಅಲ್ಲಿಗೆ ಹೋಗುವ ಮುನ್ನವೆ, ಅವರು ನುಡಿಸುವವರೆಗೂ ನಾನು ಸುಮ್ಮನಿರಬೇಕೆಂಬುದಾಗಿ ನನಗೆ ಹೇಳಿದ್ದರು. ಆದ್ದರಿಂದ ಕೊಠಡಿಯನ್ನು ಪ್ರವೇಶಿಸಿದಾಗ ಅವರ ಎದುರಿನಲ್ಲಿ ತುಸುಹೊತ್ತು ನೀರವವಾಗಿ ನಿಂತಿದ್ದೆ. ಧ್ಯಾನದ ಗಭೀರ ಭಾವಭಂಗಿಯಲ್ಲಿ ಅವರು ಕುಳಿತಿದ್ದರು; ತೊಟ್ಟಿದ್ದ ಕಾವಿಯ ನಿಲುವಂಗಿ ನೆಲದವರೆಗೂ ಮುಟ್ಟುತ್ತಿತ್ತು; ಶಿರಸ್ಸು ಸುತ್ತಿದ್ದ ಪೇಟದ ಸಹಿತವಾಗಿ ನಸು ಮುಂದಕ್ಕೆ ಬಾಗಿತ್ತು; ಕಣ್ಣುಗಳು ನೆಲವನ್ನು ದೃಷ್ಟಿಸುತ್ತಿದ್ದುವು. ಸ್ವಲ್ಪ ಹೊತ್ತು

ಮೌನದ ಅನಂತರ ಅವರ ಮಾತು ಮೊಳಗಿತು—ನೆಲದತ್ತಣ ನೋಟವನ್ನು ಮೇಲೆತ್ತಿದೆಯೆ :

"ಮಗೂ; ಎಂತಹ ಕ್ಷೋಭಾವಲಯ ನಿನ್ನನ್ನು ಆವರಿಸಿದೆ! ಶಾಂತಳಾಗು! ಅದೇ ಅತ್ಯಂತ ಮುಖ್ಯವಾದದ್ದು!"

ಅಂತಹ ಪ್ರಶಾಂತ ಧ್ವನಿಯಲ್ಲಿ, ನಿರುದ್ವಿಗ್ನರಾಗಿ, ನಿರ್ಲಿಪ್ತಭಾವದಿಂದ, ಆ ಮನುಷ್ಯ—ನನ್ನ ಹೆಸರನ್ನೂ ಸಹ ತಿಳಿಯದಿರುವಾತ—ನನ್ನ ರಹಸ್ಯ ಸಮಸ್ಯೆಗಳ ಮತ್ತು ನನ್ನ ಹೃದಯೋದ್ವೇಗದ ಬಗ್ಗೆ ಮಾತನಾಡಿದರು. ನನ್ನ ಅತ್ಯಂತ ಆತ್ಮೀಯರೂ ಅರಿತಿರಲಾರರೆಂದು ನಾನು ಭಾವಿಸಿದ್ದ ಸಂಗತಿಗಳ ಬಗ್ಗೆ ಅವರು ಮಾತನಾಡಿದರು. ಇದು ನನಗೆ ಪವಾಡಸದೃಶವಾಗಿ ಅತೀಂದ್ರಿಯವಾಗಿ ತೋರಿತು.

"ನಿಮಗೆ ಇದೆಲ್ಲಾ ತಿಳಿದ ಬಗೆ ಹೇಗೆ?" ಕೊನೆಗೆ ಕೇಳಿದೆ, "ಯಾರು ಇದನ್ನೆಲ್ಲಾ ಹೇಳಿದವರು?"

ಅವರು ನನ್ನತ್ತ ನೋಡಿದರು, ಅದೇ ಆ ಪ್ರಶಾಂತ ಮುಗುಳ್ನಗೆಯ ನೋಟದಿಂದಲೆ—ಬೆಪ್ಪುಬೆಪ್ಪಾಗಿ ಪ್ರಶ್ನಿಸಿದ ನಾನೊಂದು ಮಗುವೊ ಎಂಬಂತೆ.

"ಯಾರೊಬ್ಬರೂ ನನಗೆ ಹೇಳಲಿಲ್ಲ," ಅಕ್ಕರೆಯಿಂದ ಉತ್ತರಿಸಿದರು. "ಅದು ಆವಶ್ಯಕ ಎಂದು ಭಾವಿಸಿರುವೆಯೇನು? ತೆರೆದ ಪುಸ್ತಕದಂತೆ ನಾನು ನಿನ್ನ ಒಳಗನ್ನೆಲ್ಲಾ ತಿಳಿಯಬಲ್ಲೆ."

ಕೊನೆಗೆ ಅವರನ್ನು ಬೀಳ್ಕೊಳ್ಳುವ ಸಮಯ ಬಂದಿತು.

ನಾನು ಮೇಲೇಳುತ್ತಿದ್ದಂತೆ ಅವರು ಹೇಳಿದರು, "ನೀನು ಖಂಡಿತವಾಗಿಯೂ ಇದನ್ನೆಲ್ಲಾ ಮರೆಯಲೇ ಬೇಕು. ಮತ್ತೆ ಉಲ್ಲಸಿತಳಾಗು; ಮತ್ತೆ ಉನ್ಮೇಷಿತಳಾಗು; ನಿನ್ನ ಆರೋಗ್ಯವನ್ನು ಸುಧಾರಿಸಿಕೊ. ನಿನ್ನ ದುಃಖದುರಿತಗಳನ್ನೆಲ್ಲಾ ನೆನೆನೆನೆದು ಮೌನವಾಗಿ ಮನದಲ್ಲೆ ಕೊರಗಬೇಡ, ನಿನ್ನ ಭಾವೋದ್ವೇಗವನ್ನೆಲ್ಲಾ ಒಂದಲ್ಲ ಒಂದು ರೀತಿಯ ಬಹಿಃಕ್ರಿಯೆಯಾಗಿ ಅಭಿವ್ಯಕ್ತಗೊಳಿಸು; ನಿನ್ನ ಆಧ್ಯಾತ್ಮಿಕ ಉನ್ನತಿಗೂ ಅದು ಆವಶ್ಯಕ; ನಿನ್ನ ಕಲೆಯೂ ಅದನ್ನೆ ಕೋರುತ್ತದೆ."

ಅವರ ಮಾತುಕತೆಗಳಿಂದಲೂ, ಅವರ ವ್ಯಕ್ತಿತ್ವದಿಂದಲೂ ತೀವ್ರ ಪ್ರಭಾವಿತಳಾಗಿ ನಾನು ಅವರಿಂದ ಬೀಳ್ಕೊಂಡೆ. ಅವರು ನನ್ನ ಮನವನ್ನು ಉದ್ರೇಕ ಅಶಾಂತಿಗಳಿಂದ ಬರಿದುಮಾಡಿ, ಅವರ ಪರಿಶುದ್ಧ ಪ್ರಶಾಂತ ಭಾವನೆಗಳಿಂದ ಪರಿಪೂರ್ಣಗೈದಂತೆ ತೋರುತ್ತಿತ್ತು. ಅವರು ನನ್ನ ಮೇಲೆ ವಶೀಕರಣ ಅಥವಾ ಸಮ್ಮೋಹನ ಮುಂತಾದ ಸಾಮಾನ್ಯ ರೂಢಿಯ ಶಕ್ತಿಗಳನ್ನು ಪ್ರಯೋಗಿಸಿರಲಿಲ್ಲ. ಅವರ ಪವಿತ್ರವಾದ ಮತ್ತು ಪ್ರಬಲವಾದ ಅಭೀಪ್ಸೆಯೆ, ಅವರ ಪೂತಸಂಗ ಸಾನ್ನಿಧ್ಯದ ಮಹಿಮೆಯೆ ನಮ್ಮ ಸಂಪೂರ್ಣ ಶ್ರದ್ಧೆಗೆ ಕಾರಣವಾಗುತ್ತದೆ. ಅವರನ್ನು ಹೆಚ್ಚುಹೆಚ್ಚು ಅರಿಯುತ್ತಾ ಬಂದಂತೆ ನನಗೆ ಹೀಗೆ ತೋರತೊಡಗಿತು: ಅವರು ನನ್ನ ಪ್ರಕ್ಷುಬ್ಧಮನವನ್ನು ಶಾಂತಿಮಯರಾಗಿ, ಭರವಸೆಯ ಅಭಯಭಾವದಿಂದ

ಸಂತೈಸತೊಡಗುವುದರಿಂದಲೆ ನಮ್ಮ ಅನನ್ಯವಾದ ಸಮಗ್ರಮನವೂ ಅವರ ಮಾತಿನತ್ತ ಸೆಳೆಯಲ್ಪಡುತ್ತದೆ.

ಅವರು ನಮ್ಮ ಪ್ರಶ್ನೆಗಳಿಗೆ ಉತ್ತರ ರೂಪವಾಗಿಯೊ ಅಥವಾ ಅವರ ಅಭಿಪ್ರಾಯವನ್ನು ಉಪಮೆಗಳ ಮೂಲಕ ಮನಮುಟ್ಟುವಂತೆ ತಿಳಿಸಲೊ, ಆಗಾಗ ದೃಷ್ಟಾಂತ ಕಥೆಗಳನ್ನು ಬಳಸುತ್ತಿದ್ದರು. ಒಂದು ದಿನ ನಾವು ಅಮರತ್ವ ಮತ್ತು ವ್ಯಕ್ತಿವಿಶಿಷ್ಟತೆ ಪ್ರತ್ಯೇಕವಾಗಿಯೆ ಉಳಿಯುವುದರ ಬಗ್ಗೆ ಚರ್ಚಿಸುತ್ತಿದ್ದೆವು. ಅವರು ತಮ್ಮ ಬೋಧನೆಯ ಮೂಲಭೂತ ಅಂಶವಾದ ಜನ್ಮಾಂತರದಲ್ಲಿನ ನಂಬಿಕೆಯನ್ನು ಪ್ರತಿಪಾದಿಸಿದರು.

"ಈ ಭಾವನೆಯನ್ನೆ ನಾನು ಸಹಿಸಲಾರೆ" ನಾನು ಹೇಳಿದೆ, "ಬೆಲೆಯಿಲ್ಲ ದಿದ್ದರೂ ಚಿಂತೆಯಿಲ್ಲ, ನನ್ನ ವ್ಯಕ್ತಿತ್ವದ ಪ್ರತ್ಯೇಕತೆಗೆ ನಾನು ಅಂಟಿಕೊಂಡಿರುತ್ತೇನೆ! ಅನಂತತೆಯಲ್ಲಿ ಒಂದಾಗುವುದನ್ನು ನಾನು ಒಂದಿನಿತೂ ಇಷ್ಟಪಡುವುದಿಲ್ಲ. ಕೇವಲ ಅದರ ಕಲ್ಪನೆ ಮಾತ್ರದಿಂದಲೆ ನನಗೆ ತಲ್ಲಣಿಸುವಂತಾಗುತ್ತದೆ."

ಸ್ವಾಮಿಜಿ ಉತ್ತರಿಸಿದರು: "ಒಮ್ಮೆ ಒಂದು ನೀರಿನ ಹನಿ ಒಂದು ವಿಶಾಲ ಸಾಗರಕ್ಕೆ ಬಂದು ಬಿದ್ದಿತು. ಈಗ ನೀನು ಮಾಡುತ್ತಿರುವಂತೆ ಅದೂ ತನ್ನತನದ ರಕ್ಷಣೆಗಾಗಿ ಗೋಗರೆಯುತ್ತಾ ಮೊರೆಯಿಡತೊಡಗಿತು. ಆ ಮಹಾಸಾಗರ ಹನಿಯ ಕಡೆ ನೋಡಿ ನಸುನಕ್ಕು ಹೇಳಿತು: "ಏಕೆ ಗೋಳಾಡುತ್ತಿರುವೆ? ನನಗಂತೂ ಅರ್ಥವಾಗುತ್ತಿಲ್ಲ. ನೀನು ಇಲ್ಲಿ ಬಂದು ಸೇರಿದಾಗ ನನ್ನಲ್ಲೆ ಇರುವ ನಿನ್ನ ಅಣ್ಣ ತಂಗಿಯರಾದ ಇತರ ಹನಿಗಳನ್ನು ಮತ್ತೆ ಸೇರಿದಂತೆ ಅಷ್ಟೆ. ನಿನಗೆ ನೀನೆ ಈಗ ಸಾಗರವಾದೆ. ನಿನ್ನ ಪ್ರತ್ಯೇಕತೆಯನ್ನು ನೀನು ಬಯಸಿದರೂ, ಸೂರ್ಯಕಿರಣದಿಂದ ಆವಿಯಾಗಿ ಮೇಲೇರಿ ಮತ್ತೆ ಮೋಡದೊಳಗೆ ಒಂದಾಗುವೆ; ಅಲ್ಲಿಂದಲೂ ಮತ್ತೆ ಒಂದು ಹನಿಯಾಗಿ ಬೀಳಲೇ ಬೇಕು, ಬಾಯಾರಿದ ಭೂಮಿಗೆ ಪ್ರಸನ್ನವಾಗಿ ಅನುಗ್ರಹಿಸುವಂತೆ."

ನಾನು, ಸ್ವಾಮಿಜಿ ಅವರ ಕೆಲವು ಮಿತ್ರರು ಮತ್ತು ಅನುಯಾಯಿಗಳೊಂದಿಗೆ ಎಂದೆಂದಿಗೂ ಮರೆಯಲಾರದಂತಹ ಪ್ರವಾಸವನ್ನು ಕೈಗೊಂಡಿದ್ದೆ. ನಮ್ಮ ಗುಂಪಿನಲ್ಲಿ ಸ್ವಾಮಿಗಳೂ ಸೇರಿ, ಫಾದರ್ ಹ್ಯಾಸಿನ್‌ಥ್ ಲಾಯ್‌ಸನ್ (Father Hyacinthe Loyson), ಅವರ ಪತ್ನಿ ಬೋಸ್ಟೋನಿಯನ್ (Bostonian), ಚಿಕಾ ಗೋವಿನ ಸ್ವಾಮಿಗಳ ಉತ್ಸಾಹಿ ಅನುಯಾಯಿ, ಸದಾ ಉಲ್ಲಸಿತಳೂ ಹರ್ಷ ಚಿತ್ತಳೂ ಆದ ಮಿಸ್ ಮ್ಯಾಕ್‌ಲಿಯೋಡ್ (Macleod) ಮತ್ತು ಆ ಗುಂಪಿನ ಹಾಡುಹಕ್ಕಿಯಾದ ನಾನು—ಇಷ್ಟು ಜನರಿದ್ದೆವು.

ಅದೆಂತಹ ಯಾತ್ರೆಯಾಗಿತ್ತು! ವಿಜ್ಞಾನ, ತತ್ವಜ್ಞಾನ ಮತ್ತು ಚರಿತ್ರೆಗಳಲ್ಲಿ ಸ್ವಾಮಿಗಳಿಗೆ ಅಭೇದ್ಯವಾದ ರಹಸ್ಯಗಳಿರಲಿಲ್ಲ. ನನ್ನ ಸುತ್ತಮುತ್ತ ನಡೆಯುತ್ತಿದ್ದ ತುಂಬ ಗಹನವಾದ ಮತ್ತು ವಿದ್ವತ್‌ಪೂರ್ಣವಾದ ಚರ್ಚೆಯನ್ನು ನಾನು

ಮೈಯೆಲ್ಲಾ ಕಿವಿಯಾಗಿ ಕೇಳುತ್ತಿದ್ದೆ; ಅವರ ವಾದವಿವಾದಗಳಲ್ಲೆಲ್ಲಾ ತಲೆ ಹಾಕುವ ಪ್ರಯತ್ನವನ್ನು ನಾನು ಮಾಡುತ್ತಿರಲಿಲ್ಲ; ಆದರೆ ಮಾಮೂಲಿನಂತೆ ನಾನು ಎಲ್ಲಾ ಸಮಯದಲ್ಲೂ ಹಾಡುತ್ತಿದ್ದೆ. ವಿದ್ವಾಂಸ ಮತ್ತು ಥಿಯಾಸೊಫಿ ಅನುಯಾಯಿ ಎಂದು ಪರಿಗಣಿಸಲ್ಪಟ್ಟಿದ್ದ ಫಾದರ್ ಲಾಯ್‌ಸನ್ನರೊಡನೆ ಸ್ವಾಮಿಜಿ ನಾನಾ ರೀತಿಯ ಸಮಸ್ಯೆಗಳನ್ನು ಕುರಿತು ಚರ್ಚಿಸುತ್ತಿದ್ದರು. ಫಾದರ್ ಲಾಯ್ ಸನ್ನರು ಕೂಡ ಅಷ್ಟು ತಟಕ್ಕನೆ ಹೇಳಲಾರದವರಾದಾಗ, ಸ್ವಾಮಿಜಿ ನಿರ್ದಿಷ್ಟ ದಾಖಲೆಗಳ ಸಾಹಿತ್ಯ ಭಾಗವನ್ನೂ, ಚರ್ಚ್‌ಕೌನ್ಸಿಲ್ ತಾರೀಖನ್ನೂ ಪ್ರಮಾಣ ಸಹಿತವಾಗಿ ಎತ್ತಿ ಎತ್ತಿ ಉದ್ಧರಿಸುತ್ತಿದ್ದುದು ನೋಡುವವರಿಗೆ ತುಂಬ ಕುತೂಹಲ ಕರವಾಗಿತ್ತು.

ನಾವು ಗ್ರೀಸಿನಲ್ಲಿದ್ದಾಗ, ಎಲ್ಯೂಸಿಸ್ (Eleusis) ನೋಡಿದೆವು. ಅವರು ಅದರ ಅನೇಕ ಮಾರ್ಮಿಕ ಸಂಗತಿಗಳನ್ನು ನಮಗೆ ವಿವರಿಸುತ್ತಾ, ವೇದಿಕೆಯಿಂದ ವೇದಿಕೆಗೆ, ದೇವಸ್ಥಾನದಿಂದ ದೇವಸ್ಥಾನಕ್ಕೆ, ಅದು ನಡೆದ ಪ್ರತಿಯೊಂದು ಸ್ಥಳದಲ್ಲೂ ಬಗೆಗಣ್ಣಿಗೆ ಕಟ್ಟಿದಂತೆ ಬಣ್ಣಿಸುತ್ತಾ ನಮ್ಮನ್ನು ಮುನ್ನಡೆಸಿದರು; ಪ್ರಾಚೀನಕಾಲದ ಪ್ರಾರ್ಥನಾ ರೀತಿಯನ್ನು ಅದೇ ವಿಧಾನದಿಂದ, ಪಾದ್ರಿಗಳ ಅಧಿಕಾರದಿಂದೆಂಬಂತೆ ಹಾಡಿ ತೋರಿಸಿದರು.

ಅನಂತರ, ಈಜಿಪ್ಟಿನಲ್ಲಿಯೂ, ಒಂದು ಮರೆಯಲಾರದ ರಾತ್ರಿ, ಮತ್ತೊಮ್ಮೆ ನಮ್ಮನ್ನೆಲ್ಲಾ ಗತಕಾಲದತ್ತ ಕೊಂಡೊಯ್ದು, ಸ್ತಬ್ಧವಾದ ಸ್ಫಿಂಕ್ಸ್‌ವಿಗ್ರಹದ ನೆರಳಿನಡಿಯಲ್ಲಿ, ಅತ್ಯಂತ ಭಾವೋಜ್ವಲವಾಗಿ ಅನೇಕ ರಹಸ್ಯಗಳನ್ನು ನಮ್ಮೊಂದಿಗೆ ನುಡಿದರು.

ಸ್ವಾಮಿಜಿ ಯಾವಾಗಲೂ, ಸಾಮಾನ್ಯ ಸಂದರ್ಭಗಳಲ್ಲಿಯೂ ಸಹ, ಆಲಿಸುವವರನ್ನು ಆಳಕ್ಕೆ ಒಯ್ದು ಮುಳುಗಿಸುತ್ತಿದ್ದರು. ತಮ್ಮ ಮಾತಿನ ಮೋಡಿಯಿಂದ ಶ್ರೋತೃವೃಂದವನ್ನು ಮಂತ್ರಮುಗ್ಧಗೊಳಿಸುತ್ತಿದ್ದರು. ನಾವು ಅವರ ಸಂವಾದದಲ್ಲೆ ಪರವಶರಾಗಿ, ಸರಿಯುತ್ತಿರುವ ಕಾಲದ ಪರಿವೆಯೆ ಇಲ್ಲದೆ, ರೈಲ್ವೆ ನಿಲ್ದಾಣದ ವೇಯ್‌ಟಿಂಗ್ ರೂಮಿನಲ್ಲಿ ನಿರಾತಂಕವಾಗಿ ಕುಳಿತಿದ್ದು, ಪದೇ ಪದೇ ರೈಲನ್ನೂ ತಪ್ಪುತ್ತಿದ್ದೆವು. ನಮ್ಮಲ್ಲಿ ಈ ವಿಚಾರಗಳಲ್ಲೆಲ್ಲಾ ತುಂಬ ವ್ಯಾವಹಾರಿಕ ಜೀವಿಯಾದ ಮಿಸ್ ಮ್ಯಾಕ್ಲಿಯೋಡಳೂ ಸಹ ಹೊತ್ತುಗೊತ್ತನ್ನೆ ಮರೆಯುತ್ತಿದ್ದಳು ; ಇದರಿಂದಾಗಿ ನಾವು ತಲಪಬೇಕಾಗಿದ್ದ ಸ್ಥಳದಿಂದ ಬಹು ದೂರದಲ್ಲಿ, ಹೊತ್ತಲ್ಲದ ಹೊತ್ತಿನಲ್ಲಿ, ಜಾಗವಲ್ಲದ ಜಾಗದಲ್ಲಿ ನಮಗೆ ನಾವೆ ಪೇಚಿಗೆ ಒಳಗಾಗುತ್ತಿದ್ದದ್ದು ಅನಂತರ ನಮ್ಮ ಅರಿವಿಗೆ ಬರುತ್ತಿತ್ತು.

ಒಮ್ಮೆ ನಾವು ಕೈರೋದಲ್ಲಿ ದಾರಿತಪ್ಪಿದೆವು. ಬಹುಶಃ ನಾವು ಮಾತಿನಲ್ಲಿ ಅಷ್ಟೊಂದು ಮಗ್ನರಾಗಿದ್ದಿರಬೇಕು. ಅಂತೂ ಹೇಗೋ ಅಸಹ್ಯವಾಸನೆಯ ಹೊಲಸಾದ ರಸ್ತೆಗೆ, ಅರೆನಗ್ನ ಹೆಂಗಸರು ಆಲಸ್ಯದಿಂದ ಕಿಟಕಿಗಳನ್ನೊರಗಿಯೊ ಬಾಗಿಲಬಳಿ ಕೈಚಾಚಿಯೋ ಕುಳಿತಿದ್ದ ಜಾಗಕ್ಕೆ ಬಂದಿದ್ದೆವು.

ಅಲ್ಲಿ ದೊಡ್ಡ ಕಟ್ಟಡದ ನೆರಳಿನಡಿಯಲ್ಲಿದ್ದ ಬೆಂಚಿನ ಮೇಲೆ, ಗುಜುಗುಜಿಸಿ ಗಲಾಟೆಮಾಡುತ್ತಿದ್ದ ಮಹಿಳೆಯರ ಗುಂಪೊಂದು ಕುಳಿತಿದ್ದು, ಅತ್ಯಂತ ಲಘು ರೀತಿಯಲ್ಲಿ ನಗುತ್ತಾ ಸ್ವಾಮಿಗಳನ್ನು ಕರೆಯತೊಡಗುವವರೆಗೂ, ಸ್ವಾಮಿಜಿಗೆ ಸುತ್ತಮುತ್ತಣ ಪರಿಸ್ಥಿತಿಯ ಪರಿಜ್ಞಾನವೆ ಉಂಟಾಗಿರಲಿಲ್ಲ. ನಮ್ಮಲ್ಲಿನ ಒಬ್ಬ ಮಹಿಳೆ ನಾವು ಅವರನ್ನು ಬೇಗ ದಾಟಿಹೋಗುವಂತೆ ಪ್ರಯತ್ನಿಸುತ್ತಿದ್ದರು. ಆದರೆ ಅಷ್ಟರಲ್ಲೇ ಸ್ವಾಮಿಜಿ, ಹಾಗೆ ಮಾಡುವುದು ಸಾಧಾರಣವೊ ಎಂಬಂತೆ, ತುಂಬ ಸಭ್ಯರೀತಿಯಲ್ಲಿಯೆ ನಮ್ಮನ್ನು ಬಿಟ್ಟು ಬೆಂಚಿನ ಮೇಲೆ ಕುಳಿತಿದ್ದ ಆ ಹೆಂಗಸರ ಗುಂಪನ್ನು ಸಮೀಪಿಸಿದರು.

"ಪಾಪದ ಮಕ್ಕಳು!" ಅವರು ಉದ್ಗರಿಸಿದರು, "ಬಡಪಾಯಿ ಪ್ರಾಣಿಗಳು! ತಮ್ಮ ದೈವಿಕತ್ವವೆಲ್ಲಾ ತಮ್ಮ ಸೌಂದರ್ಯದಲ್ಲಿಯೆ ಇದೆ ಎಂದು ಭ್ರಮಿಸಿದ್ದಾರೆ. ಅವರ ಕಡೆ ನೋಡಿ–ಈಗ!"

ಸ್ವಾಮಿಜಿ ಅಶ್ರುಪೂರ್ಣ ಲೋಚನರಾದರು. ಹೆಂಗಸರ ಗುಂಪಿನಲ್ಲಿ ನಿಶ್ಶಬ್ದ ನೆಲಸಿ ಅವರೆಲ್ಲಾ ಲಜ್ಜಿತರಾದರು. ಅವರಲ್ಲೊಬ್ಬಳು ಅವರ ಮುಂದೆ ಬಾಗಿ ಅವರ ನಿಲುವಂಗಿಯ ತುದಿಯನ್ನು ಚುಂಬಿಸಿ, ಸ್ಪಾನಿಷ್ ಭಾಷೆಯಲ್ಲಿ ಗೊಣಗಿದಳು, "ದೈವಿಕ ಮನುಷ್ಯ! ದೈವಿಕ ಮನುಷ್ಯ!" ಎಂದು. ಮತ್ತೊಬ್ಬಳು ತಕ್ಷಣ ನಯಭಯಭಾವದಿಂದ ಮೇಲೆದ್ದು, ಅವರ ಪವಿತ್ರ ದೃಷ್ಟಿಯನ್ನು ಎದುರಿಸ ಲಾರದೆ, ತತ್ತರಿಸುತ್ತಿದ್ದ ತನ್ನ ಆತ್ಮವನ್ನು ಮರೆಮಾಚಿ ರಕ್ಷಿಸಲೋ ಎಂಬಂತೆ ತನ್ನ ಮೊಳಕೈಯಿಂದ ಮುಖಮುಚ್ಚಿಕೊಂಡಳು.

ಈ ಅದ್ಭುತ ಪ್ರಯಾಣವೆ ನಾನು ಸ್ವಾಮಿಜಿಯ ಜೊತೆಯಲ್ಲಿದ್ದ ಕೊಟ್ಟ ಕೊನೆಯ ಸಂದರ್ಭವಾಗಿತ್ತು. ಇದಾದ ಸ್ವಲ್ಪ ಕಾಲದ ಅನಂತರ ಅವರು ತಮ್ಮ ಸ್ವದೇಶಕ್ಕೆ ಹಿಂತಿರುಗುವುದಾಗಿ ಹೇಳಿದರು. ಅವರ ಕೊನೆ ಸಮೀಪಿಸುತ್ತಿರುವ ಅನುಭವ ಅವರಿಗಾಗಲೆ ಆಗತೊಡಗಿತ್ತು; ತಾವು ನಿರ್ದೇಶಕರಾಗಿದ್ದ ಸಂಸ್ಥೆಯಲ್ಲಿಗೆ ತಮ್ಮ ತಾರುಣ್ಯದ ದಿನಗಳನ್ನು ಕಳೆದಲ್ಲಿಗೆ ಹಿಂತಿರುಗಲು ಅವರು ಕಾತರ ರಾಗಿದ್ದರು.

ಇದಾದ ಒಂದು ವರ್ಷದ ಅನಂತರ, ಅವರ ಜೀವನಪುಸ್ತಕದ ಒಂದು ಹಾಳೆಯೂ ನಷ್ಟವಾಗದಂತೆ ಬರೆದ ಅನಂತರ, ಅವರು ನಿಧನರಾದುದಾಗಿ ಕೇಳಿದೆವು. ಅವರು ಹೊಂದಿದ ಸ್ಥಿತಿಯನ್ನು ಸಂಸ್ಕೃತದಲ್ಲಿ ಸಮಾಧಿ ಎನ್ನುತ್ತಾರೆ. ಅಂದರೆ ಯಾವ ರೋಗ ರುಜಿನ ಅಥವಾ ಅಪಘಾತಗಳಿಲ್ಲದೆ, ಸ್ವಂತ ಇಚ್ಛೆಯಿಂದಲೆ, ಸಾಯುವ ನಿರ್ಧಾರದಿಂದಲೆ ದೇಹ ತ್ಯಜಿಸುವುದು. ಅವರು ಸಾಯುವ ಮೊದಲೆ ತಮ್ಮ ಶಿಷ್ಯರಿಗೆ 'ಇಂತಹ ದಿನದಲ್ಲಿಯೆ ಮೃತ್ಯುಮುಖನಾಗುವೆ" ಎಂಬುದಾಗಿ ಹೇಳಿದ್ದರಂತೆ.

ವರ್ಷಗಳುರುಳಿದ ಮೇಲೆ, ನಾನು ಇಂಡಿಯಾದಲ್ಲಿ ಪ್ರವಾಸ ಕೈಗೊಂಡಿ

ದ್ದಾಗ, ಸ್ವಾಮಿಗಳು ತಮ್ಮ ಕೊನೆಯ ದಿನಗಳನ್ನು ಕಳೆದ ಮಠವನ್ನು ಸಂದರ್ಶಿಸ[illegible] ಇಚ್ಛಿಸಿದೆ. ಅವರ ತಾಯಿ ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋದ[illegible] ಸ್ವಾಮಿಜಿಯ ಅಮೆರಿಕಾದ ಮಿತ್ರರಲ್ಲಿ ಒಬ್ಬರಾದ ಶ್ರೀಮತಿ ಲೆಗೆಟ್, ಅ[illegible] ಅಸ್ಥಿಯ ಮೇಲೆ ಸುಂದರವಾದ ಅಮೃತಶಿಲೆಯ ಸಮಾಧಿಯನ್ನು ಕಟ್ಟಿಸಿದ್ದ[illegible] ಆದರ ಮೇಲೆ ಯಾವ ಹೆಸರೂ ಇಲ್ಲದಿರುವುದನ್ನು ಗಮನಿಸಿದ ನಾನು, ಮ[illegible] ಸ್ವಾಮಿಗಳಲ್ಲಿ ಒಬ್ಬರಾದ ಅವರ ಸೋದರರನ್ನು ಕಾರಣ ಕೇಳಿದೆ. ಅವ[illegible] ಗಂಭೀರ ಭಂಗಿಯಿಂದ ಸ್ತಂಭಿತರಾಗಿ ನನ್ನ ಕಡೆ ನೋಡಿ, "ಅವರು ಅದನ್ನೆಲ್ಲಾ ಮೀರಿಹೋಗಿದ್ದಾರೆ" ಎಂದು ಹೇಳಿದ್ದನ್ನು ನಾನು ಇಂದಿಗೂ ನೆನೆಯಬಲ್ಲೆ.

ವೇದಾಂತಿಗಳು ಹಿಂದೂಧರ್ಮದ ಸಾರವನ್ನು ಅದರ ಪರಿಶುದ್ಧ ಸಹ[illegible] ಸ್ವರೂಪದಲ್ಲಿ ತಾವು ರಕ್ಷಿಸಿಕೊಂಡು ಬಂದಿರುವುದಾಗಿ ಭಾವಿಸುತ್ತಾರೆ. ಅವ[illegible] ದೇವಸ್ಥಾನಗಳಿಲ್ಲ. ಅವರ ಧಾರ್ಮಿಕ ಭಾವನೆಗಳನ್ನು ಪ್ರಚೋದಿಸುವ ಯಾ[illegible] ರೀತಿಯ ಪ್ರತೀಕಗಳಾಗಲಿ ಅಥವಾ ಚಿತ್ರಗಳಾಗಲಿ ಇಲ್ಲದ ಸಾಧಾರಣ ಪ್ರಾರ್ಥ[illegible] ನಾಲಯದಲ್ಲಿ, ಅಚಿಂತ್ಯ ದೇವರನ್ನು ಸಂಬೋಧಿಸಿ ಪ್ರಾರ್ಥನೆ ಸಲ್ಲಿಸುತ್ತಾರೆ.

"ಯಾವ ಹೆಸರಿಗೂ ನಿಲುಕಲಾರದ ಭಗವಂತನೆ! ಯಾವ ಹೆಸರಿನಿಂದಲೂ ಹಿಡಿಯಲಾರದ ಪರಮಾತ್ಮನೆ! ಹೇ! ಅಚಿಂತ್ಯ ದಿವ್ಯ ಸಾನ್ನಿಧ್ಯವೆ!" ಎಂಬರ್ಥ ಬರುವಂತೆ ಪ್ರಾರ್ಥನೆಯಲ್ಲಿ ಸಂಬೋಧಿಸುತ್ತಾರೆ.

ಸ್ವಾಮಿಜಿ ನನಗೆ ಒಂದು ರೀತಿಯ ಪ್ರಾಣಾಯಾಮವನ್ನು ಕಲಿಸಿದ್ದರು. ಆಕಾಶದ ಮೂಲಕ ಎಲ್ಲೆಲ್ಲಿಯೂ ಹರಡಿರುವ ದೈವೀಶಕ್ತಿಯನ್ನು ಉಚ್ಛ್ವಾಸದ ಮೂಲಕ ದೇಹದೊಳಗೆ ಆಹ್ವಾನಿಸಬೇಕೆಂದು ಅವರು ಹೇಳುತ್ತಿದ್ದರು.

ಸ್ವಾಮಿಜಿಯ ಗುರುಭಾಯಿಗಳು ನಮ್ಮನ್ನೆಲ್ಲಾ ಸರಳವಾಗಿ ಸಹಾನುಭೂತಿ ಮತ್ತು ಗೌರವಗಳಿಂದ ಆಹ್ವಾನಿಸಿದರು. ಹೊರಗಡೆ ಹುಲ್ಲಿನ ಮೇಲೆ ಮರೆತೆರೆ ಮಾಡಿ ಅದರಡಿಯಲ್ಲಿ ನಮಗಾಗಿ ಮೇಜನ್ನಿಟ್ಟು, ಹೂವು ಹಣ್ಣುಗಳಿಂದ ಆದರಿ ಸಿದರು.

- ನಮ್ಮ ಸಮೀಪದಲ್ಲಿಯೇ ಕೆಳಗೆ, ಮಹಾಗಂಗೆ ಹರಿಯುತ್ತಿದ್ದಳು. ನಮಗಾಗಿ ನಾನಾ ಅಪರಿಚಿತ ವಾದ್ಯಗಳನ್ನು ನುಡಿಸುತ್ತಾ ಹೃದಯಸ್ಪರ್ಶಿಯಾಗುವಂತೆ ಹಾಡಿದರು. ಅದರಲ್ಲೊಬ್ಬರು ನಮ್ಮನ್ನಗಲಿದ ಸ್ವಾಮಿಗಳ ಗುಣಪ್ರಶಂಸೆ ಮಾಡುವ ಆಶುಕವಿತೆಯೊಂದನ್ನು ಕಟ್ಟಿ ಪಠಿಸಿದರು. ಆ ಸಾಯಂಕಾಲ ಧ್ಯಾನ ಪೂರ್ಣವಾಗಿ ಪ್ರಶಾಂತರೀತಿಯಲ್ಲಿ ಕಳೆಯಿತು.

ಆ ಸಾಧು ತತ್ತ್ವಜ್ಞರೊಂದಿಗೆ ನಾನು ಕಳೆದ ಆ ಸಮಯ ಚಿರಕಾಲ ನನ್ನ ಸ್ಮರಣೆಯಲ್ಲಿ ಉಳಿದಿರುತ್ತದೆ. ಶುದ್ಧಾತ್ಮರೂ, ಮಂಗಳಮಯರೂ, ನಿರ್ಲಿಪ್ತರೂ ಆದ ಅವರು ಬೇರೊಂದು ದಿವ್ಯಲೋಕದಿಂದ ಅವತರಿಸಿದಂತೆ ತೋರುತ್ತದೆ.

ಅನು: 'ಇಂ'

ಎಚ್. ಎಲ್. ಎನ್. ಭಾರತಿ

ದೂತವಾಕ್ಯ

(ನಾಟಕಾನುವಾದ)

ಪೀಠಿಕೆ

ಸಂಸ್ಕೃತ ಸಾಹಿತ್ಯದಲ್ಲಿ ಭಾಸಕವಿಯ ಸ್ಥಾನ ವಿಶಿಷ್ಟವಾದ್ದು. ಸುಮಾರು ಇಪ್ಪತ್ತನೇ ಶತಮಾನದ ಆದಿಯಲ್ಲಿ ದೊರಕಿದ, ಭಾಸನವೆಂದು ಹೇಳಲಾದ ಹದಿಮೂರು ನಾಟಕಗಳು[1] ಪರಿಷ್ಕರಿಸಲ್ಪಟ್ಟು ಅಂದಿನಿಂದ ಸಂಸ್ಕೃತ ನಾಟಕ ಪರಂಪರೆಯಲ್ಲಿ ಕಲಶವಿಟ್ಟಂತೆ ಚಿರಸ್ಥಾಯಿಯಾಗಿವೆ. ಈ ಹದಿಮೂರು ನಾಟಕಗಳಲ್ಲಿ ಒಂದಾದ 'ಸ್ವಪ್ನವಾಸವದತ್ತ'ವೆಂಬ ನಾಟಕದ ವಿಚಾರದಲ್ಲಿ ಆಲಂಕಾರಿಕರ ಅಭಿಪ್ರಾಯದಂತೆ[2] ಮತ್ತು ರಾಜಶೇಖರನ ಉಕ್ತಿಯ[3] ಅನುಸಾರ ಈ ನಾಟಕಗಳೆಲ್ಲವೂ ಭಾಸನಿಂದಲೇ ರಚಿತವಾದವೆಂಬ ಅಭಿಪ್ರಾಯವನ್ನು ಇದುವರೆಗೂ ಮಾನ್ಯಮಾಡಲಾಗಿದೆ.

ಈ ಹದಿಮೂರು ನಾಟಕಗಳಲ್ಲಿ ನಾಲ್ಕು ನಾಟಕಗಳು ಬೃಹತ್ಕಥೆಯ ಆಧಾರದ ಮೇಲೂ, ಎರಡು ನಾಟಕಗಳು ರಾಮಾಯಣದ ಆಧಾರದ ಮೇಲೂ, ಒಂದು ನಾಟಕವು ಭಾಗವತದ ಆಧಾರದ ಮೇಲೂ ಮತ್ತು ಉಳಿದ ಆರು ನಾಟಕಗಳು ಮಹಾಭಾರತದ ಆಧಾರದ ಮೇಲೂ ಬರೆದವುಗಳಾಗಿವೆ.

---

[1] ರಾವ್‌ಬಹಾದುರ್ ಆರ್. ನರಸಿಂಹಾಚಾರ್ಯರ ೧೯೦೯-೧೦ನೇ ಸಾಲಿನ ಪ್ರಾಚ್ಯ ಸಂಶೋಧನ ವರದಿಯ ಪ್ರಕಾರ 'ಸ್ವಪ್ನವಾಸವದತ್ತ'ವೆಂಬ ನಾಟಕವು ದೊರೆತುದಾಗಿ ತಿಳಿಯುತ್ತದೆ. ಅದೇ ಸಮಯದಲ್ಲಿ ಮ|ಮ| ಟಿ. ಗಣಪತಿಶಾಸ್ತ್ರಿಗಳು ಹದಿಮೂರು ನಾಟಕಗಳು ದೊರೆತ ಸಂಗತಿಯನ್ನು ಪ್ರಚುರಪಡಿಸಿದರು.

[2] 'ಯಥಾ ಭಾಸಕೃತೇ ಸ್ವಪ್ನವಾಸವದತ್ತೇ' ಇತ್ಯಾದಿ.

[3] ಭಾಸನಾಟಕಚಕ್ರೇಽಪಿ ಛೇಕೈಃ ಕ್ಷಿಪ್ತೇ ಪರೀಕ್ಷಿತುಮ್ ।
ಸ್ವಪ್ನವಾಸವದತ್ತಸ್ಯ ದಾಹಕೋಽಭೂನ್ನ ಪಾವಕಃ ॥
—ಜಲ್ಹಣನ ಸೂಕ್ತಿಮುಕ್ತಾವಳಿ, (IV. 48 ; ಗಾಯಕವಾಡ ಗ್ರಂಥಮಾಲಾ)

ಪ್ರಕೃತ, ದೂತವಾಕ್ಯ ನಾಟಕವು ಮಹಾಭಾರತದ ಉದ್ಯೋಗ ಪರ್ವ ಬರುವ ಶ್ರೀಕೃಷ್ಣನ ರಾಯಭಾರ ಸನ್ನಿವೇಶದ ಮೇಲೆ ಬರೆದದ್ದಾಗಿದೆ.

ಕಥಾಸಾರಾಂಶ

ಪಾಂಡವರು ವನವಾಸಾಜ್ಞಾತವಾಸಗಳ ಅನಂತರ ತಮಗೆ ನ್ಯಾಯವಾಗಿ ಸ ಬೇಕಾದಅರ್ಧರಾಜ್ಯವನ್ನು ಪಡೆಯುವುದಕ್ಕಾಗಿ ಸಾತ್ವಿಕರೀತಿಯಿಂದ ದುರ್ಯೋ ನಲ್ಲಿ ಮಾಡಿದ ಸಂಧಾನಗಳೆಲ್ಲವೂ ವ್ಯರ್ಥವಾದುವು, ದುರ್ಯೋಧನನು ಮಂತ್ರಿ ಮಂಡಲವನ್ನು ಕೂಡಿಸಿ ಯುದ್ಧವನ್ನು ನಿಶ್ಚಯಿಸಿ ಸರ್ವಾನುಮತದಿ ಭೀಷ್ಮರಿಗೆ ಸೇನಾಧಿಪತ್ಯವನ್ನು ವಹಿಸುವುದೆಂದು ತೀರ್ಮಾನಿಸಿದನು. ಈ ಸಮ ದಲ್ಲಿ ಸರ್ವನಾಶಕವಾದ ಯುದ್ಧವನ್ನು ಆರಂಭಿಸುವ ಮೊದಲು ತಾನೂ ಸಂಧಿ ಒಂದು ಪ್ರಯತ್ನಮಾಡಬೇಕೆಂದು ಶ್ರೀಕೃಷ್ಣನು ದುರ್ಯೋಧನನ ಆಸ್ಥಾ ಬರುವನು. ಇದನ್ನು ತಿಳಿದ ಹಿರಿಯ ಕೌರವಶ್ರೇಷ್ಠರೂ, ಇತರ ಕೌರವಪ ರಾಜರೂ ಪುರುಷೋತ್ತಮನ ಸುಖಾಗಮನಕ್ಕೆ ಸಿದ್ಧರಾಗಲು, ದುರ್ಯೋಧನ ಅದನ್ನು ಸಹಿಸದೆ ಪಾಂಡವರಲ್ಲಿ ಮೊದಲಿಂದಲೂ ತನಗಿದ್ದ ವೈರದ ದೆಸೆಯಿ ಶ್ರೀಕೃಷ್ಣನನ್ನು ಅವಮಾನಪಡಿಸಲು ಉದ್ದೇಶಿಸುತ್ತಾನೆ. ಅದರಂತೆ ಕೌ ಕುಲಕ್ಕೇ ಕಳಂಕಪ್ರಾಯವಾದ ದ್ರೌಪದೀ ಕೇಶಾಂಬರಾಕರ್ಷಣವನ್ನು ಚಿತ್ರಿ ಪಟವನ್ನು ನೋಡುತ್ತಾ, ಸಂತೋಷಪಡುತ್ತಾ ದೂತನಾಗಿ ಬಂದಿದ್ದ ಶ್ರೀಕೃ ನನ್ನು ಹೀಯಾಳಿಸಿ ಅವಮಾನಪಡಿಸಲು ಪ್ರಯತ್ನಿಸುವನು. ದುರ್ಯೋಧನ ಅನುಚಿತ ನಿಂದೆಗಳನ್ನು ಸೈರಿಸಿದ ಶ್ರೀಕೃಷ್ಣನು ಕೌರವರಾಜನ ನಡತೆ ಹದ್ದು ಮೀರಿದಾಗ ದೈವಿಕವಾದ ತನ್ನ ಶಕ್ತಿಯನ್ನು ಪ್ರದರ್ಶಿಸಲು ಉದ್ಯುಕ್ತನಾಗುತ್ತಾನೆ ಶ್ರೀಮನ್ನಾರಾಯಣನ ತಡೆಯಲಶಕ್ಯವಾದ ಆಯುಧಗಳಲ್ಲೊಂದಾದ ಸುದರ್ಶನನ ಸಕಾಲದಲ್ಲಿ ಭಗವಂತನ ಕರ್ತವ್ಯವನ್ನು ಜ್ಞಾಪಿಸಿಕೊಟ್ಟಾಗ ಶ್ರೀಕೃಷ್ಣನ ರೋಷವು ಶಮನವಾಗುವುದು. ಕೊನೆಗೆ ವೃದ್ಧನಾದ ಧೃತರಾಷ್ಟ್ರನು ಕೌರವರ ಪರವಾಗಿ ಶ್ರೀಕೃಷ್ಣನಲ್ಲಿ ಕ್ಷಮೆಯನ್ನು ಯಾಚಿಸುವನು. ಹೀಗೆ ಶ್ರೀಕೃಷ್ಣನ ಸಂಧಾನ ಪ್ರಯತ್ನವು ವ್ಯರ್ಥವಾಗುವುದು. ಇದು 'ದೂತವಾಕ್ಯ' ನಾಟಕದ ಕಥಾಸಾರಾಂಶ

ಮಹಾಕಾವ್ಯಗಳನ್ನು ಆಧರಿಸಿ ಬರೆದ ನಾಟಕಗಳೆಷ್ಟೋ ಇವೆ. ನಾಟಕದ ವಸ್ತು ಹೊಸದಲ್ಲದೇಹೋದರೂ ಅಲ್ಲಿ ಬರುವ ಪಾತ್ರರಚನೆ, ವರ್ಣನಾವಿನ್ಯಾಸ ಮುಂತಾದುವು ಕವಿಕಲ್ಪನೆ ಮಾತ್ರ. ಆದರಲ್ಲಿ ಮಾಡುವ ಒಂದೆರಡು ಮಾರ್ಪಾಟು ಗಳಿಂದಲೇ ಕಥೆಯ ಬಣ್ಣವು ಬದಲಾಯಿಸಿಹೋಗುತ್ತದೆ. ವ್ಯಕ್ತಿಗಳು ಬದಲಾಯಿ ಹೋಗುತ್ತಾರೆ; ನೀರಸವಾಗಿದ್ದದ್ದು ರಸವತ್ತಾಗುತ್ತದೆ; ವಿಸ್ತಾರವಾದದ್ದು ಸಂಗ್ರಹ ವಾಗಿಯೂ ರಸವತ್ತಾಗಿಯೂ ಆಗುತ್ತದೆ. ಮಹಾಭಾರತವನ್ನು ಓದಿದವರಿಗೆ ಅಥವಾ ಕೇಳಿದವರಿಗೆ ಮೊದಲಿಂದ ಕೊನೆಯವರೆಗೂ ದುರ್ಯೋಧನನು ದುಷ್ಟ

ನಾಗಿಯೇ ಕಾಣುತ್ತಾನೆ. ವ್ಯಾಸರ ದುರ್ಯೋಧನ ಜನರ ದೃಷ್ಟಿಯಲ್ಲಿ ಕಡು ನೀಚ. ಭಾಸನ 'ದೂತವಾಕ್ಯ'ದ ದುರ್ಯೋಧನನೇನೂ ಕಡಿಮೆ ಇಲ್ಲ. ಆದರೆ ಅವನ 'ಊರುಭಂಗ'ದ ದುರ್ಯೋಧನ ಬೇರೆಯವನೇ ಆಗಿಬಿಡುತ್ತಾನೆ. ಅಲ್ಲಿ ಭಾಸನ ಉದ್ದೇಶವೇನೆಂದರೆ ದುರ್ಯೋಧನ ಮಾನವ ದ್ವೇಷಿಯಲ್ಲ, 'ಪಾಂಡವರ ದ್ವೇಷಿ' ಅಷ್ಟೆ. ಇಲ್ಲಿ ಒಂದು ಪಾತ್ರವನ್ನು ತನ್ನ ಉದ್ದೇಶಕ್ಕನುಸಾರವಾಗಿ ಅಳವಡಿಸಿ ಕೊಳ್ಳುವುದೇ ಕವಿಯ ಚಾತುರ್ಯ. ಸನ್ನಿವೇಶಗಳಲ್ಲಿಯ ಹೊಸ ಸೃಷ್ಟಿ, ಪಾತ್ರಗಳಲ್ಲಿ ಕಂಡುಬರುವ ವಾಕ್ಚಾತುರ್ಯ ಇವುಗಳೆಲ್ಲವೂ ಕವಿಯ ಉದ್ದೇಶವನ್ನು ಪೂರೈಸುವುದರಲ್ಲಿ ಸಾಧಕಗಳಾಗುತ್ತವೆ.

ಮೂಲಕ್ಕೂ ರೂಪಕಕ್ಕೂ ಇರುವ ವ್ಯತ್ಯಾಸಗಳು

ಕವಿಯು ನೆಪಮಾತ್ರಕ್ಕೆ ಕಥಾವಸ್ತುವನ್ನು ಮಹಾಭಾರತದಿಂದ ತೆಗೆದು ಕೊಂಡಿದ್ದರೂ ಅವನ ಸ್ವಂತ ಪ್ರತಿಭೆಯೂ, ಚಮತ್ಕಾರವೂ, ಕಲ್ಪನಾಸಾಮರ್ಥ್ಯವೂ ಈ ಏಕಾಂಕರೂಪಕದಲ್ಲಿ ಉಜ್ವಲವಾಗಿ ಬೆಳಗುತ್ತವೆ. ಭಾಸನು ದುರ್ಯೋಧನನ ಪ್ರಭಾವವನ್ನು ಮನಮುಟ್ಟುವಂತೆ ಚಿತ್ರಿಸಿದ್ದಾನೆ. ಮಹಾಭಾರತದಲ್ಲಿ ವರ್ಣಿತ ವಾಗಿರುವ ಕೌರವ ಸಭೆಯಲ್ಲಿ ದುರ್ಯೋಧನನಿಗೆ ಬುದ್ಧಿವಾದ ಹೇಳುವಷ್ಟು ನ ವೈಶಿಷ್ಟ್ಯವಾದರೂ ಭೀಷ್ಮದ್ರೋಣಾದಿಗಳಿಗೆ ಉಳಿದಿದೆ. ಆದರೆ 'ದೂತವಾಕ್ಯ'ದ ದುರ್ಯೋಧನನೆದುರಿಗೆ ಉಳಿದವರೆಲ್ಲಾ ಶಿಲಾಪ್ರತಿಮೆಗಳಂತೆ. ಮಹಾಭಾರತದ ಉದ್ಯೋಗಪರ್ವದಲ್ಲಿ ಶ್ರೀಕೃಷ್ಣನು ಕೌರವಸಭೆಗೆ ಬಂದಾಗ ಧೃತರಾಷ್ಟ್ರನೂ ಅಲ್ಲಿರುವನು. ಪಾಂಡವರು ಶಾಂತಿಗಾಗಲಿ ಸಮರಕ್ಕಾಗಲಿ ಸಿದ್ಧರೆಂದೂ, ಧೃತರಾಷ್ಟ್ರ ದುರ್ಯೋಧನರೇ ಅವರಿಗೆ ಮಹಾರಾಜ ಮತ್ತು ಯುವರಾಜರಾಗಿದ್ದು ಪಾಂಡವರಿಗೆ ನ್ಯಾಯವಾಗಿ ಸಲ್ಲಬೇಕಾದ ಅರ್ಧರಾಜ್ಯವನ್ನು ಕೊಡಬೇಕೆಂದೂ ಶ್ರೀಕೃಷ್ಣನು ಸಂದೇಶವನ್ನು ತರುವನು. ಆಗ ಧೃತರಾಷ್ಟ್ರನು "ವೀರಶ್ರೇಷ್ಠನೂ ಪುರುಷೋತ್ತಮನೂ ಆದ ಕೃಷ್ಣನೇ, ಮೂರ್ಖನೂ ಶಾಂತಿನಿಯಮವನ್ನು ಮೀರಿ ವರ್ತಿಸುವವನೂ ಆದ ದುರ್ಯೋಧನನು ನಿನ್ನ ಮಾತನ್ನು ಒಪ್ಪುವಂತೆ ಮಾಡಲು ಪ್ರಯತ್ನಿಸು. ಸ್ವತಃ ರಾಜನಾಗಿರುವ ದುರಾತ್ಮನಾದ ದುರ್ಯೋಧನನನ್ನು ನಿನ್ನ ಮಾತನ್ನು ಕೇಳುವಂತೆ ಮಾಡು. ಅಂದಮೇಲೆ ನೀನು ಬಹು ದೊಡ್ಡ ಉಪಕಾರ ವನ್ನೇ ಮಾಡಿದಂತಾಗುವುದು"[1] ಎಂದು ಆಗ್ರಹಪಡಿಸುವನು. "ಮಿತ್ರರಿಗೆ ಶಾಂತಿಲಭಿಸಲೆಂದು ಶ್ರೀ ಕೃಷ್ಣನು ಬುದ್ಧಿವಾದವನ್ನು ಹೇಳಿದ್ದಾನೆ. ಅವನ ಮಾತನ್ನು ಉಪೇಕ್ಷೆಮಾಡಿದಲ್ಲಿ ಒಳ್ಳೆಯದಾಗುವುದಿಲ್ಲ. ಮಾತಾಪಿತೃಗಳನ್ನು

---

[1] ಅಂಗ ದುರ್ಯೋಧನಂ ಕೃಷ್ಣ ಮನ್ದಂ ಶಾಸ್ತ್ರಾತಿಗಂ ಮಮ ।
ಅನುನೇತುಂ ಮಹಾಬಾಹೋ ಯತಸ್ವ ಪುರುಷೋತ್ತಮ ॥
ಅನುಶಾಧಿ ದುರಾತ್ಮಾನಂ ಸ್ವಯಂ ದುರ್ಯೋಧನಂ ನೃಪಮ್ ।
ಸುಹೃತ್ಕಾರ್ಯಂ ತು ಸುಮಹತ್ ಕೃತಂ ತೇ ಸ್ಯಾಜ್ಜನಾರ್ದನ ॥

ದುಃಖಕ್ಕೀಡುಮಾಡಬೇಡ "[1] ಎಂದು ಭೀಷ್ಮರು ಕೂಡ ದುರ್ಯೋಧನನ್ನು ಬೋಧನೆಮಾಡಿದರು. ದ್ರೋಣರೂ "ನಿನ್ನ ಮಿತ್ರರಾದ ಕೃಷ್ಣ ಭೀಷ್ಮರು ಸ್ಪಷ್ಟವಾದ ಮಾತನ್ನೇ ಹೇಳಿದರು. ಅರ್ಧ ರಾಜ್ಯವನ್ನು ಕೊಡದೇ ಇದ್ದಲ್ಲಿ ಮುಂದೆ ಪಶ್ಚಾತ್ತಾಪಪಡಬೇಕಾಗುವುದು "[2] ಎಂದು ಎಚ್ಚರಿಸುವರು. ವಿದುರನು ಕೂಡ "ದುರ್ಯೋಧನ! ಭರತರ್ಷಭ! ನಾನು ನಿನಗಾಗಿ ದುಃಖಿಸುವುದಿಲ್ಲ. ನಿನ್ನ ತಂದೆ ಮತ್ತು ನಿನ್ನ ತಾಯಿ ಗಾಂಧಾರಿ ಈ ಇಬ್ಬರು ವೃದ್ಧರಿಗಾಗಿ ನಾನು ದುಃಖಿಸುತ್ತೇನೆ. ಕುಲಘ್ನನೂ ಪಾಪಿಯೂ ಕಾಪುರುಷನೂ ಆದ ಈ ಮಗನನ್ನು ಪಡೆದು ಅವರು ಶೋಕದಿಂದ ಭಿಕ್ಷುಕರಾಗಿ ಈ ಭೂಮಿಯಲ್ಲಿ ಅಲೆಯಬೇಕಾಗುತ್ತದೆ"[3] ಎಂದು ಮರುಗುವನು.

ದೂತವಾಕ್ಯ ರೂಪಕದಲ್ಲಿ ಇದೊಂದೂ ಇಲ್ಲ. ಅದರ ಸನ್ನಿವೇಶವೇ ಬೇರೆಯದು. ವಿದುರ ಧೃತರಾಷ್ಟ್ರರು ಸಭೆಯಲ್ಲಿರುವುದಿಲ್ಲ. ಗಾಂಧಾರಿಯಂತೂ ಇಲ್ಲವೇ ಇಲ್ಲ. ದುರ್ಯೋಧನನೊಬ್ಬನೇ ಸಭಾಧಿಪತಿ. ಅವನ ಮಾತಿಗೆ ಎದುರಾಡುವವರು ಒಬ್ಬರೂ ಇಲ್ಲ. ಅವನ ಉದ್ಧಟತನವನ್ನು ಹೃದಯಂಗಮವಾಗಿ ವ್ಯಕ್ತಪಡಿಸಲು ಭಾಸನು ಬಹು ಸೊಗಸಾದ ಸನ್ನಿವೇಶವನ್ನು ಕಲ್ಪಿಸಿದ್ದಾನೆ.

ಕಾಂಚುಕೀಯಃ—ಜಯತು ಮಹಾರಾಜಃ| ಏಷ ಖಲು ಪಾಂಡವಸ್ಕಂಧಾವಾರಾತ್ ದೌತ್ಯೇನಾಗತಃ ಪುರುಷೋತ್ತಮೋ ನಾರಾಯಣಃ|

ದುರ್ಯೋಧನಃ—ಮಾ ತಾವತ್ ಭೋ ಬಾದರಾಯಣ! ಕಿಂ ಕಿಂ ಕಂಸಭೃತ್ಯೋ ದಾಮೋದರಸ್ತವ ಪುರುಷೋತ್ತಮಃ? ಸ ಗೋಪಾಲಕಸ್ತವ ಪುರುಷೋತ್ತಮಃ? ಬಾರ್ಹದ್ರಥಾಪಹೃತವಿಷಯಕೀರ್ತಿಭೋಗಸ್ತವ ಪುರುಷೋತ್ತಮಃ? ಅಹೋ! ಪಾರ್ಥಿವಾಸನ್ನಮಾಶ್ರಿತಭೃತ್ಯಜನಸ್ಯ ಸಮುದಾಚಾರಃ| ಸಗರ್ವ ಖಲ್ವಸ್ಯ ವಚನಮ್| ಆಃ, ಅಪಧ್ವಂಸ|

ಕಾಂಚುಕೀಯಃ—ಪ್ರಸೀದತು ಮಹಾರಾಜಃ| ಸಂಭ್ರಮೇಣ ಸಮುದಾಚಾರೋ ವಿಸ್ಮೃತಃ| (ಪಾದಯೋಃ ಪತತಿ).

ದುರ್ಯೋಧನಃ—ಸಂಭ್ರಮ ಇತಿ| ಆಃ ಮನುಷ್ಯಾಣಾಮಸ್ತ್ಯೇವ ಸಂಭ್ರಮಃ| ಉತ್ತಿಷ್ಠೋತ್ತಿಷ್ಠ|

ಕಾಂಚುಕೀಯಃ—ಅನುಗೃಹೀತೋಽಸ್ಮಿ|

---

1 ಕೃಷ್ಣೇನ ವಾಕ್ಯಮುಕ್ತೋಽಸಿ ಸುಹೃದಾಂ ಶಮಮಿಚ್ಛತಾ|
ಅಕೃತ್ವಾ ವಚನಂ ತಾತ ನ ಕಲ್ಯಾಣಮವಾಪ್ಸ್ಯಸಿ|
ಮಾತರಂ ಪಿತರಂ ಚೈವ ಮಾ ಮಜ್ಜೀಃಶೋಕಸಾಗರೇ||

2 ಏತಚ್ಚೈವ ಮತಂ ಸತ್ಯಂ ಸುಹೃದೋಃ ಕೃಷ್ಣಭೀಷ್ಮಯೋಃ|
ಯದಿ ನ ದಾಸ್ಯಸೇ ತಾತ ಪಶ್ಚಾತ್ತಪ್ಸ್ಯಸಿ ಭಾರತ||

3 ದುರ್ಯೋಧನ ನ ಶೋಚಾಮಿ ತ್ವಾಮಹಂ ಭರತರ್ಷಭ|
ಇಮೌ ತು ವೃದ್ಧೌ ಶೋಚಾಮಿ ಗಾಂಧಾರೀಂ ಪಿತರಂ ಚ ತೇ||
ಭಿಕ್ಷುಕೌ ವಿಚರಿಷ್ಯೇತೇ ಶೋಚನ್ತೌ ಪೃಥಿವೀಮಿಮಾಮ್|
ಕುಲಘ್ನಮೀದೃಶಂ ಪಾಪಂ ಜನಯಿತ್ವಾ ಕುಪೂರುಷಮ್||

ಆಗ ದುರ್ಯೋಧನನು ಭಕ್ತನಿಗೆ ಅನುಗ್ರಹಮಾಡುವ ಭಗವಂತನಂತೆ “ ಇದಾನೀಂ ಪ್ರಸನ್ನೋಽಸ್ಮಿ ” ಎಂದು ಹೇಳಿದ್ದಲ್ಲದೆ ಕೊನೆಗೂ ಬಾದರಾಯಣನಿಂದ ತನಗೆ ಪ್ರಿಯವಾದ ಮಾತನ್ನೇ ಆಡಿಸುವ ಛಲದಿಂದ “ ಕ ಏಷ ದೂತಃ ಪ್ರಾಪ್ತಃ ? ” ಎಂದು ಪ್ರಶ್ನಿಸುವನು. ಆಗಲೇ ಹೆದರಿ ಹಣ್ಣಾದ ವೃದ್ಧ ಕಾಂಚುಕೀಯನು “ ದೂತಃ ಪ್ರಾಪ್ತಃ ಕೇಶವಃ ” ಎಂದು ಬಿನ್ನೈಸುವನು. ಈ ಮಾತು ದುರ್ಯೋಧನನ ಕಿವಿಗೆ ಅಮೃತವೆರೆದಂತಿರಬೇಕು.

ಇದೇ ಅಲ್ಲದೆ ಶ್ರೀಕೃಷ್ಣನು ಕೌರವಾಸ್ಥಾನವನ್ನು ಪ್ರವೇಶಿಸಿದಾಗ ಸಭಾಸದರು ಎದ್ದುನಿಂತು ಗೌರವಿಸಿದಲ್ಲಿ “ ದ್ವಾದಶ ಸುವರ್ಣಭಾರ ”ದ ದಂಡವನ್ನು ವಿಧಿಸುವುದಾಗಿ ಅಪ್ಪಣೆಮಾಡಿದ್ದರೂ ದುರ್ಯೋಧನನೇ ಶ್ರೀಕೃಷ್ಣನ ಮಾಹಾತ್ಮ್ಯೆಯಿಂದ ಸ್ಥಾನಪಲ್ಲಟನಾಗುವನು. ಅನಂತರ ಪಾಂಡವರ ಸಂದೇಶವನ್ನು ಶ್ರೀಕೃಷ್ಣನು ಮಂಡಿಸಿದಾಗ ದುರ್ಯೋಧನನು ಪಾಂಡವರನ್ನೂ ಶ್ರೀಕೃಷ್ಣನನ್ನೂ ಅವಹೇಳನ ಮಾಡಿದನೇ ವಿನಾ ದೌತ್ಯದ ಔಚಿತ್ಯವನ್ನೇ ಮರೆತು “ ರಾಜ್ಯವನ್ನು ಬಾಹುಬಲದಿಂದ ಪಡೆಯಬೇಕೇ ಹೊರತು ಯಾಚನೆಯಿಂದ ಸಾಧ್ಯವಿಲ್ಲ” ಎಂದು, ಪಾಂಡವರಲ್ಲಿ ಸಂಧಾನಕ್ಕಿಂತ ಯುದ್ಧವನ್ನೇ ನಿರೀಕ್ಷಿಸುತ್ತಾನೆ. ಈ ಸಂದರ್ಭದಲ್ಲಿ ದುರ್ಯೋಧನನಿಗೂ ಶ್ರೀಕೃಷ್ಣನಿಗೂ ಆಗುವ ಸಂಭಾಷಣೆ ಕವಿಕಲ್ಪಿತ ಮಾತ್ರ. ಉದ್ದೇಶವೇನೆಂದರೆ, ದುರ್ಯೋಧನನ ದುರ್ಭಾಷೆ, ಗುಣದ್ವೇಷ, ಹಟ ಮತ್ತು ಸ್ವಜನರಲ್ಲಿ ನಿರ್ದಯತೆ ಇತ್ಯಾದಿಗಳು ವಿಷವಾಹಿನಿಯಾಗಿ ಹರಿದರೂ ಶ್ರೀಕೃಷ್ಣನ ಸೌಮ್ಯ ಸ್ವಭಾವ ಮತ್ತು ಉದಾತ್ತ ಭಾವನೆಗಳನ್ನು ರೂಪಿಸುವುದೇ ಆಗಿದೆ. ದೈವೀಶಕ್ತಿಯ ಎದುರು ಮನುಷ್ಯನ ದುಷ್ಟಸ್ವಭಾವ ಎಂದೂ ಜಯಿಸಲಾರದು ಎಂಬುದೇ ಅದರ ತಾತ್ಪರ್ಯ. ರೂಪಕದ ಕೊನೆಯಲ್ಲಿ ಸುದರ್ಶನವು ಶ್ರೀಕೃಷ್ಣನಿಗೆ ಅವನ ಕರ್ತವ್ಯವನ್ನು ಜ್ಞಾಪಿಸುವುದೇ ಇದಕ್ಕೆ ಪುಷ್ಟಿಯನ್ನು ಕೊಡುತ್ತದೆ. ಈ ಸಂದರ್ಭದಲ್ಲಿ ಭಗವದ್ಗೀತೆಯ “ ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ । ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥ ” ಎಂಬ ಭಗವದ್ವಚನವು ಜ್ಞಾಪಕಕ್ಕೆ ಬರುವುದು. ಕವಿಯು ಇದನ್ನೇ ಪುಷ್ಟೀಕರಿಸಿದ್ದಾನೆ. ಲೋಕದ ದುಷ್ಟ ಶಕ್ತಿಯ ಅಪರಾವತಾರ ‘ದೂತವಾಕ್ಯ’ದಲ್ಲಿನ ದುರ್ಯೋಧನ, ಭಾಸನ ಸೃಷ್ಟಿ. ಆ ದುಷ್ಟ ಶಕ್ತಿಯ ದಮನ ಭಗವಂತನದೇ. ಕೊನೆಗೆ ಧರ್ಮಕ್ಕೇ ಜಯ. ಇದನ್ನು ಎತ್ತಿಹಿಡಿಯುವುದೇ ಭಾಸನ ಉದ್ದೇಶ. ಮಹಾಭಾರತದ ಒಂದು ಪ್ರಸಂಗವು ಕವಿಗೆ ನೆಪಮಾತ್ರ, ಇದೇ ಈ ರೂಪಕದ ವೈಶಿಷ್ಟ್ಯ.

ದೂತವಾಕ್ಯ

(ನಾಂದಿಯು ಕೊನೆಯಲ್ಲಿ ಸೂತ್ರಧಾರನು ಪ್ರವೇಶಿಸುತ್ತಾನೆ)

ಸೂತ್ರಧಾರ : ಸಕಲಲೋಕಗಳಿಗೂ ಹರ್ಷದಾಯಕವಾದ, ದಾನವ ನಮುಚಿಯನ್ನು ಅಂತರಿಕ್ಷಕ್ಕೆ ಚಿಮ್ಮಿದ, ಸೂಕ್ಷ್ಮವೂ ರಕ್ತವರ್ಣರಂಜಿತವೂ ಆಗಿರುವ ಉಗುರಿನಿಂದ ಕೂಡಿದ ಉಪೇಂದ್ರನ ಪಾದವು ನಿಮ್ಮನ್ನು ರಕ್ಷಿಸಲಿ. ॥ ೧ ॥

ಇದನ್ನೇ ನಾನು ಆರ್ಯಮಿಶ್ರರಲ್ಲಿ ವಿಜ್ಞಾಪಿಸಿಕೊಳ್ಳುವುದು. ಕೇಳಿ! ನಾನು ಮಾತಿನಲ್ಲಿ ನಿರತನಾಗಿರುವಾಗ ನನಗೆ ಏನೋ ಶಬ್ದದಂತೆ ಕೇಳುತ್ತಿದೆಯಲ್ಲ! ಇರಲಿ, ನೋಡುವೆನು.

(ನೇಪಥ್ಯದಲ್ಲಿ)

ಎಲೈ ದ್ವಾರಪಾಲಕರೇ ! ಮಹಾರಾಜನಾದ ದುರ್ಯೋಧನನು ಆಜ್ಞಾಪಿಸುತ್ತಾನೆ—

ಸೂತ್ರಧಾರ : ಇರಲಿ, ತಿಳಿಯಿತು.

ಧೃತರಾಷ್ಟ್ರನ ಪುತ್ರರಿಗೂ ಮತ್ತು ಪಾಂಡುವಿನ ಪುತ್ರರಿಗೂ ವೈಷಮ್ಯ ವೃದ್ಧಿಸಿರಲಾಗಿ ಸೇವಕನು ದುರ್ಯೋಧನನ ಆಜ್ಞಾನುಸಾರ ಮಂತ್ರಶಾಲೆಯನ್ನು ಸಿದ್ಧಪಡಿಸುತ್ತಿದ್ದಾನೆ. ॥ ೨ ॥

(ನಿಷ್ಕ್ರಾಂತ)

ಸ್ಥಾಪನೆ

(ಕಾಂಚುಕೀಯನ ಪ್ರವೇಶ)

ಕಾಂಚುಕೀಯ : ಎಲೈ ಪ್ರತೀಹಾರಿಗಳೇ ! ಮಹಾರಾಜನಾದ ದುರ್ಯೋಧನನು ನಿಮಗೆ ಹೀಗೆ ಆಜ್ಞೆಮಾಡಿದ್ದಾನೆ—"ಸಕಲ ರಾಜಕುಮಾರರೊಂದಿಗೂ ನಾನು ಮಂತ್ರಾಲೋಚಿಸಲು ಇಚ್ಛಿಸುತ್ತೇನೆ. ಆದ್ದರಿಂದ ಅವರೆಲ್ಲರೂ ಆಹ್ವಾನಿತರಾಗಲಿ." (ಮುಂದೆ ಬಂದು ಸುತ್ತಲೂ ನೋಡಿ) ಓ, ಮಹಾರಾಜ ದುರ್ಯೋಧನನೇ ಈ ಕಡೆ ದಯಮಾಡಿಸುತ್ತಿರುವನು ! ಅವನು—

ನವಿರಾದ ಬಿಳಿಯ ಉತ್ತರೀಯವನ್ನು ಧರಿಸಿದ ಕಪ್ಪುಬಣ್ಣದ ಯುವಕ, ತನ್ನ ರಾಜಯೋಗ್ಯವಾದ ಛತ್ರಚಾಮರಗಳಿಂದ ವೈಶಿಷ್ಟ್ಯವುಳ್ಳವನಾಗಿದ್ದಾನೆ; ಮತ್ತು ಗಂಧದಿಂದ ಪೂಸಿದ, ಆಭರಣಗಳ ಮಣಿಗಳಿಂದ ಮಿನುಗುತ್ತಿರುವ ದೇಹದಿಂದ ಅವನು ತಾರೆಗಳ ಮಧ್ಯದಲ್ಲಿನ ಚಂದ್ರನಂತೆ ಪ್ರಕಾಶಿಸುತ್ತಿದ್ದಾನೆ. ॥ ೩ ॥

(ನಿರ್ದೇಶಿಸಿದಂತೆ ಆಮೇಲೆ ದುರ್ಯೋಧನನು ಪ್ರವೇಶಿಸುತ್ತಾನೆ)

ದುರ್ಯೋಧನ : ಸನ್ನಿಹಿತವಾಗಿರುವ ಯುದ್ಧವೊಂದರ ಉತ್ಸವದ ಚಿಂತನೆ ಯಲ್ಲಿರುವಾಗ, ಹಿಂದೆ ಕ್ರೋಧದಿಂದ ಕೂಡಿದ್ದ ನನ್ನ ಹೃದಯ ಈಗ ಹರ್ಷಗೊಂಡಂತಿದೆ. ಆಃ, ಪಾಂಡವ ದಿಗ್ಗಜಗಳ ಸೇನೆಯ ಮುಖ ಭಂಗಮಾಡಿ ಅವರ ಗದೆಯಂತಿರುವ ದಂಷ್ಟ್ರಗಳನ್ನು ನುಚ್ಚುನೂರು ಮಾಡಲು ಎಷ್ಟು ಕಾತರನಾಗಿರುವೆನು ! ॥ ೪ ॥

ಕಾಂಚುಕೀಯ : ಮಹಾರಾಜನಿಗೆ ಜಯವಾಗಲಿ ! ಮಹಾರಾಜನ ಆಜ್ಞಾನು ಸಾರ ಸಕಲ ರಾಜಕುಮಾರರೂ ಕರೆಸಲ್ಪಟ್ಟಿದ್ದಾರೆ.

ದುರ್ಯೋಧನ : ಒಳ್ಳೆ ಕೆಲಸ. ನೀನು ಹೊರಡುವವನಾಗು.

ಕಾಂಚುಕೀಯ : ಮಹಾರಾಜನ ಆಜ್ಞೆಯಂತೆ (ಹೋಗುತ್ತಾನೆ).

ದುರ್ಯೋಧನ : ಆರ್ಯರಾದ ವೈಕರ್ಣ ಮತ್ತು ವರ್ಷದೇವ ! ನನ್ನ ಸೈನ್ಯವು ಹನ್ನೊಂದು ಅಕ್ಷೌಹಿಣಿ ಶಕ್ತಿಯುಳ್ಳದ್ದು. ಈ ಸೈನ್ಯಾಧಿಪತ್ಯವನ್ನು ವಹಿಸಲು ಅರ್ಹರಾದವರು ಯಾರು, ಎಂದು ವಿನಂತಿಸಿಕೊಳ್ಳುತ್ತೇವೆ.

ಏನು ಹೇಳಿದಿರಿ ? 'ಅದೊಂದು ದೊಡ್ಡ ಸಮಸ್ಯೆ ; ನಾವು ಆಲೋಚಿಸಿ ಹೇಳಬೇಕು' ಎಂದೆ ?

ಸರಿಯಾದದ್ದೇ. ಹಾಗಾದರೆ ದಯಮಾಡಿ, ಮಂತ್ರಶಾಲೆಗೇ ಹೋಗೋಣ. ಪೂಜ್ಯ ಆಚಾರ್ಯ, ನಿಮಗೆ ವಂದಿಸುತ್ತೇನೆ, ಮಂತ್ರಶಾಲೆಯನ್ನು ಪ್ರವೇಶಮಾಡ ಬೇಕು. ಪಿತಾಮಹ ! ನಿಮಗೂ ವಂದಿಸುತ್ತೇನೆ, ಮಂತ್ರಶಾಲೆಯನ್ನು ಪ್ರವೇಶಿ ಸೋಣವಾಗಲಿ. ಆರ್ಯರುಗಳಾದ ವೈಕರ್ಣ ಮತ್ತು ವರ್ಷದೇವ ! ನೀವೂ ಪ್ರವೇಶಿಸೋಣವಾಗಲಿ. ಮತ್ತು ನೀವು, ಎಲ್ಲಾ ಕ್ಷತ್ರಿಯರೂ, ಸ್ವೇಚ್ಛೆಯಿಂದ ಒಳಗೆ ಪ್ರವೇಶಿಸಿ. ಗೆಳೆಯ ! ಕರ್ಣ ! ಬಾ, ಒಳಗೆ ಪ್ರವೇಶಿಸೋಣ.

(ಪ್ರವೇಶಿಸಿ)

ಆಚಾರ್ಯ ! ಈ ಕಡೆ ಕೂರ್ಮಾಸನವಿದೆ ; ಉಪಸ್ಥಿತರಾಗಬೇಕೆಂದು ಪ್ರಾರ್ಥಿಸುತ್ತೇನೆ. ಪಿತಾಮಹ ! ಈ ಕಡೆ ಸಿಂಹಾಸನವಿದೆ ; ಕುಳಿತುಕೊಳ್ಳಬೇಕು. ಮಾತುಲ ! ಇಲ್ಲಿ ಚರ್ಮಾಸನವಿದೆ ; ಕುಳಿತುಕೊಳ್ಳಬೇಕು. ಆರ್ಯರಾದ ವೈಕರ್ಣ ಮತ್ತು ವರ್ಷದೇವ ! ನೀವಿಬ್ಬರೂ ಕುಳಿತುಕೊಳ್ಳುವವರಾಗಿ ಮತ್ತು ಎಲೈ ಕ್ಷತ್ರಿಯರೆ ! ಸುಖಾಸೀನರಾಗಿ.

ಏನು, ಏನು ! ಮಹಾರಾಜನು ಕುಳಿತಿಲ್ಲವೆಂದೆ ? ಓ, ಸೇವಾಧರ್ಮ ! ಇದೋ ಕುಳಿತುಕೊಳ್ಳುವೆನು. ಗೆಳೆಯ ! ಕರ್ಣ ! ನೀನೂ ಉಪಸ್ಥಿತನಾಗು.

(ಕುಳಿತುಕೊಂಡು)

ಆರ್ಯರಾದ ವೈಕರ್ಣ ಮತ್ತು ವರ್ಷದೇವ ! ನನ್ನ ಹನ್ನೊಂದು ಅಕ್ಷೌಹಿಣಿ ಸೈನ್ಯಬಲದ ಆಧಿಪತ್ಯವನ್ನು ವಹಿಸಲು ಯಾರು ಅರ್ಹರೆಂದು ಈಗ ಹೇಳಿ.

ಏನು ಹೇಳಿದಿರಿ ? 'ಗಾಂಧಾರರಾಜನು ಹೇಳುತ್ತಾನೆಂದೆ ?' ಒಳ್ಳೆಯದು, ಹಾಗಾದರೆ ನನ್ನ ಮಾತುಲನು ಹೇಳುವನು.

ನನ್ನ ಮಾತುಲನು ಏನು ಹೇಳುವನು ? 'ಕೀರ್ತಿವಂತ ಗಾಂಗೇಯ ನಿರುವಾಗ ಸೈನ್ಯಾಧಿಕಾರಿಯಾಗಲು ಬೇರೆ ಯಾರು ಅರ್ಹರು ?' ಎಂದೆ ?

ನನ್ನ ಮಾತುಲನು ಸರಿಯಾಗಿಯೇ ಹೇಳಿದ. ನಿಜ, ನಿಜ, ನನ್ನ ಪಿತಾಮಹನೇ ಸೈನ್ಯಾಧಿಪತಿಯಾಗಲಿ, ನಮ್ಮದೂ ಅದೇ ಇಚ್ಛೆ.

ರಾಜರುಗಳ ಹೃದಯಗಳು ಅಭಿಷೇಕದ ನೀರಿನೊಂದಿಗೆ ಭೀಷ್ಮನ
ಶಿರದ ಮೇಲೆ ಬೀಳಲಿ—ಸೈನ್ಯದ ರಣಭೇರಿಯಿಂದುಂಟಾಗುವ ಮಹಾ
ಶಬ್ದದಿಂದ ಸಮುದ್ರವು ಘೋಷಮಾಡಲಿ. ಶಂಖಧ್ವನಿಯೂ,
ನಗಾರಿಯ ಬಡಿತವೂ ಭಯಂಕರ ಬಿರುಗಾಳಿಯಿಂದ ಅಪ್ಪಳಿಸಲ್ಪಟ್ಟ
ಸಾಗರವನ್ನು ಹೋಲಲಿ. ॥ ೫ ॥

(ಕಾಂಚುಕೀಯನ ಪ್ರವೇಶ)

ಕಾಂಚುಕೀಯ : ಮಹಾರಾಜನಿಗೆ ಜಯವಾಗಲಿ ! ಈಗ ಪುರುಷೋತ್ತಮನಾದ ನಾರಾಯಣನು ಪಾಂಡವರ ಶಿಬಿರದಿಂದ ದೂತನಾಗಿ ಬಂದಿರುವನು.

ದುರ್ಯೋಧನ : ಸ್ವಲ್ಪ ತಾಳು. ಓ ಬಾದರಾಯಣ ! ಏನು, ಏನು! ಕಂಸನ ಭೃತ್ಯನಾದ ಈ ದಾಮೋದರ ನಿನಗೆ ಪುರುಷೋತ್ತಮನೆ ? ಒಬ್ಬ ಗೋಪಾಲಕ ನಿನಗೆ ಪುರುಷೋತ್ತಮನೆ ? ಬೃಹದ್ರಥನ ಮಗನಿಂದ ರಾಜ್ಯ ಕೀರ್ತಿ ಭೋಗಗಳನ್ನು ಕಳೆದುಕೊಂಡ ಈ ಹತಭಾಗ್ಯ ನಿನಗೆ ಪುರುಷೋತ್ತಮನೆ! ಆಶ್ಚರ್ಯ ! ರಾಜಸನ್ನಿಧಿಯಲ್ಲಿದ್ದೂ ಭೃತ್ಯಜನದ ಆಚರಣೆ ಹೀಗಿದೆ ! ಇವನದು ಎಷ್ಟು ಗರ್ವದ ನುಡಿ ! ಆಃ, ನೀನು ಹಾಳಾಗು.

ಕಾಂಚುಕೀಯ : ಕ್ಷಮಿಸಿ, ಸ್ವಾಮಿ, ಕ್ಷಮಿಸಿ. ನನ್ನ ಆತುರದಲ್ಲಿ ಸಮುದಾಚಾರವನ್ನು ಮರೆತೆ (ಕಾಲಿಗೆ ಬೀಳುವನು).

ದುರ್ಯೋಧನ : ಆತುರ, ಎಂದೆ ? ಓ, ಮನುಷ್ಯರು ಕೆಲವು ಸಲ ಆತುರಪಡುವರು. ಏಳು, ಏಳು.

ಕಾಂಚುಕೀಯ : ಅನುಗೃಹೀತನಾದೆನು.

ದುರ್ಯೋಧನ : ಈಗ ನಾನು ಪ್ರಸನ್ನನಾದೆ. ಬಂದಿರುವ ದೂತನು ಯಾರು ?

ಕಾಂಚುಕೀಯ : ದೂತ ಕೇಶವ ಬಂದಿದ್ದಾನೆ.

ದುರ್ಯೋಧನ : ಕೇಶವ, ಹೌದು. ಹೀಗೆ ತಾನೆ ಹೇಳಬೇಕು. ಅದೇ

ಸಮುದಾಚಾರ. ಎಲೈ ರಾಜಕುಮಾರರೇ! ದೂತನಾಗಿ ಬಂದಿರುವ ಕೇಶವನಿಗೆ ಯುಕ್ತವಾದದ್ದು ಏನನ್ನುವಿರಿ? ಏನು ಹೇಳಿದಿರಿ?—

'ಕೇಶವನನ್ನು ಅರ್ಘ್ಯಪ್ರದಾನದಿಂದ ಪೂಜಿಸಬೇಕು' ಎಂದೆ? ನನಗೆ ರುಚಿಸದು. ಅವನನ್ನು ಬಂಧಿಸುವುದೇ ಹಿತವೆಂದು ನನಗನ್ನಿಸುವುದು.

ಈ ವಸುಭದ್ರನ ಮಗನನ್ನು ಒಂದು ಬಾರಿ ಬಂಧಿಸಿದರೆ ಪಾಂಡವರ
ಕಣ್ಣನ್ನೇ ಅಪಹರಿಸಿದಂತೆ. ಹೀಗೆ ಪಾಂಡವರು ಗತಿಮತಿರಹಿತ
ರಾದಾಗ ಶತ್ರುರಹಿತವಾದ ಭೂಮಿಯಲ್ಲವೂ ನನ್ನದಾಗುವುದು.
॥ ೬ ॥

ಇಷ್ಟೇ ಅಲ್ಲದೆ, ಇಲ್ಲಿರುವವರಲ್ಲಿ ಯಾರೇ ಆಗಲಿ ಕೇಶವನನ್ನು ಸ್ವಾಗತಿಸಿದರೆ ಅವರು "ದ್ವಾದಶಸುವರ್ಣಭಾರ" ದಂಡವನ್ನು ನನ್ನಿಂದ ವಿಧಿಸಲ್ಪಡುವರು. ಆದ್ದರಿಂದ ನೀವೆಲ್ಲರೂ ಎಚ್ಚರದಿಂದಿರಿ. (ಸ್ವಗತ) ನಾನೂ ಕೂಡ ಅವನನ್ನು ಸಂಪ್ರದಾಯದಂತೆ ಸ್ವಾಗತಿಸದಿರಲು ಏನು ಉಚಿತವಾದುದನ್ನು ಯೋಚಿಸಲಿ? ಹೌದು, ಒಂದು ಉಪಾಯವನ್ನು ಹುಡುಕಿದೆ. (ಪ್ರಕಾಶ) ಬಾದರಾಯಣ! ದ್ರೌಪದಿಯ ಕೇಶಾಂಬರದ ಅವಕರ್ಷಣವಿರುವ ಆ ಚಿತ್ರಪಟವನ್ನು ತಾ. (ಸ್ವಗತ) ನನ್ನ ದೃಷ್ಟಿಯನ್ನು ಅದರ ಮೇಲೆ ನೆಟ್ಟು ಕೇಶವನನ್ನು ಎದುರುಗೊಳ್ಳದೆ ಇರುವೆನು.

ಕಾಂಚುಕೀಯ: ಮಹಾರಾಜನ ಆಜ್ಞೆಯಂತೆ (ನಿಷ್ಕ್ರಮಿಸಿ ಮತ್ತೆ ಪ್ರವೇಶಿಸಿ) ಮಹಾರಾಜನಿಗೆ ಜಯವಾಗಲಿ! ಇದೋ ಆ ಚಿತ್ರಪಟ.

ದುರ್ಯೋಧನ: ನನ್ನ ಮುಂದೆ ಅದನ್ನು ಹರಡು.

ಕಾಂಚುಕೀಯ: ಮಹಾರಾಜನ ಆಜ್ಞೆ (ಹರಡುತ್ತಾನೆ).

ದುರ್ಯೋಧನ: ಈ ಚಿತ್ರಪಟವು ಎಷ್ಟು ದರ್ಶನೀಯವಾಗಿದೆ! ಇಲ್ಲಿ ದುಶ್ಶಾಸನನು ದ್ರೌಪದಿಯ ಕೇಶರಾಶಿಯನ್ನು ಹಿಡಿದಿರುವನು! ಈ ದ್ರೌಪದಿ ಯಾದರೋ—

ದುಶ್ಶಾಸನನ ಹಿಡಿತಕ್ಕೊಳಪಟ್ಟು, ದಿಗ್ಭ್ರಮೆಯಿಂದ ವಿಶಾಲ
ವಾಗಿ ಕಣ್ಣು ತೆರೆದವಳಾಗಿ ರಾಹುವಿನ ದವಡೆಯಲ್ಲಿ ಸಿಕ್ಕಿರುವ ಚಂದ್ರ
ಲೇಖೆಯಂತೆ ಶೋಭಿಸುತ್ತಿರುವಳು. ॥ ೭ ॥

ಸಕಲ ರಾಜರುಗಳ ಸಮ್ಮುಖದಲ್ಲಿ ದ್ರೌಪದಿಗಾದ ಅವಮಾನದಿಂದ ದೋಷ ದಿಂದ ದಹಿಸಿಹೋಗುತ್ತಿರುವ ಈ ದುರಾತ್ಮನಾದ ಭೀಮನು ಸಭಾಂಗಣದ ಕಂಬಗಳ ತೂಕವನ್ನು ಅಂದಾಜುಮಾಡುತ್ತಿರುವನು. ಈ ಯುಧಿಷ್ಠಿರ—

ಸತ್ಯಧರ್ಮಗಳಿಗೆ ಕಟ್ಟುಬಿದ್ದು ಶಾಪವನ್ನು ಅರಿಯದವನಾದರೂ ದ್ಯೂತದಿಂದ ಭ್ರಷ್ಟಚೇತನನಾಗಿ ತನ್ನ ಕಡೆಗಣ್ಣಿ ನೋಟದಿಂದ ಭೀಮನ ಕ್ರೋಧವನ್ನು ಸಾಂತ್ವನಗೊಳಿಸುತ್ತಿದ್ದಾನೆ. ‖ ೮ ‖

ಮತ್ತು ಈ ಅರ್ಜುನ—

ರೋಷದಿಂದ ತುಂಬಿದ ಕಣ್ಣುಗಳಿಂದಲೂ ಮತ್ತು ನಡುಗುತ್ತಿರುವ ತುಟಿಗಳಿಂದಲೂ, ಸಕಲ ಶತ್ರುವೃತ್ತವನ್ನೇ ತೃಣೀಕರಿಸಿ ಎಲ್ಲಾ ರಾಜರನ್ನೂ ನಾಶಮಾಡುವವನಂತೆ ತನ್ನ ಗಾಂಡೀವದ ಹೆದೆಯನ್ನು ನಿಧಾನವಾಗಿ ಎಳೆಯುತ್ತಿರುವನು. ‖ ೯ ‖

ಇಲ್ಲಿ ಪುನಃ ಯುಧಿಷ್ಠಿರನು ಅರ್ಜುನನನ್ನು ತಡೆಯುತ್ತಿದ್ದಾನೆ. ಇವರಿಬ್ಬರೂ ನಕುಲಸಹದೇವರು—

ಟೊಂಕಕಟ್ಟಿ ಕತ್ತಿಗುರಾಣಿಗಳನ್ನು ಕೈಯಲ್ಲಿ ಹಿಡಿದು ರೋಷದಿಂದ ತುಟಿಗಳನ್ನು ಸ್ಪಷ್ಟವಾಗಿ ಕಡಿಯುತ್ತಾ ಮರಣದ ಶಂಕೆಯನ್ನು ಬಿಟ್ಟವರೂ, ಕೋಪದಿಂದ ಮುಖ ಕೆಂಪೇರಿದವರೂ ಆದ ಇವರಿಬ್ಬರು ಸಿಂಹದಂತಿರುವ ನನ್ನ ಸಹೋದರನ ಮೇಲೆ ಎರಡು ಜಿಂಕೆಗಳಂತೆ ಪ್ರತಾಪದಿಂದ ಎರಗಿದ್ದಾರೆ. ‖ ೧೦ ‖

ಇಲ್ಲಿ ಯುಧಿಷ್ಠಿರನು ಕುಮಾರರನ್ನು—

"ನಾನೇ ಹತಭಾಗ್ಯ. ಇಲ್ಲದಿದ್ದರೆ ನನಗೇಕೆ ಈ ವಿಪರೀತ ಬುದ್ಧಿಯುಂಟಾಗುತ್ತಿತ್ತು ? ಆದರೆ ನಯಾನಯುವನ್ನು ಬಲ್ಲ ನೀವು ರೋಷವನ್ನು ತ್ಯಜಿಸಿರಿ. ಏಕೆಂದರೆ ದ್ಯೂತದ ದೆಸೆಯಿಂದ ಉಂಟಾದ ಅವಮಾನವನ್ನು ಸಹಿಸಲಾರದವರಾಗಿ, ನಮ್ಮ ಶೌರ್ಯವೂ ಪರಾಕ್ರಮಿಗಳಾದವರಿಗೆ ಕೊರತೆಯಾಗುತ್ತದೆ." ‖ ೧೧ ‖

ಎಂದು ಸಂತೈಸುತ್ತಿರುವನು.

ಈತನೇ ಗಾಂಧಾರರಾಜ.

ತನ್ನ ಕೀರ್ತಿಯು ಎದುರಾಳಿಯ ಉತ್ಸಾಹವನ್ನು ಕುಂಠಿತಗೊಳಿಸುತ್ತಿರುವಾಗ ದ್ಯೂತಗಾರನು ಗರ್ವದಿಂದ ಹುಸಿನಗುತ್ತಾ ದಾಳವನ್ನು ಎಸೆಯುತ್ತಿರುವನು. ಸುಖಾಸೀನನಾಗಿ ತನ್ನ ಕಾರ್ಯದಲ್ಲಿ ಮಗ್ನನಾಗಿರುತ್ತಾ, ರೋದಿಸುತ್ತಿರುವ ದ್ರುಪದ ರಾಜಪುತ್ರಿಯ ಕಡೆ ಕೊಂಕು ನೋಟವನ್ನು ಬೀರುತ್ತಾ, ದುಷ್ಟದಾಳದಿಂದ ನೆಲವನ್ನು ಕೆರೆಯುತ್ತಿದ್ದಾನೆ. ‖ ೧೨ ‖

ಅವಳ ಅಪಮಾನದ ದೃಶ್ಯದಿಂದ ಸ್ತಂಭೀಭೂತರಾಗಿ ನಾಚಿಕೆಯಿಂದ

ಇವರಿಬ್ಬರೂ, ನನ್ನ ಆಚಾರ್ಯರೂ ಪಿತಾಮಹರೂ, ತಮ್ಮ ವಸ್ತ್ರಗಳಲ್ಲಿ ಮುಖವನ್ನು ಮುಚ್ಚಿಕೊಂಡು ನಿಂತಿರುವರು. ಈ ಚಿತ್ರಪಟದಲ್ಲಿ ಎಂಥ ವರ್ಣಾಢ್ಯತೆ ಇದೆ! ಎಷ್ಟು ಭಾವೋಪಪನ್ನತೆ ಇದೆ! ಏನು ಯುಕ್ತವಾದ ಬರವಣಿಗೆ! ನಿಜವಾಗಿಯೂ ಈ ಚಿತ್ರಪಟವು ಸುವ್ಯಕ್ತವಾಗಿ ಬರೆಯಲ್ಪಟ್ಟಿದೆ. ನಾನು ಸುಪ್ರೀತನಾದೆ. ಯಾರಲ್ಲಿ ?

ಕಾಂಚುಕೀಯ : ಮಹಾರಾಜನಿಗೆ ಜಯವಾಗಲಿ !

ದುರ್ಯೋಧನ : ಬಾದರಾಯಣ ! ವಿಹಗವಾಹನವೇ ತನ್ನ ಹೆಮ್ಮೆಯಾದ ಆ ದೂತನನ್ನು ಇಲ್ಲಿಗೆ ಕರೆದುಕೊಂಡು ಬಾ.

ಕಾಂಚುಕೀಯ ; ಮಹಾರಾಜನ ಆಜ್ಞೆಯಂತೆ (ನಿಷ್ಕ್ರಮಿಸುವನು)

ದುರ್ಯೋಧನ : ಗೆಳೆಯ ಕರ್ಣ !

ಪಾಂಡವರ ಆಜ್ಞೆಯಂತೆ ಅವರ ಸೇವಕನಲ್ಲದೆ ಬೇರೆಯಲ್ಲದ ದುರುಳಬುದ್ಧಿಯ ಕೃಷ್ಣನು ಇಲ್ಲಿಗೆ ಬಂದಿರುವುದನ್ನು ನೀನು ನೋಡುತ್ತಿರುವೆ. ಗೆಳೆಯ ಕರ್ಣನೇ, ಯುಧಿಷ್ಠಿರನ ನಾರೀಮೃದುವಾದ ಮಾತುಗಳನ್ನು ಕೇಳಲು ನಿನ್ನ ಕಿವಿಗಳನ್ನು ಸಿದ್ಧಮಾಡಿಕೋ. ॥ ೧೩ ॥

(ಕಾಂಚುಕೀಯನೊಡನೆ ವಾಸುದೇವನು ಪ್ರವೇಶಿಸುತ್ತಾನೆ.)

ವಾಸುದೇವ : ಧರ್ಮರಾಜನ ಮಾತಿಗೂ ಮತ್ತು ಧನಂಜಯನಲ್ಲಿ ನನಗಿರುವ ನಿಕಟ ಸ್ನೇಹಕ್ಕೂ ಮನ್ನಣೆಕೊಟ್ಟು, ಅನುಚಿತವಾದಾಗ್ಯೂ, ನಿರೀಕ್ಷಿಸುವ ಮುಂಚೆಯೇ ಗರ್ವವು ಕಾಣುತ್ತಿರುವ, ಸುಯೋಧನನಲ್ಲಿ ದೌತ್ಯದ ಹೊಣೆಯನ್ನು ನಾನು ಸ್ವೀಕರಿಸಿದ್ದೇನೆ. ಅಲ್ಲದೆ,

ದ್ರೌಪದಿಯ ಅವಮಾನದಿಂದ ಉದ್ದೀಪಿತನಾದ ಪಾರ್ಥನ ಬಾಣಗಳ ಚಂಡಮಾರುತದಿಂದಲೂ, ಶತ್ರುಸೈನ್ಯದ ಆನೆಗಳ ಗಂಡಸ್ಥಲಗಳನ್ನು ಧ್ವಂಸಮಾಡುವ ಗದೆಯುಳ್ಳ ಭೀಮನ ಕೋಪಾಗ್ನಿಯಿಂದಲೂ, ಯುದ್ಧದಲ್ಲಿ ನಾಶಹೊಂದಲು ಕಾನನದಂತಿರುವ ಸಕಲ ಕುರುವಂಶವೂ ನಿರೀಕ್ಷಿಸುತ್ತದೆ. ॥ ೧೪ ॥

ಇದು ಸುಯೋಧನನ ಶಿಬಿರ ಮತ್ತು ಇಲ್ಲಿ—

ದೇವತೆಗಳ ನಗರದಲ್ಲಿಯ ಮನೆಗಳಂತೆ ರಾಜರುಗಳ ಮನೋಹರವಾದ ನಿವಾಸಗಳಿವೆ. ನಾನಾ ವರ್ಣನೆಯುಳ್ಳ ಬಗೆಬಗೆಯಾದ ಆಯುಧಗಳಿಂದ ಸಜ್ಜಿತವಾದ ವಿಶಾಲವಾದ ಯುದ್ಧಾಯುಧಶಾಲೆಗಳೂ ಇವೆ. ಅಶ್ವಶಾಲೆಯಲ್ಲಿ ಕೆನೆಯುತ್ತಿರುವ ಉಚ್ಚ ಜಾತಿಯ

ಕುದುರೆಗಳ ದೊಡ್ಡ ಸಂಗ್ರಹವಿದೆ; ಘೀಂಕರಿಸುತ್ತಿರುವ ಆನೆಗಳಿವೆ—
ದಿಗ್ಭ್ರಮೆಗೊಳಿಸುವ ಈ ಸಕಲೈಶ್ವರ್ಯವೂ (ದುರ್ಯೋಧನನು)
ಸ್ವಜನರನ್ನೇ ಅವಮಾನಿಸಿದ ಫಲವಾಗಿ ವಿನಾಶವನ್ನು ಸಮೀಪಿಸಿವೆ.
॥ ೧೫ ॥

ಅಹಹ,

ದುಷ್ಟವಾದಿಯೂ ಗುಣದ್ವೇಷಿಯೂ ಆದ ಸುಯೋಧನನು
ಯಾವಾಗಲೂ ಮನನೋಯುವಂತೆ ಮಾತಾಡುವನು. ಅವನು
ಬದ್ಧವೈರಭಾವನೆಯುಳ್ಳವನು ಮತ್ತು ಸ್ವಜನರಲ್ಲೇ ನಿರ್ದಯಿ.
ನನ್ನನ್ನು ಕಂಡಕೂಡಲೆ ಅವನು ಖಂಡಿತವಾಗಿಯೂ ಸಮಯೋಚಿತ
ಕಾರ್ಯವನ್ನು ಮಾಡುವುದಿಲ್ಲ. ॥ ೧೬ ॥

ಎಲೈ ಬಾದರಾಯಣ ! ಪ್ರವೇಶಿಸೋಣವೆ ?

ಕಾಂಚುಕೀಯ : ಹೌದು, ಹೌದು. ಪದ್ಮನಾಭನು ಪ್ರವೇಶಿಸೋಣಾಗಲಿ.

ವಾಸುದೇವ : (ಪ್ರವೇಶಿಸಿ) ನನ್ನನ್ನು ಕಂಡಕೂಡಲೆ ಸರ್ವ ಕ್ಷತ್ರಿಯರೂ ಸಂಭ್ರಾಂತರಾದರಲ್ಲಾ, ಹೇಗೆ, ಹೇಗೆ? ಸಾಕು. ಸಾಕು ಈ ಸಂಭ್ರಮ. ನೀವೆಲ್ಲರೂ ಸುಖಾಸೀನರಾಗಿ.

ದುರ್ಯೋಧನ : ಏನು, ಏನು ? ಕೇಶವನನ್ನು ನೋಡಿ ಸರ್ವಕ್ಷತ್ರಿಯರೂ ಸಂಭ್ರಾಂತರಾದರೆ? ಸಂಭ್ರಮ ಸಾಕು. ಆಗಲೆ ಘೋಷಿಸಲ್ಪಟ್ಟಿರುವ ದಂಡವು ನೆನಪಿರಲಿ. ಆಜ್ಞೆಯನ್ನು ವಿಧಿಸುವವನು ನಾನಲ್ಲವೆ ?

ವಾಸುದೇವ : (ಹತ್ತಿರ ಬಂದು) ಸುಯೋಧನ, ಕ್ಷೇಮವೆ ?

ದುರ್ಯೋಧನ : (ಆಸನದಿಂದ ಬೀಳುವನು ; ಸ್ವಗತ) ನಿಜಕ್ಕೂ ಕೇಶವನು ಬಂದಿರುವನು !

ದೃಢ ಸಂಕಲ್ಪದಿಂದ ನಾನು ಭದ್ರವಾಗಿ ಕುಳಿತರೂ ಕೇಶವನ
ಅದ್ಭುತ ಶಕ್ತಿಯಿಂದ ಸ್ಥಾನಪಲ್ಲಟನಾದೆ. ॥ ೧೭ ॥

ಓ, ಈ ದೂತ ಒಬ್ಬ ಮಾಟಗಾರ. (ಪ್ರಕಾಶ) ದೂತನೇ, ಈ ಆಸನದಲ್ಲಿ ಕುಳಿತುಕೊ.

ವಾಸುದೇವ : ಆಚಾರ್ಯರೇ, ಕುಳಿತುಕೊಳ್ಳೋಣಾಗಲಿ. ಗಾಂಗೇಯ (ಭೀಷ್ಮ) ಪ್ರಮುಖರಾದ ರಾಜರುಗಳೇ, ಸುಖಾಸೀನರಾಗಿ. ನಾವೂ ಕುಳಿತುಕೊಳ್ಳುವೆವು. (ಕುಳಿತು) ಓ, ಈ ಚಿತ್ರಪಟವು ಎಷ್ಟು ದರ್ಶನೀಯವಾಗಿದೆ! ಇಲ್ಲ, ಇಲ್ಲ; ಇಲ್ಲಿ ದ್ರೌಪದಿಯ ಕೇಶ—ವಸ್ತ್ರಗಳ ಆಪಕರ್ಷಣದ ಚಿತ್ರವನ್ನು ಬರೆಯಲಾಗಿದೆ ! ಏನನ್ಯಾಯ !

ಈ ಸುಯೋಧನನು ಸ್ವಜನರನ್ನು ಅವಮಾನಿಸುವುದರಲ್ಲಿ ಅಜ್ಞನಾಗಿ ಶೌರ್ಯವನ್ನು ಕಾಣುತ್ತಾನೆ. ಲೋಕದಲ್ಲಿ ಯಾವನು ತಾನೆ ತನ್ನ ಅವಿವೇಕವನ್ನು ತುಂಬಿದ ಸಭೆಯಲ್ಲಿ ನಾಚಿಕೆಗೆಟ್ಟು ಘೋಷಿಸುತ್ತಾನೆ? || ೧೮ ||

ಓ, ಈ ಚಿತ್ರಪಟವನ್ನು ತೆಗೆದಿಡು.

ದುರ್ಯೋಧನ: ಬಾದರಾಯಣ! ಆಗಲಿ, ಈ ಚಿತ್ರಪಟವನ್ನು ತೆಗೆದಿಡು.
ಕಾಂಚುಕೀಯ: ಮಹಾರಾಜನ ಆಜ್ಞೆಯಂತೆ. (ತೆಗೆದಿಡುವನು)

ದುರ್ಯೋಧನ: ಎಲೈ ದೂತನೇ!

ಧರ್ಮಪುತ್ರನೂ, ವಾಯುಪುತ್ರನಾದ ಭೀಮನೂ, ನನ್ನ ಸೋದರನೂ ದೇವಾಧಿಪತಿಯ ಪುತ್ರನೂ ಆದ ಅರ್ಜುನನೂ ಮತ್ತು ವಿನೀತರಾದ ಅಶ್ವಿನಿಸುತರಾದ ಆ ಯಮಳರೂ—ಎಲ್ಲರೂ ತಮ್ಮ ಪರಿವಾರದಿಂದ ಕೂಡಿದವರಾಗಿ ಸುಖ-ಸಂತೋಷದಿಂದಿರುವರೆ? || ೧೯ ||

ವಾಸುದೇವ: ಗಾಂಧಾರಿಯ ಪುತ್ರನಿಗೆ ಸರಿಯಾದ ಮಾತು. ಹೌದು, ಹೌದು. ಅವರೆಲ್ಲರೂ ಸೌಖ್ಯವಾಗಿದ್ದಾರೆ. ನಿನ್ನ ಹಾಗೂ ನಿನ್ನ ರಾಜ್ಯದ ಆಂತರಿಕ ಮತ್ತು ಬಹಿರಂಗದ ಕುಶಲವನ್ನೂ, ಪುರೋಭಿವೃದ್ಧಿಯನ್ನೂ ವಿಚಾರ ಮಾಡಿ, ಯುಧಿಷ್ಠಿರ ಮತ್ತು ಇತರ ಪಾಂಡವರು ನಿನ್ನಲ್ಲಿ ಈ ಪ್ರಾರ್ಥನೆಯನ್ನು ಸಲ್ಲಿಸಿದ್ದಾರೆ—

"ಸಕಲ ಸಂಕಷ್ಟಗಳನ್ನೂ ನಾವು ಅನುಭವಿಸಿದ್ದಾಯಿತು ಮತ್ತು ಕರಾರಿನ ಸಮಯವೂ ಮುಗಿಯಿತು. ನಮಗೆ ನ್ಯಾಯವಾಗಿ ಸೇರಬೇಕಾದ ಪಿತ್ರಾರ್ಜಿತ ಅಂಶವು ಈಗ ಭಾಗಮಾಡಲ್ಪಡಲಿ." || ೨೦ ||

ದುರ್ಯೋಧನ: ಏನು, ಏನು? ಪಿತ್ರಾರ್ಜಿತವೆಂದೆಯ?

ನನ್ನ ಚಿಕ್ಕಪ್ಪ ಒಂದಾನೊಂದು ಸಲ ಕಾಡಿನಲ್ಲಿ ಬೇಟೆಯಾಡುತ್ತಿದ್ದಾಗ ತನ್ನ ದುಷ್ಕರ್ಮದಿಂದ ಋಷಿಯ ಶಾಪಕ್ಕೊಳಗಾಗಿ ಅಂದಿನಿಂದ ತನ್ನ ಪತ್ನಿಯರಲ್ಲಿದ್ದ ಅಭಿಲಾಷೆಯೆಲ್ಲವನ್ನೂ ಕಳೆದುಕೊಂಡನು. ಮತ್ತು ಅವನು ಅನ್ಯರಿಗೆ- ಹುಟ್ಟಿದ ಮಕ್ಕಳಿಗೆ ತಂದೆಯೆಂದು ಹೇಗೆ ಹಕ್ಕನ್ನು ಸಾಧಿಸುವನು? || ೨೧ ||

ವಾಸುದೇವ: ಭೂತಕಾಲದ ವಿಚಾರಗಳನ್ನು ತಿಳಿದಿರುವ ನಿನ್ನನ್ನು ಕೇಳುತ್ತೇನೆ—

ವಿಷಯಲಂಪಟನಾದ ವಿಚಿತ್ರವೀರ್ಯನು ಅನುಭೋಗದಿಂದ ಮರಣಹೊಂದಿದನು. ಅದಾದ ಮೇಲೆ ವ್ಯಾಸನಿಂದ ಅಂಬಿಕೆಯಲ್ಲಿ ಧೃತರಾಷ್ಟ್ರ ಜನಿಸಿದ. ಮತ್ತೆ ನಿನ್ನ ತಂದೆ ರಾಜ್ಯವನ್ನು ವಂಶಾನುಗತವಾಗಿ ಹೇಗೆ ಪಡೆದ? ॥ ೨೨ ॥

ಇಲ್ಲ, ಇಲ್ಲ, ಹಾಗಾಗುವುದಿಲ್ಲ.

ಹೀಗೆಯೇ ಪರಸ್ಪರ ದ್ವೇಷವನ್ನು ವೃದ್ಧಿಪಡಿಸುತ್ತಾ ಹೋದರೆ, ಎಲೈ ರಾಜನೆ, ಸಕಲ ಕುರುವಂಶವೂ ಶೀಘ್ರದಲ್ಲಿಯೇ ನಾಮಾವಶೇಷವಾಗುವುದು. ಆದ್ದರಿಂದ, ನೀನು ನಿನ್ನ ರೋಷವನ್ನು ನಿಗ್ರಹಿಸಿ ಯುಧಿಷ್ಠಿರನೂ ಇತರ ಪಾಂಡವರೂ ವಿಶ್ವಾಸದಿಂದ ಹೇಳುವಂತೆ ಕಾರ್ಯೋನ್ಮುಖನಾಗು. ॥ ೨೩ ॥

ದುರ್ಯೋಧನ: ಎಲೈ ದೂತನೇ, ನಿನಗೆ ರಾಜತಂತ್ರ ಸ್ವಲ್ಪವು ತಿಳಿಯದು.

ರಾಜ್ಯವೆಂಬುದು ಶ್ರೇಷ್ಠ ರಾಜಕುಮಾರರು ಅವರ ಶತ್ರುಗಳನ್ನು ಜಯಿಸಿದ ಮೇಲೆ ಅನುಭವಿಸುವ ವಸ್ತು. ಈ ಲೋಕದಲ್ಲಿ ಅದು ಭಿಕ್ಷೆ ಬೇಡುವಂತಹುದಲ್ಲ, ಅಥವಾ ಬಡವರಿಗೆ ದಾನಮಾಡುವಂತಹುದೂ ಅಲ್ಲ. ರಾಜ್ಯವನ್ನು ಪಡೆಯುವ ಆಸೆ ಇದ್ದಪಕ್ಷದಲ್ಲಿ ಅವರು ಸಾಹಸವನ್ನು ಮಾಡಲಿ. ಅಥವಾ ಶಾಂತಿಗೋಸ್ಕರ ಶಾಂತಿಪ್ರಿಯರು ಇರುವ ಆಶ್ರಮದ ದಾರಿಯನ್ನು ಹಿಡಿಯಲಿ. ॥ ೨೪ ॥

ವಾಸುದೇವ: ಓ, ಸುಯೋಧನ, ಬಿಡು, ಸ್ವಜನರ ವಿಚಾರದಲ್ಲಿ ಅಷ್ಟು ಕಠಿಣವಾಗಿ ಮಾತನಾಡುವುದನ್ನು ಬಿಟ್ಟುಬಿಡು.

ಯಾರು ರಾಜ್ಯಶ್ರೀಯನ್ನು ಪುಣ್ಯಸಂಚಯದಿಂದ ಸಂಪಾದಿಸಿ ಸುಹೃದ್ಬಂಧುಗಳನ್ನು ವಂಚಿಸುವರೋ ಅವರು ವಿಫಲಶ್ರಮರಾಗುವರು. ॥ ೨೫ ॥

ದುರ್ಯೋಧನ: ಎಲೈ ದೂತನೇ!

ನಿನ್ನ ತಂದೆಯ ಭಾವಮೈದುನನಾದ ರಾಜ ಕಂಸನಲ್ಲಿ ನೀನು ಯಾವ ಕರುಣೆಯನ್ನೂ ತೋರಲಿಲ್ಲ. ಅವರು ದಿನಂಪ್ರತಿ ಅಪಕಾರವನ್ನು ಸಾಧಿಸುತ್ತಿರುವಾಗ ನಮ್ಮಲ್ಲಿ ಅದು ಹೇಗೆ ಸಾಧ್ಯ? ॥ ೨೬ ॥

ವಾಸುದೇವ: ಅದು ನನ್ನ ತಪ್ಪೆಂದು ತಿಳಿಯಬೇಡ.

ನನ್ನ ತಾಯಿಯನ್ನು ಪುತ್ರಶೋಕಾರ್ತಳನ್ನಾಗಿ ಪದೇ ಪದೇ ಮಾಡುತ್ತಾ, ವೃದ್ಧನಾದ ತನ್ನ ಸ್ವಂತ ತಂದೆಯನ್ನೇ ಬಂಧನದಲ್ಲಿಟ್ಟು ತನಗೆ ತಾನೆ ಮೃತ್ಯುವಿನೊಂದಿಗೆ ಸರಸವಾಡಿದ. ॥ ೨೭ ॥

ದುರ್ಯೋಧನ: ಎಲ್ಲಾ ಸಂದರ್ಭದಲ್ಲೂ ನಿನ್ನಿಂದಲೇ ಕಂಸನು ಮೋಸ ಹೋದ. ಆತ್ಮಪ್ರಶಂಸೆಯನ್ನು ಸಾಕುಮಾಡು. ಅದು ಶೌರ್ಯವಲ್ಲ. ನೋಡು—

ಅಳಿಯನ ಸಾವಿನಿಂದಾಗಿ ಮಗಧರಾಜನು ದುಃಖಿತನಾಗಿ
ರೋಷಗೊಂಡಾಗ ನೀನು ಭಯಾತುರನಾಗಿ ಪಲಾಯನಮಾಡಿದೆ.
ಆಗ ನಿನ್ನ ಈ ಶೌರ್ಯ ಎಲ್ಲಿಗೆ ಹೋಗಿತ್ತು ? ॥ ೨೮ ॥

ವಾಸುದೇವ: ಎಲೈ ಸುಯೋಧನ! ಯಾರು ರಾಜ್ಯಶಾಸ್ತ್ರವನ್ನು ಅನುಸರಿಸುತ್ತಾರೋ ಅವರಿಗೆ, ಶೌರ್ಯವು ದೇಶ-ಕಾಲಾವಸ್ಥೆಯ ಪ್ರಭುತ್ವಕ್ಕೆ ಒಳಪಡುತ್ತದೆ. ಆದರೆ ನಾವು ನಮ್ಮನ್ನೇ ಪರಿಹಾಸಮಾಡುವುದನ್ನು ನಿಲ್ಲಿಸಬೇಕು. ನಿನ್ನ ಕೆಲಸವನ್ನು ನೀನು ನೋಡು.

ಇತರ ಗುಣಗಳನ್ನು ಗಮನಕ್ಕೆ ತಾರದೆ ನಿನ್ನ ಸಹೋದರರಲ್ಲಿ
ಸ್ನೇಹವನ್ನು ನೀನು ಕಾಪಾಡಬೇಕು. ಸ್ವಜನ ಸಂಪರ್ಕವು ಉಭಯ
ಲೋಕಗಳಲ್ಲೂ ಶ್ರೇಯಸ್ಕರವಾದದ್ದು. ॥ ೨೯ ॥

ದುರ್ಯೋಧನ: ದೇವಪುತ್ರರಿಗೂ, ಮನುಷ್ಯರಿಗೂ ಹೇಗೆ ಬಂಧುತ್ವ
ಸಾಧ್ಯವಾದೀತು ? ಅದು ಉಪಯೋಗವಿಲ್ಲದ ಶ್ರಮ. ಸಾಕು. ಮಾತು
ಕೊನೆಗೊಳ್ಳಲಿ. ॥ ೩೦ ॥

ವಾಸುದೇವ: (ಸ್ವಗತ)

ಸಮಾಧಾನಕರವಾದ ಮೃದುಮಾತುಗಳಿಂದ ಪ್ರಸಾದ್ಯವಾದರೂ
ಅವನು ತನ್ನ ಸ್ವಭಾವವನ್ನು ಬಿಡುವುದಿಲ್ಲ. ಇರಲಿ, ಈಗ ಕಠಿಣ
ವಾದ ಮಾತುಗಳಿಂದ ಅವನನ್ನು ರೇಗಿಸುವೆನು. ॥ ೩೧ ॥

(ಪ್ರಕಾಶ) ಎಲೈ ಸುಯೋಧನ! ನಿನಗೆ ಅರ್ಜುನನ ಬಲಪರಾಕ್ರಮವು ತಿಳಿಯದೆ?

ದುರ್ಯೋಧನ: ಇಲ್ಲ, ನನಗೆ ತಿಳಿಯದು.

ವಾಸುದೇವ: ಓಹೋ, ಹಾಗಾದರೆ ಕೇಳು.

ಕಿರಾತ ವೇಷಧಾರಿಯಾದ ಸಾಕ್ಷಾತ್ ಪಶುಪತಿಯೇ ಅವನಿಂದ
ಕಾದಾಟದ ರುಚಿ ನೋಡಬೇಕಾಯಿತು. ಖಾಂಡವವನವನ್ನು
ದಹಿಸುತ್ತಿದ್ದ ಬೆಂಕಿಯ ಜ್ವಾಲೆಯ ಮೇಲೆ ಸುರಿಯುತ್ತಿದ್ದ ವೃಷ್ಟಿಯು
ಅವನ ಬಾಣಗಳಿಂದ ನಿವಾರಿಸಲ್ಪಟ್ಟಿತು. ದೇವೇಂದ್ರನನ್ನು ಕಾಡಿಸು
ತ್ತಿದ್ದ ನಿವಾತ–ಕವಚರು ಲೀಲಾಜಾಲವಾಗಿ ನಾಶಮಾಡಲ್ಪಟ್ಟರು.
ಮತ್ತು ಅಂದು, ಭೀಷ್ಮಾದಿಗಳು, ಇವನಿಂದಲೇ ಅಲ್ಲವೇ ವಿರಾಟ
ನಗರಿಯಲ್ಲಿ ಉಚ್ಚಾಟನೆಗೊಳಗಾದದ್ದು ? ॥ ೩೨ ॥

ಮತ್ತು ನಿನ್ನ ಇದಿರಿನಲ್ಲೇ ನಡೆದ ಮತ್ತೊಂದು ಪ್ರಸಂಗವನ್ನು ನಿನಗೆ ಹೇಳುತ್ತೇನೆ.

ಘೋಷಯಾತ್ರೆಯ ಕಾಲದಲ್ಲಿ ಚಿತ್ರಸೇನನಿಂದ ಬಂಧಿತನಾಗಿ ಅಪಹೃತನಾದಾಗ ಫಲ್ಗುಣನಿಂದಲೇ ಅಲ್ಲವೆ ನಿನ್ನ ಬಿಡುಗಡೆಯಾದದ್ದು? ॥ ೩೩ ॥

ಹೆಚ್ಚೇಕೆ,

ಎಲೈ ಧೃತರಾಷ್ಟ್ರಪುತ್ರನೇ, ನನ್ನ ಸಲಹೆಯನ್ನು ಸ್ವೀಕರಿಸು ಮತ್ತು ಅರ್ಧರಾಜ್ಯವನ್ನು ಕೊಟ್ಟುಬಿಡು. ಇಲ್ಲವಾದರೆ, ಸಾಗರ ಪರ್ಯಂತ ಸಕಲ ಭೂಮಂಡಲವನ್ನೇ ಪಾಂಡವರು ಪಲ್ಲಟಮಾಡಿಬಿಡುವರು. ॥ ೩೪ ॥

ದುರ್ಯೋಧನ: ಹೇಗೆ, ಹೇಗೆ? ಪಾಂಡವರು ಪಲ್ಲಟಮಾಡಿಬಿಡುವರೆಂದೆಯ?

ವಾಯುದೇವನೇ ಭೀಮನ ರೂಪದಲ್ಲಿ ಯುದ್ಧದಲ್ಲಿ ಪ್ರಹರಿಸಲಿ; ಸಾಕ್ಷಾತ್ ಇಂದ್ರನೇ ಅರ್ಜುನ ರೂಪದಲ್ಲಿ ಪ್ರಹರಿಸಲಿ. ಎಲೋ, ಕಠಿಣ ಮಾತನ್ನಾಡುವುದರಲ್ಲಿ ದಕ್ಷನಾದವನೆ! ನೀನು ಹೇಳಿದೆ ಅಂದ ಮಾತ್ರಕ್ಕೆ ನನ್ನ ಪಿತ–ಪಿತಾಮಹರಿಂದ ಭೋಗಿಸಲ್ಪಟ್ಟು ನಾನು ಶೌರ್ಯದಿಂದ ಪರಿಗ್ರಹಿಸಿರುವ ಈ ನನ್ನ ರಾಜ್ಯದಲ್ಲಿ ಒಂದು ಹುಲ್ಲುಕಡ್ಡಿಯನ್ನೂ ಬಿಟ್ಟುಕೊಡುವುದಿಲ್ಲ. ॥ ೩೫ ॥

ವಾಸುದೇವ—ಎಲೈ ಅಯಶಸ್ಸಿನಲ್ಲಿ ಆನಂದಹೊಂದುವ ಕುರುಕುಲ ಕಲಂಕಭೂತನೆ! ನಿನ್ನೊಡನೆ ಹುಲ್ಲುಕಡ್ಡಿಯ ಮುಖೇನ ಮಾತಾಡುವುದೇ ಸರಿ.

ದುರ್ಯೋಧನ: ಎಲೋ ಗೋಪಾಲಕ! ಹುಲ್ಲುಕಡ್ಡಿಯ ಮುಖೇನ ಮಾತನಾಡಿಸಬೇಕಾದದ್ದು ನಿನ್ನನ್ನು.

ಅವಧ್ಯೆಯಾದ ಹೆಂಗಸನ್ನೂ, ಅಶ್ವವನ್ನೂ, ಒಂದು ಗೂಳಿಯನ್ನೂ ಮತ್ತು ಕೆಲವು ಮಲ್ಲರನ್ನೂ ಕೊಂದು ನೀನು ನಾಚಿಗೆಗೆಟ್ಟವನಾಗಿ ಸಾಧುಜನರಲ್ಲಿ ಮಾತನಾಡಲು ಇಚ್ಛಿಸುತ್ತೀಯೋ? ॥ ೩೬ ॥

ವಾಸುದೇವ: ಓ ಸುಯೋಧನ! ನನ್ನನ್ನು ಅವಮಾನಿಸಬೇಡ.

ದುರ್ಯೋಧನ: ಏಕೆ? ಇದು ನಿಜವಲ್ಲವೆ?

ವಾಸುದೇವ: ಹಾಗಾದರೆ ನಾನು ಹೊರಡುವೆನು.

ದುರ್ಯೋಧನ: ಹೋಗು; ಗೋವುಗಳ ಪಾದಧೂಳಿಯಿಂದ ಕಂದುಬಣ್ಣವಾದ ಶರೀರದೊಡನೆ ಗೋಶಾಲೆಗೆ ಹೋಗು. ನಾವು ಕಾಲಹರಣಮಾಡಿದೆವು.

ವಾಸುದೇವ: ಆಗಲಿ, ಹಾಗೇ ಆಗಲಿ. ಆದರೆ ಸಂದೇಶವನ್ನು ಅರುಹದೆ ನಾವು ಹೋಗುವುದಿಲ್ಲ. ಆದ್ದರಿಂದ, ಇಗೋ! ಯುಧಿಷ್ಠಿರನ ಸಂದೇಶ.

ದುರ್ಯೋಧನ: ಓ! ನೀನು ಮಾತನಾಡಿಸಲೂ ಯೋಗ್ಯನಲ್ಲ.

ನ್ಯಾಯವಾಗಿ ಶ್ವೇತಛತ್ರವನ್ನು ಹೊಂದಿರುವವನೂ, ದ್ವಿಜರಿಂದ ಪವಿತ್ರತೀರ್ಥಗಳಿಂದ ಶಿರದಮೇಲೆ ಅಭಿಷಿಕ್ತನೂ ಆದವನು ನಾನು. ಇಲ್ಲಿ ಸುತ್ತಲೂ ತಲೆಬಾಗಿರುವ ರಾಜರುಗಳು ಮತ್ತು ಸಾಮಂತರ ಸಮಕ್ಷದಲ್ಲಿ ನಾನು ಘೋಷಿಸುವೆನು—ನಾನು ನಿನ್ನಂಥವರೊಂದಿಗೆ ಮಾತನಾಡುವುದಿಲ್ಲ. || ೩೭ ||

ವಾಸುದೇವ: ಸುಯೋಧನ, ನನ್ನೊಂದಿಗೆ ಮಾತನಾಡುವುದಿಲ್ಲ, ಅಲ್ಲವೆ?

ಎಲೋ ಹತಭಾಗ್ಯ, ಕಾಗೆ, ವಕ್ರಗಣ್ಣ, ಕಪಿ, ಬಂಧುಜನರ ಸ್ನೇಹವನ್ನು ಕಳೆದುಕೊಂಡ ನಿನ್ನಿಂದ ಸಕಲ ಕುರುವಂಶವೇ ಶೀಘ್ರದಲ್ಲಿ ನಾಶವನ್ನು ಅನುಭವಿಸುವುದು. || ೩೮ ||

ಎಲೈ ರಾಜರುಗಳೇ, ನಡೆಯಿರಿ ಹೋಗೋಣ.

ದುರ್ಯೋಧನ: ಏನು, ಕೇಶವ ಹೋಗುವನೆ? ದುಶ್ಶಾಸನ, ದುರ್ಮರ್ಷಣ, ದುರ್ಮುಖ, ದುರ್ಬುದ್ಧಿ, ದುಷ್ಟೇಶ್ವರ, ದೂತನ ಇತಿಮಿತಿಯನ್ನು ಮೀರಿದ ಈ ಕೇಶವನನ್ನು ಬಂಧಿಸಿರಿ. ಏನು!

ಅವರು ಅಶಕ್ತರೆ! ದುಶ್ಶಾಸನ! ನೀನೂ ಅಶಕ್ತನೆ?

ದನ ಕಾಯುವವರ ಮಧ್ಯೆ ಬೆಳೆದು ಅನುಜೀವಿಗಳ ಕರ್ತವ್ಯ ಜ್ಞಾನವಿಲ್ಲದ, ಆನೆಗಳನ್ನೂ ಅಶ್ವಗಳನ್ನೂ ಕೊಲ್ಲುವುದರಲ್ಲಿ ಚತುರನಾದ ಮತ್ತು ಕಂಸನನ್ನು ಕೊಂದ ಈ ಕೃಷ್ಣನು ತನ್ನ ಮಾತಿನಿಂದಲೇ ತಪ್ಪಿತಸ್ಥನಾದ್ದರಿಂದ ಇವನ ಭುಜಬಲವು ಕಸಿಯಲ್ಪಟ್ಟು ಸಕಲ ರಾಜರ ಸಮ್ಮುಖದಲ್ಲಿ ಬಂಧಿಸಲ್ಪಡಲಿ. || ೩೯ ||

ಅವನು ಅಶಕ್ತ, ಮಾತುಲ! ಈ ಕೇಶವನನ್ನು ಬಂಧಿಸು. ಏನು? ಅವನೂ ತಿರುಗಿ ಕೆಳಕ್ಕೆ ಬಿದ್ದನೆ! ಒಳ್ಳೆಯದು, ನಾನೇ ಅವನನ್ನು ಹಗ್ಗದಿಂದ ಬಂಧಿಸುವೆನು. (ಹಗ್ಗದೊಂದಿಗೆ ಮುಂದೆ ಸರಿಯುವನು.)

ವಾಸುದೇವ: ಏನು, ಸುಯೋಧನನು ನನ್ನನ್ನು ಬಂಧಿಸಲು ಇಚ್ಛಿಸುತ್ತಾನೆ! ಇರಲಿ, ಸುಯೋಧನನ ಸಾಮರ್ಥ್ಯವನ್ನು ನೋಡುವೆನು. (ವಿಶ್ವರೂಪವನ್ನು ತಳೆಯುತ್ತಾನೆ.

ದುರ್ಯೋಧನ: ಎಲೈ ದೂತನೆ!

ದೈವಿಕವಾದ ಮತ್ತು ನಿನಗೆ ನೀನೇ ಮಾಡಿಕೊಳ್ಳುವ ಮಾಯೆ

ಯನ್ನು ಧಿಕ್ಕರಿಸಿ, ನೀನು ಎಸೆಯಬಹುದಾದ ತಡೆಯಲಶಕ್ಯವಾದ ಆಯುಧಗಳನ್ನೂ ಕಡೆಗಣಿಸಿ, ಅಶ್ವ, ಆನೆ, ಗೂಳಿಗಳನ್ನು ನಾಶಪಡಿಸಿ ಗರ್ವದಿಂದಿರುವ ನಿನ್ನನ್ನು ಈ ರಾಜಸಭೆಯ ಮಧ್ಯೆ ಕಟ್ಟಿಹಾಕುವೆನೆಂದು ತಿಳಿ. ॥ ೪೦ ॥

ಓ! ಅಲ್ಲಿ ನಿಲ್ಲು. ಏನು, ಕೇಶವನು ಕಾಣಿಸುವುದಿಲ್ಲ! ಇವನು ಕೇಶ
ಎಷ್ಟು ಚಿಕ್ಕದಾಗಿ ಕಾಣಿಸುತ್ತಾನೆ! ಆಃ, ನಿಲ್ಲು. ಏನು, ಕೇಶವ ಅಗೋಚರನಾ
ದ್ದಾನೆ! ಇಲ್ಲಿ ಕೇಶವ. ಈಗ ಎಷ್ಟು ಎತ್ತರವಾಗಿದ್ದಾನೆ! ಏನು, ಕೇಶ
ಅದೃಶ್ಯನಾದ! ಇಲ್ಲಿ ಕೇಶವ, ಮಂತ್ರಶಾಲೆಯಲ್ಲಿ ಎಲ್ಲೆಲ್ಲೂ ಕೇಶವ
ಕಾಣುವರಲ್ಲ! ಈಗ ನಾನೇನು ಮಾಡಲಿ? ಇರಲಿ, ನೋಡುವೆನು. ಎಲೈ ರಾ
ಕುಮಾರರೆ! ನಿಮ್ಮಲ್ಲಿ ಒಬ್ಬೊಬ್ಬರೂ ಒಬ್ಬೊಬ್ಬ ಕೇಶವನನ್ನು ಬಂಧಿಸಿ!
ಅವರು ತಾವೇ ಹಗ್ಗದಿಂದ ಬಂಧಿತರಾಗಿ ಬಿದ್ದರೆ? ಒಳ್ಳೆಯ ಕೆಲಸಮಾಡಿ
ಮಾಟಗಾರನೇ, ಒಳ್ಳೆಯ ಕೆಲಸಮಾಡಿದೆ!

ಆದರ ಫಲವಾಗಿ ನನ್ನ ಧನುಸ್ಸಿನಿಂದ ಹೊರಸೂಸುವ ಶರವರ್ಷವು ನಿನ್ನ ದೇಹವನ್ನು ಸೀಳಿ, ಕೆಂಪಗಾದ, ರಕ್ತಸ್ರಾವದಿಂದ ಕೂಡಿದ ನಿನ್ನನ್ನು ಅವರ ಶಿಬಿರಕ್ಕೆ ಒಯ್ದಾಗ, ಅಶ್ರುವಿನಿಂದ ತುಂಬಿದ ಕಣ್ಣುಳ್ಳವರಾಗಿ ನಿಟ್ಟುಸಿರು ಬಿಡುತ್ತಾ ಪಾಂಡವರು ನೋಡುವರು. (ನಿಷ್ಕ್ರಾಂತ) ॥ ೪೧ ॥

ವಾಸುದೇವ: ಒಳ್ಳೆಯದು, ಪಾಂಡವರ ಕೆಲಸವನ್ನು ನಾನೇ ಮಾಡುವೆನು. ಓ ಸುದರ್ಶನ! ಇಲ್ಲಿ ಬಾ.

(ಸುದರ್ಶನನ ಪ್ರವೇಶ)

ಸುದರ್ಶನ: ನಾನು ಇಲ್ಲಿದ್ದೇನೆ.

ಸ್ವಾಮಿಯ ಮಾತನ್ನು ಕೇಳಿ ಅವನ ವಿಪುಲ ಪ್ರಸಾದದಿಂದ ಮೇಘ ಗುಚ್ಛದಿಂದಾವೃತನಾಗಿ ಧಾವಿಸಿ ಬಂದಿರುವೆನು. ಓ! ಕಮಲಾಯತಾಕ್ಷನು ಯಾರ ಮೇಲೆ ಇಷ್ಟು ಕುಪಿತನಾಗಿರುವನು? ಅಲ್ಲದೆ ಯಾರ ಶಿರದ ಮೇಲೆ ನಾನು ನನ್ನ ಮಾರಕ ಸಾಮರ್ಥ್ಯವನ್ನು ವಿಸ್ತರಿಸಲಿ! ॥ ೪೨ ॥

ಭಗವಾನ್ ನಾರಾಯಣನು ಎಲ್ಲಿರುವನು?—

ಅವ್ಯಕ್ತನೂ ಅಚಿಂತ್ಯನೂ ಲೋಕಸಂರಕ್ಷಣೆಯಲ್ಲಿ ತೊಡಗಿರುವವನೂ, ಒಬ್ಬನೇ ಆದರೂ ಹಲವು ರೂಪಗಳುಳ್ಳವನೂ, ದೇದೀಪ್ಯಮಾನನೂ, ದುಷ್ಟಶಕ್ತಿಗಳನ್ನು ನಾಶಮಾಡುವವನೂ ಆದ ಅವನು ಎಲ್ಲಿರುವನು? ॥ ೪೩ ॥

(ಸುತ್ತಲೂ ನೋಡಿ) ಓಹೋ! ಭಗವಾನನು ಹಸ್ತಿನಾಪುರದ ದ್ವಾರದಲ್ಲಿ ದೂತನಾಗಿ ಬಂದಿರುವನು. ಜಲವೆಲ್ಲಿ? ಜಲವೆಲ್ಲಿ? ಎಲೈ ಪವಿತ್ರವಾದ, ದೈವಿಕವಾದ ಗಂಗೆಯೇ! ನೀರನ್ನು ಕೊಡು. ಓ! ನೀರು ಹರಿಯುತ್ತಿದೆ. (ನೀರನ್ನು ಆಚಮನಮಾಡಿ ಮುಂದೆ ಬಂದು) ಭಗವಾನ್ ನಾರಾಯಣನಿಗೆ ಜಯವಾಗಲಿ! (ನಮಸ್ಕರಿಸುವನು).

ವಾಸುದೇವ: ನೀನು ಅಜೇಯುವಾದ ಸಾಮರ್ಥ್ಯವುಳ್ಳವನಾಗು.

ಸುದರ್ಶನ: ಅನುಗೃಹೀತನಾದೆನು.

ವಾಸುದೇವ: ನೀನು ಕರ್ಮಕಾಲಕ್ಕೆ ಸರಿಯಾಗಿ ಬಂದೆ.

ಸುದರ್ಶನ: ಹೇಗೆ, ಹೇಗೆ ಕರ್ಮಕಾಲ? ಆಜ್ಞೆಯಾಗಲಿ.

ಭಗವಾನ್, ಆಜ್ಞೆಯಾಗಲಿ—

ಮೇರು ಮಂದರಕುಲವನ್ನು ಕಿತ್ತೆಸೆಯಲೆ ಅಥವಾ ಸಕಲ ಸಾಗರ ವನ್ನೂ ಅಲ್ಲೋಲಕಲ್ಲೋಲ ಮಾಡಲೆ ಅಥವಾ ನಕ್ಷತ್ರಸಮೂಹ ವನ್ನೇ ಭೂಮಿಗೆ ತರಲೇ? ಎಲೈ ಭಗವಂತನೇ! ನಿನ್ನ ಅನುಗ್ರಹ ದಿಂದ ನನಗೆ ಯಾವುದೂ ಅಸಾಧ್ಯವಲ್ಲ. ‖ ೪೪ ‖

ವಾಸುದೇವ: ಹೀಗೆ, ಸುದರ್ಶನ, ಓ ಸುಯೋಧನ!

ಚಂಚಲಬುದ್ಧಿಯುಳ್ಳವನೆ! ನೀನು ಲವಣ ಸಮುದ್ರದ ತಳದಲ್ಲಿ ಅಡಗಿಕೊಳ್ಳಬಹುದು ಅಥವಾ ಗಿರಿಗುಹೆಗಳಲ್ಲಿ ಅಥವಾ ಗ್ರಹಗಳು ಸಂಚರಿಸುವ ವಾಯುಮಾರ್ಗದಲ್ಲಿ ಎರಗಬಹುದು. ಆದರೆ ಈ ಚಕ್ರವು ನನ್ನ ಬಲಿಷ್ಠ ಬಾಹುಗಳ ಸಂಪರ್ಕದಿಂದ ವೇಗವನ್ನು ಪಡೆದು ನಿನಗೆ ಮಾರಕವಾಗಿ ವರ್ತಿಸಲಿ. ‖ ೪೫ ‖

ಸುದರ್ಶನ: ಓ ಹತಭಾಗ್ಯ ಸುಯೋಧನ! ನಿಲ್ಲು, ನಿಲ್ಲು. (ತಿರುಗಿ) ಭಗವಾನ್ ನಾರಾಯಣನು (ನನ್ನನ್ನು) ಕ್ಷಮಿಸಲಿ—

ಇವನು ತನ್ನ ಅವಸಾನವನ್ನು ಹೀಗೆ ಸಂಧಿಸುವುದಾದರೆ, ಭೂದೇವಿಯನ್ನು ಅವಳ ಮೇಲಿನ ಭಾರದಿಂದ ವಿಮುಕ್ತಳಾಗಿ ಮಾಡ ಲೆಂದೇ ಅವತರಿಸಿರುವ ಭಗವಂತನ ಶ್ರಮವು ವ್ಯರ್ಥವಾಗುವು ದಿಲ್ಲವೆ? ‖ ೪೬ ‖

ವಾಸುದೇವ: ಆಹ, ಸುದರ್ಶನ! ನನ್ನ ಕೋಪದಲ್ಲಿ ನಾನು ಔಚಿತ್ಯ ವನ್ನು ಗಣನೆಗೇ ತಂದುಕೊಳ್ಳಲಿಲ್ಲ. ನೀನು ನಿನ್ನ ಸ್ಥಾನಕ್ಕೆ ಹಿಂದಿರುಗು.

ಸುದರ್ಶನ: ಭಗವಾನ್ ನಾರಾಯಣನ ಆಜ್ಞೆಯಂತೆ. ಹೇಗೆ, ಹೇಗೆ? ಅವನು ಗೋಪಾಲಕನೇ? ಮೂರು ಲೋಕಗಳನ್ನೂ ಮೂರು ಹೆಜ್ಜೆಗಳಿಂದ ಅಳೆದ

ಸಾಕ್ಷಾತ್ ನಾರಾಯಣ. ಅವನ ಆಶ್ರಯಕ್ಕೆ ಶರಣಾಗತನಾಗು. ನಾ
ಹೊರಡುವೆನು. ಓಹ್, ಭಗವಾನನ ಅಪ್ರತಿಮ ಅಸ್ತ್ರವಾದ ಶಾರ್ಙ್ಗನು ಈ
ಬರುತ್ತಿರುವನು.

ಸಣ್ಣದಾದ, ನುಣುಪಾದ ಮತ್ತು ಮನೋಹರವಾದ ಭಾಗಗಳಿಂದ ಮಾಡಲ್ಪಟ್ಟು, ಸ್ತ್ರೀಸಹಜವಾದ ಲಾವಣ್ಯವನ್ನು ಪ್ರದರ್ಶಿಸುತ್ತಾ, ನಾರಾಯಣನ ಹಸ್ತದಿಂದ ಮಧ್ಯಭಾಗದಲ್ಲಿ ಹಿಡಿಯಲ್ಪಟ್ಟು, ಸುವರ್ಣ ರಂಜಿತವಾದ ಹಿಂಭಾಗದಿಂದ ಮಾಡಲ್ಪಟ್ಟು, ಶತ್ರುಸಮೂಹವನ್ನು ನಾಶಪಡಿಸುವುದರಲ್ಲಿ ಪ್ರಧಾನವಾದ ಈ ಧನುಸ್ಸು, ನವಮೇಘದ ಬದಿಯಲ್ಲಿ ಹೊಳೆಯುವ ಮಿಂಚಿನಂತೆ ಕೃಷ್ಣನ ಪಕ್ಕದಲ್ಲಿ ಪ್ರಜ್ವಲಿಸುವುದು. || ೪೭ ||

ಓ ಶಾರ್ಙ್ಗ, ಭಗವಾನ್ ನಾರಾಯಣನ ಕೋಪವು ಶಮನವಾಯಿತು. ನೀನು ನಿನ್ನ ಸ್ಥಾನಕ್ಕೆ ತೆರಳು. ಆಃ, ಅವನು ಹೋಗುತ್ತಿರುವನು. ನಾನೂ ಹೊರಡುವೆನು. ಅರೆ! ಇಲ್ಲಿ ಕೌಮೋದಕಿಯ ಆಗಮನ:

ಅಸದೃಶವಾದ ಮಣಿಗಳಿಂದಲೂ ಮತ್ತು ಸುವರ್ಣದಿಂದಲೂ ಆಶ್ಚರ್ಯಕರವಾದ ರೀತಿಯಲ್ಲಿ ಮಾಡಲ್ಪಟ್ಟು, ವಿಧವಿಧವಾದ ಬಣ್ಣಗಳ ಮಾಲೆಯಿಂದಾವೃತವಾಗಿ, ಪರ್ವತದ ಇಳಿಜಾರಿನಂತಿರುವ ತಡೆಯಲಶಕ್ಯವೂ ಅದ್ಭುತವೂ ಆದ, ಜೊತೆಗೂಡಿಬಂದ ದೇವತೆಗಳ, ಶತ್ರುಗಳನ್ನು ನಿರ್ನಾಮಮಾಡಲು ಹಾತೊರೆಯುತ್ತಿರುವ (ಕೌಮೋದಕಿಯು) ಮೇಘಗುಚ್ಛದಿಂದ ಅನುಸರಿಸಲ್ಪಟ್ಟು ಆಕಾಶದಲ್ಲಿ ರಭಸಗಾಮಿಯಾಗಿದೆ. || ೪೮ ||

ಎಲೈ ಕೌಮೋದಕಿ! ಭಗವಾನ್ ನಾರಾಯಣನ ಕೋಪವು ಶಮನವಾಯಿತು. ಆಹ್, ಅವಳು ಹಿಂತಿರುಗಿದಳು. ನಾನೂ ಹೊರಡುವೆನು. ಓ, ಇಲ್ಲಿ ಪಾಂಚಜನ್ಯದ ಆಗಮನ!—

ಪೂರ್ಣಚಂದ್ರನಂತೆ ಅರಳಿದ ಕುಂದಪುಷ್ಪದಂತೆ, ಕುಮುದ ಪುಷ್ಪದ ಒಳಭಾಗದಂತೆ ಅಥವಾ ಮುತ್ತಿನಮಾಲೆಯಂತೆ ಬೆಳ್ಳಗೆ ಹೊಳೆಯುವ, ನಾರಾಯಣನ ಕಮಲಸದೃಶವಾದ ಬಾಯಿಂದ ಪ್ರಸೀದನೂ ಆದ ಮತ್ತು ಯಾರ ಪ್ರಳಯಕಾಲದ ಸಾಗರದ ಅಬ್ಬರದಂತಿರುವ ಭಯಂಕರ ಘೋಷವನ್ನು ಕೇಳಿ ಸುರಾಂಗನೆಯರ ಗರ್ಭವು ನಿಪಾತಹೊಂದುವುವೋ (ಅವನು) || ೪೯ ||

ಹೇ, ಪಾಂಚಜನ್ಯ! ಭಗವನ್ನಾರಾಯಣನ ಕೋಪವು ಶಮನವಾಯಿತು.

ನೀನು ನಿನ್ನ ಸ್ಥಾನಕ್ಕೆ ತೆರಳು. ಆಃ, ಅವನು ಹಿಂದಿರುಗಿದನು. ಅರೆ! ನಂದಕ ಖಡ್ಗವು ಪ್ರಾಪ್ತವಾಯಿತು.

ವನಿತಾವಿಗ್ರಹದಂತೆ ಕಂಡರೂ ಮಹಾಸುರರಿಗೆ ಯುದ್ಧದಲ್ಲಿ
ಭಯಂಕರವಾದ ಈ ನಂದಕವು ಗಗನದಲ್ಲಿ ಸಂಚರಿಸುವಾಗ ದೊಡ್ಡ
ಗ್ರಹದಂತೆ ಪ್ರಕಾಶಿಸುವುದು. ||೫೦||

ಎಲೈ ನಂದಕ! ಭಗವಾನನ ಕೋಪವು ಶಮನವಾಯಿತು. ನೀನು ನಿನ್ನ ಸ್ವಸ್ಥಾನಕ್ಕೆ ಹೋಗು. ಆಃ, ಅವನು ಹಿಂದಿರುಗಿದನು. ನಾನೂ ಹೊರಡುವೆನು. ಆಃ! ಇವು ಭಗವದಾಯುಧಗಳು:

ಈ ನಂದಕವೆಂಬ ಖಡ್ಗವು ತನ್ನ ಕಿರಣಗಳಿಂದ ಕೋರೈಸುವ
ಕಿರಣಗಳುಳ್ಳ ಅವನ ಶರೀರವನ್ನು ಅಪಹಾಸ್ಯ ಮಾಡುತ್ತದೆ; ಈ
ಕೌಮೋದಕಿಯು ಸುರರಿಪುಗಳ ಕಠಿಣಹೃದಯಗಳನ್ನು ನುಚ್ಚುನೂರು
ಮಾಡುವುದರಲ್ಲಿ ದಕ್ಷವಾದುದು; ಯಾವುದರ ದಾರವು ಪ್ರಲಯ
ಕಾಲದ ಮೇಘದಂತೆ ಶಬ್ದ ಉಂಟುಮಾಡುವುದೋ ಅದೇ ಈ ಶಾರ್ಙ್ಗ
ವೆಂಬ ಧನುಸ್ಸು; ಶಶಿಕಿರಣದಂತೆ ಶುಭ್ರವೂ, ಗಂಭೀರ ಸತ್ವವುಳ್ಳದ್ದೂ
ಆದ ಶಂಖವು ಇದೇ ಈ ಪಾಂಚಜನ್ಯ. ||೫೧||

ಎಲೈ ಶಾರ್ಙ್ಗ! ಓ ಕೌಮೋದಕಿ! ಪಾಂಚಜನ್ಯ! ದೈತ್ಯಾಂತಕ
ನಾದ ನಂದಕ! ಶತ್ರುವಹ್ನಿ! ಮುರಾರಿಯ ರೋಷವು ಶಮನ
ವಾಗಿರುವುದರಿಂದ ನೀವೆಲ್ಲರೂ ಸ್ವಸ್ಥಾನಕ್ಕೆ ತೆರಳಿ! ||೫೨||

ಆಃ, ಅವರೆಲ್ಲರೂ ಹೊರಟುಹೋದರು. ಈಗ ನಾನೂ ಹೊರಡುವೆನು, ಅರೆ! ವಾಯುವು ರಭಸದಿಂದ ಬೀಸುತ್ತಿದೆ! ಸೂರ್ಯನು ಪ್ರಖರನಾಗಿರುವನು. ಪರ್ವತಗಳು ಚಲಿಸಿದುವು. ಸಾಗರವು ಅಲ್ಲೋಲಕಲ್ಲೋಲವಾಯಿತು. ವೃಕ್ಷಗಳು ಉರುಳಿದುವು. ಮೇಘಗಳು ಭ್ರಾಂತವಾದುವು. ನಾಗರಾಜ ವಾಸುಕಿ ಮತ್ತು ಇತರರು ಎಲ್ಲೂ ಕಾಣುವುದಿಲ್ಲ. ಇವೆಲ್ಲ ಏತಕ್ಕಾಗಿ? ಆಶ್ಚರ್ಯ! ಓ, ಭಗವಾನನ ಪ್ರಸಿದ್ಧ ವಾಹನನಾದ ಗರುಡನು ಬರುತ್ತಿರುವನು.

ದೇವಾಸುರರಿಂದ ಅತಿ ಪ್ರಯಾಸದಿಂದ ಸಂಪಾದಿಸಲ್ಪಟ್ಟ ಅಮೃತವು
ಇಂದ್ರನ ಹಸ್ತದಿಂದ ತನ್ನ ಮಾತೃ ವಿಮೋಕ್ಷಣೆಗಾಗಿ ಯಾರಿಂದ
ಕಸಿಯಲ್ಪಟ್ಟಿತೋ ಮತ್ತು ಯಾರಿಂದ ತಾನು ಅವನ ವಾಹನವಾಗ
ಬೇಕೆಂಬ ಮುರಾರಿಯ ಇಚ್ಛೆಯು ನೆರವೇರಿತೋ (ಆ ಗರುಡ) ||೫೩||

ಎಲೈ ಕಶ್ಯಪನ ಪ್ರಿಯಸುತನಾದ ಗರುಡನೇ! ಶೋಭಾಯಮಾನನಾದ ದೇವದೇವೇಶನ ರೋಷವು ಶಮನವಾಯಿತು. ನೀನು ನಿನ್ನ ಸ್ವಸ್ಥಾನಕ್ಕೆ ಹಿಂದಿರುಗು. ಆಃ, ಅವನು ಹಿಂದಿರುಗಿದನು. ಈಗ ನಾನೂ ಹೊರಡುವೆನು.

ಇತ್ತ ಆಕಾಶದಲ್ಲಿ ದೇವತೆಗಳೂ, ಕಿನ್ನರರೂ, ಯಕ್ಷರೂ ಮತ್ತು ಸಿದ್ಧರೂ ಅಚ್ಯುತನು ರೋಷಾವಿಷ್ಟನಾಗಿರಲಾಗಿ, ಕಂಪಿಸುತ್ತಿರುವ ತಮ್ಮ ಮುಕುಟಗಳ ಕಳೆಗುಂದಿದ ಶಿರವನ್ನು ಬಾಗಿದವರಾಗಿ ನಿಂತಿದ್ದರು. ಆದರೆ ಅವನ ರೋಷವು ಶಮನವಾಗಿರುವುದನ್ನು ಕೇಳಿ ತಾಪದಿಂದ ನಿವೃತ್ತರಾಗಿ ತಮ್ಮ ತಮ್ಮ ಮನೆಗಳಿಗೆ ಹಿಂದಿರುಗುತ್ತಿರುವರು. ||೫೪||

ನಾನೂ ನನ್ನ ಸುಂದರವಾದ ಮೇರುಗುಹೆಗೆ ಹೋಗುವೆನು.

(ನಿಷ್ಕ್ರಾಂತ)

ವಾಸುದೇವ: ನಾನೂ ಪಾಂಡವರ ಶಿಬಿರಕ್ಕೆ ತೆರಳುವೆನು.

(ನೇಪಥ್ಯದಲ್ಲಿ)

ಇಲ್ಲ, ಇಲ್ಲ, ದಯವಿಟ್ಟು ಹೋಗಬೇಡ.

ವಾಸುದೇವ: ಇದು ವೃದ್ಧರಾಜನ ಧ್ವನಿಯಂತೆ ಭಾಸವಾಗುತ್ತಿದೆ. ಎಲೈ ರಾಜನೇ! ನಾನು ಇಲ್ಲಿರುವೆನು.

(ಧೃತರಾಷ್ಟ್ರನು ಪ್ರವೇಶಿಸುವನು)

ಧೃತರಾಷ್ಟ್ರ: ಭಗವಾನ್ ನಾರಾಯಣನು ಎಲ್ಲಿರುವನು? ಪಾಂಡವ ಆಶ್ರಯದಾತನು ಎಲ್ಲಿರುವನು? ವಿಪ್ರಪ್ರಿಯವಾದ ಭಗವಾನನು ಎಲ್ಲಿರುವನು? ಮತ್ತು ದೇವಕಿಯ ಪ್ರಿಯಸುತನು ಎಲ್ಲಿರುವನು? ಎಲೈ ದೇವರಾಜನಾದ ಶಾರ್ಙ್ಗಪಾಣಿಯೇ! ನನ್ನ ಮಗನಿಂದ ನಿನಗಾದ ಅಪಚಾರಕ್ಕಾಗಿ ಇಗೋ, ನನ್ನ ಶಿರವನ್ನು ನಿನ್ನ ಪಾದಗಳ ಮೇಲೆ ಎರಗಿಸುತ್ತೇನೆ. || ೫೫ ||

(ಪಾದಗಳಿಗೆ ಎರಗುವನು)

ವಾಸುದೇವ: ಹಾಯ್, ಅವನ ಗೌರವ (ನನ್ನ ಪಾದದ ಬಳಿ) ಬಿದ್ದಂತಾಯಿತು. ಏಳು, ಏಳು.

ಧೃತರಾಷ್ಟ್ರ: ಅನುಗೃಹೀತನಾದೆನು. ಭಗವನ್! ಈ ಅರ್ಘ್ಯಪಾದ್ಯಗಳನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸುವೆನು.

ವಾಸುದೇವ: ಎಲ್ಲವನ್ನೂ ಸ್ವೀಕರಿಸಿದ್ದೇನೆ. ನಿನಗೆ ಪ್ರಿಯವಾದ ಮತ್ತೇನನ್ನು ಮಾಡಲಿ?

ಧೃತರಾಷ್ಟ್ರ: ಭಗವಾನನು ನನ್ನಲ್ಲಿ ಪ್ರಸನ್ನನಾಗಿರುವುದಕ್ಕಿಂತ ಮತ್ತೇನನ್ನು ಇಚ್ಛಿಸಲಿ?

ವಾಸುದೇವ: ಇನ್ನು ನೀನು ಹೊರಡುವವನಾಗು. ಪುನಃ ಸಂಧಿಸೋಣ.

ಧೃತರಾಷ್ಟ್ರ : ಭಗವಾನ್ ನಾರಾಯಣನ ಆಜ್ಞೆಯಂತೆ.

(ನಿಷ್ಕ್ರಾನ್ತ)

ಭರತವಾಕ್ಯ

ಸಾಗರಪರ್ಯನ್ತ ವಿಸ್ತಾರವಾಗಿದ್ದು ಹಿಮಾಲಯ ಮತ್ತು ವಿಂಧ್ಯವೆಂಬ ಕರ್ಣ ಕುಂಡಲಗಳನ್ನು ಹೊಂದಿರುವ ಈ ಭೂಮಿಯನ್ನು ರಾಜಸಿಂಹನು ಏಕಛತ್ರದ ಕೆಳಗೆ ಆಳಲಿ.

(ಎಲ್ಲರೂ ನಿಷ್ಕ್ರಮಿಸುವರು)

ಚೆನ್ನಣ್ಣ ವಾಲೀಕಾರ

ಯಾರ್ದ್ಯಾರ ನನಗ ನಿನ ಹೊರತ

ನೀ ಮೋಡ ನಾ ಮಣ್ಣು ಹೆಣ್ಣು ಗಂಡಿನ ಜೋಡು
ಬಿಡುವೆನಂದ್ರು ಬಿಟ್ಟತ್ಹೆಂಗಽ

ಬ್ಯಾಸೀಗಿ ದಿವಸಕ್ಕ ನೆರಳಾದಿ ಮಳೆಯಾದಿ
ಮರೆತು ಹೋಯಿತೆ ನನ್ನ ಗುರುತಽ

ಬಾಯ್ಬಾಯಿ ಬಡಕೊಂಡು ಕೂಗಿದರು ಖಬರಿಲ್ಲ
ಗಾಳೀಯು ಮನಸಾಯ್ತು ನಿನಗಽ

ಬೇನ್ಯಾಯಿ ಆದರು ಮಾಯಿನ್ಯಾಯಿ ಆಗುವೆ
ಯಾರ್ದ್ಯಾರ ನನಗ ನಿನ ಹೊರತಽ

ಹುಚ್ಚಿದ್ದು ಕುಂತಿರುವೆ ನಿನಗಾಗಿ ನನ್ನೊಡೆಯ
ಬಿಡಬೇಡ ಎಂದೆಂದು ಕೈಯಽ

ನಿನ್ನೊಳಗ ನಾನುಂಟು ನನ್ನೊಳಗ ನೀನುಂಟು
ಬಿಡುವೆನಂದ್ರು ಬಿಟ್ಟತ್ಹೆಂಗಽ

ಎಂ. ಜಿ. ವೆಂಕಟೇಶಯ್ಯ

ಅಲಂಕಾರಶಾಸ್ತ್ರ ಪರಿಚಯ

ಕನ್ನಡದಲ್ಲಿರುವ ಅಲಂಕಾರಗ್ರಂಥಗಳೆಲ್ಲಾ ಸಂಸ್ಕೃತ ಅಲಂಕಾರಗ್ರಂಥಗಳ ಮೇಲೆಯೆ ಆಧಾರಗೊಂಡಿವೆ. ಆದುದರಿಂದ ಸಾಂಪ್ರದಾಯಿಕ ವಿಮರ್ಶೆಯನ್ನು ಮಾಡಬೇಕಾದರೆ ಕೆಲವು ಅಂಶಗಳನ್ನು ನಾವು ಸಂಸ್ಕೃತ ಗ್ರಂಥಗಳಿಂದ ತೆಗೆದು ಕೊಳ್ಳಬೇಕಾಗುತ್ತದೆ. ಪ್ರಕೃತದಲ್ಲಿ ಕನ್ನಡಗ್ರಂಥಗಳ ವಿಮರ್ಶೆಯು ಪಾಶ್ಚಿಮಾತ್ಯ ಕಾವ್ಯತತ್ವ ವಿಮರ್ಶೆಗಳಿಂದ ಸಾಗುತ್ತಿದೆ. ಈ ಆಧುನಿಕ ವಿಮರ್ಶೆಯಿಂದ ಹಳಗನ್ನಡ ಕಾವ್ಯಗಳನ್ನು ಪರಿಕಿಸುವುದು ಸಮಂಜಸವಲ್ಲ. ಒಂದು ಜಾತಿಯ (ಜನಾಂಗದ) ಕಾವ್ಯವನ್ನು ಮತ್ತೊಂದು ಜಾತಿಯ ವಿಮರ್ಶೆಯಿಂದ ಅಳೆದರೆ ನಮಗೆ ನಿಜವಾದ ತೃಪ್ತಿಕರವಾದ ತೂಕವು ಸಿಗಲಾರದು. ಪಾಶ್ಚಿಮಾತ್ಯ ಕಾವ್ಯತತ್ವಗಳೇ ಕಾಲ ಕಾಲಕ್ಕೆ ಬದಲಾಗುತ್ತಿವೆ. ೧೯ನೆಯ ಶತಮಾನದ ತತ್ವಗಳಿಗೂ ೨೦ನೆಯ ಶತಮಾನದ ತತ್ವಗಳಿಗೂ ವ್ಯತ್ಯಾಸವು ಕಂಡುಬರುತ್ತದೆ. ಹೀಗೆ ಕಾಲದೇಶಗಳ ಪ್ರಭಾವಗಳಿಗೆ ಒಳಗಾಗಿ ಆಗಾಗ ಬದಲಾಗುವ ಮಾನದಂಡದಿಂದ ಒಂದು ಸಾವಿರ ವರ್ಷದ ಹಿಂದಿನ ನಮ್ಮ ಕಾವ್ಯಗಳನ್ನು ವಿಮರ್ಶೆಮಾಡುವುದು ಶಾಸ್ತ್ರಸಮ್ಮತವಲ್ಲ. ಅಲಂಕಾರಶಾಸ್ತ್ರವು ಒಂದು ಶಾಸ್ತ್ರ. ಅದನ್ನು ಶಾಸ್ತ್ರದಂತೆಯೆ ಅಭ್ಯಾಸ ಮಾಡಬೇಕು. ಅದನ್ನು ಎಲ್ಲಿ ಪ್ರಯೋಗಿಸಬೇಕೋ ಅಲ್ಲಿ ಪ್ರಯೋಗಿಸಬೇಕು.

ಸಂಸ್ಕೃತದ ದಶರೂಪಕಗಳನ್ನು ತೆಗೆದುಕೊಂಡರೆ ಅವುಗಳಿಗೆ ಬೇಕಾದ ಉದಾಹರಣೆಗಳು ಆಂಗ್ಲೇಯ ವಾಙ್ಮಯದಲ್ಲಿ ಸಿಗುವುದಿಲ್ಲ. ಹಾಗೆಯೆ ಹಳಗನ್ನಡ ಕಾವ್ಯಗಳಲ್ಲಿ ಆಂಗ್ಲೇಯ ದೃಶ್ಯಕಾವ್ಯತತ್ವಗಳಿಗೆ ಸರಿಹೋಗುವ ಉದಾಹರಣೆಗಳು ಸಿಗುವಂತಿಲ್ಲ. ಇವೆರಡೂ ಸಾಹಿತ್ಯದ ಗುಂಪಿನಲ್ಲಿ ಅಡಕವಾಗಿದ್ದರೂ ಬೇರೆ ಬೇರೆ ಜಾತಿಗೆ ಸೇರಿದವುಗಳು. ರಾಜಕೀಯದಲ್ಲಿ ಆಂಗ್ಲೇಯರ ಕೈ ಮೇಲಿತ್ತಾದುದರಿಂದ ಅವರ ತತ್ವಗಳನ್ನು ನಾವು ಸ್ವೀಕರಿಸುವ ಮನೋಭಾವವುಂಟಾಯಿತಾದರೂ, ನಿಜವಾಗಿ, ಆ ತತ್ವಗಳಿಗೂ ನಮ್ಮ ಕಾವ್ಯಜೀವನಕ್ಕೂ ಇರುವ ಸಂಬಂಧವು ಸಹಜ ವಾದುದಲ್ಲ.

ಇನ್ನು ರುದ್ರನಾಟಕ(Tragedy)ದ ವಿಚಾರ. ಅದು ಗ್ರೀಕರ ದೃಶ್ಯಕಾವ್ಯ

ಗಳಲ್ಲಿ ಅತಿ ಪ್ರಸಿದ್ಧವಾಗಿತ್ತು; ಉನ್ನತಸ್ಥಿತಿಯಲ್ಲಿಯೂ ಇತ್ತು. ಈ ರು ನಾಟಕವು ನಮ್ಮಲ್ಲಿಲ್ಲ; ಏಕೆಂದರೆ ನಮ್ಮ ಸಂಸ್ಕೃತಿ ವೇದಾಂತಗಳಿಗೆ ರುದ್ರನಾ ತತ್ವವು ವಿರುದ್ಧ. ಆತ್ಮಹತ್ಯ ಮಹಾಪಾಪ. ನಮ್ಮ ಧೀರೋದ್ಧತ ನಾ ನಾಗಲಿ ಧೀರೋದಾತ್ತನಾಯಕನಾಗಲಿ ಆತ್ಮಹತ್ಯವನ್ನು ಮಾಡಿಕೊ ಸಾಧ್ಯವಿಲ್ಲ. ಎಲ್ಲಿಯೂ ಮಾಡಿಕೊಂಡಿಲ್ಲ. ಪಾಶ್ಚಿಮಾತ್ಯ ನಾಗರಿಕ ದಬ್ಬಾಳಿಕೆಯಲ್ಲಿ ಸೋತುಹೋದ ನಮ್ಮ ಮನಸ್ಸು, ಇಲ್ಲದ ಕಡೆ (ಹಳಗ ಕಾವ್ಯಗಳಲ್ಲಿ) ರುದ್ರನಾಟಕದ ಛಾಯೆಯನ್ನು ನೋಡಲು ಮೊದಲುಮಾ ಇದು ಕೇವಲ ಭ್ರಾಂತಿ. "ಸೂನುಗಳೞಿವಂ ಪ್ರಿಯಮಿ| ತ್ರಾನುಜರೞ ವಿಧಾತ್ರ! ನೀಂ ಕಾಣಿಸಿ ಯಿ|| ನ್ನೇನಂ ಕಾಣಿಸಲಿರ್ದಪೆ| ನೀನೆನ್ನಂ ಪಾಪ ಕರ್ಮ ನಿರ್ಗುಣನಂ || (ರನ್ನನ ಗದಾಯುದ್ಧಂ, V–೨೯) ಎಂದ ದುರ್ಯೋಧ ಆತ್ಮಹತ್ಯಮಾಡಿಕೊಳ್ಳುವುದಿಲ್ಲ. ಅವನು ಸನಾತನ ಧರ್ಮವನ್ನು ಧೀರೋದ್ಧತ. ಆತ್ಮಹತ್ಯಮಾಡಿಕೊಳ್ಳುವುದು ಅವನ ರಕ್ತದಲ್ಲಿಲ್ಲ. ಈ ವಿ ಗಳನ್ನು ಸಹೃದಯತ್ವದಿಂದ ನೋಡಿದರೆ, ನಮ್ಮ ಭ್ರಾಂತಿಯು ಮಾಯವಾಗುತ್ತ ಕವಿಯ ನಿಜವಾದ ಉದ್ದೇಶವೇನು ಎಂಬುದು ತಿಳಿದುಬರುತ್ತದೆ. ಇಲ್ಲದ ರುದ್ರನಾಟಕದ ತೀಕ್ಷ್ಣತೆಯನ್ನು ಕಾಣುವುದು ಪಾಶ್ಚಿಮಾತ್ಯ ಮನೋಭಾ ಸೋತುಹೋದ ನಮ್ಮ ಮನೋಭಾವ.

ಕನ್ನಡಭಾಷೆ ಸಜೀವವಾಗಿದೆ, ಕನ್ನಡ ವಾಙ್ಮಯ ಸಜೀವವಾಗಿದೆ. ಬೇರೆ ರೀತಿಯ ಕಾವ್ಯೋತ್ಪತ್ತಿ ಅದರ ಸಹಜವಾದ ಬೆಳವಣಿಗೆ. ಕಾಲ ವರ್ತಮಾನಗಳನ್ನನುಸರಿಸಿ ಸಾಹಿತ್ಯವು ಬೆಳೆಯುವುದು ಅದರ ಧರ್ಮ. ಆದ ರಿಂದ ಆಯಾ ವಾತಾವರಣದಲ್ಲಿ ಹುಟ್ಟಿದ ಸಾಹಿತ್ಯವನ್ನು ಆಯಾ ಕಾಲದ ಗಳಿಗನುಸಾರವಾಗಿ ತೂಕಮಾಡುವುದು ಸಮಂಜಸ.

ಹಳಗನ್ನಡ ಕಾವ್ಯಗಳನ್ನು ನಾವು ಯಾವ ದೃಷ್ಟಿಯಿಂದ ನೋಡಬೇ ಎಂಬುದಕ್ಕೆ ಅತ್ಯಗತ್ಯವಾಗಿ ಬೇಕಾದ ಅಲಂಕಾರಶಾಸ್ತ್ರ ಪರಿಚಯವನ್ನು ಕೊಡುವುದೇ ಈ ಬರಹದ ಗುರಿ.

೧

ನಮ್ಮ ಭರತವರ್ಷದಲ್ಲಿ ಕಾವ್ಯ ಅಲಂಕಾರಶಾಸ್ತ್ರ ಇವು ಹುಟ್ಟಿದ್ದು ಯಾವಾಗ ಎಂಬುದನ್ನು ನಿರ್ಣಯಿಸುವುದು ಕಷ್ಟತರವೆ ಸರಿ. ವೇದದಲ್ಲಿಯೂ ಕಾವ್ಯವೆಂದು ಹೇಳಬಹುದಾದ ಭಾಗಗಳಿವೆ. ಆದಾಗ್ಯೂ ವಾಲ್ಮೀಕಿ ರಾಮಾಯಣ ಆದಿಕಾವ್ಯವೆನ್ನುವುದು ರೂಢಿಯಲ್ಲಿದೆ. ಅಲಂಕಾರಶಾಸ್ತ್ರಗಳಲ್ಲಿ ಮೊಟ್ಟಮೊದ ನದು ಅಗ್ನಿಪುರಾಣ. ಲಕ್ಷಣಗ್ರಂಥಗಳಿಗೆಲ್ಲಾ ಇದೇ ಮೂಲವೆನ್ನುತ್ತಾ ತರುವಾಯ ಬಂದವು ನಟಸೂತ್ರಗಳು; ಇವನ್ನು ಶಿಲಾಲಿಕೃಶಾಶ್ವರು ಬರೆದರು.

ಒಂದನೆಯ ಶತಮಾನದಲ್ಲಿ ಭರತನ ನಾಟ್ಯಶಾಸ್ತ್ರ ; ಏಳನೆಯ ಶತಮಾನದಲ್ಲಿ ಭಾಮಹನ ಕಾವ್ಯಾಲಂಕಾರ, ದಂಡಿಯ ಕಾವ್ಯಾದರ್ಶ ; ಎಂಟನೆಯ ಶತಮಾನದಲ್ಲಿ ವಾಮನನ ಕಾವ್ಯಾಲಂಕಾರ ಸೂತ್ರವೃತ್ತಿ ; ಒಂಬತ್ತನೆಯ ಶತಮಾನದಲ್ಲಿ ರುದ್ರಟನ ಕಾವ್ಯಾಲಂಕಾರ, ಅಗ್ನಿಪುರಾಣದ ಅಲಂಕಾರಭಾಗ ; ಮತ್ತು ಹತ್ತನೆಯ ಶತಮಾನದಲ್ಲಿ ರಾಜಶೇಖರನ ಕಾವ್ಯಮೀಮಾಂಸಾ—ಇವು ನಮಗೆ ಗೋಚರವಾಗುತ್ತವೆ.

ಭರತನು ಕಾವ್ಯಲಕ್ಷಣಗಳನ್ನು ಹೇಳಿಲ್ಲ. ರಸವು ಚೆನ್ನಾಗಿ ವ್ಯಕ್ತವಾಗಬೇಕು ಎಂದಿದ್ದಾನೆ. ಕಾವ್ಯವು ಗುಣಾಲಂಕಾರಗಳಿಂದ ಶೋಭಿತವಾಗಿರಬೇಕು ; ದೋಷಗಳಿರಬಾರದು ; ಇದೇ ಪ್ರಾಚೀನ ಆಲಂಕಾರಿಕರ ಮತ. ವಾಮನನು—ರೀತಿರಾತ್ಮಾ ಕಾವ್ಯಸ್ಯ—ರೀತಿಯು ಕಾವ್ಯದ ಆತ್ಮ—ಎಂದಿದ್ದಾನೆ.

ರೀತಿ ಎಂದರೆ ಪದಗಳನ್ನು ಜೋಡಿಸುವ ಕ್ರಮ. ಇದನ್ನು (೧) ವೈದರ್ಭೀ (೨) ಗೌಡಿ (೩) ಪಾಂಚಾಲಿ (೪) ಲಾಟಿ (೫) ಆವಂತಿ (೬) ಮಾಗಧಿ ಎಂದು ವಿಂಗಡಿಸಿದ್ದಾರೆ. ಬಹುಶಃ ಆಯಾ ಪ್ರಾಂತ್ಯಗಳಲ್ಲಿ ಪದಗಳನ್ನು ಉಪಯೋಗಿಸುತ್ತಿದ್ದ ರೀತಿ ಇರಬಹುದು. ಇವುಗಳಲ್ಲಿ ನಮಗೆ ಎತ್ತಿಕಾಣುವ ರೀತಿಗಳು ಎರಡು—ವೈದರ್ಭೀ ಮತ್ತು ಗೌಡಿ. ವೈದರ್ಭೀ ರೀತಿಯ ಪದಜೋಡಣೆಯಲ್ಲಿ ದೀರ್ಘಸಮಾಸಗಳಿಲ್ಲ. ಸುಲಭವಾಗಿ ಅದು ಅರ್ಥವಾಗುತ್ತದೆ. ಕೇಳುವುದಕ್ಕೆ ಇಂಪಾಗಿರುತ್ತದೆ. ಇದಕ್ಕೆ ಪ್ರತಿಯಾಗಿ ದೊಡ್ಡದೊಡ್ಡ ಪದಗಳಿಂದಲೂ ದೀರ್ಘವಾದ ಸಮಾಸಗಳಿಂದಲೂ ಅರ್ಥವಾಗಲು ಶ್ರಮವಾಗುವ ಪದಗಳಿಂದಲೂ ಕೂಡಿರುವ ಶೈಲಿ–ಗೌಡಿ. ಇವೆರಡರ ನಡುವೆ ಇರುವವುಗಳು ಮಿಕ್ಕವು. ಸಂಸ್ಕೃತಲಕ್ಷಣಕಾರರು ಇದನ್ನು ಮಾರ್ಗ ಎಂದು ಕರೆಯುತ್ತಾರೆ.

ಕಂ॥ ಸಿರಿಯ ಪೊಸನೊಗದ ಮೈಸಿರಿ
ಸಿರಿಯೆನಿಕುಂ ಪೂಗೊಳಂಗಳಾ ನೆಲನಸಿತುಂ
ಸುರಚಾಪದ ಬೆಳಸಿನ ಹರ
ವರಿಯೆನಿಕುಂ ಪಂಚರತ್ನರುಚಿವಲ್ಲರಿಯಿಂ ॥

—ಅಭಿನವಪಂಪನ ರಾಮಚಂದ್ರಚರಿತ ಪುರಾಣ, ೧–೬೪.

—ಇದು ವೈದರ್ಭೀ ರೀತಿ.

ಕಂ॥ ಮನು ಚಂದ್ರಾಭಂ ಪಾಂಡುರ
ತನುತೆ ಯಶಸ್ವಿಪ್ರಸೇನ ಚಿಚ್ಚ ಕ್ಷುಷ್ಮ
ವರ್ಣನಜಪಳಚ್ಚ ದಿಗಳುಂ ಕಾಂ
ಚನರೋಚಿಷ್ಣುಗಳೆ ಮಿಕ್ಕಕುಲಧರರೆಲ್ಲಂ ॥

—ಇದು ಗೌಡೀ —ಅದೇ ಕಾವ್ಯದ, ೧–೮೩.

ನೃಪತುಂಗನು ಕವಿರಾಜಮಾರ್ಗದಲ್ಲಿ (II, 47–95) ಇದನ್ನೇ ದಕ್ಷಿಣ
ತ್ತರ ಮಾರ್ಗಗಳೆಂದು ಕರೆದಿರುವಂತೆ ತೋರುತ್ತದೆ.[1]

ಪದ (ಶಬ್ದ) ಜೋಡಣೆಯ ವಿಚಾರವನ್ನು ರೀತಿಯು ಸೂಚಿಸಿದರೆ, ವೃತ್ತಿ
ಅವುಗಳ ಅರ್ಥವನ್ನು ವ್ಯಕ್ತಪಡಿಸುತ್ತದೆ.

(ವಾಕ್ಯ) ಆ ನಾಯಿಯನ್ನು ನೋಡು

ಮೇಲಿನ ವಾಕ್ಯದಲ್ಲಿ ನಾಯಿ ಎಂಬ ಪದದಿಂದ ನಮಗೆ ಆದೊಂದು ಮೃ
ಅದನ್ನು ನಾಯಿ ಎನ್ನುತ್ತೇವೆ, ಎಂಬುವು ವ್ಯಕ್ತವಾಗುತ್ತವೆ. ಇದರಲ್ಲಿ ನ
ಮೂರು ಅಂಶಗಳು ಕಂಡುಬರುತ್ತವೆ. (೧) ನಾಯಿ (ಶಬ್ದ–ಎರಡು ಅ
ಗಳಿಂದ–ನಾ, ಯಿ–ಕೂಡಿದ್ದು). (೨) ವಸ್ತು (೩) ಆ ಶಬ್ದಕ್ಕೆ ಮೃಗವೆಂದು ಅ
ವನ್ನು ಕಲ್ಪಿಸುವ ಸಾಮರ್ಥ್ಯ—ಈ ಸಾಮರ್ಥ್ಯವೇ ವೃತ್ತಿ. ಮೇಲಿನ ವಾಕ್ಯ
ನಾಯಿ ಎಂಬುದಕ್ಕೆ ಪ್ರಸಿದ್ಧವಾದ ಅರ್ಥವನ್ನು (ಮೃಗ ಎಂದು) ಮಾಡುತ್ತೇ
ಈ ವೃತ್ತಿಯನ್ನು ಅಭಿಧಾವೃತ್ತಿ ಎನ್ನುತ್ತಾರೆ; ಅರ್ಥವನ್ನು ವಾಚ್ಯಾ
ವೆನ್ನುತ್ತಾರೆ.

(ವಾಕ್ಯ) ಊರು ಊರೇ ರಥೋತ್ಸವಕ್ಕೆ ಬಂದಿತ್ತು!

ಈ ವಾಕ್ಯದಲ್ಲಿ ಊರು ಬಂದಿತ್ತು, ಎಂಬುದು ಅಸಂಭವ. ಊರು ಹೇ
ತಾನೆ ಅಲ್ಲಿಗೆ ಹೋಗಬಲ್ಲದು? ಆದ್ದರಿಂದ ನಾವು ಬೇರೆ ಅರ್ಥವನ್ನು ಕಲ್ಪಿ
ತ್ತೇವೆ—"ಊರಿನ ಜನರೆಲ್ಲಾ ಅಲ್ಲಿಗೆ ಬಂದಿದ್ದರು; ಜನರ ಗುಂಪು
ಹೆಚ್ಚಾಗಿತ್ತು." ಇದು ವಾಚ್ಯಾರ್ಥವಲ್ಲ. ಅದರಿಂದ ಸೂಚಿತವಾದ ಮತ್ತೊಂದು
ಇದು ಸಹಜೋಕ್ತಿಯಲ್ಲ; ವಕ್ರೋಕ್ತಿ. ಇಂಥಾ ಮಾತುಗಳಿಂದ ಸೂಚಿಸು
ವೃತ್ತಿಯನ್ನು ಲಕ್ಷಣಾ ವೃತ್ತಿ ಎಂದೂ, ಅರ್ಥವನ್ನು ಲಕ್ಷ್ಯಾರ್ಥವೆಂದು
ಕರೆಯುತ್ತೇವೆ.

(ವಾಕ್ಯ) ಏಕಯ್ಯಾ ಇಷ್ಟು ಗರ್ಜನೆ!

—ಎಂಬ ವಾಕ್ಯದಲ್ಲಿ 'ಗರ್ಜನೆ' ಎಂಬುದನ್ನು ನಾವು ಅರ್ಥಮಾ
ಕೊಳ್ಳುವಾಗ ವಾಚ್ಯಾರ್ಥಕ್ಕೂ ಬೇರೆಯಾದ, ಲಕ್ಷ್ಯಾರ್ಥವಲ್ಲದ ಬೇರೆ ಮತ್ತೊಂದು
ಅರ್ಥವನ್ನು ಮಾಡುತ್ತೇವೆ. ಅವನು ಸಿಂಹವಾಗಿದ್ದರೆ ಹೇಗೆ ಸಿಂಹನಾದ (ಗರ್ಜನೆ

---

[1] ಇದರ ವಿಚಾರವಾಗಿ ಹೆಚ್ಚಿನ ವಿವರಗಳನ್ನು ಶ್ರೀ ರಾ. ರಘುನಾಥರಾಯರ 'ಕನ್ನ
ದಕ್ಷಿಣೋತ್ತರ ಮಾರ್ಗಗಳ ವಿಚಾರ—ಚತುರ್ಥೋಪನ್ಯಾಸ'—ಎಂಬ ಲೇಖನದಿಂದ ತಿಳಿ
ಕೊಳ್ಳಬಹುದು.

ಮಾಡುತ್ತಿದ್ದನೋ ಹಾಗೆ ಕೂಗುತ್ತಿದ್ದಾನೆ ಎಂತಲೂ, ಅಷ್ಟು ಗಟ್ಟಿಯಾಗಿ ಕೂಗಿಕೊಳ್ಳುವುದು ಅನಾವಶ್ಯಕವೆಂತಲೂ, ನಾವು ಅರ್ಥಮಾಡಿಕೊಳ್ಳುತ್ತೇವೆ. ಅನೇಕ ವೇಳೆ ಇಂಥ ಮಾತಿನಲ್ಲಿ ಒಂದು ಸಣ್ಣ ಚಿತ್ರವೇ ಬೋಧೆಯಾಗುತ್ತದೆ. ಇಂಥಾ (ವಕ್ರೋಕ್ತಿ) ವೃತ್ತಿಯನ್ನು ವ್ಯಂಜನಾವೃತ್ತಿಯೆಂದೂ ಅರ್ಥವನ್ನು ವ್ಯಂಜನಾರ್ಥವೆಂದೂ ಕರೆಯುತ್ತೇವೆ.

ದಶರೂಪಕಗಳ ವಿಚಾರದಲ್ಲಿ ವೃತ್ತಿ ಎಂಬುದನ್ನು ನಟರು ಆಡುವ ಮಾತಿನ ರೀತಿ ಎಂದರ್ಥವಾಗುವಂತೆ ಉಪಯೋಗಿಸುತ್ತಾರೆ.[2]

ವಾಮನನು (ಕಾವ್ಯಾಲಂಕಾರ ಸೂತ್ರವೃತ್ತಿ) 'ಕಾವ್ಯಂ ಗ್ರಾಹ್ಯಮಲಂಕಾರಾತ್' ಎಂದಿರುವಂತೆ ಪ್ರಾಚೀನರ ಮತದಲ್ಲಿ ಉಪಮಾನಾದಿ ಅಲಂಕಾರಗಳಿಗೆ ಹೆಚ್ಚು ಪ್ರಾಧಾನ್ಯ. ರೀತಿರಾತ್ಮಾ ಕಾವ್ಯಸ್ಯ—ಎಂದಾಗ, ಗುಣಾಲಂಕಾರಗಳು ಕಾವ್ಯದಲ್ಲಿರಬೇಕು; ಅದನ್ನು ವೈದರ್ಭೀ ರೀತಿಯಲ್ಲಿ ಬರೆಯಬೇಕು ಎಂಬುದನ್ನು ಹೇಳಿದಂತೆ ತೋರುತ್ತದೆ. ಉಚ್ಚಾರಣೆಗೆ ಮಧುರವಲ್ಲದ ಶ, ಷ, ರ, ಟ, ಹ್ಲ, ಹ್ವ, ಹ್ಯ, ಸ್ತ್ರ, ಪ್ಸ, ಮುಂತಾದುವುಗಳನ್ನು ಕವಿಯು ಉಪಯೋಗಿಸದೆ, ಕೋಮಲವಾಗಿರುವ ವರ್ಣಗಳನ್ನೇ ಉಪಯೋಗಿಸಬೇಕು: ಅಲ್ಲಲ್ಲಿ ಚಮತ್ಕಾರ ತೋರಿಸುವ ಅಲಂಕಾರಗಳಿರಬೇಕು; ಅಭಿಧಾವೃತ್ತಿ ಬಹುಮಟ್ಟಿಗಿರಬೇಕು; ಈ ವಿಚಾರಗಳು ಆ ವಾಕ್ಯದಲ್ಲಿ ಕಂಡುಬರುತ್ತವೆ. ಇದನ್ನನುಸರಿಸಿ, 'ಉದಯಾದಿತ್ಯಾಲಂಕಾರ'ದಲ್ಲಿ,

ಅಸುಗಳೆನಿಕ್ಕುಂ ಶ್ಲೇಷ ।
ಪ್ರಸಾದ ಸಮ ಮಧುರಭಾವ ಸುಕುಮಾರಾರ್ಥಾ ॥
ವಸಥೋದಾರೋಜಃ ಕಾಂ ।
ತಿಸಮಾಧಿಗಳೆಂಬ ಪೆಸರೊಳೀರೈದುಗುಣಂ ॥ ೧೪ ॥

—ಎಂದು ಹತ್ತು ಅಲಂಕಾರಗಳನ್ನು ಹೇಳಿದ್ದಾನೆ.[3] ಇವುಗಳ ಜೊತೆಗೆ ೩೫ ಅಲಂಕಾರಗಳನ್ನೂ ಯಮಕ ಪ್ರಹೇಳಿಕೆಗಳನ್ನೂ ಹೇಳಿದ್ದಾನೆ. ಕನ್ನಡ ಕೈಪಿಡಿಯಲ್ಲಿ (ಪುಟ ೩೦೧) ಅಲಂಕಾರಗಳ ಸಂಖ್ಯೆಯ ವಿಚಾರ ಹೀಗಿದೆ :

ಸಂಸ್ಕೃತದಲ್ಲಿ—ಭರತ		೪
	ದಂಡಿ, ಭಾಮಹ	
	ಉದ್ಭಟ, ವಾಮನ	೩೫
	ರುದ್ರಟ, ಮಮ್ಮಟ	೬೦
	ಚಂದ್ರಾಲೋಕ	೧೦೦
	ಕುವಲಯಾನಂದ	೧೨೦

[2] ಇದರ ವಿವರವು 'ಕನ್ನಡ ಕೈಪಿಡಿ' (ಪು. 254-5)ಯಲ್ಲಿದೆ.
[3] ಇವುಗಳ ವಿವರವನ್ನು 'ಕನ್ನಡ ಕೈಪಿಡಿ' ಪುಟ ೨೭೯—೨೮೯ರಲ್ಲಿ ನೋಡಬಹುದು.

ಕನ್ನಡದಲ್ಲಿ —ನೃಪತುಂಗ, ಉದಯಾದಿತ್ಯ

ಮಾಧವ

ನಾಗವರ್ಮ

ತಿರುಮಲಾರ್ಯ

ಅರ್ಥಾಲಂಕಾರಗಳನ್ನು (೧) ಔಪಮ್ಯ (೨) ವಿರೋಧ (೩) ಶೃಂಖ (೪) ತರ್ಕನ್ಯಾಯ (೫) ವಾಕ್ಯನ್ಯಾಯ (೬) ಲೋಕನ್ಯಾಯ (೭) ಗೂಢ ಪ್ರತೀತಿ—ಮೂಲಕವಾದವುಗಳೆಂದು ವಿಂಗಡಿಸಿ, ಐವತ್ತು ಅಲಂಕಾರಗಳ ವಿವರಿಸಲಾಗಿದೆ (ಪುಟ ೩೯೯–೩೫೦) ಇವುಗಳಲ್ಲಿ ಸಾಕಷ್ಟು ಅಲಂ ಗಳಿಲ್ಲದಿದ್ದರೆ ಅದು ಕಾವ್ಯವೇ ಅಲ್ಲ, ಎಂಬುದು ಪ್ರಾಚೀನರ ಮತ.

ಅಲಂಕಾರವು ಕೇವಲ ಅಲಂಕಾರಕ್ಕಲ್ಲ, ರಸಪ್ರಚೋದನೆಗೆ— ನಿರ್ಣಯಿಸಿ, ರಸಾತ್ಮಕವಾದ ವಾಕ್ಯಗಳಿಂದ ಕೂಡಿದ್ದೇ ಕಾವ್ಯ, ವಿಶ್ವನಾಥನು 'ಸಾಹಿತ್ಯದರ್ಪಣ'ದಲ್ಲಿ ಪ್ರತಿಪಾದಿಸಿದ. ಈ ಮತವನ್ನು ಸಾಳ್ವಕವಿಯೂ—

ರಸಮಿಲ್ಲದ ಕಾವ್ಯಂ ನೀ
ರಸಮುದಱಿಂ ರಸಮೆ ಸಾರಂ....

—ಎಂದು ಒತ್ತಿಹೇಳಿದ. ಹದಿನೇಳನೆಯ ಶತಮಾನದವರೆಗೆ ಲಕ್ಷಣ ಗ್ರ ಗಳಲ್ಲಿ ಈ ಚರ್ಚೆ ನಡೆದಂತೆ ತೋರುತ್ತದೆ: ರಸ, ಧ್ವನಿ ಮತ್ತು ಔಚಿತ್ಯ ಮೂರು ಚರ್ಚಾ ಪ್ರವಾಹಗಳು ನಮಗೆ ಕಂಡುಬರುತ್ತವೆ. ಒಟ್ಟನಲ್ಲಿ ಪ್ರಾಚೀ ಮತಾನುಸಾರವಾಗಿ ವಾಚ್ಯಾರ್ಥ, ಲಕ್ಷಣಾರ್ಥಗಳು ಕಾವ್ಯಕ್ಕೆ ಪ್ರಧಾ ನವೀನರ ಮತದಲ್ಲಾದರೆ ಆದರಲ್ಲಿನ ರಸ, ಧ್ವನಿ ಮತ್ತು ಔಚಿತ್ಯ.

೨

ಹಳಗನ್ನಡ ಕಾವ್ಯವಿಮರ್ಶೆಯ ಯತ್ನಕ್ಕೆ ರಸದ ವಿಚಾರವನ್ನು ತಿಳಿ ಕೊಳ್ಳುವುದು ಅತ್ಯಗತ್ಯ.

ಜೀವನದಲ್ಲಿ ಸುಖದುಃಖಗಳನ್ನು ಅನುಭವಿಸುವಂತೆ ನಾಟಕಾದಿಗಳಲ್ಲಿ ಸು ದುಃಖಗಳನ್ನು ಅನುಭವಿಸುತ್ತೇವೆ. ಅವು ನಮ್ಮ ಚಿತ್ತವಿಕಾರಗಳು. ಅವ ಭಾವ ಎನ್ನುವುದುಂಟು. ಈ ವಿಕಾರಗಳಲ್ಲಿ ಮಿಕ್ಕವುಗಳಿಗಿಂತ ಸ್ಥಿರವಾಗಿರು ಭಾವವನ್ನು ಸ್ಥಾಯಿಭಾವ ಎನ್ನುತ್ತೇವೆ. ಈ ಸ್ಥಾಯಿ ಭಾವಗಳೇ ಮಿಕ್ಕ ಗಳಿಂದ ಕೂಡಿ ರಸವಾಗುತ್ತವೆ. ಇಂಥ ರಸಗಳು ಒಂಬತ್ತು—ಶೃಂಗಾರ (ರತಿ) ಹಾಸ್ಯ (ವಿನೋದ); ಕರುಣ (ಶೋಕ); ರೌದ್ರ (ಕ್ರೋಧ); ವೀರ (ಉತ್ಸಾ

ಭಯಾನಕ (ಭಯ); ಬೀಭತ್ಸ (ಜುಗುಪ್ಸೆ); ಅದ್ಭುತ (ಆಶ್ಚರ್ಯ); ಮತ್ತು ಶಾಂತ (ಶಮ).[4]

ಶಿವನ ಆಜ್ಞೆಯಂತೆ ಬ್ರಹ್ಮನು ಬ್ರಹ್ಮಾಂಡವನ್ನು ಸೃಷ್ಟಿಮಾಡಿದನು. ಆಮೇಲೆ ಅವನಿಗೆ ನಾಟ್ಯ(ನಾಟಕ)ವನ್ನು ಕಲಿಸಲು ಶಿವನ ಅಪ್ಪಣೆಯಂತೆ ನಂದಿಕೇಶ್ವರನು ಬ್ರಹ್ಮನ ಬಳಿಗೆ ಬಂದು ಅವನಿಗೆ ನಾಟ್ಯ(ನಾಟಕ)ವನ್ನು ಕಲಿಸಿ ಕೊಟ್ಟನು. ತರುವಾಯ ಬ್ರಹ್ಮನು ನಟರಿಗೆ ಅದನ್ನು ಕಲಿಸಲು ಶಿವನ ಲೀಲೆಯಾದ ತ್ರಿಪುರದಹನ(ಒಂದು ಡಿಮ)ವನ್ನು ರಚಿಸಿದನು. ಆಗ ಬ್ರಹ್ಮನ ನಾಲ್ಕು ಮುಖದಿಂದಲೂ ನಾಲ್ಕು ರಸಗಳು ಉತ್ಪತ್ತಿಯಾದವು: (೧) ಶೃಂಗಾರ (೨) ವೀರ (೩) ರೌದ್ರ ಮತ್ತು (೪) ಬೀಭತ್ಸ. ಇವುಗಳಿಂದ ಮಿಕ್ಕ ರಸಗಳ ಉತ್ಪತ್ತಿ.[5]

ರಸದ ತಿಳಿವಳಿಕೆ ಹೇಗೆ? ಈ ವಿಚಾರದಲ್ಲಿ ಸಾಳ್ವಕವಿಯ ರಸರತ್ನಾಕರದಲ್ಲಿ ಹೀಗಿದೆ:—

ಒದವಿರ್ದ ಚಿತ್ತದಿಂ ತೋ।
ರ್ಪುದು ಭಾವಂ ಭಾವದಿಂದೆ ರಸಮುದಯಿಸುಗುಂ॥
ವದನಂ ಪ್ರಕಟಿಪುದಾ
ವದನದೆ ರಸಮಿಂತಿದೆಂದು ತಿಳಿಗೆ ರಸಜ್ಞರ್॥ ಸೂ. ೩॥

[ಮನಸ್ಸಿನಲ್ಲಿ ಭಾವವುಂಟಾಗುತ್ತದೆ. ಭಾವದಿಂದ ರಸ ಹುಟ್ಟುತ್ತದೆ. ವದನ (ನಾಯಕ ನಾಯಕಿಯ)ದಲ್ಲಿ ಆ ರಸವು ಕಾಣುತ್ತದೆ. ಇಂಥಾದ್ದೆಂದು ರಸಜ್ಞರು ಗ್ರಹಿಸುತ್ತಾರೆ.]


ಭಾವಂ ಮನಃಪ್ರವೃತ್ತಿ ವಿ।
ಭಾವಂ ರಸ ಪುಷ್ಟಿಯಂ ವಿಶೇಷಿಸುವುದೆ ದಲ್।
ಭಾವದೆ ಪುಟ್ಟಿದ ರಸಮಂ।
ಭಾವುಕರದನಱಿದು ಸವಿವುವೇ ಅನುಭಾವಂ॥ ಸೂ. ೪॥

[ಮನದ ಪ್ರವೃತ್ತಿಯೆ ಭಾವ. ಭಾವವು ಅದನ್ನು ಪುಷ್ಟಿಮಾಡುತ್ತದೆ. ಹೀಗೆ ಪುಷ್ಟಿಯಾದ ರಸವನ್ನು ಭಾವುಕರು ಅನುಭವಿಸುವುದೇ ಅನುಭಾವ.]

ಇದರ ವಿಚಾರವನ್ನು ಸ್ಪಷ್ಟಪಡಿಸಲು ಶೃಂಗಾರರಸಕ್ಕೆ ಭಾವವಿಭಾವ ಅನುಭಾವಾದಿಗಳನ್ನು ನೋಡೋಣ—

[4] ಕಂಸದಲ್ಲಿ ಕೊಟ್ಟಿರುವವುಗಳು ಆಯಾಯಾ ರಸದ ಸ್ಥಾಯಿಭಾವಗಳು.

[5] 'The Number of Rasas'—by V. Raghavan, The Adyar Library, Adyar, p. 9.



ಶೃಂಗಾರರಸದ ಮಹತ್ವವನ್ನು ಕವಿಕಾಮನು 'ಶೃಂಗಾರ ರತ್ನಾಕರ'ದಲ್ಲಿ ವರ್ಣಿಸಿರುತ್ತಾನೆ.

ಶೃಂಗಾರ ರಸಂ ಮಿಕ್ಕ ರ |
ಸಂಗಳ್ಗಧಿಪ್ಯವಮದನೆ ನರರೋಲಗಿಪರ್ ||
ಪಿಂಗನೆ ರೂಪಾವಯವ ಸು |
ಸಂಗತ ಯೌವನ ಮಹತ್ತು ಂಗಾರೂಢಂ || ೨೩ ||

ಅದಱಿಂ ಶೃಂಗಾರ ರಸಾ |
ಸ್ಪದಮೆಂಬುದು ಸಕಲ ಜನಕೆ ಸಾಧಾರಣಮು ||
ಪ್ಪುದಱಿಂದಭಿವರ್ಣಿಸುವೆಂ |
ಮೊದಲೊಳ್ ಶೃಂಗಾರ ರಸ ವಿಭಾಗಾಂತರಮಂ || ೨೪ ||

ಈ ಗ್ರಂಥದಲ್ಲಿ ವಿಪ್ರಲಂಭ ಶೃಂಗಾರವನ್ನು ವರ್ಣಿಸಿರುವ ಈ ಪದ್ಯವ ನೋಡಬಹುದು :

ಅರಸ ನಿಜ ಪ್ರಿಯಾಂಗನೆಗೆ ನಿನ್ನ ವಿಯೋಗದೊಳಾದ ಹೃದ್ವ್ಯಥಾಂ |
ತರಮನದೇನನೆಂದಪೆನದಕ್ಕಿನಿತರ್ಕೆ ಮನೋಜತಾಪದಿಂ ||
ತರುಣಿ ಜಲಪ್ರದೇಶಮನೊಡರ್ಚಿ ಸರೋವರಮುಂ ಪುಗಲ್ಸರೋ |
ವರಜಳವಿಂತು ಚುಯ್ಯೆನುತೆ ಬತ್ತಿದುದೆತ್ತಱಿವೆಂ ಪ್ರತಾಪಮಂ || ೬೭ |

[ನಿನ್ನ ವಿಯೋಗದಿಂದಾದ ತಾಪವನ್ನು ಏನೆಂದು ಹೇಳಲಿ? ಅವಳು ಆ ವಿರ ತಾಪದಿಂದ ಸರೋವರದ ನೀರಿನಲ್ಲಿ ಮುಳುಗಲು (ಅವಳ ತಾಪವು ಕಡಿಮೆಯಾಗುವುದ ಬದಲಾಗಿ) ಆ ಸರೋವರದ ನೀರೇ ಚುಯ್ ಎಂದು ಕಾದು ಆವಿಯಾಗಿ ಹೋ ಸರೋವರವೇ ಬತ್ತಿ ಹೋಯಿತು.]

—ಇಲ್ಲಿ ತಾಪ (ಸಾತ್ವಿಕ ಭಾವ)ವನ್ನು ವರ್ಣಿಸುವುದರ ಮೂಲಕ ವಿಪ್ರಲಂ ಶೃಂಗಾರವನ್ನು ವರ್ಣಿಸಿರುತ್ತಾನೆ.

(೧) ಸ್ತಂಭ (ಕಂಬದಂತಾಗುವುದು) (೨) ಪ್ರಲಯ (ಮೂರ್ಛೆ) (೩) ರೋಮಾಂಚ (೪) ಸ್ವೇದ (ಬೆವರು) (೫) ವೈವರ್ಣ (೬) ವೇಪಥ್ಯ (ನಡುಗುವುದು) (೭) ಅಶ್ರು (ಕಣ್ಣೀರು) (೮) ವೈಸ್ವರ್ಯ (ಸ್ವರದ ಬದಲಾವಣೆ)– ಈ ಎಂಟೂ ಸಾತ್ವಿಕ ಭಾವಗಳು.

ಸಂಚಾರಿ ಭಾವಗಳು ಮೂವತ್ತು ಮೂರು (೩೩)[6]. ಕೆಲವುಗಳಲ್ಲಿರುವ ವ್ಯತ್ಯಾಸ ನಮಗೆ ತಕ್ಷಣವೆ ಭಾಸವಾಗುವುದಿಲ್ಲ. ಉದಾ., ಆಲಸ್ಯ, ಜಡತ್ವ. ಲಕ್ಷಣ ಗ್ರಂಥಗಳಲ್ಲಿ ಅವುಗಳಿಗೆ ಕೊಟ್ಟಿರುವ ಅರ್ಥಗಳನ್ನು ಪರಿಶೀಲಿಸಬೇಕು.

ನಾಟಕ ಪ್ರದರ್ಶನದಲ್ಲಿ ರಸವನ್ನು ಗ್ರಹಿಸುವುದು ಸುಲಭ. ಏಕೆಂದರೆ ನಾವು ನಟರ ಮುಖಗಳನ್ನು ನೋಡುತ್ತೇವೆ. ಅವರ ಮಾತಿನ ರೀತಿಯನ್ನು ಗಮನಿಸುತ್ತೇವೆ. ಆದರೆ, ಕಾವ್ಯಗಳಲ್ಲಿ ಅದನ್ನು ಅಷ್ಟು ಸುಲಭವಾಗಿ ಗ್ರಹಿಸ ಲಾಗುವುದಿಲ್ಲ.

ಸಾಮಾನ್ಯವಾಗಿ ಕಾವ್ಯಗಳಲ್ಲಿ ನವರಸಗಳಿದ್ದರೂ ಒಂದು ರಸವು ಪ್ರಧಾನ ವಾಗಿರುತ್ತದೆ. ಉದಾಹರಣೆ—ಶಾಕುಂತಲ ನಾಟಕದಲ್ಲಿ ಶೃಂಗಾರ; 'ಮೃಚ್ಛಕಟಿಕ' ದಲ್ಲಿ ಹಾಸ್ಯ ; 'ಉತ್ತರ ರಾಮಚರಿತ್ರೆ'ಯಲ್ಲಿ ಕರುಣ.

ರಸಗಳಲ್ಲಿ ಮಿತ್ರತ್ವ ಶತ್ರುತ್ವಗಳುಂಟು. ಶೃಂಗಾರ ಕರುಣಗಳಿಗೂ, ವೀರ ಭಯಾನಕಗಳಿಗೂ, ಶಾಂತರೌದ್ರಗಳಿಗೂ ವಿರೋಧ ; ಶೃಂಗಾರ ಹಾಸ್ಯಗಳಿಗೂ, ವೀರಾದ್ಭುತಗಳಿಗೂ ವೀರರೌದ್ರಗಳಿಗೂ ಮೈತ್ರಿ[7]. ಆದಾಗ್ಯೂ ಪ್ರತಿಭಾವಂತರಾದ ಕವಿಗಳು ವಿರೋಧರಸಗಳನ್ನು ಕೂಡ ಒಂದೇ ಸನ್ನಿವೇಶದಲ್ಲಿ ಯಶಸ್ವಿಯಾಗಿ ಪ್ರಚೋದಿಸಬಲ್ಲರು[8] ಮುಖ್ಯವಾದ ರಸಕ್ಕೆ ಅಂಗವಾಗಿರುವ ಮಿಕ್ಕ ರಸಗಳನ್ನು ಅಲಂಕಾರಗಳೆಂದು ಭಾವಿಸಬೇಕು; ಇಂಥ ಅಲಂಕಾರಕ್ಕೆ ರಸವದಲಂಕಾರವೆನ್ನ ಬೇಕು.[9]

'ಅಪ್ರತಿಮವೀರಚರಿತೆ'ಯ ಚತುರ್ಥಪ್ರಕರಣದಲ್ಲಿ ಹೀಗಿದೆ;

"ರಸೋ ಯತ್ರ ಪರಸ್ಯಾಙ್ಗಂ
ರಸವಾನ್ ಸೋಽಭಿಧೀಯತೇ ॥"

[ವೃತ್ತಿ] ಶೃಂಗಾರಾದಿರಸಂಗಳೊಳೊಂದು ರಸಂ ಪೆಱತೊಂದು ರಸಕ್ಕಾದೊಡಂ, ನಿರ್ವೇದಗ್ಲಾನಿಶಂಕಾದಿ ಮೂವತ್ತು ಮೂಱುಂ ಭಾವಂಗಳೊಳೊಂದು ಭಾವಕ್ಕಾದೊಡಮಂಗಮಾಗೆಯದು ರಸವದಲಂಕಾರಂ.

---

[6] ಪಟ್ಟಿಯನ್ನು 'ಕನ್ನಡ ಕೈಪಿಡಿ' (ಪು. ೨೨೫)ಯಲ್ಲಿ ಕಾಣಬಹುದು.
[7] ಕನ್ನಡ ಕೈಪಿಡಿ, ಪುಟ ೨೪೧.
[8] ನೋಡಿ : ರನ್ನನ ಗದಾಯುದ್ಧಂ, IV—೩೩ರಿಂದ ೩೧ ಪದ್ಯಗಳು.
[9] ಹೋಲಿಸಿ, ಆನಂದವರ್ಧನನ ಕಾವ್ಯಮೀಮಾಂಸೆ, ಡಾ. ಕೆ. ಕೃಷ್ಣಮೂರ್ತಿ, ಶಾರದಾ ಮಂದಿರ, ಮೈಸೂರು, ೧೯೬೯, ಪು. ೮೨.

ವೃ॥ ಮಿಸುಗುವ ಮುಮ್ಮುಮುದ್ದುಸಗೆ ಪೆಲ್ನುಡಿ ಕುಂಕುಮಕೋರೆಸೋಟದಿಂ
ದಸೆಗಳಿದೆಮ್ಮನೇಹವುನಿಸಂ ಸವಿವಾಯ್ದೆರೆಯುಡಿಯುಡಿಯು
ಣ್ಬ ಸಸಿಮೊಗಂ ಪೊಗರ್ದೆಗೆದು ಮೂಗೆಟಿಪೊಚ್ಚತಮುಚ್ಚಿಮುಚ್ಚಿ ಮೂ
ಳ್ಪಸಗಿಡುದೆಂದು ಕೃಷ್ಣಪನ ರಾಣಿಯರಟ್ಟಿ ಪರಾರ್ತನಾದದಿಂ ॥

—ಇದರಲ್ಲಿ ಕೃಷ್ಣಪ್ಪನಾಯಕನ ರಾಣಿಯರ ಕರುಣರಸಕ್ಕೆ, ಶೃಂ
ಬೀಭತ್ಸಗಳೆರಡೂ ಅಂಗವಾಗಿರುವುದರಿಂದ ಇದು ರಸವದಲಂಕಾರ.

ಕನ್ನಡ ಗ್ರಂಥಗಳನ್ನು ಪರಿಶೀಲಿಸಿದಾಗ ನಮಗೆ ಈ ವಿಚಾರಗಳು ಕ
ಬರುತ್ತವೆ. 'ಕವಿರಾಜಮಾರ್ಗ'ದಲ್ಲಿ ಅಲಂಕಾರ ವಿಚಾರವಿದೆ; ರಸವಿಚಾ
'ಕಾವ್ಯಾವಲೋಕನ'ದಲ್ಲಿ (೧೨ನೆಯ ಶತಮಾನ) ನಾಲ್ಕನೆಯ ಅಧಿಕರಣ
ರೀತಿ, ಭಾವ, ರಸ, ಇವುಗಳ ವಿಚಾರವಿದೆ. 'ಉದಯಾದಿತ್ಯಾಲಂಕಾರ'
ರೀತಿ, ರಸ, ಗುಣಗಳ ವಿಚಾರ ಕಂಡುಬರುತ್ತದೆ.

ಕವಿಕಾಮನ 'ಶೃಂಗಾರರತ್ನಾಕರ' (೧೩ನೆಯ ಶತಮಾನ)ದಲ್ಲಿ ರಸವಿ
ವಿಸ್ತಾರವಾಗಿದೆ. ಇದಕ್ಕೆ 'ರಸವಿವೇಕ' ಎಂಬ ಹೆಸರೂ ಇದ್ದಂತೆ ಕಂಡುಬರು
ಇದರಲ್ಲಿ ಮೊಟ್ಟಾಯಿತವೇ ಮೊದಲಾದ ಹತ್ತು ಶೃಂಗಾರ ಚೇಷ್ಟೆಗಳನ್ನು ವಿ
ಲಾಗಿದೆ. (ದ್ವಿತೀಯ ಪರಿಚ್ಛೇದ ೫೪ರಿಂದ ೭೩ರವರೆಗೆ). ಮಾಧವನ 'ಮಾಧ
ಲಂಕಾರ'ವು ಕಾವ್ಯಾದರ್ಶದ ಭಾಷಾಂತರವಿದ್ದಂತೆ ಕಾಣುತ್ತದೆ. ರಸರತ್ನಾ
(ಸಾಳ್ವ, ೧೬ ಶತಮಾನ)ದಲ್ಲಿ ಭಾವ, ರಸ, ನಾಯಕಾನಾಯಿಕೆಯರ ವಿಚಾರ
ವಿಪುಲವಾಗಿವೆ. ನವರಸಾಲಂಕಾರ (೧೬ ಶತಮಾನ, ತಿಮ್ಮಕವಿ)ದಲ್ಲಿ ರಸಪ್ರ
ಪ್ರತಿಪಾದಿಸಲ್ಪಟ್ಟಿದೆ. ಪೂರ್ವ ಗ್ರಂಥಗಳಿಂದ ಉದಾಹರಣೆಗಳೂ
ತಿರುಮಲಾರ್ಯನ ಅಪ್ರತಿಮ ವೀರಚರಿತ್ರೆಯ ಚತುರ್ಥಪ್ರಕರಣದಲ್ಲಿ ರಸಾಲಂ
(ಏಳು)ಗಳ ವಿಚಾರ ವಿವರಿಸಲಾಗಿದೆ. [ಇದರಲ್ಲಿ "ಊರ್ಜಸ್ವಿಯೆಂಬುದು:
'ರಸಾಭಾಸಃ ಪರಸ್ಯಾಂಗಂ। ಯತ್ರೋರ್ಜಸ್ವೀ ಸ ಉಚ್ಯತೇ॥ (ವೃ
ಒಂದು ರಸಕ್ಕಾದೊಡಂ ಭಾವಕ್ಕಾದೊಡಂ ರಸಾಭಾಸಮಂಗಮಾದೊಡೆಯ
ಊರ್ಜಸ್ವ್ಯಲಂಕಾರಂ"]

೩

ನಮ್ಮ ದೃಶ್ಯಕಾವ್ಯ ಮೀಮಾಂಸವನ್ನು ಪರಿಶೀಲಿಸುವುದಕ್ಕೆ ಮುಂಚಿತವಾ
ಸಂಸ್ಕೃತ ನಾಟಕವು ಪಾಶ್ಚಿಮಾತ್ಯರ ದೃಷ್ಟಿಗೆ ಹೇಗೆ ಕಂಡುಬಂದಿದೆ ಎಂಬುದನ
ನೋಡೋಣ. ಅದಕ್ಕಾಗಿ, ಹೆನ್ರಿ ಡಬ್ಲ್ಯೂ. ವೆಲ್ಸ್ (Henry W. Wells
ರವರ ವಾಕ್ಯಗಳನ್ನು ಇಲ್ಲಿ ಕೊಟ್ಟಿರುತ್ತೇನೆ:

While the Western drama delights in surprises and look
outward, Sanskrit drama takes the opposite course. In conte

it is psychological and spiritual rather than social, ethical or intellectual; it aims to establish the felicity of equilibrium in the soul of each spectator·····················It depicts the soul in repose, not in action; its image is the seated Buddha, not the javelin—throwing Zeus······················Its ideal form is neither narratory, dynamic nor centrifugal but metaphorically speaking, musical, plateresque and magnetic. In its structure all lines lead inward, as if to the centre of a circle, to the navel of the body·····················This form may at first seem to defy the very principles of drama themselves and indeed if drama be as Aristotle declares it, the most celebrated of Sanskrit play-wrights are among the least dramatic poets. But the modern mind is strongly tempted to pass beyond the Greeks, clearly with in our own century much of the most admired dramatic poetry has moved with an ever increasing volume in the direction of the Sanskrit."[10]

ರಸ, ನಾಯಕ, ವಸ್ತು,— ಈ ಮೂರು ಅಂಶಗಳಿಂದ ಸಂಸ್ಕೃತದ ದೃಶ್ಯ ಕಾವ್ಯಗಳ ಭೇದಗಳನ್ನು ತಿಳಿಸಿರುತ್ತಾರೆ. ಅವುಗಳಲ್ಲಿ ಸುಪ್ರಸಿದ್ಧವಾದವು ದಶರೂಪಕಗಳು—೧. ನಾಟಕ ೨. ಪ್ರಕರಣ ೩. ಭಾಣ ೪. ಪ್ರಹಸನ ೫ ಡಿಮ ೬. ವ್ಯಾಯೋಗ ೭. ಸಮವಕಾರ ೮. ವೀಥಿ ೯. ಅಂಕ ಮತ್ತು ೧೦. ಈಹಾಮೃಗ. ಇವುಗಳಲ್ಲದೆ ಹದಿನೆಂಟು ಉಪರೂಪಕಗಳಿವೆ. ಇವುಗಳಲ್ಲಿ ನಾಟಿಕೆ (ರತ್ನಾವಳಿ) ಮತ್ತು ತ್ರೋಟಕ (ವಿಕ್ರಮೋರ್ವಶೀಯ), ಇವು ಪ್ರಸಿದ್ಧ ವಾದವುಗಳು.[11]

ನಾಯಕನಿಲ್ಲದಿದ್ದರೆ ರಸವಿಲ್ಲ; ಅವನು ಧೈರ್ಯ ಶೌರ್ಯ ಸೌಂದರ್ಯಾದಿ ಗುಣಗಳುಳ್ಳವನೂ ತ್ಯಾಗಿಯೂ ಧಾರ್ಮಿಕನೂ ಸಮರ್ಥನೂ ಸದ್ವಂಶಜನೂ ಆಗಿರ ಬೇಕು. ಇಂಥ ಗುಣಗಳಿಂದ ಕೂಡಿದವನು ಸಾಮಾನ್ಯ ನಾಯಕ. ಪ್ರತಿ ನಾಯಕನೂ ಹೀಗೆಯೆ ಇರಬೇಕು. ಇದಲ್ಲದೆ ವಿಶೇಷ ಲಕ್ಷಣಗಳುಳ್ಳ ನಾಯಕ ಪ್ರತಿನಾಯಕರೂ ಉಂಟು. ೧) ಧೀರೋದಾತ್ತ ೨) ಧೀರ ಲಲಿತ ೩) ಧೀರ ಪ್ರಶಾಂತ ಮತ್ತು ೪) ಧೀರೋದ್ಧತರು ವಿಶೇಷ ಲಕ್ಷಣಗಳಿಂದ ಕೂಡಿದವರು. ಇನ್ನು ಶೃಂಗಾರ ನಾಯಕರಲ್ಲಿ ದಕ್ಷಿಣ, ಧೃಷ್ಟ, ಅನುಕೂಲ ಮತ್ತು ಶಠ ಎಂದು

---

[10] The Classical Drama of India—Asia Publishing House, London, 1963, P. 32–33.

[11] ಈ ವಿಚಾರವನ್ನು 'ಕನ್ನಡ ಕೈಪಿಡಿ' (ಪುಟ ೨೪೭-೨೬೩)ಯಲ್ಲಿ ನೋಡಬಹುದು.

ನಾಲ್ಕು ವಿಧ. ಇವರೆಲ್ಲರಲ್ಲಿಯೂ ಉತ್ತಮ, ಮಧ್ಯಮ, ಅಧಮ ಎಂಬ ಮೂ ಭೇದಗಳುಂಟು. ಈ ರೀತಿಯಾಗಿ ಭೇದಗಳನ್ನು ಕಲ್ಪಿಸಿದರೆ ಒಟ್ಟು ನಲವತ್ತೆ (೪೮) ಭೇದಗಳಾಗುತ್ತವೆ (ಸಾಹಿತ್ಯ ದರ್ಪಣ III ೩೮). ಈ ರೀತಿಯ ಭೇದಗಳು ನಾಯಿಕೆಯರಲ್ಲಿಯೂ ಉಂಟು. ನಮ್ಮ ದೃಶ್ಯ ಕಾವ್ಯಗಳಲ್ಲಿ ಕಾವ್ಯಗಳಲ್ಲಿಯೂ ನಾಯಕನೊಬ್ಬನಿಂದಲೆ ಕತೆ ನಡೆಯುವುದಿಲ್ಲ. ಅವನಿಗೆ ಪ್ರತಿನಾಯಕನೂ ಬೇಕು. ಧೀರೋದಾತ್ತನಿಗೆದುರಾಗಿ ಧೀರೋದ್ಧತ ಪ್ರತಿನಾ ನಿರುತ್ತಾನೆ: ರಾಮನಿಗೊಬ್ಬ ರಾವಣ, ಭೀಮನಿಗೊಬ್ಬ ಕೌರವ.

ಇನ್ನು ವಸ್ತು (ಕಥೆ) ವಿಚಾರವನ್ನು ಗಮನಿಸಿದರೆ, ಅದನ್ನು ನಾನಾವಿಧ 'ಹೆಣೆ'ಯಬಹುದು. ಯಾವ ರಸ ಪ್ರಧಾನ ಮಾಡಬೇಕೆಂದು ಕವಿಗೆ ಇ ವಿದೆಯೋ ಆ ರಸವೇ ಪ್ರಧಾನವಾಗುವಂತೆ ಅವನು ಕಥೆಯನ್ನು ವಿವರಿಸುತ್ತಾ ಕವಿಯ ಮನೋಗತಕ್ಕೆ ಸರಿಯಾಗಿ ವಸ್ತುನಾಯಕರನ್ನು ಜೋಡಿಸಿಕೊಳ್ಳುತ್ತಾ ಇಂಥಾ ಜೋಡಣೆಗೆ ಅನುಕೂಲವಾಗಲೆಂಬ ಉದ್ದೇಶದಿಂದ ರೂಪಕಗಳ ಲಕ್ಷ ಗಳನ್ನು ರಸಜ್ಞರು ವಿವರಿಸಿರುತ್ತಾರೆ. ರಸಾಭಾಸವನ್ನು ಕೂಡ ರೂಪಕ ಉಪಯೋಗಿಸಬಹುದು. (ಈಹಾಮೃಗ, ಕನ್ನಡ ಕೈಪಿಡಿ. ಪುಟ ೨೬೨). ವ ಪ್ರಸಿದ್ಧವಾಗಿರಬಹುದು; ಕಲ್ಪಿತವಾಗಿರಬಹುದು; ಅಲ್ಲದೆ ಎರಡರ ಮಿಶ್ರ ಆಗಿರಬಹುದು. ಆಗಿನ ವಾತಾವರಣಕ್ಕನುಸಾರವಾಗಿ ರೂಪಕಗಳು ಜ ಗೊಂಡವು. ಆ ದೃಶ್ಯಕಾವ್ಯಗಳಿಂದ ಪ್ರೇಕ್ಷಕರು ಅಪೇಕ್ಷಿಸುತ್ತಿದ್ದುದು ಒಂದೇ ಅಲೌಕಿಕವಾದ ಆನಂದ.

ವಸ್ತು ಬೆಳೆಯುವ ಬಗೆಯನ್ನು ಲಾಕ್ಷಣಿಕರು ಸೂಚಿಸಿದ್ದಾರೆ. ಅದ ಒಂದು ಗಿಡದ ಬೆಳೆವಣಿಗೆಗೆ ಹೋಲಿಸಿದಂತೆ ಕಂಡುಬರುತ್ತದೆ. ಮರದ ಮೊ ಯಾಗಲು ಬೀಜವನ್ನು ನೆಡುವಂತೆ ತೋರುವ ಪ್ರಕೃತಿಯನ್ನು ಬೀಜ ಎಂದಿದ್ದಾ ಅದು (ಉಬ್ಬಿ) ಹರಡಿಕೊಂಡು ಮೊಳಕೆಯಾದಾಗ ಅದನ್ನು ಬಿಂದುವೆಂದಿದ್ದಾ ಕಥೆಯು ಮುಂದುವರಿದು ಬೆಳೆಯುತ್ತದೆ; ಇದು ಪ್ರಕರೀ. ಕೊನೆಗೆ ಕಥೆ ಪರಿಣಾಮ—ಹಣ್ಣು ಬಿಟ್ಟಂತೆ; ಇದು ಫಲಪ್ರಾಪ್ತಿ (ಕಾರ್ಯ). ಈ ನಾಲ್ಕನ್ನ ಅರ್ಥಪ್ರಕೃತಿಗಳೆಂದು ಕರೆದಿರುತ್ತಾರೆ. (ಈ ವಿಚಾರದಲ್ಲಿ 'ಪ್ರತಾಪರುದ್ರೀಯ ವನ್ನು ನೋಡಬಹುದು).

ನಾಯಕನ ದೃಷ್ಟಿಯಿಂದಲೂ ಇತಿವೃತ್ತವನ್ನು ನೋಡಬಹುದು. ೧) ಕಾರ್ಯಾರಂಭ ೨) ಯತ್ನ ೩) ಪ್ರಾಪ್ತ್ಯಾಶೆ (ಫಲಪ್ರಾಪ್ತಿಯಾಗುವುದೋ ಇಲ್ಲವೋ ಎಂಬ ಸಂಶಯ) ೪) ನಿಯತಾಪ್ತಿ (ಕಾರ್ಯವು ಕೈಗೂಡುವುದೆಂಬ ನಂಬಿಕೆ) ೫) ಫಲಾಗಮ (ಕಾರ್ಯ ಕೈಗೂಡುವಿಕೆ). ಇವು ನಾಯಕನ "ಅವಸ್ಥೆ"ಗಳು.


ಅರ್ಥಪ್ರಕೃತಿಗಳೂ ಅವಸ್ಥೆಗಳೂ ಯೋಗವಾಗಿ ಸಂಧಿಗಳಾಗುತ್ತವೆ ನಾಯಕನು ಕಾರ್ಯವನ್ನು ಆರಂಭಿಸುತ್ತಾನೆ. (ಆರಂಭ+ಬೀಜ), ಇದು ಮು

ಸಂಧಿ. ನಾಯಕನು ಪ್ರಯತ್ನಗಳನ್ನು ನಡೆಸುತ್ತಾನೆ. (ಯತ್ನ+ಬಿಂದು), ಇದು ಪ್ರತಿಮುಖ ಸಂಧಿ. ಕಥೆಯ ಬೆಳವಣಿಗೆ—ಪ್ರಕರೀ. ಇದರಲ್ಲಿ ನಾಯಕನ ಯತ್ನಗಳಿಗೆ ಅಡಚಣೆಯುಂಟಾಗಿ ಕಾರ್ಯಸಾಧನೆಯಾಗುವುದೋ ಇಲ್ಲವೋ ಎಂಬ ಸಂಶಯ ಹುಟ್ಟುತ್ತದೆ. (ಪ್ರಕರೀ+ಪ್ರಾಪ್ತ್ಯಾಶೆ) ; ಇದು ಗರ್ಭಸಂಧಿ. ನಾಯಕನು ಅಡಚಣೆಗಳನ್ನು ಗೆಲ್ಲುತ್ತಾನೆ. ಕಾರ್ಯವಾಗುತ್ತದೆ ಎಂಬ ಭರವಸೆಯುಂಟಾಗುತ್ತದೆ. (ಪ್ರಕರೀ+ನಿಯತಾಪ್ತಿ) ; ಇದು ಅವಮರ್ಶಸಂಧಿ. ಕೊನೆಯದಾಗಿ ನಾಯಕನಿಗೆ ಕಾರ್ಯವು ಕೈಗೂಡುತ್ತದೆ(ಕಾರ್ಯ+ಫಲಾಗಮ) ; ಇದು ಉಪಸಂಹೃತಿ (ಉಪಸಂಹಾರ).

೪

ರಸರೂಪಕಗಳ ವಿಚಾರವನ್ನು ಇದುವರೆಗೆ ಸ್ವಲ್ಪಮಟ್ಟಿಗೆ ನೋಡಿದ್ದಾಯಿತು. ಇನ್ನು ಧ್ವನಿಯ ವಿಚಾರವನ್ನು ಸ್ವಲ್ಪಮಟ್ಟಿಗೆ ಗಮನಿಸೋಣ.

ಧ್ವನಿ ಎಂಬುದು ವ್ಯಂಜನಾವೃತ್ತಿಯಿಂದ ಗ್ರಹಿಸುವ ಅರ್ಥ. ವ್ಯಂಗ್ಯಾರ್ಥವನ್ನು ಹೀಗೆ ವಿಂಗಡಿಸಬಹುದು :



ಆಲಂಕಾರಿಕರ ಮತದಲ್ಲಿ ಇವೆಲ್ಲವೂ ಅಲಂಕಾರಗಳೇ. ನೃಪತುಂಗನು ('ಕವಿರಾಜಮಾರ್ಗ'ದಲ್ಲಿ) 'ಧ್ವನಿಯೆಂಬುದಳಂಕಾರಂ'—ಎಂದಿರುತ್ತಾನೆ. ನೃಪತುಂಗನ ಕಾಲಕ್ಕೆ ಧ್ವನಿಗೆ ಸಾಕಷ್ಟು ಪ್ರಾಧಾನ್ಯ ಬಂದಿದ್ದಂತೆ ತೋರುವುದಿಲ್ಲ.

ಧ್ವನಿಯ ಸ್ವರೂಪವನ್ನು ತಿಳಿದುಕೊಳ್ಳಲು ಈ ಉಕ್ತಿಯನ್ನು ಪರಿಶೀಲಿಸೋಣ : 'ಅದೊಂದು ಮುದಿ ಹದ್ದು !'

೧. ಮೊದಲನೆಯ ಹಂತ : ಅದೊಂದು ಮುದಿ ಪಕ್ಷಿ (ವಾಚ್ಯಾರ್ಥ).

೨. ಎರಡನೆಯ ಹಂತ : ಅವನು ಮುದಿ ಪಕ್ಷಿಯಂತೆ ಅಪ್ರಯೋಜಕ. (ಗೌಣಾರ್ಥ ಅಥವಾ ವ್ಯಂಗ್ಯಾರ್ಥ)

೩. ಮೂರನೆಯ ಹಂತ: ಹೀಗೆಂದವನಿಗೆ ಆ ವೃದ್ಧನನ್ನು ಕಂಡರೆ ...
(ಈ ಅರ್ಥವು ಗೌಣಾರ್ಥದಿಂದ ನಮಗೆ ಹೊ...
ಮತ್ತೊಂದು ಅರ್ಥ–ಇದೇ ಧ್ವ...

ಇದನ್ನೇ ಮೀಮಾಂಸಕರು ತಾತ್ಪರ್ಯಶಕ್ತಿ ಎಂದಿದ್ದಾರೆ. ರಸ... ಆನಂದವಾಗುವಂತೆ ಧ್ವನಿಯಿಂದಲೂ ಆನಂದವಾಗುತ್ತದೆ. ಆದರೆ ಕ... ಪ್ರತಿಭೆಯನ್ನು ಬುದ್ಧಿಪೂರ್ವಕವಾಗಿ ನಾವು ಅರ್ಥಮಾಡಿಕೊಂಡರೆ ಮ... ಧ್ವನಿಯು ಬೋಧೆಯಾಗುತ್ತದೆ. ಆದುದರಿಂದ ರಸವನ್ನು ತಿಳಿದುಕೊಳ್ಳು... ಕ್ಕಿಂತಲೂ ಧ್ವನಿಯನ್ನು ಅರ್ಥಮಾಡಿಕೊಳ್ಳುವುದು ಕಷ್ಟತರ.

ಅನೇಕ ಸಂದರ್ಭಗಳಲ್ಲಿ ರಸ ಧ್ವನಿಗಳೆರಡೂ ಕೂಡಿಕೊಂಡಿರುತ್ತವೆ. ಉ... ಹರಣೆಗಾಗಿ ಚಂದಕನ ಈ ಪದ್ಯವನ್ನು ನೋಡೋಣ :—

ಕೃಷ್ಣೇನಾಂಬಗತೇನ ರಂತು ಮಧುನಾ ಮೃದ್ಭಕ್ಷಿತಾ ಸ್ವೇಚ್ಛಯಾ
ಸತ್ಯಂ ಕೃಷ್ಣಕ ಏವಮಾಹ, ಮುಸಲೀ ಮಿಥ್ಯಾಂಬ ಪಶ್ಯಾನನಮ್ ।
ವಾದೇಹಿತಿ ವಿಕಾಶಿತೇಽಥವದನೇ ದೃಷ್ಟ್ವಾ ಸಮಸ್ತಂ ಜಗ–
ನ್ಮಾತಾ ಯಸ್ಯ ಜಗಾಮ ವಿಸ್ಮಯಪದಂ ಪಾಯಾತ್ಸವಃ ಕೇಶವಃ

"ಅಮ್ಮ, ಈಗ ಆಡಲು ಹೋಗಿದ್ದ ಕೃಷ್ಣನು ಮನಸ್ಸಿಗೆ ಬಂದಷ್ಟು ಮ... ತಿಂದಿದ್ದಾನೆ."

"ಕೃಷ್ಣ, ನಿಜವೇನು ?"

"ಯಾರು ಹೀಗೆಂದವರು ?"

"ಬಲರಾಮ."

"ಸುಳ್ಳು, ಅಮ್ಮಾ, ಬಾಯೊಳಗೆ ನೀನೇ ನೋಡು,"

"ಬಾಯಿಬಿಡು."

"ಆಗಲಿ."

—ಎಂದು ಬಾಯಿ ತೆರೆದನೋ ಇಲ್ಲವೋ ಆದರೊಳಗೆ ಸಮಸ್ತ ಜಗತ್ತನ್ನ... ಕಂಡು ಯಾರ ತಾಯಿ ವಿಸ್ಮಯದಿಂದ ಪರವಶಳಾದಳೋ, ಆ ಕೇಶವನು ನಮ್ಮನ್ನು ಕಾಪಾಡಲಿ.[12]

೧. ಮೊದಲನೆಯ ಹಂತದಲ್ಲಿ : ಬಾಯಲ್ಲಿ ಸಮಸ್ತ ಜಗತ್ತನ್ನೂ ಕಂಡಳು.

೨. ಎರಡನೆಯ ಹಂತದಲ್ಲಿ: ಇದು ಎಂಥಾ ಅದ್ಭುತ! ವಿಸ್ಮಯದಿಂ...
ಪರವಶಳಾದಳು. (ಅದ್ಭುತರಸ...

---

12 ಕನ್ನಡ ಔಚಿತ್ಯ ವಿಚಾರ ಚರ್ಚೆ—ಡಾ॥ ಕೆ. ಕೃಷ್ಣಮೂರ್ತಿ, ಶಾರದಾ ಮಂದಿರ, ಮೈಸೂರು, ೧೯೬೦, ಪುಟ ೨೯.

೩. ಮೂರನೆಯ ಹಂತದಲ್ಲಿ : ಪರಮಾತ್ಮನಾದ ಶ್ರೀ ಕೃಷ್ಣನ ಉದರದಲ್ಲಿ ಸಮಸ್ತ ಬ್ರಹ್ಮಾಂಡವೂ ಅಡಗಿದೆ ಎಂದರ್ಥ ಮಾಡಿಕೊಳ್ಳುವುದು–ಧ್ವನಿ.

ಈ ಕಾರಣದಿಂದ ಕೆಲವು ಆಧುನಿಕ ಲಕ್ಷಣಕಾರರು ಇದನ್ನು ರಸ–ಧ್ವನಿ ಎಂದು ಕರೆಯುವುದೂಉಂಟು.

ಧ್ವನಿಯನ್ನು ಒಂದು ಚಿತ್ರಕ್ಕೆ ಹೋಲಿಸಬಹುದು. ಕವಿಯು ಚಿತ್ರಗಾರ. ವಾಚ್ಯಾರ್ಥವೇ ಅವನ ಕಸೂತಿ ಬಟ್ಟೆ. ಲಕ್ಷಣಾರ್ಥ ಅವನ ಕುಂಚ. ವ್ಯಂಗ್ಯಾರ್ಥವೆಂಬ ಕುಂಚದ ವೃತ್ತಿಯಿಂದ ಕವಿಯು ಧ್ವನಿಯೆಂಬ ಚಿತ್ರವನ್ನು ರಚನೆಮಾಡುತ್ತಾನೆ. ಒಂದೇ ಬಾಣದಿಂದ ಕವಚಭೇದನ, ಮರ್ಮಚ್ಛೇದನ, ಪ್ರಾಣಹರಣ, ಇವುಗಳು ಆಗುವಂತೆ ಒಂದೇ ವಾಕ್ಯದಲ್ಲಿ ರಸಧ್ವನಿ ವ್ಯಾಪಾರಗಳು ಸಾಗಬಹುದು.

"ಕಮಳದೊಳ್ ಅನಿಮಿಷಯುಗಂ ಒಪ್ಪಿತೋರ್ಪುದು, ಇಂತಿದು ಚೋದ್ಯಂ" ಎಂಬ ವಾಕ್ಯದ ವಾಚ್ಯಾರ್ಥವನ್ನು ತೆಗೆದುಕೊಂಡರೆ, ಕಮಲದಲ್ಲಿ ಎರಡು ಮೀನುಗಳು ಸೊಗಸಾಗಿ ಒಪ್ಪಿ ಕಾಣುತ್ತಿವೆ ಎಂದು ಹೇಳದಂತಾಗುತ್ತದೆ. ಈ ವಾಚ್ಯಾರ್ಥ ಅಸಂಭವ. ಕಮಲದಲ್ಲಿ ಮೀನುಗಳಿರುವುದಿಲ್ಲ. ಇದು ಕವಿಗೂ ತಿಳಿದ ವಿಚಾರವೇ. ಆದರೆ ವಾಚ್ಯಾರ್ಥವನ್ನೇ ಕಸೂತಿ ಬಟ್ಟೆಯನ್ನಾಗಿ ಉಪಯೋಗಿಸಿಕೊಂಡು ತನ್ನ ಚಮತ್ಕಾರದಿಂದ, ವ್ಯಂಗ್ಯಾರ್ಥವೆಂಬ ಕುಂಚದ ವೃತ್ತಿಯಿಂದ ಒಂದು ಮುಖದ ಚಿತ್ರವನ್ನು ಕವಿ ರಚಿಸುತ್ತಾನೆ. ಇಲ್ಲಿ ಮುಖವೇ ಕಮಲ; ಕಣ್ಣುಗಳೇ ಮೀನುಗಳು. ಮುಖ ಚೆನ್ನಾಗಿದೆ; ಅವಳು ಮೀನಾಕ್ಷಿ.

"ಮೀನುಗಳು ಕಮಲದಲ್ಲಿವೆ–ಎಂಬ ಮಾತಿನಲ್ಲಿ ಏನೋ ಸ್ವಾರಸ್ಯವಿದೆ. ಅದನ್ನು ನಾವು ಅರ್ಥಮಾಡಿಕೊಳ್ಳಬೇಕು"—ಎಂಬುದು ನಮ್ಮ ಮನಸ್ಸಿಗೆ ಬರಬೇಕು. ಇದು ಸಹೃದಯತ್ವ. ಹಾಗಾದರೆ "ಮೀನು ಕಮಲದಲ್ಲಿ ಹೇಗಿರುತ್ತೆ! ಹೇಳುವವನು ದಡ್ಡ!" ಎಂದು ನಿರಾಕರಿಸಿದರೆ, ಅದರ ಚಮತ್ಕಾರವು ನಮಗೆ ಗೋಚರವಾಗುವುದಿಲ್ಲ. ಈ ಸಹೃದಯತ್ವವನ್ನು ಭಾವನಾಮೈತ್ರಿಯೆನ್ನಬಹುದು. ರಸ ಧ್ವನಿಗಳ ಆಸ್ವಾದನೆಗೆ ಸಹೃದಯತ್ವವು ಅತ್ಯಗತ್ಯ.

೫

ಗಂಡ ಹೆಂಡಿರಿಗೆ ವರಸಾಮ್ಯ ಚೆನ್ನಾಗಿರಬೇಕು. ನಾಯಕ ನಾಯಿಕೆಯರಿಗೆ ಪರಸ್ಪರ ಅನುರಾಗವಿರಬೇಕು. ಇದು ಉಚಿತವಾದದ್ದು. ಈ ಗುಣವನ್ನೇ ಔಚಿತ್ಯ ಎಂದಿದ್ದಾರೆ. ಕಾವ್ಯಗಳಲ್ಲಿ ಈ ಔಚಿತ್ಯವು ಕಂಡುಬರಬೇಕು.

ನಾಯಕ ನಾಯಿಕೆಯರಿಗೆ ಪರಸ್ಪರ ಅನುರಾಗವಿಲ್ಲದಿರುವಾಗ ಶೃಂಗಾರರಸ ಪ್ರತಿಪಾದನೆಮಾಡುವುದು ಅನುಚಿತ, ಇದು ಅನೌಚಿತ್ಯ. ಇದನ್ನು ರಸಾಭಾಸ ಎಂದು ಕರೆಯುತ್ತಾರೆ. ಕಾಸಿನ ಸರ ಕೊರಳಲ್ಲಿರುವುದು ಉಚಿತ. ಅದನ್ನೇ

ಕಾಲಿಗೆ ಹಾಕಿಕೊಳ್ಳುವುದು ಅನುಚಿತ. ಅದು ರಸಾಭಾಸ. ಅಂಥ ಸಂದ
ಗಳಲ್ಲಿ ಅನೌಚಿತ್ಯವು ಭಾಸವಾಗಿ ನಾವು ನಗುತ್ತೇವೆ. ಹಾಗೆ ನಗುವುದೂ ಸ
ಆನಂದವನ್ನುಂಟುಮಾಡುತ್ತದೆ. ಆದುದರಿಂದ ರಸಾಭಾಸವೂ ಒಂದು ರಸ.

ಅನೌಚಿತ್ಯದ ತೀವ್ರತೆಯಿಂದ ಅಸಹ್ಯ ಹುಟ್ಟಬಹುದು. ಆಗ
ಬೀಭತ್ಸ.

ಉದಾಹರಣೆಗಾಗಿ, ಶೃಂಗಾರ ರಸಾಭಾಸಕ್ಕೆ ಕೊಟ್ಟಿರುವ ಈ ಉದಾಹ
ಯನ್ನು ಪರಿಶೀಲಿಸೋಣ :—

ಯುವಕನೊಬ್ಬನು ಮುದುಕಿಯನ್ನು ಚುಂಬಿಸಿದ. ಆಗ ಬೇರು ಸಹಿತ
ಕಳಚಿಬಂದ ಅವಳ ಹಲ್ಲು ಆ ಯುವಕನ ಗಂಟಲಿನಲ್ಲಿ ಸಿಕ್ಕಿಕೊಂಡಿತು.
ಪ್ರಯಾಸದಿಂದ ಅವನು ಅದನ್ನು ಉಗುಳಿದ.

ಇದನ್ನೋದಿದ ಕೂಡಲೆ ಕೆಲವರ ಮನಸ್ಸಿನಲ್ಲಿ ಅಸಹ್ಯ ಹುಟ್ಟಬಹು
" ಅನಿಷ್ಟ ! ಇಂಥಾದ್ದನ್ನು ಏತಕ್ಕೆ ವರ್ಣಿಸುತ್ತಾರೋ ! " ಎನ್ನಬಹುದು.
ಕೆಲವರು ಇಲ್ಲಿರುವ ಅನೌಚಿತ್ಯವನ್ನು ಗ್ರಹಿಸಿ ಗಟ್ಟಿಯಾಗಿ ನಗಬಹುದು.

ಅನೇಕ ಸಂದರ್ಭಗಳಲ್ಲಿ ರಸಾಭಾಸವನ್ನು ಅರ್ಥಮಾಡಿಕೊಳ್ಳಲು
ವಾಗುತ್ತದೆ. ಅದಕ್ಕಾಗಿ ಕ್ಷೇಮೇಂದ್ರನು ರಸಾಭಾಸದ ವಿಚಾರವಾಗಿ
ಹೇಳಿದ್ದಾನೆ :—

ಮಾವಿನ ಹುಳಿ ಉತ್ತಮವಾದ ಆಸವಕ್ಕೆ ರುಚಿಯೇರಿಸುವಂತೆ ರಸಾಭಾ
ರಸವಾಗುತ್ತದೆ.

ರಸಾಭಾಸವನ್ನು ನಾವು ಮೂರು ದೃಷ್ಟಿಗಳಿಂದ ಗ್ರಹಿಸುತ್ತೇವೆ.

(೧) ಲೋಕದ ಧರ್ಮ—ಜನರ ನಡವಳಿಕೆ.

(೨) ಪ್ರಕೃತಿ—ಮಾನವ ಸ್ವಭಾವ.

(೩) ಪ್ರವೃತ್ತಿ—ಉಡುಪು, ನಟನೆ ಇತ್ಯಾದಿ.

ಇವುಗಳ ವಿಚಾರದಲ್ಲಿ ನಮಗೆ ಸಾಕಾದಷ್ಟು ಅರಿವಿಲ್ಲದಿದ್ದರೆ ನಮಗೆ ರ
ಭಾಸವು ಅರ್ಥವಾಗುವುದು ಕಷ್ಟ. ಸಾಕಷ್ಟು ಉದಾಹರಣೆಗಳು ನಮಗೆ ಪುರಾ
ಕವಿಗಳಲ್ಲಿ ಸಿಗುತ್ತವೆ.[13]

೬

ಕಾವ್ಯಗಳನ್ನು ವಿಮರ್ಶೆಮಾಡುವಾಗ ಭಾವವೈತ್ರಿಯು ಅವಶ್ಯ
ಅದಕ್ಕಾಗಿ ಈ ಅಂಶಗಳಿಗೆ ಸಮಂಜಸವಾದ ಸಮಾಧಾನಗಳನ್ನು ಸಾ
ಹುಡುಕಬೇಕು :—

---

[13] ಹೆಚ್ಚಿನ ವಿಚಾರಗಳನ್ನು ಡಾ. ಕೆ. ಕೃಷ್ಣಮೂರ್ತಿ ಅವರ 'ಕನ್ನಡ ಔಚಿತ್ಯ ವಿಚಾ
ಚರ್ಚೆ' (ಪು. ೮೫)ಯಲ್ಲಿ ನೋಡಬಹುದು.

ಆಗಿನ ವಾತಾವರಣವು ಹೇಗಿತ್ತು ?

ಕವಿಯ ಧ್ಯೇಯ ಆದರ್ಶಗಳು ಯಾವುವು ?

ಕವಿಯು ತನ್ನ ಉದ್ದೇಶವನ್ನು ಕೃತಿಯಲ್ಲಿ ಎಷ್ಟರಮಟ್ಟಿಗೆ ಸಾಧಿಸಿರುತ್ತಾನೆ ?

ಕಾಲದೇಶಗಳಿಗೆ ಅತೀತವಾದ ಮಹತ್ತರವಾದ ಅಂಶಗಳೇನಾದರೂ ಅವನ ಕೃತಿಯಲ್ಲಿ ನಮಗೆ ಕಂಡುಬರುತ್ತವೆಯೆ ?

ಭಾವಮೈತ್ರಿಯ ವಿಚಾರದಲ್ಲಿ ವಿಮರ್ಶಕನ ವೈಯಕ್ತಿಕ ಅಭಿಪ್ರಾಯವು ಕೂಡ ಮಿಳಿತವಾಗಬಹುದು ; ಅಥವಾ ಆ ಭಾವಮೈತ್ರಿಗೆ ಅಡ್ಡಿಯಾಗಬಹುದು.

ಇನ್ನು ವಾಚ್ಯಾರ್ಥ ವಕ್ರೋಕ್ತಿಗಳ ಮೂಲಕ ಕವಿಯು ತನ್ನ ಕೃತಿಯಲ್ಲಿ ಅಪರೂಪವಾದ ಚಿತ್ರಗಳನ್ನು ಕಲ್ಪಿಸಿರಬಹುದು.

ರಸವಿಲ್ಲದ ಕಾವ್ಯ ನೀರಸ, ಕಾವ್ಯಕ್ಕೆ ಧ್ವನಿಯೇ ಆತ್ಮ; ರಸವೇ ಪ್ರಾಣ—ಎಂದಿದ್ದರೂ ಔಚಿತ್ಯವಿಲ್ಲದಿದ್ದರೆ ಅದು ಉತ್ತಮಕಾವ್ಯವಾಗಲಾರದು. ಆದಾಗ್ಯೂ ಅನೌಚಿತ್ಯದಲ್ಲಿಯೂ ಕವಿಯು ತನ್ನ ಪ್ರತಿಭೆಯನ್ನು ತೋರಿಸಿರಬಹುದು. ಯಾವ ತತ್ವದೃಷ್ಟಿಯಿಂದ ನಾವು ಕಾವ್ಯವನ್ನು ಪರಿಶೀಲಿಸಿದರೂ "ರಮಣೀಯಾರ್ಥಪ್ರತಿಪಾದಕಶ್ಶಬ್ದಃ ಕಾವ್ಯಂ" ಎಂಬ ಜಗನ್ನಾಥನ ವಾಕ್ಯವು ನಮ್ಮ ಕಿವಿಯಲ್ಲಿ ಆಡುತ್ತಲೇ ಇರುತ್ತದೆ.

ತೀರ್ಥಹಳ್ಳಿ ಜೈಪ್ರಕಾಶ

ಪ್ರಶ್ನೆ

ಮನದ ಮಿಂಚಿನೀ ಮಿಗದ ಮರಿಗೆ
ನೂರೆಂಟು ಸ್ವಪ್ನ, ಬಯಕೆಗಳ
ಕನವರಿಕೆ.
ತನ್ನದಾಗುವ ಸಮೃದ್ಧ ಹುಲ್ಲುಗಾವಲುಗಳರಸಿ
ಮೇಯಲು,
ಅಲೆದಾಟ, ಕೆಣಕಾಟ, ಸೆಣಸಾಟ !
ಈ ಹುಲ್ಲುಗಾವಲುಗಳಲ್ಲಿ ಒಂದರದ್ದಾರೂ ಸಿಕ್ಕೀತೆ
ಒಡೆತನ ಕೊನೆಗೆ ?
ಇಲ್ಲ, ಬರಿದೆ ಸ್ವಪ್ನ ಸ್ಖಲನವಾಗಿ
ಬಯಕೆಯೆಲ್ಲ ಬಯಲಾಗಿ
ಪ್ರಶ್ನೆ ಪ್ರಶ್ನೆಯೇ ಆಗುತ
ಸೊನ್ನೆಗಿಳಿಯುತ ಬಯಕೆ
ಉಳಿವುದೆ ಬರಿ ಹಲವರಿಕೆ ?

ನವ್ಯಕಾವ್ಯ : ಒಂದು ವಿವರಣೆ

ನವ್ಯಕಾವ್ಯವೆಂದು ನಾವು ಈಗ ಕರೆಯುವ ಒಂದು ಸಂಪ್ರದಾಯದ ಮೂಲಬೀಜ ಫ್ರಾನ್ಸಿನಿಂದ ಬಂದುದೆಂದು ಹೇಳುವರು. ರೊಮ್ಯಾಂಟಿಕ್ ಮತ್ತು ಇತರ ಸಂಪ್ರದಾಯವಾದಿ ಕಾವ್ಯಗಳ ವಿರುದ್ಧ ಈ ಕಾವ್ಯಪಂಥ ಹುಟ್ಟಿತೆಂದು ಸಾಮಾನ್ಯ ನಂಬಿಕೆ. ೧೮೮೦ರಿಂದ ಈಚೆಗೆ ಹುಟ್ಟಿದ ಒಂದು ಹೊಸ ಸಂಪ್ರದಾಯದ ಕಾವ್ಯ ಗಳನ್ನು ಅದರ ಹಿಂದಿನ ಕಾವ್ಯಗಳ ಜೊತೆಗೆ ಇರಿಸಿ ಹೋಲಿಸಿದರೆ ಎರಡಕ್ಕೂ ಅಂತರವಿರುವುದನ್ನು ಕಾಣಬಹುದಾಗಿದೆ. ಹೊಸದಾಗಿ ಹುಟ್ಟಿಕೊಂಡ ನವ್ಯಪಂಥದ ಕವಿಗಳು ಒಂದು ಸಾಮಾನ್ಯ ಲಕ್ಷಣವನ್ನು ಹೊಂದಿದ್ದರು, ಒಂದು ಹೊಸ ಚಳುವಳಿಯ ಸದಸ್ಯರಂತೆ. ಆದರೆ ಇವರಲ್ಲಿದ್ದ ಹೊಸ ಸಾಮಾನ್ಯ ಲಕ್ಷಣವು ಇಚ್ಛಾಪೂರ್ವಕವಾಗಿ ಮಾಡಿಕೊಂಡದ್ದಾಗಲಿ, ಒಪ್ಪಂದದ ಮೂಲಕ ಮಾಡಿ ಕೊಂಡದ್ದಾಗಲಿ ಆಗಿರಲಿಲ್ಲ. ಈ ನವ್ಯಲಕ್ಷಣವನ್ನು ಹೊಂದಿದ್ದ ಕಾವ್ಯಪಂಥ ವನ್ನು ಸಂಕೇತರೂಪಿ (Symbolism) ಎಂದು ಕರೆಯುವರು.

ನವ್ಯಕಾವ್ಯಕ್ಕೆ ಆಧಾರವಾದ ಈ ಸಿಂಬಾಲಿಸಮ್ ಪಂಥದ ಉಗಮವನ್ನು ಕುರಿತು ವಿಚಿತ್ರರೀತಿಯ ಹೇಳಿಕೆಯೊಂದಿದೆ. ಜೆರಾರ್ಡ್ ಡಿ ನರ್ವಲ್ ಎಂಬ ಫ್ರೆಂಚ್ ಕವಿಗೆ ಆಗಾಗ ಹುಚ್ಚುಹಿಡಿಯುತ್ತಿತ್ತಂತೆ. ಇದರಿಂದಾಗಿ ಇವನು ಮನಸ್ಸಿನ ಭಾವಭ್ರಮೆಗಳಿಗೂ, ವಾಸ್ತವ ಲೋಕಕ್ಕೂ ವ್ಯತ್ಯಾಸವನ್ನೇ ಕಾಣದೆ, ಸಾಂಕೇತಿಕವಾಗಿ ಬರೆಯುತ್ತಿದ್ದನಂತೆ. ರಿಂಬೊ ಎಂಬ ಮತ್ತೊಬ್ಬ ಕವಿ ಮದ್ಯಪಾನ ಮೊದಲಾದ ದುಶ್ಚಟಗಳಿಗೆ ಬಲಿಯಾಗಿ, ಜೀವನವೇ ಕಾವ್ಯವಾಗಬೇಕೆಂಬ ನಂಬಿಕೆ ಯಿಂದ ಸಾಂಕೇತಿಕವಾಗಿ ಬರೆಯುತ್ತಿದ್ದನಂತೆ.

ಹೀಗೆ ಬರೆದ ಸಾಂಕೇತಿಕ ರೂಪದ ಕಾವ್ಯದಿಂದ ಪ್ರೇರಣೆ ಪಡೆದ ಒಂದು ಸ್ವತಂತ್ರ ಪಂಥ ಫ್ರಾನ್ಸಿನಲ್ಲಿ ಹುಟ್ಟಿಕೊಂಡಿತು. ಈ ಸಂಪ್ರದಾಯದ ಕಾರಣ ಪುರುಷರ ವಿಚಾರವಾಗಿ ಸಿ. ಎಮ್. ಬೌರ ತಮ್ಮ 'Heritage of Symbolism' ಎಂಬ ಗ್ರಂಥದಲ್ಲಿ ಹೀಗೆ ಹೇಳುತ್ತಾರೆ: "A poetical movement recognised in its exponents and the chief poets of Symbolism are

Baudlaine, Verlaine and Mallarme; Baudlaine was the first to exalt the value of Symbols; Verlaine used them instinctively; and Mallarme erected a metaphysic to explain and justify them. In his theory and his practice Mallarme was the conclusion and crown of the Symbolist Movement"

ಹೀಗೆ ಫ್ರಾನ್ಸಿನಲ್ಲಿ ಹುಟ್ಟಿಕೊಂಡ ನವ್ಯಪಂಥ ಕೆಲವು ವಿಶಿಷ್ಟ ಲಕ್ಷಣಗಳನ್ನು ಹೊಂದಿದ್ದಿತು. ಸಿಂಬಾಲಿಸಮ್ ಸಂಪ್ರದಾಯದ ಸಿದ್ಧಾಂತವನ್ನು ಮಲಾರ್ಮೆ ಹೀಗೆ ಹೇಳಿದ್ದಾರೆ: "Poetry should not inform but suggest and evoke, not name things but create their atmosphere." ಇದೇ ಸಂಪ್ರದಾಯದ ಎಡ್ಗರ್ ಅಲೆನ್‌ಪೊ ಈ ಕಾವ್ಯವನ್ನು ಕುರಿತು, "A suggestive indefiniteness of vague and therefore of spiritual effect" ಎಂದು ಹೇಳಿದ್ದಾರೆ.

ಧ್ವನಿಪೂರ್ಣ ಅನಿರ್ದಿಷ್ಟತೆ ಮತ್ತು ಪ್ರಜ್ಞಾಪೂರ್ವಕ ರಚನೆ ಈ ಪಂಥದ ಕವಿಗಳ ಗುರಿಯಾಯಿತು. ಫ್ರಾನ್ಸಿನಲ್ಲಿ ಮೊದಲಾದ ಈ ಕಾವ್ಯಸಂಪ್ರದಾಯ ಇಂಗ್ಲೆಂಡಿಗೂ ಪ್ರವೇಶಿಸಿತು. ಇಲ್ಲಿ ಇದರ ಮುಂದಾಳಾಗಿ ಕೆಲಸಮಾಡಿದವನೆಂದರೆ ೧೮೪೪ರಿಂದ೧೮೮೯ರ ವರೆಗೆ ಜೀವಿಸಿದ್ದ ಹಾಪ್‌ಕಿನ್ಸ್ (Hopkins) ಎಂಬ ಕವಿ. ಒಂದು ರೀತಿಯಿಂದ ನವ್ಯಕಾವ್ಯದ ಉದಯಕ್ಕೆ ಇವನೇ ಮೊದಲಿಗ.

ಫ್ರಾನ್ಸಿನ ಸಿಂಬಾಲಿಸಮ್ ಸಂಪ್ರದಾಯವನ್ನು ಅನುಸರಿಸಿ, ಅನುಕರಿಸಿ ಇಂಗ್ಲೆಂಡಿನಲ್ಲಿ 'ಇಮೇಜಿಸಮ್' ಸಂಪ್ರದಾಯ ಬೆಳೆಯಲಾರಂಭಿಸಿತು. ಈ ಪಂಥದಲ್ಲಿ ಅನೇಕ ಜನ ಕವಿಗಳು ಬರೆದರೂ ಆಚಾರ್ಯಪುರುಷನಾದವನು ಟಿ. ಎಸ್. ಎಲಿಯಟ್‌ನ ಆರಾಧ್ಯಗುರುವಾದ ಎಜರಾ ಪೌಂಡ್ ಎಂಬುವನು.

ಇಲ್ಲಿಂದ ಮುಂದೆ ಈ ಪಂಥ ಎಲ್ಲ ಕಡೆಗೂ ಹರಡಿ ಬೆಳೆಯಲಾರಂಭಿಸಿತು. ಅನೇಕ ಉತ್ತಮ ಕವಿಗಳು ಈ ಕಾಲದಲ್ಲಿ ಕೆಲಸಮಾಡಿದರು. ಈ ಕಾಲದ ಸಾಹಿತ್ಯ ಮತ್ತು ಕವಿಗಳನ್ನು ಕುರಿತು Geoffray Bullough ಅವರು ತಮ್ಮ 'Trend of Modern Poetry' ಎಂಬ ಗ್ರಂಥದಲ್ಲಿ ಹೀಗೆ ಬರೆಯುತ್ತಾರೆ: "Poetry is not sick, though it has growing pains; The fifty years, which have produced Yeats and Eliot, Blunden, De-la-mare and Bridges, Graves, Lawrence, Read, Edith Sitwell, Owen and Sidney Keyes, Pound, Auden, Dylan-thomas and a score of others are worthy to be set beside any other half century in English Literature Since the civil war, though we still wait for a Milton, a Pope, a Wordsworth or a Browning."

ಈ ನವ್ಯಕವಿಗಳು ಕೆಲಸಮಾಡಿದ ಸಾಹಿತ್ಯ ಸಂಪೂರ್ಣವಾಗಿ ರೊಮ್ಯಾಂಟಿ

ಸಂಪ್ರದಾಯದಿಂದ ಬೇರೆಯಾದುದು ಮತ್ತು ಸ್ವತಂತ್ರವಾದುದು. ನವ್ಯತೆಯನ್ನು ಈ ಕಾಲದ ಸಾಹಿತ್ಯದಲ್ಲಿ ಗುರುತಿಸಬಹುದಾಗಿದೆ. ಈ ನಾವೀನ್ಯಕ್ಕೆ ಹಲವು ಘಟನೆಗಳು, ಸನ್ನಿವೇಶಗಳು ಕಾರಣವಾದುವು. ನವ್ಯಕಾವ್ಯವು ಕಾಲಸನ್ನಿವೇಶಗಳ ಒಂದು ಅನಿವಾರ್ಯ ಅಭಿವ್ಯಕ್ತಿಯಾಯಿತು. ಈ ವಿಷಯವಾಗಿ Geoffray Bullough ಹೀಗೆ ಬರೆಯುತ್ತಾರೆ :

"On the whole this poetry before the 1914–18 war was optimistic, sentimental and inspired by the passing moment. But with the disintegration of age-old assumption about the Nature of man and the Universe, and with the collapse of optimism in war and unrest, there arose a fierce intellectualism, a literary revolt against the cult of progress, cosmic emotion, and subjectivity accompanied by a search for impersonal concreteness and terseness of expression. The awakening of the social conscience led to a revival of satire and propogandist verse. 'Contemporaniety' involved the decline of rhetoric of formal writing and the substitution of colloquial idioms"-

ಈ ಮೇಲೆ ಹೇಳಿದ ಕಾರಣಗಳಿಂದಾಗಿ ಕಾವ್ಯದ ಶೈಲಿ, ವಸ್ತು, ಭಾಷೆ, ಛಂದಸ್ಸು ಎಲ್ಲವೂ ಬದಲಾವಣೆಯಾಗುವುದು ಅನಿವಾರ್ಯವಾಯಿತು. ಕವಿಯ ಮೇಲಾದ ಪರಿಣಾಮಗಳು ಇವುಗಳಿಗೆ ಕಾರಣಗಳಾದವು. "The modern poet, on the other hand is often both a 'rebel' against and a parasite upon his community . . . ." ಎಂದು ನವ್ಯಕವಿಯನ್ನು ಕುರಿತು ಲೂಯಿಸ್ ಮ್ಯಾಕ್‌ನೀಸ್ ತಮ್ಮ 'Modern Poetry' ಎಂಬ ಗ್ರಂಥದಲ್ಲಿ ಅಭಿಪ್ರಾಯಪಡುತ್ತಾರೆ.

ಕವಿ ಕಾಲ, ದೇಶ, ಸನ್ನಿವೇಶಗಳಿಗೆ ಒಳಗಾಗಿಯೇ ತನ್ನ ಭಾವನೆಗಳನ್ನು ಅಭಿವ್ಯಕ್ತ್ತಮಾಡಬೇಕಾಗುತ್ತ್ತದೆ. ನವ್ಯಕವಿ, ಪಾಶ್ಚಾತ್ಯ ದೇಶಗಳಲ್ಲಿ ನಡೆದ ವೈಜ್ಞಾನಿಕ ಸಂಶೋಧನೆಗಳು, ಔದ್ಯೋಗಿಕ ಕ್ರಾಂತಿಯಿಂದಾದ ಸಾಮಾಜಿಕ ಸ್ಥಿತಿಗಳು ಮತ್ತು ಹಲವಾರು ತತ್ವಗಳ ಗೊಂದಲದ ಪರಿಣಾಮವಾಗಿ ತನ್ನ ಅಭಿವ್ಯಕ್ತಿಯನ್ನು ಅನಿವಾರ್ಯವಾಗಿ ಬದಲಿಸಬೇಕಾಯಿತು. ವಾಸ್ತವಿಕ ಜೀವನ ಮತ್ತು ಜಗತ್ತು ಕವಿಗಳ ಮೇಲೆ ಹೆಚ್ಚು ಪ್ರಭಾವ ಬೀರಿದುವು. ಜೊತೆಗೆ ಸಂಪ್ರದಾಯದ ಸಾಹಿತ್ಯದಲ್ಲಿ ಮನೆಮಾಡಿಕೊಂಡ ಅವಾಸ್ತವಿಕವಾದ ಮತ್ತು ನಿತ್ಯ ಜೀವನಕ್ಕೆ ಸಂಬಂಧಪಡದ ವಿಚಾರಗಳೂ ಪ್ರೇರಣೆಗಳಾದುವು. ಸಾಂಪ್ರದಾಯಿಕ ಕಾವ್ಯದ ಜಡತೆಯಿಂದ ಬೇಸತ್ತ ಜನತೆಯೂ ಹೊಸದನ್ನು ಆಶಿಸಿತು. ಈ ಕಾರಣಗಳಿಂದಾಗಿ ನವ್ಯಕವಿ ಜೀವನಕ್ಕೂ ಕಾವ್ಯಕ್ಕೂ ನಿಕಟಸಂಬಂಧವನ್ನು ಕಾಣಲು

ಪ್ರಯತ್ನ ಮಾಡಿದ. ಸಾಹಿತ್ಯದಲ್ಲಿ ಕಲಾತ್ಮಕ ದೃಷ್ಟಿ ವಾಸ್ತವಿಕ ದೃಷ್ಟಿಯಾಗಿ ಬದಲಾವಣೆ ಹೊಂದಿತು. ಈ ವಿಚಾರವಾಗಿ ಲೂಯಿಸ್‌ಮ್ಯಾಕ್‌ನೀಸ್ ಹೀಗೆ ಬರೆಯುತ್ತಾರೆ: "Parnassionism (realism) and Symbolism in France, the poetry of the ninetees in England, and the later Imagism in America were all attempts to divorce art from life."

ನವ್ಯಕಾವ್ಯ ಹಲವು ರೀತಿಯಿಂದ ತನ್ನ ಸ್ವಾತಂತ್ರ್ಯವನ್ನು ಕಾಪಾಡಿ ಕೊಂಡಿದೆ ಎಂದು ಒಪ್ಪಿಕೊಂಡರೂ, ಮತ್ತೊಂದು ರೀತಿಯಲ್ಲಿ ಅದಕ್ಕೆ ಹೊಸ ಹುಟ್ಟನ್ನು ಆರೋಪಿಸುವುದು ಸಾಧ್ಯವಾಗುವುದಿಲ್ಲ. ಕಾವ್ಯವು ಬೆಳೆಯುತ್ತಾ ಹೋದಹಾಗೆಲ್ಲ ತನ್ನ ಪಾತ್ರವನ್ನು ಅನಿವಾರ್ಯವಾಗಿ ಬದಲಾಯಿಸುತ್ತಾ ಹೋಗುವುದು. ಒಂದು ಸಂಪ್ರದಾಯದ ಸಾಹಿತ್ಯದಲ್ಲಿ ಅತ್ಯುತ್ತಮ ಕೃತಿಗಳು ಬಂದಮೇಲೆ ಮುಂದಿನ ಕೃತಿಗಳು ಅನುಕರಣಶೀಲತೆಯಿಂದ ಕೂಡಿರುವುದರಿಂದ ಮುಂದಿನವರು ಅದಕ್ಕೆ ಬೇಸರಿಸುತ್ತಾರೆ. ಇಂಥ ಸಮಯದಲ್ಲಿ ಆ ಒಂದು ಸಂಪ್ರದಾಯವೇ ತನ್ನ ಮಾರ್ಗವನ್ನು ಬದಲಾಯಿಸಿ, ಬೇರೆ ಪಾತ್ರವನ್ನು ನಿರ್ಮಿಸಿ ಕೊಳ್ಳುತ್ತದೆ. ಈ ಕಾರಣಗಳಿಂದ ಸಂಪ್ರದಾಯದ ಕಾವ್ಯವಾಹಿನಿಗೆ ನವ್ಯಕಾವ್ಯದ ಪಾತ್ರ ಅಗತ್ಯವೂ ಅನಿವಾರ್ಯವೂ ಆಗಿ ತೋರಿತು. ಈ ಮೇಲಿನ ಅಭಿಪ್ರಾಯ ವನ್ನೇ ಮ್ಯಾಕ್‌ನೀಸ್ "..... That one and the same poetic activity produces different forms in adaptation to circumstances. There is no such break between modern poetry and traditional poetry as a superficial view might suggest" ಎಂದು ಹೇಳಿದ್ದಾರೆ.

ಈವರೆಗೆ ನವ್ಯಕಾವ್ಯದ ಉಗಮ, ಅದಕ್ಕೆ ಕಾರಣ, ಅದರ ಆವಶ್ಯಕತೆ ಮತ್ತು ಅದರ ಕವಿಮನೋಧರ್ಮಗಳನ್ನು ಕುರಿತು ಸ್ವಲ್ಪಮಟ್ಟಿಗೆ ವಿವೇಚನೆ ಮಾಡಿ ದ್ದಾಯಿತು. ಮುಂದೆ, ನವ್ಯಕಾವ್ಯವು ಒಂದು ಸ್ವತಂತ್ರ ಸಂಪ್ರದಾಯ ಅಥವಾ ಪಂಥವಾಗಬಲ್ಲುದೆ? ಆಗುವುದಾದರೆ ಅದರ ಲಕ್ಷಣಗಳೇನು? ಎಂಬುದನ್ನು ವಿವೇಚಿಸಬೇಕು; ರೊಮ್ಯಾಂಟಿಕ್ ಸಂಪ್ರದಾಯದ ಕಾವ್ಯದಿಂದ ನವ್ಯಕಾವ್ಯ ಎಷ್ಟರಮಟ್ಟಿಗೆ ಸ್ವತಂತ್ರವಾಗಿದೆ ಎಂಬುದನ್ನು ತಿಳಿಯಬೇಕು. ನವ್ಯಕಾವ್ಯದ ನವ್ಯತೆ ಇರುವುದು ಅದರ ಭಾಷೆಯಲ್ಲಿಯೇ? ವಸ್ತುವಿನಲ್ಲಿಯೇ? ಶೈಲಿಯಲ್ಲಿಯೇ? ಅಥವಾ ಛಂದಸ್ಸಿನಲ್ಲಿಯೇ? ವಿವೇಚಿಸುವುದಗತ್ಯ.

ನವ್ಯಪಂಥದ ಕಾವ್ಯವನ್ನು ಅದರ ಹಿಂದಿನ ರೊಮ್ಯಾಂಟಿಕ್ ಸಂಪ್ರದಾಯದ ಕಾವ್ಯದೊಡನೆ ಹೋಲಿಸಿದರೆ, ನವ್ಯಕಾವ್ಯದ ವಸ್ತು, ಭಾಷೆ, ಶೈಲಿ ಮತ್ತು ಛಂದಸ್ಸುಗಳಲ್ಲಿ ಬದಲಾವಣೆಯನ್ನೂ ಹೊಸತನವನ್ನೂ ಕಾಣಬಹುದಾಗಿದೆ. ಹೀಗೆಂದ ಮಾತ್ರಕ್ಕೆ ಈ ಎರಡಕ್ಕೂ ಸಮಾನ ಲಕ್ಷಣಗಳಿಲ್ಲವೆಂದಲ್ಲ. ಹಿಂದಿನದರ ಪ್ರಭಾವ ಮುಂದಿನದರ ಮೇಲೆ ಆಗಿದೆ. ಒಂದು ರೀತಿಯಿಂದ ಹಳೆಯದೇ ಬೆಳೆದು

ಹೊಸದಾಯಿತು. ಆದ್ದರಿಂದ ನವ್ಯಕಾವ್ಯದ ಪ್ರತಿಯೊಂದು ಅಂಶವೂ ಸಂಪ್ರದಾಯ ಕಾವ್ಯದ ಕನಸು ಎಂದು ಹೇಳಬಹುದು. ಈ ವಿಚಾರದಲ್ಲಿ ಶ್ರೀ ಗೋಕಾಕರು "ಆಧುನಿಕ ಕಾವ್ಯಮಾರ್ಗದ ಪಾರ್ಶ್ವದಲ್ಲಿಯೇ ನವ್ಯತೆಯು ತಲೆದೋರಿತ್ತು ; ಬಳಕೆಗನ್ನಡದ ಪ್ರೀತಿ, ಛಂದಸ್ಸಿನಲ್ಲಿ ಹೆಚ್ಚಿನ ಸ್ವಾತಂತ್ರ್ಯ, ಪ್ರತಿಮಾ ಪ್ರಧಾನತೆ, ವಾಸ್ತವಿಕ ಚಿತ್ರಸೃಷ್ಟಿ, ಪಾರಿಭಾಷಿಕ ಶೈಲಿ–ಇವು ಕಾಣಿಸಿಕೊಂಡಿದ್ದವು. ಕಾವ್ಯಕ್ಕೆ ಅಸಮರ್ಪಕವೆಂದು ತೋರಿಬರುವ ವಸ್ತುವಿಗೂ ಸ್ಥಾನ ಸಿಕ್ಕಿತು. ಆಧುನಿಕ ಕಾವ್ಯಮಾರ್ಗ ಕಾವ್ಯದ ಆತ್ಮವನ್ನು ನಿಚ್ಚಳವಾಗಿ ಒಡಮೂಡಿಸಿದೆ. ಅಂತೇ ಅಸಂಖ್ಯಾತ ಅವತಾರಗಳ ಅಭಿಲಾಷೆಯಿದ್ದ ಈ ಆತ್ಮ ಮರೆಗೆ ಬೆಳೆದಿದ್ದ ನವ್ಯತೆಯನ್ನೇ ಮುಂದುಮಾಡಿ ಇನ್ನೊಂದು ಶರೀರದಲ್ಲಿ ಅವತರಿಸಲು ಹವಣಿಸುತ್ತದೆ" ಎಂದಿದ್ದಾರೆ. ಆದರೆ ಈ ಲಕ್ಷಣಗಳ ಇಂದಿನ ಸ್ಥಿತಿ ಹಿಂದಿಗಿಂತ ನವ್ಯವಾಗಿರುವುದರಲ್ಲಿ ಸಂಶಯವಿಲ್ಲ. ಈ ಕಾರಣದಿಂದ ನವ್ಯಕಾವ್ಯದ ವಸ್ತು, ಭಾಷೆ, ಶೈಲಿ ಮತ್ತು ಛಂದಸ್ಸುಗಳನ್ನು ಕುರಿತು ಸ್ವಲ್ಪಮಟ್ಟಿಗೆ ವಿವೇಚಿಸುವುದು ಅಗತ್ಯವಾಗಿದೆ.

ನವ್ಯಕಾವ್ಯದ ವಸ್ತು, ಹಿಂದೆಯೇ ನೋಡಿದಂತೆ, ವಾಸ್ತವಿಕಲೋಕಕ್ಕೆ, ಜೀವನಕ್ಕೆ ಸಂಬಂಧಪಟ್ಟದ್ದು ; ವಾಸ್ತವಿಕ ಜೀವನದ ವಿವಿಧ ಸ್ತರಗಳೇ ಅದರ ಹಂದರ. ವೈಜ್ಞಾನಿಕವಾಗಿ, ಔದ್ಯೋಗಿಕವಾಗಿ ವಾಸ್ತವಿಕ ಜೀವನದಲ್ಲಿ ಮಾರ್ಪಾಟಾಗಿರುವುದು ಸತ್ಯ. ಈ ಕಾರಣದಿಂದ ವ್ಯಕ್ತಿಯ ಜೀವನದಲ್ಲಿ ಗೊಂದಲ ಗಡಿಬಿಡಿಗಳು, ಲೌಕಿಕ ಚಿಂತನೆಗಳು ಹೆಚ್ಚು ಪ್ರಧಾನವಾಗಿವೆ. ಆದ್ದರಿಂದ ನವ್ಯಕವಿಯ ವಸ್ತು ದಿನನಿತ್ಯದ ಜೀವನಕ್ಕೆ ಸಂಬಂಧಪಟ್ಟ ವಾಸ್ತವಿಕ ಸಂಗತಿಗಳು. ನವ್ಯಕವಿಗಳ ಈ ದೃಷ್ಟಿ ಒಂದು ರೀತಿಯಲ್ಲಿ ಅತಿರೇಕಕ್ಕೆ ಹೋಗುತ್ತಿದೆ. ಎಡ್‌ವರ್ಡ್ ಅಪ್‌ವರ್ಡ್ ಎಂಬುವರು "That no writer now can write well unless he is an active member of the worker's movement" ಎಂದು ಹೇಳುವ ಅತಿರೇಕದ ಸ್ಥಿತಿಗೆ ಹೋಗಿದೆ. ಈ ಅಭಿಪ್ರಾಯವೇ ನವ್ಯಕಾವ್ಯದ ಕ್ಲಿಷ್ಟತೆಗೆ ಕಾರಣವಾಯಿತೆಂದು ಕಾಣುತ್ತದೆ. ವಿಜ್ಞಾನ, ವಾಸ್ತವಿಕ ಜೀವನದ ಯಥಾವತ್ತಾದ ವಿಷಯುಗಳು ಕಾವ್ಯಕ್ಕೆ ವಸ್ತುವಾಗುವುವು ಎಂಬುದರಲ್ಲಿಯೂ ಕ್ಲಿಷ್ಟತೆ ಮನೆಮಾಡಿದಂತೆ ಕಾಣುತ್ತದೆ. ಶ್ರೀ ಗೋಕಾಕರು ಒಂದು ಕಡೆ "ನಾವು ನ್ಯೂಟನ್ನನ ಅಮೂಲ್ಯವಾದ ಸಂಶೋಧನೆಯನ್ನು ಕುರಿತು ಒಂದು ಮಹಾಕಾವ್ಯವನ್ನು ಬರೆಯಬಹುದು" ಎನ್ನುತ್ತಾರೆ. ನ್ಯೂಟನ್ನನ ಸಂಶೋಧನೆಯ ಮೇಲೆ ಮಹಾಕಾವ್ಯವೊಂದನ್ನು ಬರೆಯುವುದಾದರೆ ಅದೊಂದು ಶಾಸ್ತ್ರಗ್ರಂಥವಾದೀತು. ಅಥವಾ ನ್ಯೂಟನ್ನನ Centre of Gravitation ಸಿದ್ಧಾಂತವನ್ನೇ ಮಹಾಕಾವ್ಯವೆಂದು ಒಪ್ಪಿಕೊಳ್ಳಬಹುದು. ಕಾವ್ಯದಲ್ಲಿ ಅತಿವಾಸ್ತವಿಕತೆಯನ್ನು ಅರಸಿ, "ಕಾವ್ಯದಲ್ಲಿ ವೈಜ್ಞಾನಿಕ ದೃಷ್ಟಿ ಏನಿದೆ" ಎಂದು ಕೇಳುವವರಿಗೆ "ವಿಜ್ಞಾನದಲ್ಲಿ ಕಾವ್ಯದ ದೃಷ್ಟಿ ಏನಿದೆ" ಎಂದು ಪ್ರಶ್ನೆ ಹಾಕಬಹುದಾಗಿದೆ. ಅಂತಲ್ಲದೆ ಕಾವ್ಯದ

ಗುರಿಯನ್ನು ಮರೆತು ಶಾಸ್ತ್ರ ಮತ್ತು ಕಾವ್ಯಗಳ ಕೂಡುಹಾದಿಯ ಕಡೆ ನವ್ಯಕಾವ್ಯ ಹೊರಟಂತೆ ಕಾಣುತ್ತದೆ.

ನವ್ಯಕಾವ್ಯ ವಸ್ತುವಿನ ಆಯ್ಕೆಯಲ್ಲಿ ಸ್ವಸಂಪೂರ್ಣತೆಯನ್ನು ಪಡೆದಿ... ವೇನೋ ಅನ್ನಿಸುತ್ತಿದೆ. ಮಹಾವ್ಯಕ್ತಿಗಳ ಜೀವನವನ್ನು ಕುರಿತು, ಪ್ರಕೃತಿ... ಆರಾಧನೆಯನ್ನು ಕುರಿತು, ಆಧ್ಯಾತ್ಮಿಕ ಮಟ್ಟದ ಅಲೌಕಿಕ ಸಂಗತಿಗಳನ್ನು ಕುರಿ... ನವ್ಯಕಾವ್ಯ ಪೂರ್ಣದೃಷ್ಟಿಯಿಂದ ನೋಡಿಲ್ಲವೆಂದೇ ತೋರುತ್ತದೆ. ಪ್ರಕೃತಿ ವಸ್ತು... ವಾಗಿದ್ದರೂ, ನವ್ಯಕವಿಗಳಿಗೆ ವಿಕೃತಿಯಾಗಿ ಕಂಡಂತಿದೆ.

ಈ ದೃಷ್ಟಿಯಿಂದ ನೋಡಿದಾಗ, ಸಮಕಾಲೀನ ಜಗತ್ತಿನ ಮಾನವ ಮನಸ್ಸಿ... ಅಸ್ವಸ್ಥತೆ, ಗೊಂದಲ ಗಡಿಬಿಡಿಗಳನ್ನು ಚಿತ್ರಿಸುವುದಕ್ಕೆ, ನಿಗೂಢ ರಹಸ್ಯಗಳನ್ನು ಚಿತ್ರಿಸುವುದಕ್ಕೆ ನವ್ಯಕಾವ್ಯ ಸಮರ್ಥವಾದಷ್ಟು, ಮಾನವನ ಊರ್ಧ್ವಮು... ಚಿಂತನೆಯನ್ನು, ದಾರ್ಶನಿಕ ತತ್ವವನ್ನು ಚಿತ್ರಿಸುವಲ್ಲಿ ಅಸಮರ್ಥವಾಗಿದೆ ಎಂ... ಹೇಳಬಹುದು.

ಈ ದೃಷ್ಟಿಯಿಂದ ಕಾವ್ಯವು ಜೀವನದ ಶುದ್ಧ ಪಡಿಯಚ್ಚಾಗದಿರುವ... ಒಳ್ಳೆಯದು. ಮ್ಯಾಕ್‌ನೀಸ್‌ರ ಮಾತುಗಳಲ್ಲಿ " The relation between li... and literature is almost impossible to analyse, but it shoul... not be degraded into something like the translation of o... language into another " ಎಂದು ಹೇಳಬಹುದು.

ಕಾವ್ಯದಲ್ಲಿ, ಜನರಿಗೆ ಸುಲಭವಾಗಿ ಅರ್ಥವಾಗುವ, ಜನರು ಬಳಕೆಮಾಡು... ಭಾಷೆಯನ್ನೇ ಪ್ರಯೋಗಿಸಬೇಕೆಂಬ ಹೋರಾಟ ಹಿಂದಿನಿಂದಲೂ ನಡೆದಿ... ರೊಮ್ಯಾಂಟಿಕ್ ಸಂಪ್ರದಾಯದ ಹಿರಿಯ ಕವಿ ವರ್ಡ್ಸ್‌ವರ್ತನು ಜನಸಾಮಾನ್ಯ... ಭಾಷೆಯನ್ನೇ ಕಾವ್ಯದಲ್ಲಿ ಬಳಸುತ್ತೇನೆಂದು ಹೇಳಿಕೊಂಡಿದ್ದಾನೆ. ಆ ಪ್ರತಿ... ಯನ್ನೇ ನವ್ಯಪಂಥದವರು ಮುಂದಿಟ್ಟುಕೊಂಡಿದ್ದಾರೆ. ಕವಿಯಾದವನು ತ... ಕಾಲದ, ಪರಿಸರದ ಭಾಷೆಯಲ್ಲೇ ಕಾವ್ಯರಚನೆ ಮಾಡುವುದು ಆವಶ್ಯಕ ಹಾ... ಅನಿವಾರ್ಯ; ಕೇವಲ ಪಾಂಡಿತ್ಯಪ್ರದರ್ಶನಕ್ಕಾಗಿ ಬರೆದ ಸಾಹಿತ್ಯ ಅನ... ವಾದದ್ದು. ಈ ದೃಷ್ಟಿಯಿಂದ ನವ್ಯಪಂಥದ ಪ್ರತಿಜ್ಞೆ ಮೆಚ್ಚುಗೆಗೆ ಪಾತ್ರವಾಗಿ...

ಮತ್ತೆ ಇಲ್ಲಿಯೂ ತೊಡಕುಗಳುಂಟು. ಕವಿ ತನ್ನ ಕಾಲದ, ತನ್ನ ಪರಿಸ... ತನ್ನ ಜನರ ಭಾಷೆಯನ್ನು ಬಳಸುವಾಗ ವಿಶಾಲ ಪ್ರಜ್ಞೆಯೇ ಅವನಿಗೆ ಮಾ... ದರ್ಶಕವಾಗಬೇಕು. ತನಗೆ ಅತಿನಿಕಟವಾದ ಒಂದು ಪರಿಸರದ ... ಭಾಷೆಯನ್ನು ಬಳಸುವುದರಿಂದ ಬೇರೆ ಪರಿಸರದ ಭಾಷೆಯನ್ನಾಡುವ ಓದುಗ... ಅರ್ಥವಾಗದಿರಬಹುದು. ಇಲ್ಲಿಯೂ ಅತಿರೇಕ ಅತಿವಾಸ್ತವಿಕತೆಗಳೂ ಕ್ಲಿಷ್ಟ... ಕಾರಣವಾಗಬಹುದು.

ಕೆಲವು ಬಾರಿ ಆಡುವ ಮಾತನ್ನು ಇದ್ದ ಹಾಗೆಯೇ ಕಾವ್ಯದಲ್ಲಿ ಬಳಸು...

ರಿಂದ ಅರ್ಥಸ್ಫುರಣೆಗೆ ತೊಡಕಾಗಬಹುದು. ಭಾಷೆಯನ್ನು ಉಚ್ಚರಿಸುವಾಗ ಧ್ವನಿಯ ಏರಿಳಿತಗಳಿಂದ, ಪಲುಕುಗಳಿಂದ ಭಾವವನ್ನು ಸುಲಭವಾಗಿ ಗ್ರಹಿಸಲು ಸಾಧ್ಯ. ಆದರೆ ಬರವಣಿಗೆಯ ಭಾಷೆಯಲ್ಲಿ ಈ ಸೌಲಭ್ಯವಿಲ್ಲದ್ದರಿಂದ ನವ್ಯಕವಿ ಅರ್ಥ, ಭಾವದ ಕಡೆ ಗಮನವಿಟ್ಟು ಭಾಷೆಯನ್ನು ಉಪಯೋಗಿಸಬೇಕಾಗುತ್ತದೆ.

ನವ್ಯಕಾವ್ಯದ ಭಾಷೆಯಲ್ಲಿ ಪರಭಾಷೆಯ ಶಬ್ದಗಳು ಹೇರಳವಾಗಿ ಬಳಕೆ ಯಾಗುತ್ತಿವೆ. ಓದುಗನ ಭಾಷಾಪರಿಮಿತಿಯನ್ನು ಮರೆತು ನವ್ಯಕವಿ ತನ್ನ ಪರಭಾಷಾ ಪಾಂಡಿತ್ಯ ಪ್ರದರ್ಶನ ಮಾಡುವುದೂ ಕ್ಲಿಷ್ಟತೆಗೆ ಕಾರಣವಾಗಬಹುದು. ನವ್ಯಕವಿಗೆ ನೈಜತೆಗಿಂತ ಶಬ್ದಪ್ರದರ್ಶನ ಚಾಪಲ್ಯವಿರಬಾರದೇನೊ.

ನವ್ಯಕಾವ್ಯದಲ್ಲಿ ಅತಿ ಮುಖ್ಯವಾದುದು ಅದರ ಪ್ರತೀಕಮಯವಾದ ಶೈಲಿ. ನವ್ಯತೆಯಿರುವುದೇ ಇದರಲ್ಲಿ ಎಂದು ಹೇಳಬಹುದು. ನವ್ಯಕಾವ್ಯದಲ್ಲಿ ನಿರಂತರ ವಾಗಿ ಬಳಕೆಯಾಗುವ ಪ್ರತಿಮೆ ಪ್ರತೀಕಗಳೇ ಈ ಸಂಪ್ರದಾಯದ ವೈಶಿಷ್ಟ್ಯದಲ್ಲಿ ಪ್ರಧಾನವಾಗಿವೆ. ಈ ವಿಷಯದಲ್ಲಿ ಶ್ರೀ ಗೋಕಾಕರು ಹೀಗೆ ಹೇಳುತ್ತಾರೆ: "ಪ್ರತೀಕಗಳೇ ನವ್ಯಕಾವ್ಯದಲ್ಲಿ ಅರ್ಥದ ಮೈಲುಗಲ್ಲುಗಳಾಗುತ್ತವೆ. ಅರ್ಥದ ರಹದಾರಿಯಿರದೆ ಬರಿ ಮೈಲುಗಲ್ಲಿನಿಂದ ಮೈಲುಗಲ್ಲಿಗೆ ಕವಿಯು ಜಿಗಿಯುವಂತೆ ನಮಗೆ ಭಾಸವಾಗುತ್ತದೆ. ಭಾವಾವೇಶಕ್ಕಿಂತ ಸಂಯಮ (ಬುದ್ಧಿ?) ಹೆಚ್ಚಾ ಗಿರುವ ಕಾವ್ಯದಲ್ಲಿ ಹೀಗಾಗುವುದು ಸಾಧ್ಯ. ಅರ್ಥವನ್ನೆಲ್ಲಾ ಪ್ರತಿಮಾ ಸೃಷ್ಟಿ ಯಲ್ಲಿ ಬಚ್ಚಿಡಲು ನವ್ಯಕವಿಯು ಹವಣಿಸುವಂತೆ ನಮಗೆ ತೋರುತ್ತದೆ". ನವ್ಯ ಕಾವ್ಯದ ಈ ಪ್ರತಿಮಾ ಪ್ರಪಂಚವನ್ನು ಪ್ರವೇಶಿಸುವುದೇ ಹಲವುಬಾರಿ ಕಷ್ಟವಾಗು ತ್ತದೆ. ಒಂದೊಂದಕ್ಕೂ ಅರ್ಥದ, ಭಾವದ ಸೇತುವೆಯಿಲ್ಲದೆ ಬೇರೆ ಬೇರೆ ನಿಂತಂತೆ ಕಾಣುತ್ತದೆ.

ಪ್ರತಿಮೆಗಳು ನವ್ಯಕಾವ್ಯದಲ್ಲಿ ಹಲವು ಬಾರಿ ಬುದ್ಧಿಪೂರ್ವಕವಾಗಿ, ಯತ್ನ ಪೂರ್ವಕವಾಗಿ ಬರುವುದರಿಂದ ಕ್ಲಿಷ್ಟತೆಗೆ ಕಾರಣವಾಗುತ್ತವೆ. ಪ್ರತಿಮೆಗಳು ಸಹಜವಾಗಿ ಮೂಡಿಬಂದ ಬಾಹ್ಯರೂಪ. ಪ್ರತಿಮೆಗಳ ಬಗ್ಗೆ ಕುವೆಂಪು ಅವರು ಹೀಗೆ ಬರೆಯುತ್ತಾರೆ: "ಮೂಲಾನುಭವಕ್ಕೂ ಅದರ ಸಾಂಕೇತಿಕ ಪ್ರತಿಮೆಗೂ ಅತ್ಯಂತ ನಿಕಟವೂ ವಿಶ್ಲೇಷಣದೂರವೂ ಆದ ಜೀವಸಂಬಂಧವಿರುತ್ತದೆ. ಪ್ರತಿಮೆ ಯೆಂಬುದು ಮೂಲಾನುಭವಕ್ಕೆ 'ನಾವು' ನೀಡುವ ಆಕಾರವಲ್ಲ. ಅದು ಮೂಲಾನುಭವವು ತನಗೆ ಅನಿವಾರ್ಯವೂ ಆವಶ್ಯಕವೂ ಆಗಿರುವ ಸಹಜಧರ್ಮ ಪ್ರೇರಣ ಶಕ್ತಿಯಿಂದ ಪಡೆಯುವ ರೂಪಧಾರಣೆ. ಅದೊಂದು ಅವತರಣ ಕ್ರಿಯೆ."

ನವ್ಯಕಾವ್ಯದಲ್ಲಿ ಹಲವು ಬಾರಿ ಪ್ರತಿಮೆ ಪ್ರತೀಕಗಳು ಪ್ರಚುರವಿಲ್ಲದ ವೈಜ್ಞಾನಿಕ ಸಿದ್ಧಾಂತಗಳಿಂದ, ತತ್ವಗಳಿಂದ ಕೊಡಲ್ಪಡುತ್ತವೆ. ಹೀಗೆ ಬಳಕೆ ಯಾದ ಪ್ರತಿಮೆಗಳು ಸಹೃದಯನ ಅರ್ಥಗ್ರಹಣಕ್ಕೆ ಅಡ್ಡಿಯಾಗಬಹುದು.

ಕಾವ್ಯದಲ್ಲಿ ಧ್ವನಿಶಕ್ತಿಯನ್ನು, ಸಹಜತೆಯನ್ನು ಹೆಚ್ಚುಮಾಡಲು ಈ ಪ್ರತಿಮೆ

ಪ್ರತೀಕಗಳು ನವ್ಯಕಾವ್ಯದ ತಂತ್ರವಾಗಿವೆ. ಆದರೆ ಪ್ರತಿಮೆ ಪ್ರತೀಕಗಳ ಧ್ವನ್ಯರ್ಥ ಅರಿವಾಗಬೇಕಾದರೆ ಮೊದಲು ಅವುಗಳ ವಾಚ್ಯಾರ್ಥ ಅರಿವಾಗಬೇಕು. ಹಲವು ಬಾ ವಾಚ್ಯಾರ್ಥವೇ ಅರಿವಾಗುವುದಿಲ್ಲ. ಎಷ್ಟೆಲ್ಲ ಎಚ್ಚರಿಕೆ ವಹಿಸಿದರೂ ನವ್ಯಕಾವ್ಯ ಕ್ಲಿಷ್ಟತೆಗೆ ನವ್ಯಕವಿ ಹೇಗೆ ಕಾರಣನೋ ಹಾಗೆಯೇ ಅದರ ಓದುಗನೂ ಕಾರಣ ವಾಗುತ್ತಾನೆ. ಆದ್ದರಿಂದ ನವ್ಯಕಾವ್ಯದ ಓದುಗನಿಗೂ ಕೆಲವು ಅರ್ಹತೆಗಳು ಅಗತ್ಯವಾಗಿ ಬೇಕಾಗುತ್ತವೆ. ಈ ದೃಷ್ಟಿಯಿಂದ ನವ್ಯಕಾವ್ಯದ ಓದುಗನಿಗೆ ತನ್ನ ಕಾಲದ, ದೇಶದ, ಜನದ ಸ್ಥಿತಿಗತಿ, ಹಾಗೂ ಭಾವನೆ, ಭಾಷೆ, ನಾಗರಿಕತೆ, ಔಪಯೋಗಿಕ ವಸ್ತುಗಳು, ಪುರಾಣ, ಇತಿಹಾಸ, ಗಾದೆ, ನಂಬಿಕೆ ಇವೆಲ್ಲವುಗಳ ಸ್ಥೂಲಪರಿಚಯ, ಪ್ರಜ್ಞೆ ಕನಿಷ್ಠ ಅರ್ಹತೆಗಳು.

ನವ್ಯಕಾವ್ಯದ ಛಂದಸ್ಸು ಅದರ ಹೊರರೂಪದಲ್ಲಿ ಪ್ರಾಧಾನ್ಯವನ್ನುಂಟು ಮಾಡಿದೆ. ಕಾವ್ಯಕ್ಕೆ ಛಂದಸ್ಸು ಅಗತ್ಯವೇ ಎಂಬ ಪ್ರಶ್ನೆಗೆ ನವ್ಯಕಾವ್ಯ ಸಮ ರ್ಪಕವಾಗಿಯೇ ಉತ್ತರಿಸಿದೆ. ನವ್ಯಕಾವ್ಯದ ಛಂದಸ್ಸಿನ ಬಗ್ಗೆ ಗೋಕಾಕರು "ರಸ ಧ್ವನಿಗಳ ನೆರಳಾಗಬೇಕು ಛಂದಸ್ಸು" ಎಂದು ಹೇಳಿದ್ದಾರೆ. ನವ್ಯಕಾವ್ಯ ದಲ್ಲಿ ಅರ್ಥ ಮತ್ತು ಭಾವಕ್ಕೆ ತಕ್ಕಂತೆ ಛಂದಸ್ಸು, ಲಯ ಬದಲಾವಣೆಯಾಗುತ್ತದೆ. ಇದರಲ್ಲಿ ಒಂದು ಸಾಮಾನ್ಯ ಲಯವನ್ನು ಗುರುತಿಸಬಹುದಾದರೂ ನಿಯತವಾದ ತಾಳಬದ್ಧವಾದ ಛಂದಸ್ಸು ಇದಕ್ಕಿಲ್ಲ. 'ಸ್ವಚ್ಛಂದಛಂದ' ಎಂಬ ಪದಕ್ಕೆ ಛಂದಸ್ಸು ಇಲ್ಲದ್ದು ಎಂದು ಅರ್ಥವಿಸದೆ, ಕವಿಯು ಸ್ವೇಚ್ಛೆಯಾದ ಛಂದಸ್ಸು ಎಂದೆನ್ನಬೇಕು. ಛಂದಸ್ಸೇ ಇಲ್ಲದಿದ್ದರೆ ಗದ್ಯವಾಗುತ್ತಿತ್ತು. ಆದರೆ ನವ್ಯಕಾವ್ಯಕ್ಕೆ ಛಂದಸ್ಸಿದೆ.

ನವ್ಯಕಾವ್ಯದ ಛಂದಸ್ಸಿನ ಬದಲಾವಣೆಗೆ ಕಾರಣಗಳೆಂದರೆ ರಸಭಾವಗಳಿಗೆ ಹೊಂದಿಕೆಯಾದ ಲಯವನ್ನು ಬಳಸಬೇಕೆಂಬುದು. ಎರಡನೆಯದಾಗಿ, ಭಾಷೆ ಯಲ್ಲಿ ದೃಶ್ಯಪ್ರತಿಮೆ (Visual image) ಮತ್ತು ಶಬ್ದಪ್ರತಿಮೆ (Sound image) ಗಳನ್ನು ತರಬೇಕೆಂಬುದು. ನವ್ಯಕವಿ ತಾನು ಕೇಳಿದ್ದನ್ನೂ ನೋಡಿದ್ದನ್ನೂ ಹಾಗೆಯೇ ಭಾಷೆಯಲ್ಲಿ ಹಿಡಿದಿಡಲು ಪ್ರಯತ್ನಿಸುತ್ತಾನೆ. ನವ್ಯಕಾವ್ಯದ ಛಂದಸ್ಸಿಗೆ ಪ್ರೇರಕವಾದ ಕೆಲವು ಕಾರಣಗಳನ್ನು ಕುರಿತು ಜ್ಯಾಫ್ರೆ ಬುಲ್ಲೋ "Modern popular songs and dance influenced rhythms and diction" ಎಂದು ಅಭಿಪ್ರಾಯಪಡುತ್ತಾರೆ. ಈ ದೃಷ್ಟಿಯಿಂದ ನವ್ಯಕಾವ್ಯದ ಛಂದಸ್ಸು ಸಮಕಾಲೀನ ಲೋಕದ, ಜೀವನದ ಭಾವಾಭಿವ್ಯಕ್ತಿಗೆ ಪೋಷಕವಾಗಿಯೇ ಇದೆ ಎಂದು ಹೇಳಬಹುದು. ಅರ್ಥ ಮತ್ತು ಭಾವಕ್ಕಿಂತ ಮಿಗಿಲಾಗಿ ಲಯಮಾಧುರ್ಯಕ್ಕೆ ಮನಸೋಲುವ ಹಲವರಿಗೆ ನವ್ಯಕಾವ್ಯದ ಛಂದಸ್ಸು ಕರ್ಕಶವಾಗುವುದೂ ಉಂಟು.

ನವ್ಯಕಾವ್ಯ ತನ್ನಯುಗಧರ್ಮವನ್ನು ಅಭಿವ್ಯಕ್ತಮಾಡಿದೆಯೇ? ಅದರ ಸ್ವೀಕರಣ ನಿರಾಕರಣಗಳನ್ನು ಕುರಿತು ಸ್ವಲ್ಪಮಟ್ಟಿಗೆ ವಿವೇಚಿಸುವುದು ಒಳ್ಳೆಯದು.

ಸಂಪ್ರದಾಯವನ್ನು ಸಂಪೂರ್ಣ ಅಂಧವಾಗಿ ಅನುಸರಿಸುವುದು ತಪ್ಪು;

ನಿರಂತರವಾಗಿ ಹರಿಯುವ ಕಾವ್ಯವಾಹಿನಿಗೆ ಸಂಪ್ರದಾಯದ ಅಡ್ಡಗಟ್ಟನ್ನು ಹಾಕುವುದರಿಂದ ಕಾಲಕ್ರಮೇಣ ಮಲೆತು ಕೊಳೆಯಲೂಬಹುದು. ಇದಕ್ಕೆ ನಮ್ಮ ಸಾಹಿತ್ಯದಲ್ಲಿ ಹಲವು ನಿದರ್ಶನಗಳಿವೆ. ಎಲ್ಲಾ ಸಾಹಿತ್ಯದ ಗುರಿಯೂ ಎರಡು ರೀತಿಯದು. ಒಂದು, ಸಾಹಿತ್ಯವು ಅಂದಂದಿನ ಸಮಾಜದ, ಜನಮನದ ಚಿತ್ರಣ. ಎರಡು, ಅವುಗಳ ಅಭಿರುಚಿಯ ತಿದ್ದುವಿಕೆ. ನವ್ಯಕಾವ್ಯವು ಸಮಾಜ ಮತ್ತು ಜನಮನವನ್ನು ಚಿತ್ರಿಸಿರುವಷ್ಟು, ಅವುಗಳ ಅಭಿರುಚಿಯನ್ನು ತಿದ್ದಿಲ್ಲವೆಂದೇ ಹೇಳಬೇಕು.

ಕನ್ನಡ ಸಾಹಿತ್ಯದಲ್ಲಿ ನವ್ಯಕಾವ್ಯದ ಪರಿಸ್ಥಿತಿಯನ್ನು ಸ್ವಲ್ಪಮಟ್ಟಿಗೆ ವಿಚಾರ ಮಾಡುವುದು ಅಗತ್ಯವಾಗಿದೆ. ಇಪ್ಪತ್ತನೇ ಶತಮಾನದ ನಮ್ಮ ಸಾಹಿತ್ಯವೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಪಾಶ್ಚಾತ್ಯ ಸಾಹಿತ್ಯದ ಪ್ರೇರಣೆಯಿಂದಲೇ ಬೆಳೆದಿದೆ ಎಂದು ಹೇಳಬಹುದು. ಭಾವಗೀತೆ, ಸಣ್ಣಕತೆ, ಕಾದಂಬರಿ, ನಾಟಕ ಎಲ್ಲವೂ ಅಲ್ಲಿಂದಲೇ ಪ್ರೇರಣೆ ಪಡೆದಿವೆ. ಆದರೆ ಇವುಗಳು ತಾವು ಬೆಳೆದ ನಾಡಿನ, ಜನದ ರೀತಿನೀತಿಯ ಸ್ಪರ್ಶವನ್ನು ಕಳೆದುಕೊಂಡಿಲ್ಲವೆಂಬುದು ನಿಜ. ನವ್ಯಕಾವ್ಯದ ವಿಷಯದಲ್ಲಿ ಈ ಅಭಿಪ್ರಾಯ ಸಂಪೂರ್ಣ ಸರಿಯಾಗಲಾರದು. ಇದಕ್ಕೆ ಹಿನ್ನೆಲೆಯಾಗಿ ಹಲವು ಕಾರಣಗಳಿವೆ. ಪಾಶ್ಚಾತ್ಯ ದೇಶದಲ್ಲಿ ನವ್ಯಕಾವ್ಯದ ಉದಯಕ್ಕೆ ಪ್ರೇರಕಶಕ್ತಿಗಳಾದ ವೈಜ್ಞಾನಿಕ ಬೆಳವಣಿಗೆ, ಔದ್ಯೋಗಿಕ ಕ್ರಾಂತಿ, ಸಾಮಾಜಿಕ ಪರಿಸ್ಥಿತಿ ಮುಂತಾದುವುಗಳು ನಮ್ಮಲ್ಲಿ ಅಷ್ಟಾಗಿ ಆಗಿಲ್ಲವೆಂದೇ ಹೇಳಬೇಕು. ಕಾವ್ಯದ ಉದಯಕ್ಕೆ ಕವಿಯ ಪ್ರತಿಭಾಶಕ್ತಿ, ಇಚ್ಛೆಯಷ್ಟೇ ಜನಮನದ ಇಚ್ಛೆಯೂ ಅಗತ್ಯವಾದುದು. ಈ ದೃಷ್ಟಿಯಿಂದ ಇದುವರೆಗೆ ನವ್ಯಕಾವ್ಯ ಮೂಡುವ ಸನ್ನಿವೇಶ ಕನ್ನಡಕ್ಕೆ ಬಂದಿರಲಿಲ್ಲವೇನೊ. ಆದ್ದರಿಂದ ಕನ್ನಡದ ನವ್ಯಕಾವ್ಯ ಹೆಚ್ಚಾಗಿ ಪಾಶ್ಚಾತ್ಯ ನವ್ಯಕಾವ್ಯದ ಅನುಕರಣೆಯಾಗಬೇಕಾಯಿತೆಂದು ಕಾಣುತ್ತದೆ. ತನ್ನ-ತನವನ್ನು ಗಳಿಸಿಕೊಳ್ಳಲು ಸತತ ಪ್ರಯತ್ನ ನಡೆದರೂ, ಕನ್ನಡದ ನವ್ಯಕಾವ್ಯಕ್ಕೆ ಸಂಪೂರ್ಣವಾಗಿ ತನ್ನ ಮಣ್ಣಿನ ವಾಸನೆ ಬರುತ್ತಿಲ್ಲವೆಂದೇ ಹೇಳಬಹುದು.

ಅನುಕರಣಶೀಲವಾದ ಕನ್ನಡದ ನವ್ಯಕಾವ್ಯವನ್ನು ಕುರಿತು ಶ್ರೀ ಗೋಕಾಕರ ಮಾತನ್ನು ಇಲ್ಲಿ ನೆನೆಯಬಹುದು : "ಕಂಸಿನಲ್ಲಿ ಬರುವ ಹಿನ್ನುಡಿಗಳು, ಸಂಸ್ಕೃತ ಮೊದಲಾದ ಅನ್ಯಭಾಷೆಗಳಿಂದ ಬರುವ ಅವತರಣಿಕೆಗಳು, ಇಲ್ಲವೆ ಚುಟಕೆಗಳು, ಯಂತ್ರಯುಗದ ಪ್ರತಿಮೆಗಳು, ನಿರಾಶೆ, ಜಿಗುಪ್ಸೆ, ಇಲ್ಲವೇ ಬೀಭತ್ಸ ಭಾವನೆಗಳೇ ನವ್ಯಕಾವ್ಯವೆಂದು ಅಲ್ಲಲ್ಲಿ ಗ್ರಹಿಕೆಯಾಗಿದೆ. ಇವಾವ ಲಕ್ಷಣಗಳಿಲ್ಲದೆ ನವ್ಯಕಾವ್ಯವು ಬಾಳಬಲ್ಲುದು".

ಎಷ್ಟೆಲ್ಲಾ ನ್ಯೂನತೆಗಳು, ಕುಂದುಕೊರತೆಗಳು, ಕ್ಲಿಷ್ಟತೆಗಳು ಇದ್ದರೂ ನವ್ಯಕಾವ್ಯ ಕಾವ್ಯದ ಹಲವು ಗುರಿಗಳನ್ನು ಮುಟ್ಟಲು ಪ್ರಯತ್ನ ಮಾಡುತ್ತಿದೆ ಎಂಬುದು ಸತ್ಯ. ಕ್ಲಿಷ್ಟತೆಯೆಂಬುದು ಕನ್ನಡದ ನವ್ಯಕಾವ್ಯಕ್ಕೆ ಮಾತ್ರ ಮೀಸ

ಲಾದುದಲ್ಲ. ನಮ್ಮಲ್ಲಿ ಹೇಗೋ ಹಾಗೆ ಪಾಶ್ಚಾತ್ಯರಲ್ಲೂ ನವ್ಯಕಾವ್ಯದ ಕ್ಲಿಷ್ಟತೆಯ ಕೂಗು ಇದ್ದೇ ಇದೆ. ಇದಕ್ಕೆ ಕಾರಣಗಳನ್ನು ಕುರಿತು ಬುಲ್ಲೋ "Some of the obscurity of the modern poetry was due to a real difficulty of subject matter, a complexity of feeling and thought, some was due to experimental technique..." ಎಂದು ಹೇಳುತ್ತಾರೆ.

ನವ್ಯಕಾವ್ಯದ ಇಂದಿನ ಪರಿಸ್ಥಿತಿಯನ್ನು ಅದರ ಓದುಗರ ಸಂಖ್ಯೆಯ ಅಳೆಯುವುದಾದರೆ ಅದಕ್ಕಿನ್ನೂ ಒಂದು ಸಂಪ್ರದಾಯದ, ಒಂದು ಕಾವ್ಯಪ್ರ ಸ್ಥಾನ ಸಿಕ್ಕಿಲ್ಲವೆಂದೇ ಹೇಳಬೇಕು. ನವ್ಯಕಾವ್ಯ ತನ್ನ ವಸ್ತುವಿನ ಯಿಂದಾಗಿ, ಪ್ರತಿಮಾ ಪ್ರತೀಕಗಳ ಅಭಿವ್ಯಕ್ತಿಯಿಂದಾಗಿ, ನಾದಮಾಧು ರಾಹಿತ್ಯದಿಂದಾಗಿ, ತನ್ನ ಸಹೃದಯಪರಿಧಿಯನ್ನು ಕಿರಿದುಮಾಡಿಕೊಂಡಿ ದೇನೋ ಸತ್ಯ. ಇದರ ವಿಸ್ತರಣೆಯು ನವ್ಯಕವಿ ಮತ್ತು ಅದರ ಓದುಗ ಸಹಕಾರದಿಂದ ಸಾಧ್ಯವಾಗಬೇಕು. ಯಾರೊಬ್ಬರ ಹಟಮಾರಿತನವೂ ವನ್ನು ಬೆಳೆಸಲಾರದು. ನವ್ಯಕಾವ್ಯದ ಆಗುಹೋಗುಗಳನ್ನು ಕಾ ನಿರ್ಣಯಿಸಬೇಕು. ಕಾಲವೇ ಅದನ್ನು ಬೆಳೆಸುವ, ತಿದ್ದುವ, ನಿರ್ಣಯಿ ಮೂಲವಾನ.

ರಾ. ಲಕ್ಷ್ಮೀನಾರಾಯಣ

ಕನ್ನಡ ಕಾವ್ಯದಲ್ಲಿ ಕಡಲ ದರ್ಶನ

೧

ಸೃಷ್ಟಿಯ ಆದಿಮ ದಿನದಿಂದ, ಮಾನವನ ಮನಸ್ಸು ತನ್ನ ಹುಟ್ಟಿಗೆ ಕಾರಣನಾದ ವಿಶ್ವಾತ್ಮನನ್ನು ಕಾಣುವಲ್ಲಿ ಸ್ಥೂಲವಾಗಿ ಇಬ್ಬಗೆಯಾಗಿ ವರ್ತಿಸಿದೆ. ಒಂದು, ನೇರವಾದ ಭಗವಂತನ ಪೂಜೆ ಅರ್ಚನೆ ಧ್ಯಾನ ತಪಸ್ಸುಗಳ ಉಪಾಸನಾ ಮಾರ್ಗ. ಇನ್ನೊಂದು, ಭಗವಂತನ ಸೃಷ್ಟಿಯ ಚೆಲುವನ್ನು ಆಸ್ವಾದಿಸಿ, ಆ ಮೂಲಕ ಎಲ್ಲ ವಸ್ತುಗಳಲ್ಲಿಯೂ ವಿಶ್ವಾತ್ಮನ ಪ್ರತಿರೂಪವೇ ಮೂರ್ತಗೊಂಡಿದೆ ಎಂದು ತಿಳಿಯುವ "ಪ್ರಕೃತಿಯಾರಾಧನೆಯೇ ಪರಮನ ಆರಾಧನೆ" ಎಂಬ ಮಾರ್ಗ. ಎಲ್ಲರಿಗೂ ಪ್ರಿಯವಾದ ಈ ಎರಡನೇ ಮಾರ್ಗಕ್ಕೆ ಬೇಕಾದುದು ಸಹೃದಯತೆ, ಸೌಂದರ್ಯಕ್ಕೆ ಮರುಳಾಗುವ ಹುಚ್ಚು,

> ಜಗ ಚೆಲುವೆನ್ನುವ ಬಗೆಯನುರಣನೆ
> ವಿಶ್ವಾತ್ಮನ ನಿರ್ಹೇತುಕ ಕರುಣೆ[1]

ಎಂಬ ಅನನ್ಯ ಭಾವ.

ಈ ಸೌಂದರ್ಯವಾದರೂ ಏನು?

"ಕ್ಷಣೇಕ್ಷಣೇ ಯನ್ನವತಾಮುಪೈತಿ ತದೇವ ರೂಪಂ ರಮಣೀಯತಾಯಾಃ."[2] ಕ್ಷಣಕ್ಷಣಕ್ಕೂ ನವತ್ವವನ್ನು ಹೊಂದುವುದೇ ಅದರ ಸ್ವಭಾವಸಿದ್ಧ ಲಕ್ಷಣ. ನಿರಂತರ ಚಲನೆ, ಪರಿವರ್ತನೆ ಇರುವಲ್ಲಿ ಸೌಂದರ್ಯವಿದ್ದೇ ಇರುತ್ತದೆ. ಇಡೀ ಸೃಷ್ಟಿಯೇ ಇದಕ್ಕೆ ಲಕ್ಷ್ಯವಾದರೂ, ಸೃಷ್ಟಿಯ ಮಹಾದ್ಭುತಗಳಲ್ಲಿ ಒಂದಾದ ಕಡಲು ಮೊದಲಿಂದಲೂ ಕವಿಜನದ ಹೃದಯವನ್ನು ಸೆರೆಹಿಡಿದ ಮೋಹಕ ವಸ್ತು. ವೇದ ಕಾಲೀನ ಋಷಿಗಳಿಂದ ಹಿಡಿದು, ಅನೇಕ ಮಹಾಸತ್ವರಿಗೆ ಮಹತ್ಪ್ರೇರಣೆ ನೀಡಿದ್ದು ಕಡಲು. ಆದಿಕವಿ ವಾಲ್ಮೀಕಿಯಿಂದ ಹಿಡಿದು, ಇಂದಿನವರೆಗೂ ಎಷ್ಟು ಜನ

---

1 'ರಸಸರಸ್ವತಿ'—ಪು.ತಿ.ನ (ಪು. ೩೮)
2 'ಭಾರತೀಯ ಕಾವ್ಯಮೀಮಾಂಸೆ'—ತೀ.ನಂ.ಶ್ರೀಕಂಠಯ್ಯ (ಪು. ೧೭೦)

ಹಾಡಿ ಹಿಗ್ಗಿದವರಿಲ್ಲ! ಈ ನಿಟ್ಟಿನಲ್ಲಿ ಕಡಲನ್ನು ಕಂಡು ನಮ್ಮ ಕನ್ನಡ ಕವಿಗ ಎದೆಗಡಲು ಎಂತು ಉಕ್ಕೇರಿದೆ ಎಂಬುದಷ್ಟೇ ನಮ್ಮ ಅವಗಾಹನೆಯ ವಿಷಯ. ವಸ್ತುವಿನ ನವತ್ವವು ನಮ್ಮಲ್ಲಿ ನವಭಾವಗಳನ್ನುದ್ದೀಪಿಸುವಂತೆಯೇ ನಮ್ಮಂತರಂ ದನುಭವ ಶಕ್ತಿಯೂ ವಸ್ತುವಿನಲ್ಲಿ ನವತ್ವವನ್ನು ಗುರುತಿಸುತ್ತದೆ. ಈ ದೃಷ್ಟಿಯಿಂದ ಹಾಗೂ ನವತ್ವ, ಸ್ವಸಂಪೂರ್ಣತೆ ಮತ್ತು ನಿರಂತರಾನಂದದಾಯಕತ್ವ ಇವುಗಳನ್ನು ಗಮನದಲ್ಲಿರಿಸಿಕೊಂಡು, ನಮ್ಮ ಕವಿಗಳ ಕಡಲ ಕಾಣ್ಕೆಯನ್ನು ಸ್ಥೂಲವಾ ಪ್ರಾಚೀನ ಮತ್ತು ಅರ್ವಾಚೀನ ಎಂದೂ ಸೂಕ್ಷ್ಮವಾಗಿ ಪ್ರಾಚೀನ, ನವೋದಯ ಭಾವಗೀತಕಾರರು, ದೀರ್ಘಕಾವ್ಯಗಳ ಕರ್ತರು, ಹಾಗೂ ನವ್ಯ ಕವಿಗಳು ಕಂಡ ಕಡಲು ಎಂದೂ ನಾಲ್ಕು ಭಾಗವಾಗಿ ವಿಂಗಡಿಸಬಹುದು.

೨

ನಮ್ಮ ಹಳಗನ್ನಡ ಸಾಹಿತ್ಯದಲ್ಲಿ ಕಡಲ ವರ್ಣನೆಯಂತೂ ಕಡಲಂತೆಯೇ ಅಪಾರವಾಗಿದೆ. ಸಾಮಾನ್ಯನೋಟಕನಿಗೆ ಕಡಲತ್ತ ದಿಟ್ಟಿಹಾಯಿಸಿದೆಡೆಯೆಲ್ಲಾ ಬರಿಯ ನೀರೇ ಆಗಿ, ಏನೊಂದೂ ವಿಶಿಷ್ಟತೆ ಇಲ್ಲವೆಂದು ತೋರುವಂತೆ, ನಮ್ಮ ಹಳಗನ್ನಡ ಕಾವ್ಯಪಾರಾವಾರದತ್ತ ದೃಷ್ಟಿ ಹಾಯಿಸಿದರೆ, ಮೊತ್ತಮೊದಲು ಕಾಣುವುದು ಕೆರೆ, ಬಾವಿ, ಕುಂಟೆಗಳಲ್ಲಿದ್ದ ನೀರೇ ಒಟ್ಟಾಗಿ ಬಣ್ಣ ಮಾತ್ರ ಸ್ವಲ್ಪ ಬೇರೆ ಎಂಬುದು. ಇನ್ನೊಂದೆರಡು ಕ್ಷಣ ಅಲ್ಲಿ ನಿಂತರೆ, ಸಹೃದಯನ ಧೈರ್ಯ ಮೇರುವನ್ನೆ ಕೆಣಕುವ ಮಕರ, ಕುಂಭೀಕರ, ಕಮಠ, ನೀರೇಭ, ನಕ್ರ ಬಡಬಾನಲಾದಿಗಳು ಒಂದರಮೇಲೊಂದು ಮೇಲೆ ಹಾಯುತ್ತವೆ. ಕೆಸ ಉಸುಬಿನಲ್ಲಿ ಸಿಕ್ಕಿಕೊಂಡ ಆನೆಯಂತೆ ಬವಣೆಪಡುತ್ತಾನೆ. ಆ "ವರುಣಾಶಾ ವಾತಾಹತಿ"ಯಿಂದ ಉಸಿರು ಸಿಕ್ಕಿಕೊಂಡಂತಾಗುತ್ತದೆ. ಸೌಂದರ್ಯಾಸ್ವಾದ ಗೆಂದು ನಿಂತವನು, ಮೊತ್ತಮೊದಲಿಗೆ ಪರಾಜಯದ ಮುಖಭಾವದಿಂದ ಬಿನ್ನ ನಾದಂತಾಗಿ, ಕಂದಿದ ಮುಖವನ್ನೆತ್ತಿ, ಇಲ್ಲಿಂದ ಪಾರಾಗುವುದೆಂತೆಂದು ಮೆಲ್ಲ ತಲೆ ಎತ್ತಿದರೆ, ಆ ಕಡಲಿನಲ್ಲಿಯೇ ಅಲ್ಲೊಂದು ಹಾಯಿಹಡಗು ದೃಗ್ಗೋಚ ವಾಗುತ್ತದೆ. ಅದರ ಆಕಾರವೋ ಚಿತ್ರವಿಚಿತ್ರವಾಗಿ, ನಮ್ಮ ಸಹೃದಯನಿಗೆ ಸ್ಥಳವೇ ಇಲ್ಲವೆಂಬಷ್ಟು ಕಿರಿದು. ಆದರೆ, ಅದರ ನಾವಿಕ ಉದಾರಿ. ಅವನು ಆದರ ಆಹ್ವಾನವೀಯುತ್ತಾನೆ. ಬದುಕಿದೆಯಾ ಬಡಜೀವವೇ ಎಂದು, ತರಣಿಯಲ್ಲಿ ಕುಳಿತು ಆಚೆಯ ದಡ ಸೇರುವ ಆತುರದಲ್ಲಿ ಅಲ್ಲೊಂದು ಇಲ್ಲೊಂದು ಮನೋಹ ದೃಶ್ಯ ಕಾಣುತ್ತದೆ. ಆ ಹಾಯಿ ಹಡಗು ರತ್ನಾಕರನಲ್ಲದೆ ಮತ್ತಾರು?

ಪಂಪನಿಂದ ಹಿಡಿದು ಮುದ್ದಣನವರೆಗೆ ನಮ್ಮ ಕವಿಗಳು ಕಡಲಿನ ವರ್ಣನೆ ಯನ್ನು ಕವಿಸಮಯಬದ್ಧವಾಗಿ, ಏನೊಂದೂ ಹೊಸತನವಾಗಲಿ ಸಹಜತೆ ಯಾಗಲಿ ಇಲ್ಲದೆ ಮಾಡಿದ್ದಾರೆ. ವಾಸ್ತವವಾಗಿ ಯಾರೂ ಸಮುದ್ರವನ್ನು

ಕಂಡವರೇ ಅಲ್ಲ. ತಮ್ಮ ವಿಪುಲ ಶಬ್ದಾಡಂಬರದಿಂದ ಕಡಲು ಇಂತಿಷ್ಟು ವಸ್ತುಗಳ, ಪ್ರಾಣಿಗಳ ಮೇಳವೆಂದು ತಿಳಿದು ತಯಾರಿಸಿದ ಕೋಷ್ಟಕದಿಂದ, ಯಥಾಶಕ್ತಿ ತೆಗೆದು ತೆಗೆದು ಹಾಕಿ, ತೃಪ್ತಿಪಟ್ಟುಕೊಳ್ಳುವವರೇ ಬಹಳಷ್ಟು ಮಂದಿ. ಅಷ್ಟಾದಶ ವರ್ಣನೆಯಲ್ಲಿ ಕಡಲೂ ಒಂದಾದ್ದರಿಂದ "ಏನಕೇನ ಪ್ರಕಾರೇಣ" ಅದರ ವರ್ಣನೆಯನ್ನು ತರದಿದ್ದರೆ ಮುಕ್ತಿ ಇಲ್ಲವೆಂದು ಭಾವಿಸಿ, ತಮ್ಮ ಪಾಲಿನ ಕರ್ತವ್ಯವನ್ನು ಪಾಲಿಸಿ ಕೃತಕೃತ್ಯರಾಗಿದ್ದಾರೆ. ಈ ಕರ್ತವ್ಯ ನಿರ್ವಹಣೆಯಲ್ಲಿಯೂ ತಮ್ಮ ಚತುರತೆಯನ್ನು ತೋರಿಸಿದವರುಂಟೆಂಬುದನ್ನು ಮರೆಯದಿದ್ದರೆ ಸಾಕು.

೩

ಸಮುದ್ರದ ಅಲೆಯನ್ನು, ಅದರ ನೊರೆಯನ್ನು, ಅದರಲ್ಲಿ ಅಡಗಿರುವ ಶಂಖ, ಮುತ್ತುಗಳು, ಕಡಲನ್ನು ಆಶ್ರಯಿಸಿರುವ ಜೀವಿಗಳು—ಇವನ್ನು ಕುರಿತೇ ಹೆಚ್ಚಾಗಿ ಹಾಡಿದ್ದಾರೆ ಕವಿಗಳು.

ಪಂಪನಿಗಿಂತಲೂ ಹಿಂದೆ ಇದ್ದಿರಬಹುದಾದ ಗುಣವರ್ಮನ 'ಶೂದ್ರಕ'ದಲ್ಲಿ ಕಡಲಿನ ವರ್ಣನೆ ಬಂದಿದೆ. ಮಾಲೆಮಾಲೆಯಾದ ಪ್ರವಾಳಗಳಿಂದ ಕೂಡಿ ಸುರತರುವಿನಂತೆ ಶೋಭಾವಹವಾಗಿ, ಶೈವಾಲದಿಂದ ಅಭಿಘಾತಿಸಲ್ಪಟ್ಟ ಭೀಕರ ಮಕರ, ಕುಂಭಿಗಳಿಂದಲೂ ಮೃಣಾಳದಿಂದ ಮೇಲೆಹಾಕಲ್ಪಟ್ಟ ಮೀನುಗಳಿಂದಲೂ ಕೂಡಿದುದಾಗಿ ಇತ್ತೆಂದು ಹೇಳುವ ಈ ವೃತ್ತ ನೋಡಿ :

ಮಾಲಾಮಾಲಾ ಪ್ರವಾಳಾವೃತ ಸುರತರು ಶೋಭಾವಹಂ ಭಾವಹಂ ಶೈ
ವಾಲಾವಾಲಾಭಿಘಾತಪ್ರಕರ ಮಕರಕುಂಭೀಕರಂ ಭೀಕರಂ ಜಂ
ಬಾಲಾಬಾಲಾ ಮೃಣಾಳೋಚ್ಚಲಿತ ಶಫರ ಕಂಜಾಕರಂ ಜಾಕರಂ ಕ
ಲ್ಲೋಲಾಲೋಲಾಯಮಾನ ಧ್ವನಿಜನಿತ ದಿಶಾಭಿತ್ತಿಮುದ್ರಂ ಸಮುದ್ರಂ[1]

ಈ ಭಾಗವನ್ನೂ ನೋಡಿ :

..... ಉಲ್ಲೋಲ ಕಲ್ಲೋಲ ಮಾಲಾ
ರಂಭಪ್ರೋದ್ಧಿನಫೇನ ಪ್ರಬಳಜಲಚರೋಲ್ಲುಂಠಪಾಠೀನಶುಂಭ-
ತ್ಕುಂಭೀರಾಭೀಳನಕ್ರಪ್ರಕರ ಕಮಠ ನೀರೇಭ .....

ಇದಂತಿರಲಿ, ಇಲ್ಲೊಬ್ಬ ಕವಿ ಸಮುದ್ರದಲ್ಲಿ ಆಶ್ರಯ ಪಡೆದಿರುವ ಪ್ರಾಣಿಗಳನ್ನು ಹೆಸರಿಸುವಾಗ, "...ಕುಣಿವ ಹಂಸೆಗಳುಂ ತಗದುನ್ಮದ ಷಟ್ಪದಂಗಳುಂ ಮಾಡಿದುವಟ್ಟಿಯುಂ..."[2] ಎಂದು ಹೇಳಿದ್ದಾನೆ. ಸದ್ಯ ನಮ್ಮ ಪುಣ್ಯಕ್ಕೆ ಸಮುದ್ರದ ನೀರಿನಲ್ಲಿ ಜೇನುತುಪ್ಪವೂ ಬೆರೆತು, ಅದರ ರುಚಿಯನ್ನು ಹೊಂದಿತ್ತೆಂದು ಹೇಳಲಿಲ್ಲ!

[1, 2] 'ಸೂಕ್ತಿಸುಧಾರ್ಣವ', ೩-೩, ೩

ಏಕೋ ಏನೋ ನಮ್ಮ ಆದಿಕವಿ ಕಡಲತ್ತ ಕಣ್ಣು ಹಾಯಿಸಲಿಲ್ಲ. ಆದರೂ ಕ್ಷ
ಕವಿತೆ ಎಂಥದೆಂದು ಹೇಳುವಾಗ "ಇದು ನಿಚ್ಚಂ ಪೊಸತು ಅರ್ಣವಂಬೋಲ್"
ಎಂದು ಹೇಳಿರುವ ಮಾತಿನಲ್ಲಿ ಕಡಲಿನ ಬಗ್ಗೆ ಆತ ಹೇಳಬೇಕಾದ ಸುಂದ
ಭಾವಗಳೆಲ್ಲಾ ಬಂದಿವೆ ಎಂದು ಹೇಳಬಹುದು.

ಕಡಲಿನ ತೆರೆಗಳು ಒಂದನ್ನೊಂದು ಅಟ್ಟುವ ಕಾರಣ ಒಬ್ಬ ಕವಿಗೆ ಚ
ತೋರುತ್ತದೆ—

ಹರನಿರ್ಕೆಗೊಂದು ಬೆಳ್ಳಿಯ
ಗಿರಿ ಸಾಲದೆನುತ್ತನೇಕ ರಜತಾಚಲಮಂ
ಶರನಿಧಿಯಟ್ಟುವ ತೆಱದಿಂ
ನೊರೆವೆಟ್ಟಂತಿಪ್ಪ ತೆರೆಗಳೇನೊಪ್ಪಿದುವೋ[1]

ಜಲನಿಧಿಯ ಕಳಕಳನಿನದ ಒಬ್ಬ ಕವಿಗೆ—ನನ್ನ ಮಗ ಚಂದ್ರ, ನನ್ನ ಮಗ
ಲಕ್ಷ್ಮಿ, ವಿಷ್ಣು ಅಳಿಯ, ನನಗಿಂತಲೂ ಮಿಗಿಲಾರು ಎಂದು ಆಢ್ಯತೆಯಿಂದ ನ
ನಗೆಯಂತೆ ಕಂಡಿದೆ.

ಸಮುದ್ರವನ್ನು "ಎಳನೇಸಱ ತೊಟ್ಟಿಲ್" ಎಂದು ಒಬ್ಬ ಹೇಳಿದ್ದಾ
ಹೀಗೆ ಹೇಳುವ ಈ ರೂಪಕದಲ್ಲಿ, ಮೇಲುನೋಟಕ್ಕೆ ಸೂರ್ಯೋದಯ
ಚಿತ್ರವೊಂದು ಕಣ್ಮುಂದೆ ನಿಲ್ಲುತ್ತದೆ. ಅನಂತರ, ಅದನ್ನು ಇನ್ನಷ್ಟು ಪರಿಭಾವಿ
ತ್ತಿದ್ದಂತೆ, ಕಡಲಿನ ಮಾತೃವಾತ್ಸಲ್ಯದ ಮೂರ್ತರೂಪವೇ ಮುನ್ನಿಂತಂತೆ ಭಾ
ವಾಗುತ್ತದೆ.

ನೊರೆಯನ್ನು ಶಂಖದ ಬಳ್ಳಿಗಳಿಗೂ, ತರಂಗಗಳನ್ನು ಮೇಲೆದ್ದ ನ
ಕುಳಾಚಳ ಪಂಕ್ತಿಗಳಿಗೂ ಹೋಲಿಸಿರುವ ಈ ವಿರೋಧಾಭಾಸದ ವರ್ಣನೆಯ
ಅಪೂರ್ವತೆ ಇದೆ:

ನೊರೆಯಿವಲ್ಲವು ತಳ್ತ ಶಂಖದ ಬಳ್ಳಿಗಳ್ ಬಡಬಾನಲಾಂ-
ಕುರಮಿವಲ್ಲವು ರತ್ನದೀಧಿತಿಗಳ್ ತರಂಗಮಿವಲ್ಲವು-
ದ್ಧರ ಕುಳಾಚಳ ಪಂಕ್ತಿಗಳ್[2]

"ಜಲನಿಧಿ ಪಲವುಂ ಶಶಿವಡೆದ ತೆಱದೆ ಮಿಗೆ ರಂಜಿಸುವುವು ಮಂಡಳಿಸಿ ಪೊ
ಫೇನ ಪ್ರಕರಂ" ಎಂಬುದೂ ಇಂಥದೇ ಒಂದು ಮನಂಬುಗುವ ಚಿತ್ರ.

ಪಂಡಿತಕವಿ ಷಡಕ್ಷರಿ, ತನ್ನ 'ರಾಜಶೇಖರ ವಿಳಾಸ'ದಲ್ಲಿ ಕಡಲು ಪ್ರಶ
ವಾಗಿರುವುದಕ್ಕೆ ತನ್ನದೇ ಆದ ಸಾಮಯಿಕ ಕಾರಣವನ್ನು ಕೊಡುತ್ತಾನೆ:

1, 2 'ಸೂಕ್ತಿಸುಧಾರ್ಣವ', ೨–೬, ೩೨.

ಅಳಿಯಂ ಪೂಗಣ್ಣನೆನ್ನೀ ಮಗಳೆ ಚಪಳೆ ಪುತ್ರಂ ಕರಂ ರಾಜಯಕ್ಷ್ಮಾ
ಕುಳನೆನ್ನೈಶ್ವರ್ಯಮಂ ನಿರ್ಜರರೆ ಕವರ್ದರೆನ್ನೊಳ್ಪಿಸಂ ಪುಟ್ಟಿತೆನ್ನಂ
ಕಳಶಪ್ರೋದ್ಭೂತನಂದೀಂಟದನಕಟ ಮಹಾಭಂಗಮಂ ತಾಳ್ದೆನೆಂದೆಂ
ದೊಳಗಂಭೋರಾಶಿ ಚಿಂತಾಗ್ನಿಯನೆ—

ತಳೆದಿತ್ತಂತೆ. ಮನುಷ್ಯ ಸ್ವಭಾವವನ್ನು ನಿರೀಕ್ಷಿಸುವ ಕ್ಷಮತೆಯುಳ್ಳ ಕವಿಚೇತನ, ಪ್ರಕೃತಿಯಲ್ಲೂ ಅದನ್ನೇ ದರ್ಶಿಸುತ್ತದೆ. ಜಡವೂ ಚೇತನವೇ ಅವನಿಗೆ.

ನಂಜುಂಡ ಕವಿಯ "ರಾಮನಾಥಚರಿತೆ"ಯಲ್ಲಿ ಕಡಲ ವರ್ಣನೆಯ ಮೂರು ಸಾಂಗತ್ಯ ಪದ್ಯಗಳಿವೆ; ತೀರ ಸಾಮಾನ್ಯವಾಗಿವೆ. ಕಡಲಿನ ಘುಳುಘುಳು ಘೋಷಕ್ಕೆ ಅವನು ಕೊಡುವ ಕಾರಣ ಇದು :

ಕಡೆಯಬೇಡಿನ್ನೆನ್ನನೆಂದು ಬೊಮ್ಮಗೆ ಮೊರೆ
ಯಿಡುವ ಬಲ್ಸರವಿದೆಂಬಂತೆ |

ನಾಗಚಂದ್ರನ ರಾಮಾಯಣದಲ್ಲಿ ಕಡಲಸುಳಿಗಳನ್ನು ಬಣ್ಣಿಸುವ ಈ ಕಂದದಲ್ಲಿ ಒಂದು ಹೊಸತನವಿದೆ. ಪದ್ಯದಲ್ಲಿ ಒಂದು ರಭಸವಿದೆ:

ಸುೞಿಗಳ್ ನೀರ್ದಿಗುರಿಯವೋಲ್
ಸುೞಿದುವು ತೆರೆ ತೆರೆಯನಟ್ಟಿದುವು ಬೆಟ್ಟದ ಬೆಂ
ಬೞಿಯಂ ಬೆಟ್ಟವಟ್ಟುವವೋಲ್
ತೞಿತಳ್ತವೊಲಿರ್ದುವೊಗೆದ ಮಣಿಕಿರಣಂಗಳ್

ಕೊನೆಯ ವರ್ಣನೆ ನಿಜಕ್ಕೂ ಚೆನ್ನಾಗಿದೆ.

ಕವಿ ರಾಘವಾಂಕನ ಕಡಲ ಕಾಣ್ಕೆಯೇ ಬೇರೆ. ಅವನಿಗೆ ಅದೂ ತನ್ನಂತೆ ಅಘತತಿಯ ನಾಶಕ್ಕಾಗಿ ಲಿಂಗಾರ್ಚನೆ ಗೈಯುತ್ತಿರುವ ಭಕ್ತನಂತೆ ಕಂಗೊಳಿಸುತ್ತಿದೆ ಎಂದೇ ಅವನ ಕಲ್ಪನೆ. ಅಲೆಗಳ ಪರಿಯನ್ನು ರಾಘವಾಂಕನೇ ಹೇಳಬೇಕು :

ಇಡುಕುದೆರೆಯಟ್ಟುದೆರೆಯಿಟ್ಟುದೆರೆ ತಟ್ಟುದೆರೆ
ಯಡಕಿಲುದೆರೆಗಳುಲಿದು ಹಳಚಲು ಮೊರಹು ಮೊರೆದು
ಕಡೆದು ಮಲ್ಲಳಿಗಡಲನೊಡಗಲಸಿ ಕುಡಿದು ಮೊರೆದಡಸಿ ಗುಳುಗುಳಿಪಸುಳಿಯ

ಕರ್ಣಾಟಕವಿಚೂತವನ ಚೈತ್ರನೂ ಈ ಸಂದರ್ಭದಲ್ಲಿ ಶಿಶಿರನೇ ಆಗಿದ್ದಾನೆ. ಅವನ ಕಡಲು ಪ್ರಾಸಾನುಪ್ರಾಸದ ಒಡಲು :

ಘುಳುಘುಳಿಸುವೇಳ್ವ ಬೊಬ್ಬುಳಿಗಳಿಂ ಸುಳಿಗಳಿಂ
ಸೆಳೆಸೆಳೆದು ನಡೆವ ಪೆರ್ದೆರೆಗಳಿಂ ನೊರೆಗಳಿಂ
ಪೊಳೆವ ತುಂತುರಿನ ಸೀರ್ಪನಿಗಳಿಂ ಧ್ವನಿಗಳಿಂ . . . .

ತನ್ನ ಶಬ್ದಶಕ್ತಿಯಿಂದಲೇ ಕವಿ ಮರುಳುಮಾಡುತ್ತಾನೆ. ಮಾಮೂಲಿ... ಬರಲೇಬೇಕಾದ ಬಡಬಾನಲ, ಶಂಖ, ನೊರೆ, ಹವಳ, ಕ್ರೂರಕರ್ಕಟ ... ಕಮಠ, ನೀರಾನೆಗಳೆಲ್ಲಾ ಬಂದಿವೆ.

ಕುಮಾರವಾಲ್ಮೀಕಿಯ ಈ ವರ್ಣನೆಯಲ್ಲಿ ಇನ್ನೇನಿಲ್ಲದಿದ್ದರೂ, ಶಬ್ದ... ಸೊಗಸಂತೂ ಇದೆ; ಭಾಮಿನಿಯ ಬೆಡಗೂ ಅದಕ್ಕೆ ಕಳೆಕೊಟ್ಟಿದೆ:

ಓಟಭರತಪ ಭರವಸದ ಹೊ
ಯ್ಲಾಟಪುರುಲಹರಿಗಳ ಲಳಿಗಳ
ಕೋಟಗಳ ಪಾಟೀನ ಮಕರ ಜಲೇಭದುಬ್ಬಿನಲಿ
ದೂಟ ಗಗನಕೆ ಚಿಗಿವ ಮುಕ್ತಾ
ಸ್ಫೋಟಕದ ಗಂಭೀರ ಸಬುದದ
ಘಾಟಮುದ್ರಿತ ರೌದ್ರದಿಂದ ಸಮುದ್ರ ರಂಜಿಸಿತು

'ಉದ್ಭಟಕಾವ್ಯ'ದಲ್ಲಿ, 'ಹರಿಶ್ಚಂದ್ರ ಕಾವ್ಯ'ದಲ್ಲಿ, ಮತ್ತಿನ್ನದೆಷ್ಟೋ ... ಗಳಲ್ಲಿ ಕಡಲಿನ ವರ್ಣನೆ ಬಂದಿದೆ. ಎಲ್ಲವೂ ಚರ್ವಿತಚರ್ವಣ.

ಇಡಿಯ ಹಳಗನ್ನಡ ಸಾಹಿತ್ಯದಲ್ಲಿ, ಕಡಲ ದರ್ಶನಮಾಡಿ, ಅದರ ಸ್ವಲ್ಪ... ಆದರೂ ವಾಸ್ತವಿಕ ಚಿತ್ರವನ್ನು ನೀಡುವ ಕವಿ ಎಂದರೆ, ಕನ್ನಡ ನಾಡಿನ ಕ... ತೀರದ ಕವಿ ರತ್ನಾಕರ. ಅವನ ವರ್ಣನೆಯಲ್ಲಿ ಸ್ವೋಪಜ್ಞತೆ, ರಸಜ್ಞ ಹೃದ... ಅನುಭವದ ಮೊನಚು, ಇದೆಲ್ಲಕ್ಕೂ ಮಕುಟಪ್ರಾಯವಾದ ಸಂವೇದನಶೀ... ಇದೆ. ಕಡಲ ತೆರೆಗಳ ಆಟವನ್ನು ಅವನ ಬಾಯಿಂದ ಕೇಳಬೇಕು:

ಅಟ್ಟುವ ತೆರೆಯ ಮುಂದೋಡುವ ತೆರೆಯ ಪೆ
ರ್ಚಿಟ್ಟಿದಂತೇಳ್ವ ತೆರೆಗಳ
ಕೊಟ್ಟನೆ ಬಯಲಹ ತೆರೆಗಳನವರು ಕ
ಣ್ಣಿಟ್ಟು ನೋಡಿದರರ್ತಿವಡುತ ॥

ಎಡೆಗುತ್ತಿಗಳನಲ್ಲಿಗಲ್ಲಿ ನಿಂದದ್ರಿಯ
ನಿಡುಗಲ್ಲುಗಳನದರೊಳಗೆ
ಎಡೆಯಾಡುತಿಹ ದೋಣಿ ದುಗ್ಗಿಕಪ್ಪಲು ದೊಡ್ಡ
ಹಡಗುಗಳಿರವ ನೋಡಿದರು ॥

"ತುಂತುರು ತೆರೆನೊರೆ ಘುಳುಘುಳುರವ ತೂಂತಿಟ್ಟು ಹೊಳೆವ ವಾರಿಧಿಯ... ಮೊತ್ತಮೊದಲು ತೋರಿಸಿದ ಕವಿ ಇವನೇ. ಇವೆಲ್ಲಕ್ಕಿಂತಲೂ ತುಂಬ ಸ್ವೋಪ... ಶೀಲವಾದ ಒಂದು ಚಿತ್ರ ಇದು—

ತಟವನುಚ್ಚಳಿಸಿತು ಕಡಲು ಮಂತಿಟ್ಟರಿ
ಘಟದ ಮೊಸರು ಚೆಲ್ಲುವಂತೆ

ಹೀಗೇಕೆ ನಮ್ಮ ಇನ್ನಿತರ ಕವಿಗಳು ಸ್ವಾನುಭವದ ವರ್ಣನೆಯನ್ನು ಕೊಡ ಲಿಲ್ಲವೋ !

ರತ್ನಾಕರನ ಕಡಲು ಕಂಡ ಅನುಭವ ಸಾಂಗತ್ಯದ ಧಾಟಿಯಲ್ಲೇ ಭುಸ್ಸೆಂದು ತೆರೆತೆರೆಯಾಗಿ ನುಗ್ಗುವುದನ್ನು ಕಾಣಬಹುದು. ಆದರೂ ಈ ಶೈಲಿ ಕಡಲ ವರ್ಣನೆಗೆ ಒಪ್ಪುವುದಿಲ್ಲ. ಇದರಲ್ಲಿ ಕಲ್ಪನೆಯ ಸೋಂಕೂ ಇಲ್ಲದಿದ್ದರೂ ವಾಸ್ತವಿಕತೆಯ ವಾಸನೆ ಪ್ರತಿ ಅಕ್ಷರದಲ್ಲೂ ಸಾಂದ್ರವಾಗಿ ಸೂಸುವುದು ಇಲ್ಲಿಯ ವಿಶಿಷ್ಟತೆ. ಆದರೂ ರತ್ನಾಕರನಿಂದ ನಾವು ನಿರೀಕ್ಷಿಸಿದಷ್ಟು ಸಮುದ್ರವರ್ಣನೆ ಇಲ್ಲ.

ನವಸಾಹಿತ್ಯದ ಮುಂಗೋಳಿ ಎಂದು ಪ್ರಸಿದ್ಧನಾದ ಮುದ್ದಣನೂ ಪರಂಪರೆಯ ಜಾಡಿನಲ್ಲೇ ಚಾಚು ತಪ್ಪದೆ ನಡೆದಿದ್ದಾನೆ. ಶ್ರೀರಾಮನ ಲೋಕಕಾರುಣ್ಯವನ್ನು ಕೊಂಡಾಡಲು ಅದೊಂದು ನೆಪಮಾತ್ರ. ಹಾಗಾಗಿ ತನ್ನೆಲ್ಲ ಪಾಂಡಿತ್ಯ ಪ್ರೌಢಿಮೆ ಚಮತ್ಕಾರಗಳನ್ನು ಪಯೋಗಿಸಿ, ಅಡಿಗಡಿಗೆ ಮಡಿಮಡಿದು ಬರುವ ಪೆರ್ದೆರೆಗಳನ್ನೂ ಅವುಗಳೆಡೆಯಲ್ಲುರುಳುವ ಮೀನುಗಳನ್ನೂ ಶಂಖ, ಮಕರ ಇತ್ಯಾದಿಗಳನ್ನೂ ಅದರ ಘೋರ್ಗರೆತವನ್ನೂ ಹೇಗೆ ಹೇಗೋ ಶ್ರೀರಾಮನ ಗುಣಗಾನಮಾಡಲು ಬಳಸಿದ್ದಾನೆ ಅಷ್ಟೆ. ಲಕ್ಷ್ಮೀಶನ ಪ್ರಭಾವವಂತೂ ಸುಸ್ಪಷ್ಟ.

೪

ಸಾಹಿತ್ಯ ನಿಂತ ನೀರಲ್ಲ ಎಂಬ ಮಾತು ಚರ್ವಿತಚರ್ವಣವೇ ಆಗಿದೆ. ಸಾಹಿತ್ಯ ಜನಜೀವನವನ್ನನುಸರಿಸಿ, ಆಯಾ ಯುಗಧರ್ಮಕ್ಕೆ ತಕ್ಕಂತೆ ಬೆಳೆಯುತ್ತದೆ. ಹಿಂದಿನ ಕವಿಗಳ, ಸಾಹಿತ್ಯಜ್ಞರ ಪರಿಮಿತ ಪ್ರಪಂಚ ಕಾಲ ಕಳೆದಂತೆ ವಿಸ್ತೃತವಾಗುತ್ತ ಹೋಯಿತು. ಹಳೆಯ ರೂಢಿಗಳಿಗೇ ಹೊಸ ಅರ್ಥ ಕೊಡುವ ವಿಶಾಲ ದೃಷ್ಟಿಯಷ್ಟೇ ಪ್ರತಿಭೆಯೂ ಉನ್ನತವಾಗುತ್ತ ನಡೆಯಿತೆಂಬುದು ಸಾಹಿತ್ಯ ಚರಿತ್ರೆಯಲ್ಲಿ ಸಿದ್ಧವಾದ ವಿಷಯವಾಗಿದೆ. ಹಿಂದಿನ ಕವಿಯಂತೆ ಇಂದಿನ ಕವಿ ಕವಿಸಮಯಗಳಿಗೆ ಜೋತುಬೀಳದೆ, ಜೀವನವನ್ನಾಗಲಿ ಪ್ರಕೃತಿಯನ್ನಾಗಲಿ ವಾಸ್ತವಿಕ ದೃಷ್ಟಿಯಿಂದ ಪರ್ಯಾಲೋಚಿಸುವ ನೆಲೆಗೆ ಬಂದು ನಿಂತಿದ್ದಾನೆ. ಯಾವುದನ್ನೇ ವರ್ಣಿಸಲಿ, ಅದಕ್ಕೆ ತೀವ್ರವಾದ ಅನುಭವದ ನೆಲಗಟ್ಟಿರಬೇಕೆಂಬುದು, ಅದರಲ್ಲಿ ತನ್ನ ಸ್ವೋಪಜ್ಞತೆ ಇರಬೇಕೆಂಬುದು ಇಂದಿನ ಕಾವ್ಯದ ಬುನಾದಿ. ವೈಯಕ್ತಿಕವೂ ವಿಶಿಷ್ಟವೂ ನೂತನವೂ ಆದ ಸಂವೇದನೆಯಿಂದ ರಚಿತವಾಗಿಲ್ಲದ ಕಾವ್ಯಕ್ಕೆ ಇಂದಿನ ಸಾಹಿತ್ಯದಲ್ಲಿ ಯಾವ ಬೆಲೆಯೂ ಇಲ್ಲ. ಅಂಥದಕ್ಕೆ ಸಾಹಿತ್ಯಜಗತ್ತಿನಿಂದಲೇ ಅರ್ಧಚಂದ್ರ.

ಈ ಮೂಲಾಂಶಗಳನ್ನು ನೆಲೆಯಾಗಿ ಉಳ್ಳ ಕಾವ್ಯಪ್ರಕಾರದ ನಾಂದಿ, ಕನ್ನಡದಲ್ಲಿ ಆಧುನಿಕ ಭಾವಗೀತಗಳಿಂದಲೇ ಆಯಿತು. ಭಾವಗೀತೆಯನ್ನು 'moment 's monument' ಎಂದು ಹೇಳಬಹುದು. ಒಂದು ಭಾವವನ್ನೋ,

ಕಲ್ಪನೆಯನ್ನೋ ವರ್ಣನೆಯನ್ನೋ ಚಿಕ್ಕದಾದ ಕವನರೂಪದಲ್ಲಿ ಎರ... ಹೊಯ್ಯುವುದೇ ಇದರ ಜಾಯಮಾನ.

ಜೀವನದ ಎಲ್ಲ ಅಂಗಗಳನ್ನು ಕುರಿತ ಭಾವಗೀತೆಗಳು ಬಂದಂತೆಯ... ಪ್ರಕೃತಿಯ ಅನೇಕ ಅಂಗಗಳನ್ನು ಕುರಿತ ಕವನಗಳು ಅಧಿಕ ಸಂಖ್ಯೆಯಲ್ಲಿ ರಚಿ... ವಾಗಿವೆ. ಅಂಥದರಲ್ಲಿ ಸೃಷ್ಟಿಯ ಮಹಾದ್ಭುತಗಳಲ್ಲಿ ಒಂದಾದ ಕಡಲನ್ನು ಕುರಿ... ಉತ್ಕೃಷ್ಟ ಕವನಗಳು ಈ ಶತಮಾನದಲ್ಲಿ ರಚಿತವಾಗಿವೆ. ಇಂದಿನ ಕವಿಗಳು, ನಮ್ಮ... ಹಿಂದಿನ ಕವಿಗಳು ಮಾಡಿದಂತೆ ಗತಾನುಗತಿಕವಾಗಿ ವರ್ಣಿಸುವುದಿಲ್ಲ. ಅವನ... ವಿಶಿಷ್ಟ ಕಾಣ್ಕೆ ಉಂಟು. ಇಂದು ಕವಿಗೆ ಮಕರ, ಕುಂಭಿ, ನೀರೇಭ, ವರು... ಗಳಷ್ಟೇ ಕಡಲ ಪರಿವಾರವಲ್ಲ. ಕಡಲಿನ ಮಕ್ಕಳೆನಿಸಿದ ಮೀನುಗಾರರೂ ಅದ... ಪರಿವಾರವೇ. ಚಂದ್ರ, ಲಕ್ಷ್ಮಿ, ವಿಷ್ಣು ಇವರಷ್ಟೇ ಅದರ ಬಂಧುಗಳಲ್ಲ; ಅದ... ಸುತ್ತಮುತ್ತ ವಾಸಿಸುವರೆಲ್ಲರೂ ಅದಕ್ಕೆ ಸಂಬಂಧಿಸಿದವರೇ.

ಹಿಂದಿನ ಕವಿಯಂತೆ ಇಂದಿನ ಕವಿ, ಕಡಲಿನಲ್ಲಿ ಇಲ್ಲದಿದ್ದರೂ ಅತಿಶಯವಾ... ಆಣೆಯಿಟ್ಟು ಹಿಂದಿನವರು ಹೇಳಿದ ಕಮಲವೇ ಮೊದಲಾದ ಸಸ್ಯಗಳನ್ನು... ವರ್ಣಿಸುವುದಿಲ್ಲ. ಬದಲಾಗಿ ಕಡಲ ತೀರದ ಸಸ್ಯಾವಳಿಗಳಾದ ಅಡಕೆ, ತೆಂಗು... ಏಲಕ್ಕಿಗಳನ್ನು ವರ್ಣಿಸುತ್ತಾನೆ. ಕಡಲು ಅನೇಕ ವಸ್ತುಗಳ ಸಂಕೀರ್ಣಸೃಷ್ಟಿಯ... ಗಿದ್ದಂತೆ, ಜೀವನವೂ ಅನೇಕ ಸಮಸ್ಯೆಗಳ, ಒಗಟಿಗಳ ಸಂಕೀರ್ಣವೆಂಬುದನ್ನು... ಮರೆಯದೆ ವರ್ಣಿಸುತ್ತಾನೆ. ಇನ್ನೂ ಮುಂದೆ ಹೋಗಿ ಅದು ಅನೇಕ ಸಂಕೀರ... ಪ್ರತಿಮೆಗಳಿಗೂ ನೆಲೆಯಾಗಿ ಪರಿಣಮಿಸಿತು. ಮುಖ್ಯವಾಗಿ ನವೋದಯ ಕವಿಗಳ... ಸುಕುಮಾರಕಲ್ಪನೆಯ ವಿಲಾಸವೂ ಭಾವನೆಯ ಭವ್ಯತೆಯೂ ಗಗನಚು... ಯಾಗಿರುವಂತೆ, ಪ್ರತೀಕನಿಷ್ಠೆ ಅಥವಾ ಪ್ರತಿಮಾನಿಷ್ಠತೆ ನವ್ಯಕವಿಗಳ ರೀತಿಯಾಗಿ... ಹೀಗೆ ವಿಶಾಲವಾದ ದೃಷ್ಟಿಗನುಗುಣವಾಗಿ, ಸೃಷ್ಟಿಯೂ ಬೃಹತ್ತಾಗಿ, ಮಹತ್ತಾ... ನಡೆದು ' ಸಮುದ್ರ ಗೀತಗಳು ', ' ಉಪ್ಪುಕಡಲು ' ಮುಂತಾದ ಕೃತಿಗಳ ಹುಟ್ಟಿ... ಕಾರಣವಾದುದು ಈ ಶತಮಾನದ ಅತ್ಯಂತ ಮಹತ್ವದ್ದೂ ವಿಸ್ಮಯಕರವೂ ಆ... ಸಂಗತಿ.

" ಇದು ನಿಚ್ಚಂ ಪೊಸತು " ಎಂಬ ಮಾತನ್ನು ಇಂದಿನ ಕವಿಗಳು ಸರಿಯಾ... ಅರ್ಥದಲ್ಲಿ ಹೊಸದಾಗಿರಿಸಿದ್ದಾರೆ. ಕಡಲಿನ ಜಲರಾಶಿಯಷ್ಟೇ ಅದರ ತ... ಮಳಲ ರಾಶಿಯೂ ಆಹ್ಲಾದದಾಯಿ. ಇಂದಿನ ಕವನಗಳಲ್ಲಿ ಪ್ರಧಾನವಾ... ಕಾಣಬರುವುದು, ಕವಿಗಳು ಕಡಲದರ್ಶನದಿಂದ ಪಡೆದ ಆನಂದ ಹಾಗೂ ಅದರಿ... ಮಥಿಸಿ ಬಂದ ತತ್ತ್ವಚಿಂತನ.

ನಮ್ಮ ಹಿಂದಿನ ಕವಿಗಳು ಕಡಲನ್ನು ಕಂಡೋ ಕಾಣದೆಯೋ ತ... ಕಾವ್ಯಗಳಲ್ಲಿ ವರ್ಣಿಸಿದರು. ಕಡಲನ್ನು ಕಾಣದೆ, ಅದರ ಬಗ್ಗೆ ದಿವ್ಯವಾದ ಕಲ್ಪ... ಯನ್ನು ಇಟ್ಟುಕೊಂಡು, ವಿಧವಿಧವಾಗಿ ಚಿತ್ರಿಸಿಕೊಂಡು ಕಾಣಲೆಳಸುವ ಕವಿ...

ಉತ್ಕಟ ಹಂಬಲ ಕೋಡಿವರಿದಿದೆ, ಕುವೆಂಪು ಅವರ "ಕಾಣದ ಕಡಲಿಗೆ"[1] ಎಂಬ ಕವನದಲ್ಲಿ:

ಕಪ್ಪೆ, ಮೀನು, ಮೊಸಳೆ ರತ್ನ
ಹರಿಗೆ ಶಿವಗೆ ಹೋಲಿಪಂತೆ
ಶ್ಲೇಷೆಯಿಂದ ಕವಿಗಳೆಲ್ಲ

ವರ್ಣಿಸಿರುವುದನ್ನು ಕವಿ ಕೇಳಿದ್ದಾರೆ.

ಆದರೆ,

ದೇವನೊಲಿದ ಎದೆಗೆ ಸಾಕೆ
ಬರಿಯ ಬಣ್ಣನೆ ?

ಅವರಾರೂ ಕಡಲ ಉದರವನ್ನಲ್ಲದೆ ಎದೆಯನ್ನು ಕಾಣರು.

ನಿನ್ನನಪ್ಪಿ ನೋಡುವಾಸೆ
ಮನವ ಕೊರೆವುದು

ಎಂದ ಕವಿಗಳ ಬಯಕೆ ಮುಂದೆ ಅವರ 'ಶ್ರೀರಾಮಾಯಣ ದರ್ಶನ'ದಲ್ಲಿ ಪೂರ್ಣವಾಗಿರುವುದನ್ನು ಕಾಣಬಹುದು.

ಇದು ಕವಿಯು ಕಲ್ಪನೆಯ ಕಡಲಿನ ಚಿತ್ರಣವಾದರೆ,

ಮೊರೆತದ ಜೋಗುಳ ಒಳಗಿವಿಗೇಗಳು ಕೇಳುತಿದೆ,
ಕಡಲನು ಕೂಡಬಲ್ಲೆನೆ, ಅದರೊಳು ಕರಗಲಾರೆನೇ ?

ಎಂಬ ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪನವರ "ತೊರೆಯ ಹಂಬಲ" "ಕಡಲನ್ನು ಕಂಡಾಗ"[2] ಉಕ್ಕೇರಿ ಹರಿದಿದೆ.

ಅವರ ಇದೇ ಹೆಸರಿನ ಕವನದಲ್ಲಿ ಮೊತ್ತಮೊದಲಿಗೆ ಕಡಲನ್ನು ಕಂಡ ವಿಸ್ಮಯ, ಆನಂದ ಔತ್ಸುಕ್ಯಗಳು ಮೊರೆಯುತ್ತಿವೆ.

ಕೆಳಗೆ ನೀಲ ಜಲ, ಮೇಲೆ ನೀಲ ಜಲ, ದಿಟ್ಟಸೋಲುವೋಲೆ
ನೀನೆ ತೋರುತಿಹೆ ನನ್ನ ಕಂಗಳಿಗೆ ನೀಲಬೊಮ್ಮನಂತೆ

ಎಂದು ಕವಿ ಮುಗ್ಧರಾಗುತ್ತಾರೆ. ಸಮುದ್ರದ ಅಬ್ಬರವನ್ನು "ರುದ್ರವೀಣೆಗಳ ತುಮುಲನಾದ" ಎಂದು ಕರೆದು,

---

1 'ಕೊಳಲು'

2 'ಚೆಲುವು-ಒಲವು'

ಪ್ರಳಯಭೈರವನ ತಾಂಡವ ಕುಣಿತಕ್ಕೆ
ತಾಳ ಹಾಕುವೆಯ ತೆರೆಯ ತಾಳದಲ್ಲಿ

ಎಂದು ಪ್ರಶ್ನಿಸುತ್ತಾರೆ. "ನಾದಬ್ರಹ್ಮದಾ ವ್ಯಕ್ತರೂಪವೋ ನಿನ್ನ ಘೋ
ಎಂದು ಚಿಂತಿಸಿ, "ಸೃಷ್ಟಿಕರ್ತನನು ಪ್ರಾರ್ಥನೆಯ ಮಾಡುತಿರುವೆಯೇನು" ಎ
ಕುತೂಹಲ ತಾಳುತ್ತಾರೆ. ಕವನದ ಉದ್ದಕ್ಕೂ ಇದೇ ಕೌತುಕವನ್ನು ಕಾ
ಬಹುದು. ಮಳಲಮೇಲೆ ತಾವು ಬರೆದ ಹೆಸರು, ತೆರೆನುಗ್ಗಿ ದಡಕ್ಕಪ್ಪಳಿಸಿ
ನಾಶವಾಯಿತು. 'ಹೆಸರು ಹೋಯಿತೇ ಎಂದು ಕೊರಗುತಿರೆ, ಏನೊ ಅ
ಮನಕೆ'. ತಮ್ಮ ಬೆಳ್ತನಕ್ಕೆ ತಾವೇ ನಾಚುತ್ತಾರೆ. ಕೊನೆಯಲ್ಲಿ '
ರೂಪದಲಿ ಕರಗಿ ಹೋದೆ' ಎಂದು ವ್ಯಕ್ತಿತ್ವ ಸಮರ್ಪಣ ಮಾಡುತ್ತಾರೆ. ಕ
ಈ ಕಲ್ಪನೆ ಅದೆಷ್ಟು ಮೋಹಕವಾದುದು !—

ಏನು ಆಟವೋ ಎಂಥ ಜೇಟವೋ ನಿನ್ನ ತೆರೆಗೆ ದಡಕೆ
ಬುವಿಯ ಹೆಣ್ಣಿಗೂ ಕಡಲ ಗಂಡಿಗೂ ತೀರದಿರುವ ಜೇಟ!

ಕಡಲು ನೆಲದ ದಾಂಪತ್ಯವನ್ನು ಕವಿ ಶಿವರುದ್ರಪ್ಪನವರು ಹೀಗೆ ಬಣ್ಣಿಸಿ
ಕವಿ ಶ್ರೀ ಗುಂಡ್ಮಿ ಚಂದ್ರಶೇಖರ ಐತಾಳ್ ಅವರು ತಮ್ಮ 'ಪಡುಗಡಲು'[1] ಎ
ಕವನದಲ್ಲಿ ನದಿ ಕಡಲುಗಳ ಸರಸ ದಾಂಪತ್ಯ ಪ್ರವರ್ತನೆಯನ್ನು ಸುರಸ
ಅಭಿವ್ಯಕ್ತಿಗೊಳಿಸಿದ್ದಾರೆ. ಒಲವಿನ ಎಳೆಯೊಂದು ಈ ದಾಂಪತ್ಯದ ಹಾ
ಹೊಕ್ಕಿನಲ್ಲಿ ಸೇರಿ ಅದಕ್ಕೊಂದು ಸಾಂಸಾರಿಕ ವಾತಾವರಣವನ್ನುಂಟುಮಾಡಿದೆ:

ನೀರ ತರಹೋದ ಹೊಳೆಹೆಣ್ಣು ಬೆಟ್ಟವನಿಳಿದು
ಸಡಗರದಿ ಒಡಗೂಡುವಳು ಕಡಲಲಿ ;
ತೆರೆಯ ತೋಳಿನಲವಳ ತಬ್ಬಿ ಉಬ್ಬುವನುದಧಿ
ಬಾಲೆ ಬಂದೆಯಾ ಎಂದು...
ಕರೆವ ಕೈ, ಕೂಗುಕೈ, ತೂಗುಕೈ, ಬಾಗುಕೈ
ತರತರದಿ ತೆರೆಯ ತೋಳಲಿ ತಬ್ಬುತ!

ತೆರೆಯ ಪರಿಪರಿಯ ಆಟವನ್ನು ಕವಿ ಕಾಣುವ ಪರಿ ಇದು. ಇಲ್ಲಿ
ಅನುಪ್ರಾಸವೂ ತೆರೆಗಳ ಕುಣಿತಕ್ಕೆ ತಾಳ ಹಾಕಿದಂತಿದೆ. ಮತ್ತೆ ಕವಿ ಹೇಳುತ್ತಾ

ತೆಂಗುಗರಿ ತಲೆದೂಗಿ ಕರೆಯುತಲಿದೆ
ತುಂಬು ಕಡಲಿನ ಕರೆಗೆ ಬನ್ನಿಬನ್ನಿರಿ ಎಂದು.

ಇದುವರೆಗೂ ಕಡಲ ತೀರದ ತೆಂಗನ್ನು ಹೆಸರಿಸಿದವರೇ ಇಲ್ಲ. ಇಡೀ ಕವ

---

1 'ಬೆಳಗಾಯಿತು'

ರಭಸಪೂರ್ಣವಾಗಿ ತ್ವರೆಯಿಂದ ಸಾಗುತ್ತದೆ. ತುಂಬುಮನದ ಈ ಮಾತುಗಳು ಅದೆಷ್ಟು ಸತ್ಯ—

ಕಡಲ ಕುಣಿತಕ್ಕೆ ಕಣ್ಣು ಬಿಡದ ಬಾಳಿಲ್ಲಿಲ್ಲ
ಓದಿ ಅರಿಯುವುದಲ್ಲ ಕಡಲ ಬೆಡಗು !

ಆದರೇನು, ಆ ಕಡಲಬೆಡಗನ್ನು ಮನಸಾರೆ ಅರಿಯಬೇಕಾದರೆ, ಅದರ ಮೊರೆತವನ್ನು ಕಿವಿಯಾರೆ ಕೇಳಬೇಕಾದರೆ, ತೆರೆಯೊಡನೆ ನಲಿಯಬೇಕೆನಿಸಿದರೆ, ಕವಿಯ ಈ ಓಜೋಮಯವಾದ ಮಾತುಗಳನ್ನು ಕೇಳಿದಲ್ಲದೆ ವೇದ್ಯವಾಗದೇನೋ !—

ಭಟ್ಕಳವೆಂದರೆ ಭರಬಂದ ಕಡಲಂತೆ ಕವಿ ಎದೆಯುಬ್ಬುವುದುಕ್ಕುವುದು.
ಕಣ್ದಿಟ್ಟ ಹೊರಳಿಸಿ ಕಡಲತ್ತ ಹಾಯಿಸು,
ನೀಲಿಮೆ ವಾರಿಧಿ ಏನು ಸೊಗಸು !
ತೆರೆಯನು ತೆರೆಯಟ್ಟಿ ಉಬ್ಬುಬ್ಬಿ ಮೇಲೆದ್ದು
ಎವೆಯುದ್ದ ಕೊರಳುದ್ದ ಆಳುದ್ದವಾಗಿ,
ಬಾಗಿ ಮೈ ಬಳುಕಿಸಿ, ತೂಗಿ ತಲೆದಿರುಗಿಸಿ
ಹೊಡೆಮುರಿಯುತಪ್ಪಳಿಸಿ, ಉರುಳುರುಳುತೆ ;
ಜುಳುಜುಳನೆ ನೊರೆಗರೆದು, ಗುಳುಗುಳನೆ ಸುಳಿಸುಳಿದು
ದಡಕೆ ಕಚಕುಳಿಯಿಡುವ ಕಡಲ ನೋಡು !
ಖೇದ ಆಮೋದದ ರೋಷ ಸಂತೋಷದ
ತೆರೆಗಳ ಪರಿಪರಿ ಲೀಲೆ ನೋಡು[1]

ಬೆಳ್ಳನೆಯ, ತಂಪನೆಯ ಬಿಳಿಮಳಲರಾಶಿ ಈ ಕವಿಗೆ ಕಾಣುವುದು ಹೀಗೆ—

ಅಲೆಯಾಗಿ ಹನಿಯಾಗಿ ಒಡೆದೊಡೆದು ಮುತ್ತಾಗಿ
ಬೆಳ್ಳಿಯ ನೆರಿಗೆಯ ಹಾಸಿ ಹರಹಿ.

ಇಂಥ ಉಜ್ವಲ ಕವನದ ವ್ಯಾಖ್ಯಾನಕ್ಕೆ ಹೋಗದೆ, ಇದರ ಒಟ್ಟು ಸೌಂದರ್ಯವನ್ನು ಪರಿಭಾವನೆಗಷ್ಟೇ ಒಳಪಡಿಸಿ ಆಸ್ವಾದಿಸಬೇಕೆಂದು ಹೇಳಬಹುದು.

ಶ್ರೀಮಾನ್ ಭಟ್ಟರು ತಮ್ಮ ಶಬ್ದವೈಭವದಿಂದಲೇ ಕಡಲ ವೈಭವವನ್ನು ಸೆರೆಹಿಡಿಯುವ ಸ್ತುತ್ಯಕಾರ್ಯ ಮನಂಬುಗುವಂಥದು. ಸ್ವರಗಳ ಏರಿಳಿತದಲ್ಲಿ ತೆರೆಗಳ ಏರಿಳಿತವೂ, ಕವಿಮನದ ಏರಿಳಿತಗಳೂ ಎಷ್ಟು ಸೊಗಸಾಗಿ ರೂಪುಗೊಂಡಿವೆ ! ಅಂಶಲಯದ ಹಾಸುಬೀಸುಗಳು, ಪ್ರಾಸಾನುಪ್ರಾಸಗಳು ಈ ಕವನದ ಉಜ್ವಲತೆಗೆ ಮಕುಟವಿಟ್ಟಿವೆ.

---

[1] 'ಭಟ್ಕಳ', ಗಗನಚುಕ್ಕಿ–ಎಸ್. ವಿ. ಪರಮೇಶ್ವರಭಟ್ಟ

ಶ್ರೀ ಡಿ. ಎಸ್. ಕರ್ಕಿಯವರು "ಕಾರವಾರದಲ್ಲಿ"[1] ಎಂಬ ಕವನದಲ್ಲಿ ಕಡಲು ಮಳಲ ಆಟವನ್ನು "ಮುತ್ತನೀವ ತೆರೆಗಳದಕೆ ಬೆಳ್ಳಿನಗೆಯ ಸೂಸಿ" ಎಂದು ಹೇಳಿ, ಅವುಗಳ ತುಂಬು ಒಲುಮೆಯನ್ನು ವರ್ಣಿಸಿದ್ದಾರೆ.

ಮುತ್ತಿನೊಡನೆ ಕಡಲಿನೆದೆಯ ಮುತ್ತು ಬರುವ ವೀಚಿ
ಸಾಲು ಸಾಲು ಕಡಲುವಕ್ಕಿ
ಬರೆದೊಲಿಹವು ಬಿಳಿಯ ಸುಳುಹ
ನೀಲಹಾಳೆಯಲ್ಲಿ

ಎಂಬ ಮಾತುಗಳಂತೂ ನಿಜಕ್ಕೂ ಪ್ರತಿಭೆಯಿಂದ ಚಿಮ್ಮಿದ ರಸಶೀಕರಗಳು. ಶ್ರೀ ಕೆ. ಎಸ್. ನರಸಿಂಹಸ್ವಾಮಿಯವರಿಗೆ, ಇಲ್ಲಿಯ ತೆಂಗು ತಾಳೆಗಳು "ದೆವ್ವಗಳು ಆರಿಸಿದ ಹಿರಿಯ ಸೊಡರುಗಳಂತೆ"[2] ಕಾಣುತ್ತವೆ. ಇದನ್ನು ಓದಿದರೆ ನಿಜಕ್ಕೂ ಸೋಜಿಗವಾಗುತ್ತದೆ. ಇದೇನು ವಿಕೃತ ದೃಷ್ಟಿಯೋ ಎಂದು ನಾವು ಆಶ್ಚರ್ಯಪಡಬೇಕಾಗಿಲ್ಲ. ಇದು ಆ ಕ್ಷಣದ ಕವಿಯದೇ ಪ್ರಕೃತಿ.

ನದಿ–ಕಡಲುಗಳ ದಾಂಪತ್ಯವನ್ನು ಶ್ರೀ ಐತಾಳರು ವರ್ಣಿಸಿದ್ದರೆ, ಶ್ರೀ ಕೆ. ಎಸ್. ನ. ಕಡಲು ಹೊಳೆಗಳ ಆರ್ಷೇಯದಾಂಪತ್ಯವನ್ನು ವ್ಯಂಜಿಸಿದ್ದಾರೆ–

ರೊಪ್ಪನಪ್ಪಳಿಸಿ, ಮುನ್ನೀರು
ತೆರೆತೆರೆಗಳಾಟವನು ಹೂಡಿ ಗರ್ಜಿಸುತಿರಲು
ನಸುಬೆಳಕಿನಲಿ ಹೊಳೆಯ ನೀರು ತುಳುಕಿದುದು
ಋಷಿಪತ್ನಿಯಂತೆ ನಿಯಮವನರಿತು ವಿನಯದಲಿ[3]

ಕಡಲ ಮುತ್ತುರತ್ನಗಳನ್ನು, ತೆರೆನೊರೆಗಳನ್ನು, ಶೈವಾಲಸೈಕತಗಳನ್ನು ಚೆಲುವು ಚೆಲ್ಲಾಟಗಳನ್ನು ಪ್ರಾಚೀನರೂ ನವೀನರೂ ಬಗೆಬಗೆಯಾಗಿ ಹಾಡಿದ್ದನ್ನು ನೋಡಿದೆವು. ಆದರೆ ಕಡಲ ಮಕ್ಕಳನ್ನು ಕುರಿತು ಹಾಡಿದವರು ಕವಿವರ್ಯ ಶ್ರೀ ಅಂಬಿಕಾತನಯ ದತ್ತರು. ಅವರ "ಪಡುವಲ ಕಡಲ ಅಂಬಿಗರ ಹಾಡಿ"[4]ನಲ್ಲಿ ಕಡಲಿನ ಮಡಿಲಿನಲ್ಲಿ ತಮ್ಮ ಸುಖದುಃಖದ ಅಶ್ರುಗಳನ್ನು ಹರಿಸಿ, ಆದರೊಡನೆ ಸೆಣಸಿ, ಜೀವನದ ಚೆಲುವನ್ನು ಉಂಡು ಬಾಳ ಶಾಂತಿಯನ್ನು ಕಂಡುಕೊಂಡ ಅಂಬಿಗರು ಒಂದು ಸುಂದರ ಸಂಜೆ ಹೃದಯಗೀತವನ್ನು ನಿವೇದಿಸುತ್ತಿದ್ದಾರೆ–

ಏ! ಲೇಲಾಲಿ ಲೇಸೋ ಲೇಲಾಲಿಲೇ
ಕಡಲೀನ ನಡಿಗೆಗೆ ಹಾಡುವೆನೋ

---

1 'ಭಾವತೀರ್ಥ'
2–3 'ಮಲ್ಲಿಯಲ್ಲಿ'–ದೀಪದ ಮಲ್ಲಿ.
4 'ಗಂಗಾವತರಣ'

ತೆರೆಗಳ ಲೀಲೆಯ ನೋಡುವೆನೋ
ಗಾಳಿಯ ಛಂದಕೆ ತೂಗುವೆನೋ
ಮುಂದಕೆ ಮುಂದಕೆ ನೂಗುವೆನೋ
ಏ ಲೇಲಾಲಿ . . . .
ಪಡುವಲ ಕಡಲಿದು ಏನಂದವೋ
ಉಕ್ಕೇರಿ ಬರುತಿದೆ ಆನಂದವೋ
ಬಂಧನ ಬಂದಿತು ಎಲ್ಲಿಂದಲೋ
ಬಿಡುಗಡೆ ಇಂದೂನು ಅಲ್ಲಿಂದಲೋ

ಬಂಧನದ ಕರ್ಮಗಾನವೂ, ಬಿಡುಗಡೆಯ ಸ್ವಚ್ಛಂದ ಗೀತವೂ ಅವರಿಗೆ ಅಲ್ಲಿಂದಲೇ ಬರಬೇಕು.

ಒಪ್ಪಾಗಿ, ಉಪ್ಪಾಗಿ ಈ ಬೇಲವೂ
ತರುತಿದೆ ಸುಖದುಃಖ ಸಮ್ಮೇಳವೂ

ನಿತಾಂತ ಸುಂದರವಾದ ಪ್ರಶಾಂತ ವಾತಾವರಣ ಈ ಕವನದ ಆವರಣ. ಹೃದಯದ ಶಾಂತರಸವೇ ಜೀವನೋದಧಿಯನ್ನು ಕಂಡು ಉಕ್ಕಿ ಹರಿದಿದೆ.

ಈ ಕಡಲ ಮಕ್ಕಳ ಸಾಹಸಪೂರ್ಣ ಜೀವನವಾದರೂ ಎಂಥದು! ಶ್ರೀ ಕಡೆಂಗೋಡ್ಲು ಶಂಕರಭಟ್ಟರು " ಕಡಲ ಹಾಡಿನಲ್ಲಿ "[1] ಉದ್ಘೋಷಿಸುತ್ತಾರೆ—

ಬೆಟ್ಟದಂತೆ ಗಗನತಲವ
ಮುಟ್ಟ ನೆಗೆವ ತೆರೆಯಮೇಲೆ
ತೊಟ್ಟಿಲಾಟವಾಡುತಿರುವ

ಇವರ ಅಪ್ರತಿಮ ಸಾಹಸವಾದರೂ,

ಮುಳುಗುತಿರುವ ಜೀವಕೋಟ
ಕರೆವ ದನಿಯು ಕೇಳುವೆಡೆಗೆ

ಸಮರ್ಪಿತ.

ಇಂಥ ಧೀರೋದಾತ್ತರ ಗಾಯತ್ರಿಯಾದರೂ,

ಕೊರಗುವವರ ಸಂತವಿಡಲು
ಕಡಲ ಹಾಡನೊರೆವುದು

---

1 'ಪತ್ರ-ಪುಷ್ಪ'

ಶ್ರೀ ಮಂಜೇಶ್ವರ ಗೋವಿಂದ ಪೈ ಅವರ “ ಕಡಲಿಗೆ ”[1] ಎಂಬ ದೀರ್ಘ ಕ...
ಸರಳರಗಳೆಯಲ್ಲಿ ಬರೆದದ್ದಾಗಿದೆ. ಕಡಲನ್ನು ನಾನಾಪರಿಯಾಗಿ ಸಂಬೋಧಿಸು...

ಉರುಳುರುಳು, ಹೊರಳು, ಹೊರಳಾಡು ನೀಲಾಂಭೋಧಿ!
ಗುಡುಗಂತೆ ಗುಡುಗಾಡು ! ಸಿಡಿಲಂತೆ ಸಿಡಿದಾಡು !

ಎಂದು ಕರೆಯನ್ನೀಯುತ್ತಾರೆ. ನಮ್ಮ ಪ್ರಾಚೀನ ಕವಿಗಳ ಕಲ್ಪನೆಯಂತೆ, ...
ಕವಿಗೂ ಅದರ ನಿರ್ಘೋಷದ ಕಾರಣ ಹೀಗಿದೆ :

ಮಂದರಂ ನಿನ್ನ ಕಡೆದುದಕೆ ನರಳುವಿಯೊ? ಪದಿ
ನಾಲ್ಕು ರತ್ನವ ಸುರರು ಕಸಿದುದಕೆ ಕೆರಳುವಿಯೊ?

ರಾಜ್ಯರಾಜ್ಯಗಳು ತೆರೆಯೊಡೆದ ಹಡಗಂತೆ ವಿನಷ್ಟವಾದರೂ ಸ...
ಯಾದಿಯ ದಿನದಿಂದ ಇಂದಿನವರೆಗೂ ಇಂತೇ ಘೂರ್ಣಿಸುತ್ತಿರುವೆ ಎಂದು ಹೇ-

ಝುಂಝಾವಾತದಲಿ ಮಹಾ
ರುದ್ರನ ಪ್ರಲಯ ಪ್ರಚಂಡ ತಾಂಡವ ಪಾಂಡು
ರೇಖೆಯಿಂ ಕಣ್ಮಲೆಸುವಮ್ಲಾನ ಕನ್ನಡಿಯೆ,
....
ನಿನಗಿಲ್ಲ, ನಿನ್ನ ವ್ಯವಸಾಯಕೆಮ ಮುಗಿವಿಲ್ಲ !
ಕಾಲ ನಿನ್ನಯ ಬಳಿಗೆ ಕಾಲನೂರಂ !

ಎಂದು ಅದರ ಚಿರಂತನತೆಯನ್ನು ಪ್ರಶಂಸಿಸಿದ್ದಾರೆ.

ಅನಾಸಕ್ತಯೋಗಿ ಎಂದು ಹೇಳುವ ಕವಿಯ ಈ ಭಾವ—

ನಿಷ್ಕರ ಕರ್ಮಯೋಗಿಯೊಲನಾಸಕ್ತನಾಗಿ
ಕರ್ಮದೊಳಹರ್ನಿಶಮುವಿಶ್ರಾಂತನೈ

—‘ ಸಮುದ್ರ ಗೀತಗಳ ’ ಕವಿಯಲ್ಲಿ ಬೇರೊಂದು ತೆರನಾಗಿ ಮೂಡಿ ಬಂದಿದೆ.

ನಿನ್ನ
ನಿಸ್ಸೀಮ ಶಕ್ತಿಯಿಂ ನಿನ್ನ ಸೃಜಿಸಿದ ಪರಾ
ಶಕ್ತಿಯನಣಂ ಮನಂಗೊಳೆ ನಿನ್ನ ಕಂಡವಂ
ನಿನ್ನ ಹಾಯ್ದುವನಾವನಿನ್ನನಮು ನಾಸ್ತಿಕಂ

ಎಂದು ಕವಿ ಪೈ ಅನನ್ಯ ಭಾವದಿಂದ ಬೆರಗಾಗುತ್ತಾರೆ.

---

[1] ಪ್ರಬುದ್ಧ ಕರ್ಣಾಟಕ—ಗೋವಿಂದ ಪೈ (೩೮—೨)

ಕೊನೆಯಲ್ಲಿ ಬರುವ ಈ ಮಾತುಗಳು ಸತ್ವಯುತವಾಗಿವೆ:

ಕಾಂತನೆ, ಅನಂತನೆ, ಚಿರಂತನನೆ, ಸಂತತನೆ,
ನಿತ್ಯಾತಿನಿತ್ಯನೆ.....................
ಬಿಸುದೇಶದಲಿ ಕಪ್ಪಾಗಿ,
ಧ್ರುವಗಳಲಿ ಹೆಪ್ಪಾಗಿ, ಜೀವನದೊಳುಪ್ಪಾಗಿ,
ಕಾಲಸಿಂ ಮುಪ್ಪಾಗಿ, ಶಾಶ್ವತದ ನೆಪ್ಪಾಗಿ....
ಇನ್ನಾರುಳೊರಳು ತೆರಳು ಹೊರಳಾಡು ನೀನಸಿಶಂ

ಕಥನಾತ್ಮಕವಾದ ಈ ಕವನದಲ್ಲಿ ಕಲ್ಪನೆಯ ಅಂಶ ಬಹು ಕಡಿಮೆ. ಓಘ, ಭಾಷೆಯ ಪ್ರವಾಹಮಯತೆ ಇವುಗಳಿಂದಾಗಿ ಕವನ ಹೃದ್ಯವಾಗಿ, ಎಡೆತಡೆಯಿಲ್ಲದೆ ಸಾಗುತ್ತದೆ. ಕವಿ ಕಡಲಿನ ಅನಿಶ ನಿರ್ಘೋಷದಲ್ಲಿ ಕರ್ಮಠಜೀವಿಯ ಲಕ್ಷಣವನ್ನು ಕಂಡಿದ್ದಾರೆ.

ಇದುವರೆಗೆ ನೋಡಿದ ಎಲ್ಲ ಕವಿಗಳಿಗಿಂತ, ಮುಂದೆ ನೋಡುವ ಎಲ್ಲ ಕವಿಗಳಿಗಿಂತ ತೀರ ವಿಶಿಷ್ಟವಾದುದು, ಜಿಜ್ಞಾಸು ಕವಿ ಶ್ರೀ ಪು. ತಿ. ನ. ಅವರ ಕಡಲ ದರ್ಶನ. ಅವರು ಒಂದು ಸಾನೆಟ್[1]ನಲ್ಲಿ ಕಡಲನ್ನು ಕಂಡಿರುವುದು ಈ ರೀತಿ:

ಅದು ಗುಳಿಗೆ ಬಿದ್ದು ಕೂಗಿಕೊಳ್ಳುತ್ತಿರುವ ಭೂತದಂತೆ ನಿಟ್ಟುಸಿರುಬಿಡುತ್ತ, ದಡವನ್ನು ಅಲೆಯ ಪಂಜದಿಂದ ಪರಚಿ, ಮೇಲೇರಿಬರಲು ಯತ್ನಿಸಿ, ಸೋತು, ಕರೆಯುಕಡೆ ಕೈಚಾಚುತ್ತದೆ; ನೆರವಿಗಾಗಿ ಅದರ ಗಂಭೀರಧ್ವನಿ ಆರ್ತನಿರ್ಘೋಷದಂತೆ ಕೇಳುತ್ತದೆ. ಅದು ಮಹದ್ವ್ಯಕ್ತಿ ಎಂಬ ಭಾವ ಕವಿಗಿದೆ. ಜಿಜ್ಞಾಸು ಕವಿ—"ಇದ ಸೆರೆಯೊಳಿಟ್ಟಾಳ್ವರಾರ್" ಎಂದು ಪ್ರಶ್ನಿಸುತ್ತಾನೆ. ಉತ್ತರಕ್ಷಣದಲ್ಲಿಯೇ ಯಾವುದು ಮಹತ್ತಾದುದೋ ಅದು, ಸಚ್ಚಿದಾನಂದ ಎಂಬ ಉತ್ತರ ಅನುಭೂತವಾಗುತ್ತದೆ. ಮಹಾಶಕ್ತಿಯ ಎದುರಿನಲ್ಲಿ ಅದರ ಖತವನ್ನು ಸೋಂಕಿ, ಅಲ್ಪತೆಯನ್ನು ಕಳೆದುಕೊಂಡ ಕವಿ ಕಡಲಿಗಿಂತ ಎತ್ತರದಲ್ಲಿ ನಿಲ್ಲುತ್ತಾರೆ. ಆದರಿಂದಲೇ ಅದರ ದಣಿವಿಲ್ಲದ ನಿಲುವಿಲ್ಲದ ಅಲೆತವನ್ನು ಅವರು ಕನಿಕರಿಸಬಲ್ಲರು, "ಹರಿಯ ನಿಲುವೊಳು ಭವಿಗೆ ಮರುಗುತಿಹ ಭಕ್ತನಂತೆ."

ಶ್ರೀ ಪು.ತಿ.ನ. ಅವರ ಕವನಗಳಲ್ಲಿ ಭಾವನೆ, ಚಿಂತನೆ, ಹಾಗೂ ಜಿಜ್ಞಾಸೆಗಳು ಮುಪ್ಪುರಿಗೊಂಡು ಬರುತ್ತವೆಂಬುದು ಸಾಮಾನ್ಯವಾದ ವಿಚಾರ. ಈ ಕವನದಲ್ಲಿ ಅದನ್ನು ಸ್ಪಷ್ಟವಾಗಿ ಕಾಣಬಹುದು.

೫

ಇದುವರೆಗೂ ಬಿಡಿ ಭಾವಗೀತೆಗಳಲ್ಲಿ ಕಡಲ ಚಿತ್ರಣ ಸಡಿಮೂಡಿರುವ

[1] ಗಣೇಶ ದರ್ಶನ—ಪು.ತಿ.ನ.

ರೀತಿಯನ್ನು ನೋಡಿದೆವು. ಇನ್ನು ಈ ಶತಮಾನದ ಮೇರುಕೃತಿ 'ಶ್ರೀ ರಾಮಾಯ… ದರ್ಶನ'ದಲ್ಲಿ ಕಡಲ ವರ್ಣನೆ ಹೇಗೆ ಬಂದಿದೆ ಎಂಬುದನ್ನು ಪರಿಭಾವಿಸೋ… ಸಾಮಾನ್ಯವಾಗಿ ನಮ್ಮ ಕವಿಗಳು ತಮ್ಮ ಮಹಾ ಕಾವ್ಯಗಳಲ್ಲಿ ಕಡಲನ್ನು … ಸಮಯಬದ್ಧವಾಗಿ ವರ್ಣಿಸಿದ್ದೂ ವರ್ಣಿಸಿದ್ದೇ ; ಅದರ ವರ್ಣನೆಗೆ ಸಂದರ್ಭ… ಬಿಡಲಿ. ಆದರೆ ಇಪ್ಪತ್ತನೇ ಶತಮಾನದ ಕವಿ ಅದನ್ನು ತನ್ನ ಮಹಾ ಕಾವ್ಯ… ಹೇಗೆ ತುಂಬ ಔಚಿತ್ಯವರಿತು, ಸ್ವಂತ ದೃಷ್ಟಿಯಿಂದ ನೋಡುತ್ತಾನೆಂಬು… ಗಮನಾರ್ಹ.

'ಶ್ರೀ ರಾಮಾಯಣ ದರ್ಶನ'ದಲ್ಲಿ ಕಡಲಿನ ವರ್ಣನೆಯ ಸಂದರ್ಭಗ… ಕಡಮೆ, ಪರಿಮಾಣದಲ್ಲೂ ಅಲ್ಪ. ಮುಖ್ಯವಾಗಿ ನಾವಿಲ್ಲಿ ಗಮನಿಸಬೇಕಾದು… ರುಂದ್ರಸಾಗರದ ಸಲಿಲ ನಿರ್ಘೋಷದ ಗತಿಯಂತೆಯೆ ಅದರ ಛಂದಸ್ಸೂ ನೃತ್ಯ… ಯಲ್ಲಿ ಸಾಗಿದೆ ಎಂಬುದು. ಇಲ್ಲಿಯ ಘನತರವಾದ ಶಬ್ದಗಳೇ ಅವು ಹೊರಬೇ… ಭಾವವನ್ನು, ಮಾಡಬೇಕಾದ ಅರ್ಥವ್ಯಕ್ತಿಯನ್ನು ತುಂಬ ಸಮರ್ಥ ರೀತಿಯ… ನಿರ್ವಹಿಸಿವೆ :

....ವೇಗಸಂಜಾತ ಝುಂಝಾವಾತ
ಘಾತಕ್ಕೆ ತತ್ತರಿಸುತಲೆದುದಲೆಯಲೆಯುರ್ಕಿ
ವಿಕ್ಷುಬ್ಧ ಸಾಗರದ ಫೇನಮಯ ನೀಲಿಮೆಯ
ರುಂದ್ರವರ್ತುಲ ವಕ್ಷವಿಸ್ತಾರಂ.

ಪಡುಗಡಲಿನಲ್ಲಿ ರವಿ ಇಳಿದ ದೃಶ್ಯ ಅದೆಷ್ಟು ಸುಂದರ !—

ಅನ್ನೆಗಮಿಳಿದು ಬಂದುದು ಬೈಗು ಪಡುವಣ ಮುಗಿಲ
ಮುಂಚಕ್ಕೆ. ಒಸಗೆಯೋಕುಳಿಯಾಡುದಾ ದೆಸೆಗೆ
ಕಡಲನೀರ್. ಅಗ್ನಿಚೂರ್ಣವನೆರಚಿದೋಲಂತೆ
ಲೋಲಿತತರಂಗೋರಗಾಭೀಳಮಾಯ್ತಾ ಮಹಾರ್ಣವಂ.

ಒಂದಾದ ಮೇಲೊಂದು ತೆರೆಗಳ ಸಂತತಿ, ಮೊರೆಮೊರೆದು ಭೋರ್ಗ… ಬರುವ ತೆರನನ್ನು ಇಷ್ಟು ಸಶಕ್ತವಾಗಿ ವರ್ಣಿಸಿದ ಪಂಕ್ತಿಗಳು ಇನ್ನೆಲ್ಲಿಯೂ … ದೊರೆಯುವುದಿಲ್ಲ—

ತೆರೆ ಪರಂಪರೆ : ಮೊರೆ ಪರಂಪರೆ : ಪರಂಪರೆಯ
ಬೆಳ್ನೊರೆ ನೊರೆಯ ಪೊರೆಯ ಸಾಗರದ ನಾಗರನ
ಭೋರ್ಗರೆವ ಭೋಗ ಕುಲ ಬಲಮವ್ವಳಿಸಿದುದು
ನಿರಂತರಂ ತಟಗತ ಅಶೋಕ ವನ ವಂಕಿಮ
ಶಿಲಾವೇಲೆಯಂ.

ಇಲ್ಲಿ ಆ ಅಲೆಗಳ ಮೊರೆತ ಸಾಂದ್ರವಾಗಿ ಗುಡಿಗಟ್ಟಿದಂತೆ, ಬಹು ಹೊತ್ತಿನ ತನಕ, ಅದರ ನಾದ ಪರಂಪರೆ ಅನುರಣಿತವಾಗುತ್ತಿರುತ್ತದೆ. ಬರಿಯ ಶಬ್ದಗಳಿಂದಲೇ ಅಲೆಗಳ ಮೊರೆತವನ್ನೂ, ಸ್ವರಗಳ ಏರಿಳಿತದಿಂದ ಅವುಗಳ ಮೇಲೇರಿಕೆಯನ್ನೂ, ಒಂದಾದಮೇಲೊಂದು ದಟ್ಟೈಸುವುದನ್ನೂ ಕಣ್ಣು ಕಾಣಬಹುದು. ಸಾಗರದ ನಾಗರನ ಭೋರ್ಗರೆವ ಭೋಗಕುಲ ಎಂದು ಹೇಳಿರುವುದು, ಸಾಗರದ ವಿಪುಲ ವಿಸ್ತಾರವನ್ನು ಇಲ್ಲಿಯ ದೀರ್ಘ ಸ್ವರದಿಂದ ಸೂಚಿಸಿರುವುದು, ನಿರಂತರಂ ಎಂದು ಹೇಳಿರುವುದು, ಇವೆಲ್ಲಾ ಎಷ್ಟು ಔಚಿತ್ಯಪೂರ್ಣವೆಂಬುದನ್ನು ಬೇರೆ ಹೇಳ ಬೇಕಾಗಿಲ್ಲ.

ಶ್ರೀರಾಮನ ಸಾಗರ ದರ್ಶನವನ್ನು ದೈವೀ ಹಿನ್ನೆಲೆಯಲ್ಲಿ ಪಡಿ ಮೂಡಿಸಿರುವುದು ಇಲ್ಲಿಯ ವಿಶಿಷ್ಟತೆ. ಅವನು ತನ್ನ ವ್ಯಕ್ತಿತ್ವವನ್ನು ಕಳೆದುಕೊಂಡು, ಅನಂತ ಪಾರಾವಾರದಲ್ಲಿ ತಲ್ಲೀನತೆಯನ್ನು ಹೊಂದಿದ ಸುಮುಹೂರ್ತ. ಕವಿಯ ಸಾಗರ ದರ್ಶನವೂ ಇವೇ ಆಗಿದೆ :

ನಿಷ್ಪಂದನಾದಂ ಸಿಂಧು ಧೀರನ್
ಸಗರಬಂಧು. ಅಂಬರದ ಸಲಿಲಾವತಾರಮೆನೆ
ನೋಟದೋಟಂ ಸುಯ್ದು ಸೋಲ್ವನ್ನೆಗಂ ಪರ್ವಿ,
ಪರ್ವತಂಬೋಲುರ್ಬಿದುದು ದಿಗಂತಂಬರಂ,
ಮೇಲ್ವಾಯ್ದುದುರುಳ್ವುದೆಂಬೊಂದಗುರ್ವಿಂ ಭ್ರಮಾ
ಭೀಕರಮಪಾರತಾ ಪ್ರತಿಮಮಾ ಅಪ್ರತಿಮ
ಸಲಿಲಾಕರಂ........
........ಭವ್ಯಮಾಯ್ತನುಭೂತಿ
ಪ್ರಸ್ರವಣ ಗಿರಿ ಶಿಖರ ಗುಹಾ ತಪೋಯೋಗದಿಂ
ರಸದರ್ಶಿಯಾಗಿರ್ದ ರಸ ಋಷಿ ರಘೂದ್ವಹ
ಮಹಾನ್‌ಮತಿಗೆ. ಮುನ್ನೀರ್ಗ್ಗೆಣೆಯೆ ಬಾನೊ? ಬಾನ್ಗೆಣೆಯೆ
ಮುನ್ನೀರೊ? ಮೇಣೆರಡುಮುಂ ತಾನೊ? ನೋಡುತಿರೆ,
ಕಣ್ ಪೀರ್ದುದಾ ನೀಲದ್ವಯಂಗಳಂ; ನನೆದು
ತೊಯ್ದುದಂತಃಕರಣಮಾವರ್ಣದಿಂ; ನೀಲಿ
ನಾಳನಾಳದಿ ಪರಿದು ನೀಲಮಾಯ್ತಾ ಮೆಯ್ಯ
ನೆತ್ತರುಂ; ನೀಲತರವಾದನಾ ನೀಲ ತನು
ರಾಮಚಂದ್ರಂ, ಹೃದಯಮಲೆಯಲೆಯೆದ್ದು, ನರ್ತಿಸಿ,
ಫೇನ ಚಂದನ ಶೋಭಿಯಾದುದು, ಸಮುದ್ರಮಂ
ಪ್ರತಿಕೃತಿಸಿ.

ಇದನ್ನು ಭೂಮಾನುಭೂತಿಯಿಂದಾದ ಭವ್ಯತಾ ಅನುಭವವೆಂದು ಕರೆಯದಿದ್ದರೆ, ಮತ್ತಾವುದನ್ನು ಕರೆಯಬೇಕು.? ಜೀವಗಳ ಆತ್ಮ ಪ್ರಕಾಶನದ ವಿಸ್ಫುಲಿಂಗದ ಪ್ರಭೆ ಈ ನುಡಿಗಳಲ್ಲಿದೆ.

ಮುದಿ ಮರ

ನಮ್ಮೂರ ಹೊಳೆಯ ಬಳಿ
ಎದ್ದು ನಿಂತಿದೆ : ಹೆಡೆಬಿಚ್ಚಿದ ಕರಿನಾಗರಂತೆ,
ಕುಂಭಕರ್ಣನ ಪೊದೆಪೊದೆಯ ಕೂದಲ
ಎಲೆಗಳಿಂದ, ಹರಹಿನಿಂದ ಕಬಂಧನ
ಕೈಯುಳ್ಳ ಮರವೊಂದು :
ಗುಬ್ಬಚ್ಚಿಗೂಡಿಲ್ಲ; ಶುಕಪಿಕಗಳು ಮೊದಲೆಯಿಲ್ಲ;
ಇರುವುದಲ್ಲಿ ಕಾಗೆಗೂಗೆಗಳ ಗೂಡು,
ಹೊಲಸುನಾರುವ ಕೊಳೆತ ಮೊಟ್ಟೆಗಳ ದುರ್ನಾತ!
ಅದನೆ ಮೂಸಿ ನೋಡುತ್ತ,
ಧೂಳು ತುಂಬಿಹುದು ಪದರಪದರದಲಿ:
ಲಂಬಕರ್ಣನ ಯೋಚನೆ ;
ವರ್ಷಕ್ಕೆರಡುಬಾರಿ ಎಲೆಯುದುರಿ ಚಿಗುರುವುದು
ಆದರೂ—ಹಾಳುಯೋಚನೆಯ ತುರಿ–ಕಜ್ಜಿ ;
ವರ್ಷದಲಿ ನಾಲ್ಕೂ ತಿಂಗಳು ಹೀರುವುದು ಮಳೆನೀರ;
ಬುಡದಲ್ಲಿ–ಸದಾ ನದಿಯಲ್ಲೆ ಅದ್ದಿಹುದು ತುಟಿಯನ್ನು:
ತೊಗಟೆಗಳು ಹಣ್ಣಾದರೂ ರೆಂಬೆ–ಕೊಂಬೆಗಳು
ಬೆಳೆಯುತ್ತಲೇಯಿವೆ ದಿನದಿನಕು ;
ಅದರ ಕೆಳಗೋ,
ಪ್ರತಿ ಬಾರಿಗೂ ಬಿದ್ದ ಬೀಜದಿ ಹುಟ್ಟುವ
ಭ್ರೂಣಗಳು–ಗಿಡ–ಸಸಿ ; ಎಲ್ಲವನು
ತನ್ನ ನೆರಳಿಂದಲೇ ಹಿಸುಕುವ ಯತ್ನ :
ಸಾವಿರಾರು ಭ್ರೂಣಹತ್ಯೆ ವರ್ಷ ಒಂದರಲಿ!
ಗಾಳಿಗಾಗಿ ಹಲ್ಕಿರಿವುದು, ಕೈಚಾಚುವುದು
ಹೊಸ ಮೇಘಕ್ಕಾಗಿ ಮತ್ತೆ ಮತ್ತೆ,
ಬಾನೆತ್ತರ ಬೆಳೆದು ನಿಂತೀ ಮುದಿಮರ!

ಎನ್. ಎಸ್. ದಕ್ಷಿಣಾಮೂರ್ತಿ

ತೆಲುಗಿನಲ್ಲಿ ರಾಮಾಯಣಗಳು

ಶ್ರೀ ರಾಮಾಯಣ, ಮಹಾಭಾರತ, ಭಾಗವತಾದಿ ಗ್ರಂಥಗಳು ಭಾರತೀಯ ಸಾಹಿತ್ಯದ ಮೇರು ಶಿಖರಗಳು. ಇವುಗಳನ್ನು ರಚಿಸಿದ ಋಷಿಕವಿಗಳು ಸದಾ ವಂದ್ಯರು; ಇವರು ಶಾಶ್ವತ ಯಶಸ್ಸನ್ನು ಪಡೆದು ಜನಾದರಣೆಗೆ ಪಾತ್ರರಾಗಿದ್ದಾರೆ, ಅನೇಕ ಕವಿ–ಲೇಖಕ–ಗಾಯಕ–ಸಾಹಿತಿಗಳಿಗೆ ಪ್ರೇರಕರಾಗಿದ್ದಾರೆ. ಈ ಕವಿಗಳ ದಿವ್ಯ ವಾಣಿ, ಲೌಕಿಕ ಜೀವನದಿಂದ ಕಲುಷಿತವಾದ ಮನಸ್ಸನ್ನು ಸತ್ವಮಾರ್ಗಕ್ಕೆ ಒಯ್ದು ರಸಸ್ವರೂಪನಾದ ಭಗವಂತ (ರಸೋ ವೈ ಸಃ)ನ ಕಡೆಗೆ ಉನ್ಮುಖವಾಗಲು ಉದ್ಬೋಧಿಸುತ್ತದೆ.

ಆದಿಕವಿ ವಾಲ್ಮೀಕಿಯಿಂದ ರಚಿತವಾದ ಶ್ರೀಮದ್ರಾಮಾಯಣ ಒಂದು ಅದ್ಭುತ ಕಲಾಕೃತಿ, ಸುಂದರ ಮಹಾಕಾವ್ಯ; ವಸ್ತು, ಪಾತ್ರ, ಅಲಂಕಾರ, ರಸ–ಎಲ್ಲ ದೃಷ್ಟಿಗಳಿಂದಲೂ ಅದು ಒಂದು ಅಸಾಧಾರಣ ಕೃತಿ. ಅದರಲ್ಲಿ ಚಿತ್ರಿತವಾಗಿರುವ ಆದರ್ಶ ಪಾತ್ರಗಳು ಎಲ್ಲರ ಮನಸ್ಸನ್ನೂ ಸೆಳೆಯುತ್ತವೆ, ನೂತನ ಕಾವ್ಯ ನಿರ್ಮಾಣಕ್ಕೆ ಪ್ರೇರಣೆಯನ್ನು ಕೊಡುತ್ತವೆ.

ರಾಮಕಥೆ ನಮ್ಮ ಜನಜೀವನದ ಮೇಲೆ ಗಾಢವಾದ ಪ್ರಭಾವವನ್ನು ಬೀರುವುದು ಮಾತ್ರವಲ್ಲದೆ ಅದರ ಅಂಗವಾಗಿಯೇ ಶೋಭಿಸುತ್ತಿದೆ. ಅದರ ಪ್ರಭಾವ ಸಾಹಿತ್ಯ, ಸಂಗೀತಗಳ ಮೇಲೆ ಇದ್ದೇ ಇದೆ; ವಾಸ್ತು, ಶಿಲ್ಪ, ಚಿತ್ರಕಲೆಗಳ ಮೇಲೂ ಅದರ ಪ್ರಭಾವ ಕಡಮೆಯೇನೂ ಇಲ್ಲ. ನಮ್ಮ ದೇಶದಲ್ಲೇ ಅಲ್ಲದೆ ಇತರ ದೇಶಗಳಲ್ಲಿಯೂ ನಾವು ಇಂಥ ಪ್ರಭಾವವನ್ನು ಗುರುತಿಸಬಹುದಾಗಿದೆ. ನಮ್ಮ ದೇಶದಲ್ಲಿ ರಾಮಕಥೆ ಕೇಳದವರು ಯಾರು? ರಾಮಾಯಣ ಗ್ರಂಥ ಇಲ್ಲದಿರುವ ಭಾಷೆಯಾದರೂ ಯಾವುದು?

"ತಿಣಿಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ" ಎಂದು ಕುಮಾರವ್ಯಾಸ ಹೇಳಿದುದು ತೆಲುಗು ರಾಮಾಯಣ ಗ್ರಂಥಗಳಿಗೆ ಸರಿಯಾಗಿ ಅನ್ವಯಿಸುತ್ತದೆ. ತೆಲುಗಿನಲ್ಲಿ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಅನೇಕ ರಾಮಾಯಣಗಳು ಇವೆ. ರಾಮಾಯಣ, ಭಾರತ ಮತ್ತು ಭಾಗವತ—ಈ ಮೂರೂ

ತೆಲುಗು ಜನರಿಗೆ ಬಹಳ ಪ್ರಿಯವಾದ ಗ್ರಂಥಗಳು. ಕನ್ನಡಿಗರಿಗೆ ರಾಮಾಯಣ ಭಾರತಗಳು ಪ್ರಿಯವಾದವು, ಆದರೆ ಆಂಧ್ರದಲ್ಲಿ ಭಾಗವತವು ಪ್ರಚಾರದಲ್ಲಿರುವಷ್ಟು ನಮ್ಮಲ್ಲಿ ಭಾಗವತವು ಪ್ರಚಾರದಲ್ಲಿಲ್ಲ. ತೆಲುಗಿನಲ್ಲಿ ರಾಮಾಯಣ ಗ್ರಂಥರಚನೆಗೆ ರಾಮಭಕ್ತಿ ಪ್ರಸಾರ ಬಹಳಮಟ್ಟಿಗೆ ಕಾರಣವಾಗಿದೆಯೆಂದು ಹೇಳಬಹುದು. ರಾಮ ನಾಮವನ್ನು ಬರೆದರೆ ಜನ್ಮಸಾರ್ಥಕವಾಗುವುದೆಂಬ ನಂಬಿಕೆ ಈಗಲೂ ಜನರಲ್ಲಿ ಹಾಗಿರುವಲ್ಲಿ ರಾಮಾಯಣವನ್ನೇ ಬರೆದರೆ ಎಷ್ಟು ಅಮೋಘವಾದ ಕೆಲಸವಾಗು ವುದು, ಅದು ಮುಕ್ತಿದಾಯಕವಲ್ಲವೇ ?

ತೆಲುಗಿನಲ್ಲಿ ಮೊದಲು ಹುಟ್ಟಿದುದು ಭಾರತ. ತೆಲುಗಿನ ಆದಿಕವಿಯೆಂದು ಕರೆಯಲ್ಪಟ್ಟ ನನ್ನಯಭಟ್ಟನು ಹನ್ನೊಂದನೆಯ ಶತಮಾನದಲ್ಲಿ ಭಾರತ ಅನುವಾದ ಕಾರ್ಯವನ್ನು ಪ್ರಾರಂಭಿಸಿದನು. ನನ್ನಯ, ತಿಕ್ಕನ ಮತ್ತು ಎರ್ರಾಪೆಗಡ—ಈ ಮೂವರು ಕವಿಗಳಿಂದ ಆಂಧ್ರ ಮಹಾಭಾರತವು ಪೂರ್ಣ ಯಾಯಿತು. ಆಂಧ್ರ ಮಹಾಭಾರತವು ಅನುವಾದಕ್ಕೆ ಮಾದರಿಯಾಯಿತು. ತೆಲುಗಿನಲ್ಲಿ ರಾಮಾಯಣ ಗ್ರಂಥಗಳು ಅನುವಾದ ರೂಪದಲ್ಲಿಯೂ, ಸ್ವತಂತ್ರ ಕಾವ್ಯಗಳಾಗಿಯೂ ರಚಿತವಾದವು. ಕೆಲವು ದೊಡ್ಡ ಕಾವ್ಯಗಳಾಗಿಯೂ, ಕೆಲವು ಗಾತ್ರದಲ್ಲಿ ಸಣ್ಣದಾಗಿಯೂ, ಕೆಲವು ಅಚ್ಚ ತೆಲುಗಿನಲ್ಲಿಯೂ, ಕೆಲವು ದಂಡಕ ಯಕ್ಷಗಾನ ಮುಂತಾದ ರೂಪಗಳಲ್ಲಿಯೂ ರಚಿತವಾಗಿ ರಾಮಾಯಣ-ವಾಙ್ಮಯ ವ್ಯಾಪ್ತಿಗೆ ಕಾರಣವಾದವು.

ತೆಲುಗು ಸಾಹಿತ್ಯದಲ್ಲಿ ನನ್ನಯ, ತಿಕ್ಕನ ಮತ್ತು ಎರ್ರಾಪೆಗಡ—ಕವಿತ್ರಯ ರೆಂದು ಪ್ರಸಿದ್ಧರಾಗಿದ್ದಾರೆ. ಎರ್ರಾಪೆಗಡ (೧೪ನೆಯ ಶತಮಾನ) 'ಭಾರತ' ಅರಣ್ಯಪರ್ವವನ್ನು ಪೂರ್ತಿಮಾಡಿದ ಕವಿ. ಈತ 'ಹರಿವಂಶ'ವನ್ನು ಬರೆದಿದ್ದಾನೆ. ರಾಮಾಯಣವನ್ನು ಕೂಡ ಬರೆದಿದ್ದನೆಂದೂ, ಸುಮಾರು ಇನ್ನೂರು ವರ್ಷಗಳ ಹಿಂದಿನವರೆಗೂ ಈ ಗ್ರಂಥ ಲಭ್ಯವಾಗಿತ್ತೆಂದೂ ತಿಳಿಯುತ್ತದೆ. ಆದರೆ ಇಂದು ಗ್ರಂಥ ಲಭ್ಯವಾಗದಿರುವುದು ದುರದೃಷ್ಟವೇ ಸರಿ. ಕೂಚಿಮಂಚಿ ತಿಮ್ಮಕವಿ "ಸರ್ವಲಕ್ಷಣ ಸಾರಸಂಗ್ರಹ"ದಲ್ಲಿ ಎರ್ರಾಪೆಗಡ-ರಾಮಾಯಣದ ಬಾಲಕಾಂಡ ದಿಂದ ಕೆಲವು ಪದ್ಯಗಳು ಉದಾಹೃತವಾಗಿವೆ. ಶ್ರೀ ವೇಟೂರಿ ಪ್ರಭಾಕರಶಾಸ್ತ್ರಿಗಳು ಬಹಳ ಪ್ರಯಾಸಪಟ್ಟು ಸಂಶೋಧನೆಮಾಡಿ ಯುದ್ಧಕಾಂಡದ ಕೆಲವು ಪದ್ಯಗಳನ್ನು 'ಭಾರತಿ' ಪತ್ರಿಕೆಯಲ್ಲಿ ಪ್ರಕಟಿಸಿದ್ದರು.

ಇದಾದ ಮೇಲೆ ರಂಗನಾಥ ರಾಮಾಯಣದ ಹೆಸರು ಹೇಳಬಹುದು. ರಾಮಾಯಣವನ್ನು ರಂಗನಾಥನು ರಚಿಸಿದನೇ ಅಥವಾ ಬುದ್ಧಾರೆಡ್ಡಿ ರಚಿಸಿದನೇ ಎನ್ನುವ ಪ್ರಶ್ನೆಯು ಈಗ ಬೇಕಾಗಿಲ್ಲ. ಇದು ಕ್ರಿ. ಶ. ೧೩೧೦–೧೩ ಮಧ್ಯದಲ್ಲಿ ರಚಿತವಾಗಿರಬೇಕೆಂದು ತೋರುತ್ತದೆ. ಇದು ವಾಲ್ಮೀಕಿ ರಾಮಾಯಣದ ಸ್ವತಂತ್ರ ಅನುವಾದ; ದ್ವಿಪದ ಛಂದಸ್ಸಿನಲ್ಲಿ ರಚಿತವಾಗಿ ಪಂಡಿತ-ಪಾಮರ

ಮನಸ್ಸನ್ನು ಅನುರಂಜಿಸುತ್ತದೆ. ಪಶ್ಚಿಮಾಂಧ್ರದೇಶದಲ್ಲಿ ಇದು ಬಹಳ ಪ್ರಚಾರದಲ್ಲಿದೆ. ಇದರಲ್ಲಿ 'ಸುಲೋಚನಾ ವೃತ್ತಾಂತ'ದಂಥ ಘಟ್ಟಗಳು ಅತಿ ರಮಣೀಯವಾಗಿ ಚಿತ್ರಿತವಾಗಿವೆ.

ತೆಲುಗಿನಲ್ಲಿ ಬಹಳ ಪ್ರಚಾರದಲ್ಲಿರುವ ಗ್ರಂಥ ಭಾಸ್ಕರ ರಾಮಾಯಣ. ಭಾರತದಂತೆ ಇದು ಕೂಡ ಏಕಕವಿ ಕೃತವಲ್ಲ. ಹದಿಮೂರು, ಹದಿನಾಲ್ಕನೆಯ ಶತಮಾನಗಳ ನಡುವೆ ಇದ್ದ ಸಾಹಿಣಿ ಮಾರನನ ಆಸ್ಥಾನದಲ್ಲಿ ಪ್ರಧಾನ ಕವಿಯಾಗಿದ್ದ ಹಳಕ್ಕಿ ಭಾಸ್ಕರನೂ, ಆತನ ಪುತ್ರನಾದ ಮಲ್ಲಿಕಾರ್ಜುನ ಭಟ್ಟನೂ ಶಿಷ್ಯನಾದ ಕುಮಾರ ರುದ್ರದೇವನೂ, ಮಿತ್ರನಾದ ಅಯ್ಯಲಾರ್ಯನೂ ಈ ಗ್ರಂಥವನ್ನು ಪೂರ್ತಿಮಾಡಿದರು. ಭಾಸ್ಕರನು ಅರಣ್ಯಕಾಂಡವನ್ನೂ, ಯುದ್ಧಕಾಂಡದಲ್ಲಿ ೧೧೮೪ ಪದ್ಯಗಳನ್ನೂ ಮಾತ್ರ ರಚಿಸಿದನು. ಮಲ್ಲಿಕಾರ್ಜುನನು ಬಾಲಕಾಂಡ, ಕಿಷ್ಕಿಂಧಾಕಾಂಡ ಮತ್ತು ಸುಂದರಕಾಂಡಗಳನ್ನು ರಚಿಸಿದನು. ಕುಮಾರ ರುದ್ರದೇವನು ಅಯೋಧ್ಯಾಕಾಂಡವನ್ನೂ ಅಯ್ಯಲಾರ್ಯನು ಯುದ್ಧಕಾಂಡದ ಉಳಿದ ಭಾಗವನ್ನೂ ರಚಿಸಿದರು. ಈ ರಾಮಾಯಣ ಕವಿ ಚತುಷ್ಟಯರಿಂದ ರಚಿತವಾದರೂ ಒಂದು ಯೋಜನೆಗೆ ಬದ್ಧವಾಗಿರುವುದರಿಂದ ಒಂದೇ ಧಾಟಿಯಲ್ಲಿದೆ, ಭಾಷೆ–ಶೈಲಿಯಲ್ಲಿ ಅಷ್ಟು ವ್ಯತ್ಯಾಸ ಕಾಣುವುದಿಲ್ಲ. ಇದರಲ್ಲಿ ಸಂವಾದ ಮತ್ತು ಸನ್ನಿವೇಶಗಳಲ್ಲಿ ಚಮತ್ಕಾರಗಳು ಎಷ್ಟೋ ಪ್ರಕಟವಾಗಿವೆ. ರಸೋಚಿತವಾಗಿ ಶಬ್ದಗಳು ಪ್ರಯುಕ್ತವಾಗಿವೆ. ಸ್ವಭಾವೋಕ್ತಿ, ದೀಪಕ, ಉಪಮಾ, ದೃಷ್ಟಾಂತ ಮುಂತಾದ ಅಲಂಕಾರಗಳು ಸಹಜವಾಗಿ ಬಂದಿವೆ. ಅಲ್ಲಲ್ಲಿ ಪ್ರಕೃತಿ ವರ್ಣನೆಯೂ ಸೊಗಸಾಗಿದೆ.

ಭಾಸ್ಕರರಾಮಾಯಣದ ನಂತರ ಪ್ರಸಿದ್ಧವಾಗಿರುವ ರಾಮಾಯಣಗಳಲ್ಲಿ ಗೋಪೀನಾಥ ರಾಮಾಯಣದ ಹೆಸರನ್ನು ಹೇಳಬಹುದು. ಇದರ ಕವಿ ಗೋಪೀನಾಥ ವೆಂಕಟಕವಿ (ಕ್ರಿ.ಶ. ೧೮೩೦–೧೮೮೧), ನೆಲ್ಲೂರು ಜಿಲ್ಲೆಯ ಲಕ್ಷ್ಮೀಪುರ ಗ್ರಾಮವಾಸಿ. ಈ ಗೋಪೀನಾಥ ರಾಮಾಯಣ ವಾಲ್ಮೀಕಿ ರಾಮಾಯಣಕ್ಕೆ 'ಅನ್ಯೂನಾತಿರಿಕ್ತ'ವಾದ ಅನುವಾದ. ಈ ಗ್ರಂಥವು ಶ್ರೀಕೃಷ್ಣನಿಗೆ ಸಮರ್ಪಿತವಾಗಿದೆ. ರಾಮಾಯಣದ ಆರು ಕಾಂಡಗಳು ಮಾತ್ರ ಇದರಲ್ಲಿವೆ. ಇದರಲ್ಲಿ ಅನುಪ್ರಾಸಾದಿ ಅಲಂಕಾರಗಳು ಹಿತಮಿತವಾಗಿ ಬಂದಿವೆ.

ಘನಗಿರಿ ರಾಮಕವಿಯು ರಚಿಸಿರುವ ಯಥಾ ವಾಲ್ಮೀಕಿ ರಾಮಾಯಣ ಪೂರ್ತಿಯಾಗಿ ಲಭ್ಯವಾಗಿಲ್ಲ. ಬಾಲಕಾಂಡದ ಭಾಗವು ಮಾತ್ರ ದೊರೆತಿದೆ. ಸಂಸ್ಕೃತದಲ್ಲಿ ೭೭ ಸರ್ಗಗಳಿದ್ದರೆ ತೆಲುಗಿನಲ್ಲಿ ಹನ್ನೆರಡು ಆಶ್ವಾಸಗಳಿವೆ. ಆಶ್ವಾಸಗಳ ಕೊನೆಯಲ್ಲಿ ಬಂಧಕವಿತ್ವವಿದೆ.

ರಾಮಾಯಣವನ್ನು ಬರೆದ ಲೇಖಕಿಯರಲ್ಲಿ ಮೊಲ್ಲಳ ಹೆಸರು ಮುಖ್ಯವಾದುದು. ಈಕೆ ಬರೆದ ರಾಮಾಯಣವು 'ಮೊಲ್ಲ ರಾಮಾಯಣ'ವೆಂದು

ಪ್ರಸಿದ್ಧಿಪಡೆದಿದೆ. ಅದರಲ್ಲಿ ಆರು ಕಾಂಡಗಳಿವೆ. ಪದ್ಯಗಳು ಚೆನ್ನಾಗಿವೆ. ಈ ಕುಂಬಾರ ಕುಲದವಳು. ಈಕೆಯ ಗಂಡನ ಹೆಸರಾಗಲಿ, ವಂಶದ ಹೆಸರಾ ತಿಳಿಯುವುದಿಲ್ಲ. ತನ್ನ ರಾಮಾಯಣದಲ್ಲಿ ತನ್ನ ತಂದೆ ಶಿವಭಕ್ತನೆಂದೂ, ಗು ಲಿಂಗಜಂಗಮಾರ್ಚನ ತತ್ಪರನೆಂದೂ, ತನಗೆ ಶ್ರೀಮದ್ಗೌರೀಶ್ವರನಾದ ಗೋಪ ಶ್ರೀಕಂಠಮಲ್ಲೇಶ್ವರನ ಪ್ರಸಾದದಿಂದ ಕಾವ್ಯಸಂಪದ ಪ್ರಾಪ್ತವಾಯಿತೆಂ ಹೇಳಿಕೊಂಡಿದ್ದಾಳೆ. ಈಕೆಯ ಜನ್ಮಸ್ಥಾನ ನೆಲ್ಲೂರು ಮಂಡಲದ ಆತ್ಮಕ ಎಂದು ಕೆಲವರೂ, ಗೋಪವರವೆಂದು ಮತ್ತೆ ಕೆಲವರೂ ಅಭಿಪ್ರಾಯ ಪಡುತ್ತಾ ಆದರೆ ಈಕೆಯ ಕಾಲ ದೇಶಗಳ ಬಗ್ಗೆ ಏನೂ ನಿರ್ಣಯಮಾಡುವಂತಿ ವಿರೋಧಾಭಾಸ, ಶ್ಲೇಷಾದಿ ಅಲಂಕಾರಗಳು ಈಕೆಯ ಕಾವ್ಯದಲ್ಲಿ ಬ ಸುಂದರವಾಗಿಯೂ ಪ್ರಸಂಗಗಳಿಗೆ ಅನುಗುಣವಾಗಿಯೂ ಬಂದಿವೆ. ಈಕೆ ಕಾವ್ಯ ಪ್ರೌಢವಾಗಿದೆ. ಆದರೂ ಕೆಲವೆಡೆಗಳಲ್ಲಿ ದುಷ್ಟ ಸಮಾಸಗಳು ಕೆ ಬರುತ್ತವೆ. ಒಟ್ಟನಲ್ಲಿ ಹೇಳುವುದಾದರೆ ಈಕೆಯ ಕಾವ್ಯ 'ರುಚಿಯಾಗಿಯ ಕಿವಿಗಳಿಗೆ ಇಂಪಾಗಿಯೂ, ವಿಬುಧರ ಮನಸ್ಸಿಗೆ ಹರ್ಷದಾಯಕ'ವಾಗಿಯೂ ಪ

'ಆಂಧ್ರ ವಾಲ್ಮೀಕಿ ರಾಮಾಯಣ'ವನ್ನು ಶ್ರೀ ವಾವಿಲಿ ಕೊಲನು ಸುಬ್ಬರಾ ಅವರು ಕ್ರಿ.ಶ. ೧೯೦೦–೧೯೦೮ ನಡುವೆ ರಚಿಸಿದರು. ಇವರ ರಾಮಾಯಣ ಉತ್ತರಕಾಂಡವೂ ಇದೆ. ಇವರು ವಾಲ್ಮೀಕಿ ರಾಮಾಯಣವನ್ನು ಭಾಷಾ ಮಾಡಿದ್ದರೂ ಅಲ್ಲಲ್ಲಿ ಕೆಲವು ಪದ್ಯಗಳು ಸ್ವತಂತ್ರವಾಗಿ ಬಂದಿವೆ. ಇವರ ಕಾ ದಲ್ಲಿ ಪರಿಕರ, ಪರಿಕುರಾಂಕುರ, ಶ್ಲೇಷ ಮುಂತಾದ ಅಲಂಕಾರಗಳು ಯಥಾ ಪೋಷಕಗಳಾಗಿ ಬಂದಿವೆ. ಈ ರಾಮಾಯಣ ಭಾಸ್ಕರ ರಾಮಾಯಣ ಹೆಚ್ಚು ಪ್ರಚಾರದಲ್ಲಿದೆ.

'ರಾಮಾಭ್ಯುದಯ' ಮಧ್ಯಕಾಲದ ಅಯ್ಯಲರಾಜು ರಾಮಭದ್ರಕವಿ (ಕ್ರಿ. ಶ. ೧೫೭೦–೧೫೮೦) ಯಿಂದ ರಚಿತವಾದುದು. ಇದು ಸಂಕ್ಷೇಪ ಕಾ ಪರಂಪರೆಗೆ ಸೇರುತ್ತದೆ. ಇದು ಒಂದು ಪ್ರೌಢ ಪ್ರಬಂಧ ಕಾವ್ಯ. ಉತ್ತ ಕಾಂಡದ ಕಥೆ ಇದರಲ್ಲಿಲ್ಲ. ಇದರಲ್ಲಿರುವ ಪದ್ಯಗಳು ಮಾಧುರ್ಯಯುಕ್ತವಾ ಆದರೆ ಇದು ಮೇಲೆ ಹೇಳಿದ ಗ್ರಂಥಗಳಂತೆ ಅಷ್ಟು ಪ್ರಚಾರದಲ್ಲಿಲ್ಲ.

ವಿಜಯನಗರದ ಅರಸರಲ್ಲಿ ಶ್ರೀ ಕೃಷ್ಣದೇವರಾಯನು ಪ್ರಸಿದ್ಧನಾ ತಂಜಾವೂರು ರಾಜರಲ್ಲಿ ರಘುನಾಥ ನಾಯಕನು ಹೆಚ್ಚು ಖ್ಯಾತಿ ಪಡೆದಿದ್ದಾ ಈತ ಕಲಾಪೋಷಕ, ಸ್ವತಃ ಕವಿ. ಎಷ್ಟೋ ಕಾವ್ಯಗಳನ್ನೂ ಯಕ್ಷಗಾ ಗಳನ್ನೂ ರಚಿಸಿದ್ದಾನೆ. ಸುಮಾರು ಇಪ್ಪತ್ತು ಗ್ರಂಥಗಳು ಈತನ ಹೆಸರಿ ದೊರೆಯುತ್ತವೆ. ಈತನ ಕವಿತೆ ಮೃದು ಮಧುರವಾಗಿಯೂ ಮ ರಂಜಕವಾಗಿಯೂ ಇದೆ. ಈತ ಸಂಸ್ಕೃತದಲ್ಲಿ 'ಸಂಗೀತ ಸುಧಾ' ಮ 'ಭರತ ಸುಧಾ' ಗ್ರಂಥಗಳನ್ನು ರಚಿಸಿದ್ದಾನೆ. ಈತ ತೆಲುಗಿನಲ್ಲಿ ರಚಿ

ರಾಮಾಯಣವು ಸಂಗ್ರಹ ರೂಪದಲ್ಲಿದೆ. 'ಮಾಟಿಕಿ ರಸಪರಿಪಾಟಿಕಿ ಮೇಟಿಕ ವುಲು ಮೆಚ್ಚಿ ಮೇಲು ಮೇಲನ' (ಮಾತಿಗೆ, ರಸ ಪರಂಪರೆಗೆ, ಹಿರಿಯ ಕವಿಗಳು ಮೆಚ್ಚಿ ಮೇಲಾದುದು ಎನ್ನುವಂಥ) ರಾಮಾಯಣ ಗ್ರಂಥವನ್ನು ರಚಿಸಿ ಪಂಡಿತರ ಪ್ರಶಂಸೆಗೆ ಪಾತ್ರನಾಗಿದ್ದಾನೆ. ಈತನ ಗ್ರಂಥದಲ್ಲಿ ಈತನ ಶಾಸ್ತ್ರಪರಿಜ್ಞಾನ ವನ್ನೂ ಪಾತ್ರ ಚಿತ್ರಣ ಕೌಶಲವನ್ನೂ ವಿಶೇಷವಾಗಿ ಗುರುತಿಸಬಹುದು. ಶೃಂಗಾರ, ಹಾಸ್ಯಗಳ ಸುಂದರ ಮಿಶ್ರಣ ಇದರಲ್ಲಿದೆ. ಈ ಗ್ರಂಥ ಪೂರ್ತಿಯಾಗಿ ಲಭ್ಯವಾಗದೆ ಸ್ವಲ್ಪ ಭಾಗ ಮಾತ್ರ ಲಭ್ಯವಾಗಿದೆ.

ಅನಂತರಾಜು ಜನ್ನಯ, ಚಿತ್ರ ಕವಿ ವೆಂಕಟರಮಣ ಕವಿ, ಮಿಕ್ಕಿಲಿ ಮಲ್ಲಿಕಾರ್ಜುನ—ಇವರುಗಳು ಕೂಡ ರಾಮಾಯಣ ಸಂಗ್ರಹಗಳನ್ನು ರಚಿಸಿ ದ್ದಾರೆ. ಜನ್ನಯನ 'ರಾಮ ಕಥಾಭಿರಾಮ' ಗ್ರಂಥದಲ್ಲಿ ಹತ್ತು ಆಶ್ವಾಸ ಗಳಿವೆ, ಮಲ್ಲಿಕಾರ್ಜುನನ 'ರಾಮಚಂದ್ರೋಪಾಖ್ಯಾನ'ದಲ್ಲಿ ಏಳು ಆಶ್ವಾಸ ಗಳಿವೆ, ಆದರೆ ಅದರಲ್ಲಿ ವಚನವಿಲ್ಲ. ಆಧುನಿಕ ಕವಿಗಳಲ್ಲಿ ಪ್ರಖ್ಯಾತರಾದ ಶ್ರೀ ಜನಮಂಚಿ ಶೇಷಾದ್ರಿಶರ್ಮಾ ಅವರು 'ಧರ್ಮಸಾರ ರಾಮಾಯಣ'ವನ್ನೂ, ಶ್ರೀ ವಿಶ್ವನಾಥ ಸತ್ಯನಾರಾಯಣ ಅವರು 'ಶ್ರೀಮದ್ರಾಮಾಯಣ ಕಲ್ಪವೃಕ್ಷ'ವನ್ನೂ ರಚಿಸಿದ್ದಾರೆ. ಈ ಗ್ರಂಥಗಳೆಲ್ಲಾ ವಾಲ್ಮೀಕಿಯ ಮಾರ್ಗವನ್ನೇ ಹೆಚ್ಚಾಗಿ ಅವ ಲಂಬಿಸುತ್ತವೆ.

ವಿಸ್ತಾರವಾಗಿಯೋ ಸಂಕ್ಷೇಪವಾಗಿಯೋ ರಾಮಕಥೆಯನ್ನು ಹೇಳದೆ ಕಥೆ ಯಲ್ಲಿ ಸ್ವಲ್ಪ ಸ್ವಾತಂತ್ರ್ಯವನ್ನು ವಹಿಸಿಕೊಂಡು ಪ್ರಬಂಧ ಲಕ್ಷಣವನ್ನೇ ಮುಖ್ಯ ವೆಂದು ಗುರುತಿಸಿ, ರಾಮಾಯಣಗಳನ್ನು ರಚಿಸಿದವರು ಹಲವರು. ಮೇಲೆ ಹೇಳಿದ ಪರಂಪರೆಗೆ ಇದು ಭಿನ್ನವಾದುದೆಂದು ಹೇಳಬಹುದು. ಇಂಥ ಕಾವ್ಯಗಳಲ್ಲಿ ಶೈವ ಬ್ರಾಹ್ಮಣನಾದ ನಾಗಲಿಂಗ ಕವಿ ರಚಿಸಿದ 'ಪಟ್ಟಾಭಿರಾಮ ವಿಲಾಸ'ವೂ ವಾರಣಾಸಿ ವೆಂಕಟೇಶ್ವರ ಕವಿ ರಚಿಸಿದ 'ರಾಮ ಚಂದ್ರೋಪಾ ಖ್ಯಾನ'ವೂ ಮುಖ್ಯವಾದವು. 'ದಾಶರಥಿ ವಿಲಾಸ', 'ಶೃಂಗಾರ ರಾಘವ', 'ರಘುರಾಮ ವಿಜಯ', 'ದಶರಥ ರಾಜನಂದನ ಚರಿತ್ರೆ' 'ಶ್ರೀರಾಮ ಚರಿತ್ರೆ', 'ಸಾಂಖ್ಯ ರಾಮಾಯಣ', 'ರಾಮ ವಿಲಾಸ', 'ಸೀತಾರಾಮ ವಿಲಾಸ', 'ಲಕ್ಷ್ಮಣ ವಿಜಯ' ಮುಂತಾದ ಗ್ರಂಥಗಳೂ ಈ ಪರಂಪರೆಗೆ ಸೇರುತ್ತವೆ.

'ಮಂಗಳಾದೀನಿ ಮಂಗಳ ಮಧ್ಯಾನಿ ಮಂಗಳಾಂತಾನಿ ಕಾವ್ಯಾನಿ' ಎನ್ನುವುದನ್ನು ಪಾಲಿಸಿ ಕಾವ್ಯಗಳನ್ನು ಬರೆಯುವ ಸಂಪ್ರದಾಯವೂ ನಮ್ಮಲ್ಲಿದೆ. ಈ ಸಂಪ್ರದಾಯವನ್ನು ಒಪ್ಪುವವರು ಕೆಲವರು 'ಕಲ್ಯಾಣ ಪರಂಪರೆ'ಯ ರಾಮಾಯಣಗಳನ್ನು ರಚಿಸಿದ್ದಾರೆ: ಎಂದರೆ ಸೀತಾಕಲ್ಯಾಣದವರೆಗಿನ ಕಥೆ ಯನ್ನು ಮಾತ್ರ ತೆಗೆದುಕೊಂಡು ಕಾವ್ಯಗಳನ್ನು ಬರೆದಿದ್ದಾರೆ. ಇಂಥ ಕಾವ್ಯಗಳಲ್ಲಿ ಪಿಡುಪರ್ತಿ ಬಸವಪ್ಪ ಕವಿಯ 'ಸೀತಾ ಕಲ್ಯಾಣ', ಚೆನ್ನವರ ಮಂತ್ರಿಯ 'ಸೀತಾ

ಕಲ್ಯಾಣ', ಬೇತಪೂಡಿ ಕೃಷ್ಣಯನ 'ಜಾನಕೀರಾಘವ', ಕೂಚಿಮಂಚಿ ಜಗ್ಗ ಕವಿಯ 'ಜಾನಕೀ ಪರಿಣಯ' ಮತ್ತು ಸಿಂಗರಾಚಾರ್ಯನ 'ಸೀತಾಕಲ್ಯಾಣ' ಪ್ರಸಿದ್ಧವಾದವು.

ಅಚ್ಚ ತೆಲುಗಿನಲ್ಲಿ ಕೆಲವು ಕವಿಗಳು ರಾಮಾಯಣವನ್ನು ರಚಿಸಿದ್ದಾರೆ. ಇಂಥವರಲ್ಲಿ ಕೂಚಿಮಂಚಿ ತಿಮ್ಮಕವಿಯು ಅಗ್ರಣಿಯಾಗಿದ್ದಾನೆ.

ತೆಲುಗಿನಲ್ಲಿ ಶ್ಲೇಷ ಪರಂಪರೆಯಲ್ಲಿ ಅನೇಕ ರಾಮಾಯಣಗಳು ರಚಿತವಾಗಿವೆ. ಇದು ತೆಲುಗು ಸಾಹಿತ್ಯದ ಒಂದು ವೈಶಿಷ್ಟ್ಯ. ಎರಡು ಅರ್ಥಗಳು, ಮೂರು ಅರ್ಥಗಳು, ನಾಲ್ಕು ಅರ್ಥಗಳನ್ನು ಕೊಡುವಂಥ ಕಾವ್ಯಗಳು ಈ ಭಾಷೆಯಲ್ಲಿ ಎಷ್ಟೋ ರಚಿತವಾಗಿವೆ. ಇವುಗಳಿಗೆ ದ್ವ್ಯರ್ಥಿ ಕಾವ್ಯಗಳೆಂದು ಹೆಸರು. 'ದ್ವ್ಯರ್ಥಿ' ಎನ್ನುವುದು ಉಪಲಕ್ಷಣವೆಂದು ಇಲ್ಲಿ ತಿಳಿಯಬೇಕು.

ದ್ವ್ಯರ್ಥಿ ಕಾವ್ಯಗಳಲ್ಲಿ ಮೊದಲು ಸೂರನಾರ್ಯನ 'ರಾಘವಪಾಂಡವೀಯ'ದ ಹೆಸರು ಹೇಳಬೇಕು. ಇದರಲ್ಲಿ ರಾಮಾಯಣ ಮತ್ತು ಭಾರತದ ಕಥೆಗಳು ಸಮಾನಾಂತರ ರೇಖೆಗಳಲ್ಲಿ ನಡೆಯುತ್ತವೆ. ಇದರಲ್ಲಿ ಕ್ಲಿಷ್ಟವಾದ ಶ್ಲೇಷ ಬರದಿರುವುದರಿಂದ ಕಾವ್ಯವು ಸುಲಭಗ್ರಾಹ್ಯವಾಗಿವೆ. ದ್ವ್ಯರ್ಥಿ ಕಾವ್ಯವಾದರೂ ಕೂಡ ಇದರಲ್ಲಿ ಶಯ್ಯಾ, ಪಾಕ, ವೃತ್ತಿ, ಗುಣಾಲಂಕಾರಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ರಾಮಾಯಣದ ಕಥೆ ಇರುವ ಇತರ ದ್ವ್ಯರ್ಥಿ ಕಾವ್ಯಗಳು 'ಅಚಲಾತ್ಮಜಾ ಪರಿಣಯ', ಏಲಕೂಚಿ ಬಾಲಸರಸ್ವತಿಯ 'ಯಾದವ ರಾಘವ ಪಾಂಡವೀಯ', ನೆಲ್ಲೂರಿ ವೀರರಾಘವ ಕವಿ ಮತ್ತು ಅಯ್ಯಗಾರಿ ವೀರಭದ್ರ ಕವಿ ಬರೆದಿರುವ ಇದೇ ಹೆಸರಿನ ಕಾವ್ಯಗಳು, 'ರಾಮಕೃಷ್ಣೋಪಾಖ್ಯಾನ', 'ರಾಘವ ವಾಸುದೇವೀಯ' ಮುಂತಾದ ಅಪ್ರಸಿದ್ಧ ಕಾವ್ಯಗಳು ಹೆಸರಿಸಬಹುದಾಗಿವೆ.

ಇವೇ ಅಲ್ಲದೆ ಚಂಪೂ ರಾಮಾಯಣ, ವಿಚಿತ್ರ ರಾಮಾಯಣ, ಶತಕಂಠ ರಾಮಾಯಣ, ಅದ್ಭುತ ರಾಮಾಯಣ ಮುಂತಾದ ಗ್ರಂಥಗಳೂ, ಅನೇಕ ಯಕ್ಷಗಾನಗಳೂ (ಲೇಪಾಕ್ಷಿ ರಾಮಾಯಣ, ಕೊಮ್ಮಲಪಾಟಿ ರಾಮಾಯಣ, ಬೊಮ್ಮಲಾಟ ರಾಮಾಯಣ, ಸೀತಾಕಲ್ಯಾಣ, ಸುಗ್ರೀವ ವಿಜಯ, ರಾಮನಾಟಕ, ಅಧ್ಯಾತ್ಮ ರಾಮಾಯಣ ಮುಂತಾದವು) ಉತ್ತರ ರಾಮಾಯಣಗಳೂ (ತಿಕ್ಕನ ಸೋಮಯಾಜಿಯ 'ನಿರ್ವಚನೋತ್ತರ ರಾಮಾಯಣ', ಜಯಂತಿ ರಾಮಭಟ್ಟನ 'ಉತ್ತರರಾಮಾಯಣ', ಕಂಕಂಟಿ ಪಾಪರಾಜುವಿನ 'ಉತ್ತರ ರಾಮಾಯಣ') ಹಿಂದೀ ಮತ್ತು ತಮಿಳಿನಿಂದ ಭಾಷಾಂತರಿತವಾದ 'ರಾಮಚರಿತಮಾನಸ' ಮತ್ತು 'ಕಂಬರಾಮಾಯಣ'ಗಳೂ ತೆಲುಗಿನಲ್ಲಿವೆ. ಒಂದು ಮಾತಿನಲ್ಲಿ ಹೇಳುವುದಾದರೆ ತೆಲುಗಿನಲ್ಲಿ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ರಾಮಕಥೆ ರಚಿತವಾಗಿ ಜನಾದರಣೀಯವಾಗಿದೆ. ಈ ಭಾಷೆಯಲ್ಲಿ ನೂರಾರು ರಾಮಾಯಣಗಳಿರು

ರಾಮಕಥೆಯ ವ್ಯಾಪ್ತಿಯನ್ನೂ ನಿತ್ಯನೂತನತೆಯನ್ನೂ ವ್ಯಕ್ತಪಡಿಸುತ್ತದೆ. ಪಂಡಿತ, ಪಾಮರರಲ್ಲಿ ರಾಮಾಯಣ ಗ್ರಂಥಗಳು ಸಾಕಷ್ಟು ಪ್ರಚಾರದಲ್ಲಿವೆ. ಇಂದಿನ ಕಾಲದಲ್ಲೂ ರಾಮಾಯಣವನ್ನು ಬರೆಯುವ ಕವಿಗಳು ಇಲ್ಲದೆ ಇಲ್ಲ. 'ರಾಮ, ನಿನ್ನ ಹೆಸರೇ ಕಾವ್ಯ!' ಎಂದು ಹೇಳುವ ಕವಿವಾಣಿಯು ಸತ್ಯವಲ್ಲವೇ!

ರಾಮಚಂದ್ರ

ನರರೆ?

ಇಂದ್ರನ ಮೈತುಂಬ
ಯೋನಿಗಳುಂಟು.
ಏಕೆ,
ಭೂಮಿಗೂ ಇಂಥವು
ನೂರೆಂಟು!
ಅದು ಅಹಲ್ಯೆಯ ಶಾಪ,
ಇದು ಮಾನವನ ತಪ.
ಇವಳು ಹೆಣ್ಣಲ್ಲ, ಹುಣ್ಣು;
ಇವನು ಗಂಡೂ ಅಲ್ಲ, ಜೊಂಡು!
ಕೆಣಕಿದಂತೆಲ್ಲ ಕೀಟಗಳು–
ಯಾವುದು ಸಭ್ಯ ಯಾವುದು ಲಭ್ಯ?

ಈ ಭೂಮಿ: ಕೆಟ್ಟು ಬಿಟ್ಟೋಡಿಸಿದ ಹೆಣ್ಣೋ
ಅನ್ನ ಬಟ್ಟೆಗೆ ಬಳಲಿ
ಅಳಲಿ ಅಲೆದಲೆದು
ತಲೆಬೆಳೆದು ಕೊಳೆನಾತು,
ಮೈ ಕಜ್ಜಿ;
ತಲೆಗೆ ಕೀಡೆ.

ಕೆರೆದಲ್ಲಿ ಉದುರುವೀ ನಾಡ ಪೀಡೆಗಳು
ನರರೆ?
ನಾರುವರು.

ಎಸ್. ಎನ್. ಕೃಷ್ಣ ಜೋಯಿಸ್

ಗಿರಿಜೆಯ ಮಹಾನೋಂಪಿ

(ಐರಾವತ)

ವ್ರತಗಳಿಗೆ ಪುರಾಣಗಳು ಆಕರವಾಗಿವೆ. ನಮಗೆ ಬೇಕಾದ ಫಲವನ್ನು ಪಡೆಯುವ ಇಚ್ಛೆಯಿಂದ ನಾವು ಉಪವಾಸ ಮೊದಲಾದ ಉಕ್ತನಿಯಮಗಳನ್ನನುಸರಿಸಿ ಮಾಡುವ ನಿರ್ದಿಷ್ಟವಾದ ದೇವತಾಪೂಜೆಯೇ ವ್ರತ. ಈ ವ್ರತಗಳಲ್ಲಿ ಸ್ತ್ರೀಯರನ್ನುದ್ದೇಶಿಸಿ ಅನೇಕ ಗೌರೀವ್ರತಗಳು ಪುರಾಣಗಳಲ್ಲಿ ಉಕ್ತವಾಗಿವೆ. ಅವುಗಳಲ್ಲಿ ಗಜಗೌರೀವ್ರತವೂ ಒಂದು. ವ್ರತವನ್ನು ನೋಂಪಿ ಎಂದೂ ಕೆಲವರು ಕರೆಯುತ್ತಾರೆ.

ಈ ಗಜಗೌರೀವ್ರತವು ಭವಿಷ್ಯೋತ್ತರ ಪುರಾಣ ಮತ್ತು ಸ್ಕಾಂದಪುರಾಣದ ಗೌರೀಖಂಡದಲ್ಲಿ ಕಂಡುಬರುತ್ತದೆ. ವ್ರತ ಒಂದೇ ಆದರೂ ನಿರೂಪಣಕ್ರಮವು ಈ ಎರಡರಲ್ಲೂ ಭಿನ್ನವಾಗಿದೆ. ಸೂರ್ಯನು ಹಸ್ತನಕ್ಷತ್ರವನ್ನು ಪ್ರವೇಶಿಸುವ ದಿನ ಈ ವ್ರತವನ್ನು ಮಾಡಲು ಪ್ರಾರಂಭಿಸಬೇಕು. ಈ ಕಾಲವು ಸಾಮಾನ್ಯವಾಗಿ ಭಾದ್ರಪದ ಅಥವಾ ಆಶ್ವಯುಜಮಾಸದಲ್ಲಿ ಬರುತ್ತದೆ. ಈ ಹಸ್ತಿಗೌರೀವ್ರತವನ್ನು ೧೬ ದಿನಗಳು ಆಚರಿಸಬೇಕು. ಹೀಗೆ ಪ್ರತಿವರ್ಷವೂ ತಪ್ಪದೆ ೧೬ ವರ್ಷಗಳು ಈ ವ್ರತವನ್ನು ಅನುಷ್ಠಿಸಿ ಉದ್ಯಾಪನೆ ಮಾಡಿದವರಿಗೆ ಕಷ್ಟಪರಂಪರೆಗಳು ನಿವಾರಣೆಯಾಗಿ ಸುಖ ಸಂಪತ್ತುಗಳು ಅಭಿವೃದ್ಧಿಯಾಗುತ್ತವೆ.

ಸ್ಕಾಂದಪುರಾಣದ ಗೌರೀಖಂಡದಲ್ಲಿರುವ ಗಜಗೌರೀ ಕಥೆ ಈ ರೀತಿ ಇದೆ—

ಒಮ್ಮೆ ನೈಮಿಷಾರಣ್ಯವಾಸಿಗಳಾದ ಎಲ್ಲ ಮುನಿಗಳೂ ಸರ್ವಸಂಪತ್ಕರವೂ ಶುಭಪ್ರದವೂ ನಾರಿಯರಿಗೆ ಪತಿಪುತ್ರಾದಿ ಮಂಗಳಕರವೂ ಆದ ವ್ರತವಾವುದೆಂಬುದನ್ನು ತಿಳಿಸುವಂತೆ ಸೂತ ಪುರಾಣಿಕರನ್ನು ಕೇಳಲು ಅವರು ಮುನಿಗಳಿಗೆ ತಾವು ವ್ಯಾಸರಿಂದ ಕೇಳಿ ತಿಳಿದ ಈ ವ್ರತವನ್ನು ಉಪದೇಶಿಸಿರುತ್ತಾರೆ.

ಸನಾತನ ಮುನಿಯು ಹಸ್ತಿನಾಪಟ್ಟಣಕ್ಕೆ ಬರಲು ಆತನನ್ನು ಧೃತರಾಷ್ಟ್ರನು ಪತ್ನೀಪುತ್ರರೊಡಗೂಡಿ ಸತ್ಕರಿಸುತ್ತಾನೆ. ಸ್ವಲ್ಪಕಾಲ ವಿಶ್ರಮಿಸಿಕೊಂಡ ಬಳಿಕ ಆ ಮುನಿ ಧೃತರಾಷ್ಟ್ರನ ಪತ್ನಿಯಾದ ಗಾಂಧಾರಿಯನ್ನು ಕುರಿತು 'ಎಲೈ ಗಾಂಧಾರಿ

ನೀನು ಪತಿವ್ರತೆ. ನಿನಗೆ ಬಹುಮಂದಿ ಪುತ್ರರಿದ್ದಾರೆ. ಅಧಿಕ ಸಂಪತ್ತಿನಿಂದ ಕೂಡಿದ ರಾಜ್ಯವೂ ನಿನಗಿದೆ, ನೀನೇ ಭಾಗ್ಯಶಾಲಿ' ಎಂದು ಹೇಳುತ್ತಾನೆ.

ಇದನ್ನು ಕೇಳಿದ ಗಾಂಧಾರಿಯು "ಮುನಿಶ್ರೇಷ್ಠರೇ ನೀವು ಹೇಳಿದುದೆಲ್ಲವೂ ನ್ಯಾಯವಾದದ್ದೇ. ನಿಮ್ಮಂಥವರ ಕರುಣೆಯೊಂದಿದ್ದರೆ ಯಾವ ಶ್ರೇಯೋಭಿವೃದ್ಧಿ ತಾನೆ ಉಂಟಾಗಲಾರದು? ನನಗಿರುವ ಪುತ್ರರು ಬಹುಮಂದಿಯಾದರೂ ಅವರೆಲ್ಲರೂ ದುರ್ಬಲರೂ ಬುದ್ಧಿಹೀನರೂ ಆಗಿರುತ್ತಾರೆ. ಇವರ ದಾಯಾದಿಗಳಾದರೋ ಪ್ರಬಲರೂ ಬುದ್ಧಿವಂತರೂ ಆಗಿರುವುದರಿಂದ ಅವರೊಡನೆ ನನ್ನ ಮಕ್ಕಳೂ ನಾಸು ಜೀವಿಸಲು ಸಾಧ್ಯವಿಲ್ಲ. ಆದಕಾರಣ ತಾವು ನನ್ನ ಮಕ್ಕಳು ಗೆಲ್ಲುವ ಮಾರ್ಗವನ್ನು ಕರುಣಿಸಿ" ಎಂದು ಪ್ರಾರ್ಥಿಸುತ್ತಾಳೆ.

ಅದಕ್ಕೆ ಸನಾತನ ಮುನಿಯು "ಹಾಗಾದರೆ ಗಾಂಧಾರಿಯೇ ಕೇಳು. ಗಜಗೌರೀವ್ರತವನ್ನು ಮಾಡುವುದರಿಂದ ಅಭೀಷ್ಟಫಲಪ್ರಾಪ್ತಿಯೂ ಸಂಪದ್ವೃದ್ಧಿಯೂ ಉಂಟಾಗುತ್ತದೆ" ಎಂದು ತಿಳಿಸಿ ವ್ರತ ಮಹಿಮೆಯನ್ನು ಹೇಳುತ್ತಾನೆ.

"ಶಿವ ಪಾರ್ವತಿಯರು ಪರಿವಾರಸಮೇತ ಇರುವಾಗ ಇಂದ್ರನ ಪತ್ನಿ ಶಚೀದೇವಿಯು ಗಜಾರೂಢಳಾಗಿ ಪಾರ್ವತಿಯನ್ನು ಸೇವಿಸಲು ಅಲ್ಲಿಗೆ ಬಂದಳು. ಪಾರ್ವತಿಯು ಆನೆಯ ಮೇಲೆ ಕುಳಿತು ಬಂದ ಶಚಿಯನ್ನು ಕಂಡು ತಾನೂ ಆನೆಯ ಮೇಲೆ ಕುಳಿತುಕೊಳ್ಳಬೇಕೆಂದು ಮನಸ್ಸಿನಲ್ಲೇ ಯೋಚಿಸಿದಳು. ಪಾರ್ವತಿಯ ಈ ಅಭೀಷ್ಟವನ್ನು ಸ್ವತಃ ತಿಳಿದ ಶಿವನು ಸಂತೋಷಿಸಿ ಆ ಕೂಡಲೆ ಒಂದು ಆನೆಯನ್ನು ಸೃಷ್ಟಿಸಿ ಅದರ ಮೇಲೆ ಪಾರ್ವತಿಯನ್ನು ಹತ್ತಿಸಿದನು. ಆಕೆ ಸಪ್ತಮಾತೃಕೆಯರಿಂದ ಸೇವಿತಳಾಗಿ ಸಪರಿವಾರಳಾಗಿ ಸುರರ ಜಯಘೋಷಗಳಿಂದ ಕೂಡಿದವಳಾಗಿ ಹದಿನಾಲ್ಕು ಲೋಕಗಳನ್ನೂ ಸುತ್ತಿದಳು. ಬ್ರಹ್ಮ ಇಂದ್ರ ಮುನಿವೃಂದ ಮೊದಲಾದವರಿಂದ ಪೂಜಿತಳಾಗಿ ಹದಿನಾರು ದಿವಸಗಳ ಕಾಲ ಆನೆಯ ಮೇಲೆಯೇ ಆರೂಢಳಾಗಿದ್ದಳು. ಅಂದಿನಿಂದ ಋಷಿಪತ್ನಿಯರೂ ಸಿದ್ಧ ವಿದ್ಯಾಧರಾಂಗನೆಯರೂ ಸೂರ್ಯನು ಹಸ್ತನಕ್ಷತ್ರ ಪ್ರವೇಶಮಾಡುವ ಸಮಯದಲ್ಲಿ ಈ ಹಸ್ತಿಗೌರೀವ್ರತವನ್ನು ಆಚರಿಸಿ ಪುನೀತರಾಗಿದ್ದಾರೆ.

ಸೂರ್ಯನು ಹಸ್ತನಕ್ಷತ್ರವನ್ನು ಪ್ರವೇಶಮಾಡುವ ಸಮಯವೇ ಈ ವ್ರತಾರಂಭಕ್ಕೆ ಕಾಲ. ಈ ಕಾಲದಲ್ಲಿ ಆನೆಯನ್ನು ಶೃಂಗರಿಸಿ ಅದರ ಮೇಲೆ ಗೌರಿಯ ಪ್ರತಿಕೃತಿಯನ್ನಿಟ್ಟು ಗಂಧ ಪುಷ್ಪ ಅಕ್ಷತೆ ಧೂಪ ದೀಪ ನೈವೇದ್ಯ ನಮಸ್ಕಾರಾದಿ ಉಪಚಾರಗಳಿಂದ ಹದಿನಾರು ದಿವಸಗಳ ಕಾಲ ಗೌರಿಯನ್ನು ಪೂಜಿಸಿ ಹದಿನಾರನೆಯ ದಿವಸ ದೇವಿಗೆ ಮಹಾಪೂಜೆ ಮಾಡಿ ವ್ರತವನ್ನು ಮುಗಿಸಿ ಮಾರನೆಯ ದಿನ ಗೀತ ಮತ್ತು ಮಂಗಳವಾದ್ಯದೊಡನೆ ದೇವಿಯ ಪ್ರತಿಕೃತಿಯನ್ನು ತೆಗೆದುಕೊಂಡುಹೋಗಿ ನದಿಯಲ್ಲಿ ಬಿಡಬೇಕು. ಈ ವಿಧದಲ್ಲಿ ವ್ರತವನ್ನು ಆಚರಿಸುವುದರಿಂದ ದುರ್ಲಭವಾದ ಸರ್ವವಿಧ ಅಭೀಷ್ಟಗಳೂ ಫಲಿಸುತ್ತವೆ.

ಎಲೈ ಗಾಂಧಾರಿ, ಈ ವ್ರತವನ್ನು ವಿಧಿಪೂರ್ವಕ ಹದಿನಾರು ವರ್ಷಗಳಕಾಲ ಮಾಡು. ಇದರಿಂದ ನಿನಗೆ ಸರ್ವವಿಧ ಮಂಗಳವು ಲಭಿಸುತ್ತದೆ" ಎಂದು ತಿಳಿಸಿ ಆ ಮುನಿಯು ಹೊರಟುಹೋದನು.

ಬಹುಪುತ್ರವತಿಯಾದ ಗಾಂಧಾರಿ ವ್ರತಾರಂಭಕಾಲಕ್ಕಾಗಿ ಎದುರು ನೋಡುತ್ತಿದ್ದು ಆ ಕಾಲ ಬಂದಾಗ ತನ್ನ ಮಕ್ಕಳನ್ನು ಕರೆದು ಆನೆಯನ್ನು ತಯಾರಿಸಲು ಮಣ್ಣನ್ನು ತರುವಂತೆ ಹೇಳಿದಳು. ಆ ನೂರು ಮಂದಿ ಮಕ್ಕಳೂ ತಂದ ಮಣ್ಣಿನಿಂದ ಆನೆಯನ್ನು ತಯಾರಿಸಿ ಅದರ ಮೇಲೆ ಗೌರಿಯನ್ನಿಟ್ಟು ಸಂಭ್ರಮದಿಂದ ಆಕೆ ವ್ರತವನ್ನು ಆಚರಿಸಿದಳು.

ಪಾಂಡುಪತ್ನಿಯಾದ ಕುಂತಿಯು ಗಾಂಧಾರಿ ಅನುಷ್ಠಿಸಿದ ಆ ವ್ರತವನ್ನು ನೋಡಿ ಅದನ್ನು ಮಾಡಲು ತಾನು ಅಶಕ್ತಳೆಂದು ತಿಳಿದು ಕ್ಲೇಶಪಡುತ್ತಿದ್ದಳು. ಅರ್ಜುನನೇ ಮೊದಲಾದ ಮಕ್ಕಳು ಕೇಳಿದರೂ ಕ್ಲೇಶದ ಕಾರಣವನ್ನು ಹೇಳಲಿಲ್ಲ. ಅರ್ಜುನನು ಮತ್ತೆ ಮತ್ತೆ ಒತ್ತಾಯಪಡಿಸಲು ಆಗ ಕುಂತಿಯು "ಎಲೈ ಅರ್ಜುನನೆ ಗಾಂಧಾರಿಯು ಸಂಭ್ರಮದಿಂದ ಗಜಗೌರೀವ್ರತವನ್ನು ಮಾಡಿದಳು. ನನಗೆ ಆ ವ್ರತವನ್ನು ಮಾಡಬೇಕೆಂಬ ಇಚ್ಛೆ ಇದೆ. ಆದರೆ ಬಾಲಕರಾದ ನೀವೈವರೂ ತಂದ ಮಣ್ಣಿನಿಂದ ಎಷ್ಟು ದೊಡ್ಡ ಆನೆಯನ್ನು ತಯಾರಿಸಲು ಸಾಧ್ಯ? ಇದೇ ನನ್ನ ಚಿಂತೆಗೆ ಕಾರಣ" ಎಂದು ಹೇಳುತ್ತಾಳೆ.

ಇದನ್ನು ಕೇಳಿದ ಅರ್ಜುನನು "ಎಲೌ ತಾಯಿ, ನಿನ್ನ ಚಿಂತೆಗೆ ಇಷ್ಟು ಮಾತ್ರ ಕಾರಣವೆ? ಇದಕ್ಕಾಗಿ ಏತಕ್ಕೆ ಚಿಂತೆ? ದೇವಲೋಕದ ಗಜವನ್ನೇ ತರುತ್ತೇನೆ, ವ್ರತವನ್ನು ಮಾಡು" ಎಂದು ಕುಂತಿಗೆ ಹೇಳಿ ತಂದೆಯಾದ ಇಂದ್ರನಿಗೆ ತನ್ನ ಅಭೀಷ್ಟವನ್ನು ಒಂದು ಕಾಗದದಲ್ಲಿ ಬರೆದು ಅದನ್ನು ಬಾಣದ ತುದಿಗೆ ಕಟ್ಟಿ ಬಾಣವನ್ನು ಬಿಡಲು ಅದು ಆ ಕಾಗದವನ್ನು ದೇವಸಭೆಯಲ್ಲಿದ್ದ ಇಂದ್ರನ ಮುಂದೆ ಬೀಳಿಸಿತು. ಇಂದ್ರನು ಅದನ್ನು ನೋಡಿ ಅದರಲ್ಲಿದ್ದ ಪಾರ್ಥನ ಸಂದೇಶವನ್ನು ಓದಿ ತಿಳಿದು ಐರಾವತ ಗಜ, ಪಾರಿಜಾತಾದಿ ಪುಷ್ಪಗಳು, ರಂಭೆ ಮೊದಲಾದ ಅಪ್ಸರೆಯರು, ಆಭರಣ ವಸ್ತ್ರ ಮೊದಲಾದುವನ್ನು ಪಾರ್ಥನು ಕಟ್ಟಿದ ಬಾಣ ಸೋಪಾನ ಮಾರ್ಗದಿಂದ ಕಳುಹಿಸಿಕೊಟ್ಟನು. ಬಾಣಮಾರ್ಗದಿಂದ ಇಳಿದುಬಂದ ಐರಾವತಾದಿಗಳನ್ನು ಕಂಡ ಕುಂತಿ ತನ್ನ ಮಗನನ್ನು ಹೊಗಳಿ, ಸಕಾಲದಲ್ಲಿ ಐರಾವತದ ಮೇಲೆ ಗೌರಿಯ ಪ್ರತಿಮೆಯನ್ನಿಟ್ಟು ಅಲಂಕರಿಸಿ ಸಾಂಗವಾಗಿ ವ್ರತವನ್ನು ಆಚರಿಸಿದಳು. ವ್ರತಾಂತ್ಯದಲ್ಲಿ ಎಲ್ಲರನ್ನೂ ಸತ್ಕರಿಸಿ ಕಳುಹಿಸಿಕೊಟ್ಟಳು.

ಕುಂತಿಯು ವಿಜೃಂಭಣೆಯಿಂದ ವ್ರತಮಾಡಿದುದನ್ನು ಅರಿತ ಗಾಂಧಾರಿ ಲಜ್ಜಿತಳಾಗಿ ಹದಿನಾರು ವರ್ಷಗಳಕಾಲ ಬಿಡದೆ ಮಾಡಬೇಕಾದ ಈ ವ್ರತವನ್ನು ಮಾಡದೆ ಒಂದು ವರ್ಷಕ್ಕೇ ಕೈ ಬಿಟ್ಟಳು. ಇದೇ ಆಕೆಯ ನೂರುಮಂದಿ ಮಕ್ಕಳ ನಾಶಕ್ಕೆ ಕಾರಣವಾಯಿತು. ಕುಂತಿಯು ಮಾತ್ರ ತಪ್ಪದೆ ಹದಿನಾರುವರ್ಷಗಳ

ಕಾಲ ಈ ವ್ರತವನ್ನು ಮಾಡಿದಳು. ಈ ವ್ರತದ ಮಹಾತ್ಮ್ಯದಿಂದ ಕುಂತಿಯ ಮಕ್ಕಳು ಲೋಕವಿಖ್ಯಾತರಾಗಿ ರಾಜ್ಯಾದಿ ಭೋಗಗಳನ್ನು ಅನುಭವಿಸಿ ಸುಖ ದಿಂದಿದ್ದರು."—ಇದು ಸೂತಪುರಾಣಿಕರು ಮುನಿಗಳಿಗೆ ಹೇಳಿದ ಗಜಗೌರೀಕಥೆಯ ಸಂಗ್ರಹ.

ಇದೇ ಕಥೆ ಭವಿಷ್ಯೋತ್ತರ ಪುರಾಣದಲ್ಲಿ ಮತ್ತೊಂದು ವಿಧವಾಗಿದೆ. ಆ ಕಥೆಯು ಈ ರೀತಿ ಇದೆ—

"ಕುಂತಿಯು ತನ್ನ ಐವರು ಮಕ್ಕಳೊಡನೆ ಹಸ್ತಿನಾವತಿಗೆ ಬಂದಮೇಲೆ ಒಮ್ಮೆ ಅವರ ಕುಶಲವನ್ನರಿಯಲು ಶ್ರೀಕೃಷ್ಣನು ಅಲ್ಲಿಗೆ ಬರಲು, ಆಕೆ ನಮಸ್ಕರಿಸಿ ಸುಖಾಸೀನನಾದ ಅವನನ್ನು, "ಎಲೈ ಕೃಷ್ಣನೆ ನಿನ್ನ ಬರವಿಗೆ ನಾನು ಧನ್ಯಳು ಕೃತಕೃತ್ಯಳು ಸನಾಥಳು. ನೀನು ನನಗೆ ಪ್ರಸನ್ನನಾಗಿದ್ದರೆ ನನ್ನ ಮಕ್ಕಳು ಸೌಖ್ಯವನ್ನೂ ರಾಜ್ಯವನ್ನೂ ಪಡೆಯುವ ಮಾರ್ಗವನ್ನು ತಿಳಿಸು" ಎಂದು ಕೇಳುತ್ತಾಳೆ.

ಅದಕ್ಕೆ ಕೃಷ್ಣನು "ಎಲೌ ಕುಂತಿ, ನೀನು ಹಸ್ತಿಗೌರೀವ್ರತವನ್ನು ಮಾಡು. ನಿನ್ನ ದುಷ್ಕೃತಗಳು ಪರಿಹೃತವಾಗಿ ನಿನ್ನ ಮಕ್ಕಳು ರಾಜ್ಯವನ್ನು ಪಡೆಯುತ್ತಾರೆ" ಎಂದು ಹೇಳುತ್ತಾನೆ.

ಇದನ್ನು ಕೇಳಿದ ಕುಂತಿಯು "ಕೃಷ್ಣ, ನೀನು ತಿಳಿಸಿದ ಹಸ್ತಿಗೌರೀವ್ರತ ವನ್ನು ಆಚರಿಸುವ ವಿಧಾನ ಎಂತು? ಪೂರ್ವದಲ್ಲಿ ಈ ವ್ರತವನ್ನು ಆಚರಿಸಿದವರು ಯಾರು? ಅದನ್ನು ನನಗೆ ತಿಳಿಸು" ಎಂದು ಕೇಳುತ್ತಾಳೆ. ಬಳಿಕ ಕೃಷ್ಣನು ಕುಂತಿಗೆ ವ್ರತ ವಿಧಾನವನ್ನೂ ಅದರ ಮಹಿಮೆಯನ್ನೂ ಹೇಳುತ್ತಾನೆ.

"ಪೂರ್ವದಲ್ಲಿ ಒಮ್ಮೆ ಪಾರ್ವತಿಯು ಸೂರ್ಯನು ಹಸ್ತನಕ್ಷತ್ರಕ್ಕೆ ಪ್ರವೇಶಿಸುವ ವೇಳೆಯಲ್ಲಿ ಕೈಲಾಸ ಶಿಖರದಲ್ಲಿದ್ದವಳಾಗಿ ಹಗಲು ನಿದ್ರೆ ಮಾಡಿದಳು. ಆಕೆಗೆ ಆಗ ಒಂದು ಸ್ವಪ್ನವಾಯಿತು. ಸ್ವಪ್ನದಲ್ಲಿ ಶಂಭುವಿನ ಶರೀರಾರ್ಧವನ್ನು ಮಾತ್ರ ಕಂಡು ಗಾಬರಿಯಿಂದ ನಿದ್ರೆಯಿಂದೆಚ್ಚತ್ತು ಶಿವನ ಸನ್ನಿಧಿಗೆ ಬಂದು ಆತನಿಗೆ ನಮಸ್ಕರಿಸಿ ಅರ್ಧದೇಹಿಯಾದ ಶಿವನೊಬ್ಬನನ್ನೆ ಕಂಡ ಸ್ವಪ್ನ ವಿಚಾರ ವನ್ನು ಅರಿಕೆ ಮಾಡಿ ಅದಕ್ಕೆ ಕಾರಣವನ್ನು ತಿಳಿಸುವಂತೆ ಶಿವನನ್ನು ಪ್ರಾರ್ಥಿಸಿದಳು. ಆಗ ಶಿವನು "ಎಲೌ ದೇವಿ, ಹಸ್ತನಕ್ಷತ್ರಕ್ಕೆ ಸೂರ್ಯನು ಪ್ರವೇಶಮಾಡುವ ಕಾಲದಲ್ಲಿ ಹಗಲು ನಿದ್ರಿಸಬಾರದು. ನೀನು ಆ ನಿಷಿದ್ಧಕಾಲದಲ್ಲಿ ನಿದ್ರೆಮಾಡಿದುದರ ಫಲವಾಗಿ ಖಂಡಿತವಾದ ನನ್ನ ಅರ್ಧಶರೀರವನ್ನು ಮಾತ್ರ ನೋಡುವಂತಾದೆ. ನನ್ನನ್ನು ಆರಾಧಿಸುವ ಇಚ್ಛೆಯಿಂದ ಪ್ರಾರಂಭಿಸಿದ ವ್ರತವನ್ನು ಪೂರ್ಣಮಾಡದೆ ಬಿಟ್ಟೆ. ಅದನ್ನು ನನಗಾದರೂ ಸಮರ್ಪಿಸಲಿಲ್ಲ. ಆ ಅಪೂರ್ಣವಾದ ವ್ರತ ಪ್ರಭಾವದಿಂದ ನಾನು ನಿನಗೆ ಖಂಡಿತದೇಹನಾಗಿ ಗೋಚರನಾಗಿದ್ದೇನೆ. ಆದ ಕಾರಣ ಈಗ ಹಸ್ತಿಗೌರೀವ್ರತವನ್ನು ಮಾಡಿದರೆ ಪೂರ್ಣವ್ರತಳಾಗಿ ಸರ್ವ

ಸಂಪತ್ತನ್ನೂ ಪುತ್ರಪೌತ್ರ ಸೌಖ್ಯಾದಿಗಳನ್ನೂ ಪಡೆಯುತ್ತೀಯೆ" ಎಂದು ಹೇಳುತ್ತಾನೆ.

ಆಗ ಗೌರಿಯು 'ನಾಥ, ಈ ವ್ರತವನ್ನು ಯಾವಾಗ ಪ್ರಾರಂಭಿಸಬೇಕು? ಪೂಜಾವಿಧಾನವಾವುದು? ಇವನ್ನು ತಿಳಿಸು' ಎಂದು ಈಶ್ವರನನ್ನು ಪ್ರಾರ್ಥಿಸಲು ಈಶ್ವರನು ಆಕೆಗೆ ವ್ರತ ವಿಧಾನವನ್ನು ತಿಳಿಸುತ್ತಾನೆ.

"ಸೂರ್ಯನು ಹಸ್ತ ನಕ್ಷತ್ರಕ್ಕೆ ಪ್ರವೇಶಮಾಡುವ ದಿವಸ ಚಿನ್ನದ ಆನೆಯ ಮೇಲೆ ಚಿನ್ನದ ಗೌರಿ ಗಣಪತಿ ಮತ್ತು ಈಶ್ವರನ ಪ್ರತಿಮೆಗಳನ್ನು ಇಟ್ಟು ಅಲಂಕರಿಸಿ ಚಿನ್ನದ ಪುಷ್ಪ ಚಿನ್ನದ ಕರ್ಪೂರಾರತಿ ಚಿನ್ನದ ಧೂಪ ಚಿನ್ನದ ದೀಪಾದಿ ಪೂಜಾಸಾಧನಗಳು, ಚಿನ್ನದ ಪಾತ್ರೆಯಲ್ಲಿ ನೈವೇದ್ಯ ಇವುಗಳಿಂದ ಹದಿನಾರು ದಿವಸಗಳಕಾಲ ಪೂಜಿಸಿ ಬಳಿಕ ದೇವಿಯನ್ನು ವಿಸರ್ಜಿಸಬೇಕು. ಹೀಗೆ ಹದಿನಾರು ವರ್ಷಗಳಕಾಲ ವ್ರತವನ್ನು ಮಾಡಿ ಕೊನೆಯಲ್ಲಿ ಉದ್ಯಾಪನೆಮಾಡಬೇಕು. ತನ್ನನ್ನೇ ತಾನು ಹೇಗೆ ಪೂಜಿಸುವುದು? ಎಂಬ ಸಂಶಯ ಬೇಡ. ಇದು ಅನಾದಿ ವ್ರತವಾದ ಕಾರಣ ಇದರ ಬಗ್ಗೆ ವಿಚಾರಿಸತಕ್ಕದ್ದಲ್ಲ" ಎಂದು ಈಶ್ವರನು ಹೇಳಿದ ವ್ರತಾಚರಣೆಯ ವಿಧಾನವನ್ನು ಕೇಳಿ ಗೌರಿಯು ಚಿನ್ನದ ಆನೆ ಪ್ರತಿಮೆ ಪಾತ್ರೆ ಪುಷ್ಪಗಳನ್ನು ಪೂಜೆಯಲ್ಲಿ ಉಪಯೋಗಿಸಲು ಅಶಕ್ತರಾದವರು ಈ ವ್ರತವನ್ನು ಹೇಗೆ ಮಾಡುವುದು? ಎಂದು ಈಶ್ವರನನ್ನು ಪ್ರಶ್ನಿಸುತ್ತಾಳೆ.

ಅದಕ್ಕೆ ಈಶ್ವರನು ಚಿನ್ನದಿಂದ ಆನೆ ಮೊದಲಾದುವನ್ನು ತಯಾರಿಸಲು ಅಶಕ್ತರಾದವರು ಮಣ್ಣಿನ ಆನೆ ಮಣ್ಣಿನ ಪ್ರತಿಮೆ ಬಿದಿರಿನ ಪಾತ್ರೆ ಆಯಾಕಾಲದ ಪುಷ್ಪಗಳು ಅಕ್ಕಿಯ ಅಕ್ಷತೆ, ಇವನ್ನು ಉಪಯೋಗಿಸಿ ಶ್ರದ್ಧೆಯಿಂದ ಪೂಜಿಸಬಹುದು ಎಂದು ಪಾರ್ವತಿಗೆ ವ್ರತಾಚರಣೆಯ ವಿಧಾನವನ್ನು ವಿವರಿಸುತ್ತಾನೆ. ಬಳಿಕ ಗೌರಿಯು ಈ ವ್ರತವನ್ನು ಶ್ರದ್ಧೆಯಿಂದ ಆಚರಿಸಿ ಪೂರ್ಣವ್ರತಳಾಗಿ ಸೌಭಾಗ್ಯಾದಿ ವಾಂಛಿತ ಫಲಗಳನ್ನು ಪಡೆದಳು.

"ಎಲೌ ಕುಂತಿ, ನೀನೂ ಶ್ರದ್ಧೆಯಿಂದ ಈ ವ್ರತವನ್ನು ಮಾಡು" ಎಂದು ಕೃಷ್ಣನು ಹೇಳಲು ಕುಂತಿಯು ಆ ಹಸ್ತಿಗೌರೀವ್ರತವನ್ನು ಅಭಿಮಾನದಿಂದ ಮಾಡುತ್ತಾಳೆ.

ಕುಂತಿಯು, ಹಸ್ತಿಗೌರೀವ್ರತವನ್ನು ಆಚರಿಸಿದಳೆಂಬ ಸುದ್ದಿಯನ್ನು ಕೇಳಿದ ಗಾಂಧಾರಿ ಆದರದಿಂದ ತನ್ನ ನೂರುಮಂದಿ ಮಕ್ಕಳಿಂದಲೂ ಮಣ್ಣನ್ನು ತರಿಸಿ ಆನೆಯನ್ನು ತಯಾರಿಸಿ ಅದರ ಮೇಲೆ ಗೌರಿ ಗಣೇಶ ಪಾರ್ವತಿ ಈ ಮೂರು ಪ್ರತಿಮೆಗಳನ್ನೂ ಇಟ್ಟು ವಿಜೃಂಭಣೆಯಿಂದ ವ್ರತವನ್ನು ಮಾಡುತ್ತಾಳೆ.

ಈ ಗೌರೀವ್ರತವನ್ನು ಗಾಂಧಾರಿಯು ವಿಜೃಂಭಣೆಯಿಂದ ಮಾಡಿದಳೆಂಬ ಸುದ್ದಿಯನ್ನು ಕೇಳಿದ ಕುಂತಿ ಶೋಕ ಸಂತಾಪ ಪೀಡಿತಳಾಗಿ "ಗಾಂಧಾರಿಯು ಪುಣ್ಯಶಾಲಿ. ಅವಳ ನೂರುಮಂದಿ ಮಕ್ಕಳೂ ಆಕೆಯ ಆಜ್ಞೆಯನ್ನು ಸರ್ವದಾ

ಎದುರು ನೋಡುತ್ತಿದ್ದು, ವ್ರತವನ್ನು ಸಾಂಗವಾಗಿ ನೆರವೇರಿಸಿರುತ್ತಾಳೆ. ನನ್ನ ಗಾದರೋ ಐವರು ಮಕ್ಕಳು, ಅವರು ಯಾವುದೇ ಕಾರ್ಯವನ್ನು ಮಾಡಲು ಇನ್ನೂ ಅಶಕ್ತರು" ಎಂದು ತನ್ನ ಅಶಕ್ತತೆಯನ್ನು ನೆನೆದು ದುಃಖಿಸುತ್ತಿರುವುದನ್ನು ಕಂಡ ಅರ್ಜುನನು "ತಾಯಿ, ದುಃಖಿಸಬೇಡ; ಮಣ್ಣಿನ ಪ್ರತಿಮೆ ಏತಕ್ಕೆ? ಸಾಕ್ಷಾತ್ತಾಗಿ ಈಶ್ವರ ಗೌರಿ ಐರಾವತ ಗಣೇಶ ಇವರನ್ನು ಕ್ಷಿಪ್ರದಲ್ಲೇ ತರುತ್ತೇನೆ. ನೀನು ಪೂಜಿಸಿ ಅಭೀಷ್ಟ ಫಲವನ್ನು ಪಡೆಯಬಹುದು" ಎಂದು ತಾಯಿಯನ್ನು ಸಮಾಧಾನಪಡಿಸಿ ಕೂಡಲೇ ಗಂಗಾತೀರಕ್ಕೆ ಹೋಗಿ ಅಲ್ಲಿ ಈಶ್ವರನನ್ನು ಕುರಿತು ತಪಸ್ಸು ಮಾಡುತ್ತಾನೆ. ಈಶ್ವರನು ಸಂತುಷ್ಟನಾಗಿ 'ನಿನಗೆ ಅಭೀಷ್ಟವಾದ ವರವನ್ನು ಕೇಳು' ಎಂದು ಹೇಳಲು, ಅರ್ಜುನನು 'ದೇವಾಧಿದೇವನೆ, ನೀನು ಗೌರಿ ಗಣಪತಿಗಳೊಡನೆ ಐರಾವತಾರೂಢನಾಗಿ ಬಂದು ನನ್ನ ತಾಯಿಯಿಂದ ಪೂಜೆಯನ್ನು ಸ್ವೀಕರಿಸು' ಎಂದು ಯಾಚಿಸುತ್ತಾನೆ. ಶಿವನು ಒಪ್ಪಿ ಗೌರಿ ಮತ್ತು ಗಣಪತಿಯೊಡನೆ ಐರಾವತಾರೂಢನಾಗಿ ಬರಲು ಕುಂತಿಯು ಧೂಪ ದೀಪ ಮೊದಲಾದ ಉಪಚಾರಗಳಿಂದ ಪೂಜಿಸುತ್ತಾಳೆ. ಶಿವನು ಪೂಜೆಯಿಂದ ಸಂತುಷ್ಟನಾಗಿ ವರವನ್ನು ಕೇಳುವಂತೆ ಕುಂತಿಗೆ ಹೇಳಲು ಆಕೆ ಸರ್ವಸಂಪತ್ತು ಸರ್ವಸೌಖ್ಯ ಪುತ್ರರಿಗೆ ರಾಜ್ಯಪ್ರಾಪ್ತಿ ಮತ್ತು ತನಗೆ ಜನ್ಮಜನ್ಮದಲ್ಲೂ ಅವ್ಯಾಹತವಾದ ಭಕ್ತಿ ಇವನ್ನು ಕರುಣಿಸಬೇಕೆಂದು ಪ್ರಾರ್ಥಿಸುತ್ತಾಳೆ. ಅಂತೆಯೇ ಆಗಲೆಂದು ಶಿವನು ಹರಸಿ ಅಂತರ್ಧಾನನಾಗುತ್ತಾನೆ."

ಎರಡು ಪುರಾಣಗಳಲ್ಲೂ ಕಂಡುಬರುವ ಕಥಾ ವ್ಯತ್ಯಾಸ

೧. ಸ್ಕಾಂದಪುರಾಣದಲ್ಲಿ 'ಗೌರಿಯೇ ಐರಾವತದ ಮೇಲೆ ಕುಳಿತುಕೊಳ್ಳಲು ಇಷ್ಟಪಟ್ಟು ಅದರಂತೆ ಹದಿನಾರು ದಿವಸಗಳ ಕಾಲ ಐರಾವತಾರೂಢಳಾಗಿ ಹದಿನಾಲ್ಕು ಭುವನಗಳನ್ನೂ ಸುತ್ತಿ ಸಂತೋಷಪಟ್ಟಳು' ಎಂದಿದ್ದರೆ,

ಭವಿಷ್ಯೋತ್ತರ ಪುರಾಣದಲ್ಲಿ 'ಗೌರಿಯೇ ತನ್ನ ಪ್ರತಿಕೃತಿಯನ್ನು ಆನೆಯ ಮೇಲಿಟ್ಟು ಪೂಜಿಸಿ ವ್ರತವನ್ನು ಮಾಡಿದಳು, ಎಂದಿದೆ.

೨. ಸ್ಕಾಂದಪುರಾಣದಂತೆ 'ಗಾಂಧಾರಿ ಸನಾತನ ಮುನಿಯ ಪ್ರೇರಣೆಯಿಂದ ಈ ವ್ರತವನ್ನು ಮಾಡುತ್ತಾಳೆ, ಇದನ್ನು ತಿಳಿದ ಕುಂತಿ ಅನಂತರ ಮಾಡುತ್ತಾಳೆ.'

ಇದು ಭವಿಷ್ಯೋತ್ತರ ಪುರಾಣದಲ್ಲಿ 'ಕುಂತಿ ಶ್ರೀಕೃಷ್ಣನ ಪ್ರೇರಣೆಯಿಂದ ಮೊದಲು ಈ ವ್ರತವನ್ನು ಮಾಡುತ್ತಾಳೆ. ಇದನ್ನು ಕೇಳಿ ತಿಳಿದ ಗಾಂಧಾರಿ ಇದೇ ವ್ರತವನ್ನು ವಿಜೃಂಭಣೆಯಿಂದ ಮಾಡುತ್ತಾಳೆ. ಈ ವಿಜೃಂಭಣೆಯಿಂದ ದುಃಖಿತಳಾದ ಕುಂತಿ ಪಾರ್ಥನ ಸಾಮರ್ಥ್ಯದಿಂದ ಮತ್ತೆ ತಾನೂ ಅತಿ ವಿಜೃಂಭಣೆಯಿಂದ ವ್ರತವನ್ನು ಮಾಡುತ್ತಾಳೆ' ಎಂದು ಮಾರ್ಪಾಡಾಗಿದೆ.

೩. ಸ್ಕಾಂದಪುರಾಣದಂತೆ "ಅರ್ಜುನನು ಇಂದ್ರನಿಗೆ ಐರಾವತ ಮೊದಲಾದು

ವನ್ನು ತನ್ನ ತಾಯಿಯ ಪೂಜೆಗಾಗಿ ಭೂಮಿಗೆ ಕಳುಹಿಸಿಕೊಡುವಂತೆ ಲೇಖನವನ್ನು ಬರೆದು ಬಾಣದ ಮೂಲಕ ಇಂದ್ರಲೋಕಕ್ಕೆ ಮುಟ್ಟಿಸುತ್ತಾನೆ. ಅದರಂತೆ ಇಂದ್ರನು ಆನೆಯೇ ಮೊದಲಾದುವನ್ನು ಕಳುಹಿಸಿಕೊಡುತ್ತಾನೆ."

ಈ ಅಂಶ ಭವಿಷ್ಯೋತ್ತರ ಪುರಾಣದಲ್ಲಿಲ್ಲ. ಇದಕ್ಕೆ ಪ್ರತಿಯಾಗಿ ಅರ್ಜುನನು ತಪಸ್ಸುಮಾಡಿ ಪಡೆದ ವರಬಲದಿಂದ ಈಶ್ವರನೇ ಗೌರಿ ಗಣಪತಿಯರೊಡನೆ ಐರಾವತಾರೂಢನಾಗಿ ಬರುತ್ತಾನೆ" ಎಂದಿದೆ.

೪. ಸ್ಕಾಂದಪುರಾಣದಲ್ಲಿ ಗೌರಿಯ ಪ್ರತಿಕೃತಿಯನ್ನು ಮಾತ್ರ ಪೂಜಿಸಬೇಕೆಂದಿರುವುದು ಭವಿಷ್ಯೋತ್ತರ ಪುರಾಣದಲ್ಲಿ ಶಿವ ಗೌರಿ ಮತ್ತು ಗಣೇಶ ಈ ಮೂವರನ್ನು ಪೂಜಿಸಬೇಕೆಂದು ಮಾರ್ಪಾಡಾಗಿದೆ.

೫. ಸ್ಕಾಂದಪುರಾಣದಲ್ಲಿ ಸ್ವರ್ಣಗೌರೀಪ್ರತಿಮೆಯನ್ನು ಕುಂತಿ ಪೂಜಿಸಿದಳು ಎಂದಿದ್ದರೆ, ಭವಿಷ್ಯೋತ್ತರಪುರಾಣದಲ್ಲಿ ಸಾಕ್ಷಾತ್ತಾಗಿ ಶಿವ ಗೌರಿ ಗಣಪತಿಯರನ್ನೆ ಕುಂತಿ ಪೂಜಿಸಿದಳು ಎಂದಿದೆ.

ವ್ರತದ ಹಿನ್ನೆಲೆ

ಆಗಮಗ್ರಂಥಗಳಲ್ಲಿ ತಿಳಿಸಿರುವಂತೆ ವಿಶೇಷ ಸಂದರ್ಭಗಳಲ್ಲಿ ದೇವತಾ ಉತ್ಸವ ಮೂರ್ತಿಗಳನ್ನು ಬೇರೆ ಬೇರೆ ವಾಹನಗಳ ಮೇಲಿಟ್ಟು ಅಲಂಕರಿಸಿ ಉತ್ಸವ ನಡಸುವುದನ್ನು ಈಗಲೂ ನಾವು ಕಾಣುತ್ತಿದ್ದೇವೆ. ಇವುಗಳಲ್ಲಿ ಗಜವಾಹನವು ವಿಶೇಷವಾದುದು. ವೈಷ್ಣವ ಸಂಪ್ರದಾಯದಂತೆ ವೃಶ್ಚಿಕಮಾಸದಲ್ಲಿ ಬರುವ ವಿಷ್ಣು ದೀಪೋತ್ಸವದ ಸಂದರ್ಭದಲ್ಲಿ ಎಲ್ಲ ವಿಷ್ಣುಮೂರ್ತಿಗಳಿಗೂ ಈ ಗಜವಾಹನ ಉತ್ಸವವು ನಡೆಯುತ್ತದೆ. ಇಷ್ಟುಮಾತ್ರವಲ್ಲದೆ ಆ ದಿವಸ ಮುತ್ತೈದೆಯರು ಮಣ್ಣಿನಲ್ಲಿ ಆನೆಯನ್ನು ತಯಾರಿಸಿ ಅದರಮೇಲೆ ಶ್ರೀಕೃಷ್ಣನ ಪ್ರತಿಕೃತಿಯನ್ನು ಇಟ್ಟು ಪೂಜಿಸುವುದು ಇಂದಿಗೂ ಕರ್ಣಾಟಕದೇಶದ ಶ್ರೀವೈಷ್ಣವ ಸಂಪ್ರದಾಯದಲ್ಲಿ ಕಾಣಬಹುದಾಗಿದೆ.

ಒಟ್ಟಿನಲ್ಲಿ ಗಜಸ್ಕಂಧಾರೂಢನಾದ ದೇವನನ್ನಾಗಲೀ ದೇವಿಯನ್ನಾಗಲೀ ಸ್ತ್ರೀಯರು ಪೂಜಿಸುವುದರಿಂದ ಶ್ರೇಯಸ್ಸುಂಟಾಗುತ್ತದೆ ಎನ್ನುವುದೇ ಈ ವ್ರತದ ಹಿನ್ನೆಲೆ.

ಕನ್ನಡ ಸಾಹಿತ್ಯದಲ್ಲಿ ಐರಾವತ ಕಥೆ

ಸಂಸ್ಕೃತ ವಾಙ್ಮಯದಲ್ಲಿ ಕಂಡುಬರುವ ಈ ಪೌರಾಣಿಕ ಕಥೆ ಮಹಾಭಾರತದ ಆಖ್ಯಾನಕ್ಕೆ ಸಂಬಂಧಪಟ್ಟಿದ್ದರೂ ಸಂಸ್ಕೃತ ಭಾರತ ಮಃಹೋಪಾಖ್ಯಾನದ ಯಾವ ಪ್ರತಿಯಲ್ಲೂ ಈ ಕಥೆ ಸೇರದೆ ಇರುವುದು ಗಮನಾರ್ಹವಾದ ವಿಷಯವಾಗಿದೆ.

ಸಂಸ್ಕೃತದಲ್ಲಿರುವ ಈ ನೋಂಪಿಯ ಕಥೆ ಕನ್ನಡ ಭಾಷೆಯಲ್ಲೂ ರೂಪುಗೊಂಡಿದೆ. ಇಲ್ಲಿ ಸ್ಕಾಂದಪುರಾಣದ ಕಥೆ ಹೆಚ್ಚು ಪ್ರಚಾರದಲ್ಲಿದೆ. ಇದೇ

ಒಂದು ಕಾವ್ಯವಾಗಿ 'ಐರಾವತ' ಎಂಬ ಅಂಕಿತದಿಂದ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ಡೈರೆಕ್ಟರಾಗಿದ್ದ ವಿದ್ಯಾರತ್ನ ಆರ್. ಎಸ್. ಪಂಚಮುಖಿ, ಎಂ.ಎ. ಅವರಿಂದ ಸಂಪಾದಿತವಾಗಿ ೧೯೪೯ನೇ ಇಸವಿಯಲ್ಲಿ ಅಚ್ಚಾಗಿದೆ. ಇದರಲ್ಲಿ ಎಂಟು ಸಂಧಿಗಳೂ ಒಟ್ಟು ೩೭೫ ಪದ್ಯಗಳೂ ಇವೆ. ಇದರಲ್ಲಿ ಗದುಗಿನ ವೀರ ನಾರಾಯಣನ ಅಂಕಿತವಿರುವುದರಿಂದ ಇದನ್ನು ರಚಿಸಿರುವವನು ಕುಮಾರವ್ಯಾಸ ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿರುತ್ತಾರೆ. ಈ ಐರಾವತ ಕಾವ್ಯದ ಪದ್ಯಗಳಲ್ಲಿ ಕೆಲವನ್ನು ಬಿಟ್ಟು ಸಂಗ್ರಹಿಸಿ ಅದನ್ನು ಕುಮಾರವ್ಯಾಸ ಭಾರತದ ಒಂದು ಸಂಧಿಯನ್ನಾಗಿ ಮಾಡಿ ಕೆಲವು ಪ್ರತಿಕಾರರು ಸಂಪ್ರತಿಸಿರುತ್ತಾರೆ. ಇದು ಭಾರತಕ್ಕೆ ಸಂಬಂಧಪಟ್ಟ ಕಥೆ ಎಂಬ ಕಾರಣದಿಂದ ಇದನ್ನು ಪ್ರತಿಕಾರರು ಕನ್ನಡದಲ್ಲಿ ಪ್ರಚಲಿತವೂ ಪ್ರಸಿದ್ಧವೂ ಆದ ಕುಮಾರವ್ಯಾಸ ಭಾರತದ ಆದಿಪರ್ವದಲ್ಲಿ ಒಂದು ಸಂಧಿಯನ್ನಾಗಿ ಸೇರಿಸಿರುವುದರಲ್ಲಿ ಆತಿಶಯವೇನಿಲ್ಲ. ಇದರಿಂದ ಕಥೆಯ ಬಗ್ಗೆ ಪ್ರತಿಕಾರರಿಗಿರುವ ಅಭಿಮಾನ ಎಷ್ಟು ಎನ್ನುವುದು ವೇದ್ಯವಾಗುತ್ತದೆ.

'ಐರಾವತ ಕುಮಾರವ್ಯಾಸ ಕರ್ತೃಕವೇ ?'

ಈ ಐರಾವತ ಕಥೆಯಲ್ಲಿ ವೀರನಾರಾಯಣ ಅಂಕಿತವಿರುವುದರಿಂದಲೂ ಕುಮಾರವ್ಯಾಸ ಭಾರತದ ಕೆಲವು ಓಲೆ ಪ್ರತಿಗಳಲ್ಲಿ ಸಂಗ್ರಹವಾಗಿ ಈ ಕಥೆ ಒಂದು ಸಂಧಿಯಾಗಿ ಆದಿಪರ್ವದಲ್ಲಿ ಅಡಕವಾಗಿರುವುದರಿಂದಲೂ ಮೊದಲನೋಟಕ್ಕೆ ಈ ಕೃತಿಯನ್ನು ರಚಿಸಿದವನು ಕುಮಾರವ್ಯಾಸ ಎಂದೇ ತಿಳಿದುಬರುತ್ತದೆ. ಆದರೆ ಸಾಮಾನ್ಯ ದೃಷ್ಟಿಯನ್ನು ಬಿಟ್ಟು ವಿಮರ್ಶೆಯತ್ತ ನೋಟವನ್ನು ಹರಿಸಿದಾಗ ನಿಜ ಪರಿಸ್ಥಿತಿಯ ಅರಿವು ಉಂಟಾಗುತ್ತದೆ.

ಕುಮಾರವ್ಯಾಸನೇ ಈ ಕಥಾಭಾಗವನ್ನು ತನ್ನ ಭಾರತ ಕಥಾಮಂಜರಿಯಲ್ಲಿ ರಚಿಸಿದ್ದಿದ್ದರೆ ಅದರ ಎಲ್ಲ ಕೈಬರಹದ ಪ್ರತಿಗಳಲ್ಲೂ ಈ ಕಥಾಭಾಗ ಇರುತ್ತಿತ್ತು, ಅದೂ ಒಂದೇ ಕ್ರಮದಲ್ಲಿ. ಆದರೆ ನಮಗೆ ಉಪಲಬ್ಧವಿರುವ ಕನ್ನಡ ಮಹಾಭಾರತದ ಓಲೆ ಪ್ರತಿಗಳನ್ನು ಶೋಧಿಸಿ ನೋಡಿದಾಗ ಇದರ ಅವ್ಯವಸ್ಥೆ ಎದ್ದು ಕಾಣುತ್ತದೆ. ಕೆಲವು ಪ್ರತಿಗಳಲ್ಲಿ ಈ ಕಥಾನಿರೂಪಣದ ಸಂಧಿಯೇ ಇರುವುದಿಲ್ಲ. ಮತ್ತೆ ಕೆಲವಲ್ಲಿ ಇದ್ದರೂ, ಸಂಧಿ ಸಂಖ್ಯೆ ಮತ್ತು ಪದ್ಯಸಂಖ್ಯೆಯಲ್ಲಿ ಒಮ್ಮತವಿಲ್ಲದೆ ಭಿನ್ನಭಿನ್ನಗಳಾಗಿವೆ. ಈಗ ಇರುವ ಪ್ರತಿಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದ ಓಲೆ ಪ್ರತಿಯಲ್ಲಿ ಈ ಭಾಗ ಇಲ್ಲದಿರುವುದು ಅತ್ಯಂತ ಗಮನಾರ್ಹವಾದ ವಿಚಾರವಾಗಿದೆ.[1]

---

[1] ಕನ್ನಡ ಅಧ್ಯಯನ ಸಂಸ್ಥೆಯ ಗ್ರಂಥಭಂಡಾರದಲ್ಲಿರುವ ಕೆ. ೨೦೫ನೇ ಕ್ರಮಾಂಕದ ಓಲೆ ಪ್ರತಿ.

ಕನ್ನಡ ಮಹಾಭಾರತದ ಓಲೆ ಪ್ರತಿಗಳಲ್ಲಿ ಕಂಡುಬರುವ ಐರಾವತ ಕಥೆಯ ಸಂಧಿ ಸಂಖ್ಯೆಯನ್ನೂ ಪದ್ಯ ಸಂಖ್ಯೆಯನ್ನೂ ಈ ಕೆಳಗೆ ಪಟ್ಟಿ ಮಾಡಿಕೊಟ್ಟಿದೆ.

	ಕ್ರಮಾಂಕ	ಕಾಲ	ಆದಿಪರ್ವದಲ್ಲಿ ಐರಾವತದ ಸಂಧಿಸಂಖ್ಯೆ	ಪದ್ಯಸಂಖ್ಯೆ
[1] ಕ.ಅ.ಸಂ.—	ಕೆ ೭೦	೧೮೪೦	೩೮	೧೪೬
,,	ಕೆ ೨೧೮	?	೨೪	೧೯೦
,,	ಕೆ.ಎ. ೨೨೭	೧೮೨೦	೨೩	೪೭
,,	ಕೆ ೨೫೦	?	೭	೧೪೫
,,	ಕೆ ೩೦೫	೧೭೬೭	೮	೧೪೩
,,	ಕೆ ೫೯೬	?	೧೦	೪೬೭
,,	ಕೆ ೫೪೧	೧೮೧೦	೮	೧೩೧
,,	ಕೆ ೨ (i)	?	೨೧	೪೭
,,	,, (ii)	?	೨೩	೧೨೧
[2] ಸ.ಭಂ.	೧೬೮೯	?	೮	೧೪೪
,,	೪೬೬	೧೮೦೦	ಗ್ರಂಥಾರಂಭಕ್ಕೆ ಮೊದಲು ಪ್ರತ್ಯೇಕವಾಗಿದೆ	೧೫೬
,,	೧೬೯೦	೧೭೨೮	೮	೧೫೧

ಈ ಪ್ರತಿಗಳಲ್ಲಿ ಕಂಡುಬರುವ ಪದ್ಯ ಮತ್ತು ಸಂಧಿ ಸಂಖ್ಯೆಗಳಲ್ಲಿ ಒಮ್ಮತ ಕಂಡು ಬರುತ್ತಿಲ್ಲ. ಒಂದೇ ಕಥೆ ಆದಿಪರ್ವದ ೭, ೮, ೧೦, ೨೧, ೨೩, ೨೪, ೩೮ನೇ ಸಂಧಿಯಾಗಿ ಬೇರೆ ಬೇರೆ ಪ್ರತಿಗಳಲ್ಲಿ ಲಿಖಿತವಾಗಿದೆ. ಪದ್ಯಸಂಖ್ಯೆಯಲ್ಲೂ ಒಮ್ಮತ ವಿಲ್ಲದೆ (೪೭, ೧೨೧, ೧೩೧, ೧೪೩, ೧೪೪, ೧೪೫, ೧೪೬, ೧೫೧, ೧೫೬, ೧೯೦, ೪೬೭) ಇರುವುದರಿಂದ ವೈವಿಧ್ಯವನ್ನು ಕಾಣಬಹುದು. ಇಷ್ಟುಮಾತ್ರವಲ್ಲದೆ ಕ.ಅ.ಸಂ.ಕೆ ೫ನೇ ಕ್ರಮಾಂಕದ ಓಲೆ ಪ್ರತಿಯಲ್ಲಿ ಈ ಕಥೆಯೇ ಪ್ರತ್ಯೇಕ ಗ್ರಂಥವಾಗಿ ಲಿಖಿತ ವಾಗಿದೆ. ಇದರಲ್ಲಿ ೪೧೩ ಪದ್ಯಗಳಿವೆ. ಸಂಧಿ ವಿಭಾಗವಿಲ್ಲದೆ ದಂಡಾಕಾರದಲ್ಲಿದೆ. ಆದಿಪರ್ವದಲ್ಲಿರುವ ಈ ಕಥೆಯ ಪದ್ಯಗಳೂ ಇದರಲ್ಲಿ ಕೂಡಿಕೊಂಡಿವೆ. ಈ ಪದ್ಯಗಳೇ ಕೆಲವು ಬದಲಾವಣೆಗಳೊಡನೆ 'ಐರಾವತ' ಎಂಬ ಅಂಕಿತದಿಂದ ಧಾರವಾಡದಲ್ಲಿ ಪ್ರತ್ಯೇಕ ಕೃತಿಯಾಗಿ ಅಚ್ಚಾಗಿದೆ. ಈ ಕೃತಿಯಲ್ಲಿ ಎಂಟು ಸಂಧಿ

[1] ಕ.ಅ.ಸಂ.—ಕನ್ನಡ ಅಧ್ಯಯನ ಸಂಸ್ಥೆ. [2] ಸ.ಭಂ—ಮೈಸೂರು ಅರಮನೆ ಸರಸ್ವತೀ ಭಂಡಾರ.

ಗಳಿವೆ. ಪ್ರತಿ ಸಂಧಿಗೂ ಬೇರೆ ಬೇರೆ ಸೂಚನೆ ಪದ್ಯಗಳಿವೆ. ಈ ಅಧಿಕವಾದ ಸೂಚನೆ ಪದ್ಯಗಳು ಉಳಿದ ಯಾವ ಪ್ರತಿಗಳಲ್ಲೂ ಇರುವುದಿಲ್ಲ.

ಕೆ. ೨ನೇ ಕ್ರಮಾಂಕದ ಪ್ರತಿಯಲ್ಲಿ ೨೧ ಮತ್ತು ೨೩ ಈ ಎರಡು ಸಂಧಿಗಳಲ್ಲೂ ಈ ಕಥೆ ಕಂಡುಬರುವುದು ಮತ್ತೊಂದು ವೈಚಿತ್ರ್ಯ. ಈ ಎರಡು ಕಥೆಗಳ ನಿರೂಪಣೆಯೂ ಭಿನ್ನಭಿನ್ನವಾಗಿವೆ. ೨೧ನೇ ಸಂಧಿಯಲ್ಲಿ ೪೭ ಪದ್ಯಗಳಲ್ಲಿ ಹೇಳಿರುವ ಕಥೆ, ಕೆ.ಎ. ೨೨೭ ಕ್ರಮಾಂಕದ ಪ್ರತಿಯಲ್ಲಿ ೨೩ನೇ ಸಂಧಿಯಲ್ಲಿರುವ ಕಥೆಯನ್ನು ಹೋಲುತ್ತದೆ. ಈ ಎರಡೂ ಒಂದೇ ವಿಧವಾಗಿವೆ. ಅದೇ ಕೆ. ೨ನೇ ಕ್ರಮಾಂಕದ ಪ್ರತಿಯು ೨೩ನೇ ಸಂಧಿಯಲ್ಲಿ ೧೨೧ ಪದ್ಯಗಳಲ್ಲಿ ಉಕ್ತವಾಗಿರುವ ಕಥೆ, ಉಳಿದೆಲ್ಲ ಪ್ರತಿಗಳಲ್ಲೂ ಕಂಡುಬರುವ ಕಥೆಯೇ ಆಗಿದೆ. ಹೆಚ್ಚು ಪ್ರಚಾರದಲ್ಲಿರುವುದು ಈ ಕಥೆಯೇ. ಇದು ಸ್ಕಾಂದಪುರಾಣದ ಕಥೆಯನ್ನು ಅನುಸರಿಸಿ ಬಂದಿದೆ. ೪೭ ಪದ್ಯಗಳಲ್ಲಿ ಹೇಳಿರುವ ಕಥೆ[1] ಪ್ರಚಲಿತವಾದುದಲ್ಲ. ಇದು ಭವಿಷ್ಯೋತ್ತರ ಪುರಾಣವನ್ನು ಅನುಸರಿಸಿ ಬಂದಿರುವುದು.

ಸಂಸ್ಕೃತದಲ್ಲಿ ಕಂಡುಬರುವ ಈ ಎರಡು ವಿಧವಾದ ಕಥೆಗಳೂ ಕನ್ನಡದಲ್ಲೂ ರೂಪುಗೊಂಡಿವೆ. ೧೨೧ರಿಂದ ೪೬೭ರ ವರೆಗೆ ಇರುವ ಪದ್ಯಸಂಖ್ಯೆಯನ್ನು ನೋಡಿದರೆ ಮೊದಲು ೧೨೧ ಪದ್ಯಗಳಲ್ಲಿ ರಚಿತವಾದ ಈ ಕಥೆ ಪ್ರತಿಕಾರರ ಅಥವಾ ಈ ವ್ರತ ಕಥಾಭಿಮಾನಿಗಳ ಕೈವಾಡದಿಂದ ಸುಮಾರು ನಾಲ್ಕರಷ್ಟಾಗಿ ಬೆಳೆದುನಿಂತಿದೆ. ಈ ಕಥೆಯನ್ನು ನಿರೂಪಿಸುವ ಪದ್ಯಸಂಕಲನದಲ್ಲಿ 'ಗದುಗಿನ ವೀರನಾರಯಣ' ಎಂದಿರುವುದರಿಂದ ಮತ್ತು ಕೆಲವು ಕುಮಾರವ್ಯಾಸ ಭಾರತದ ಓಲೆಪ್ರತಿಗಳಲ್ಲಿ ಇದನ್ನು ಆದಿಪರ್ವದ ಒಂದು ಸಂಧಿಯಾಗಿ ಸೇರಿಸಿರುವುದರಿಂದ, ಮೇಲ್ನೋಟಕ್ಕೆ ಇದು ಕುಮಾರವ್ಯಾಸ ಕರ್ತೃಕವೆಂದು ಹೇಳಲು ಸಾಧ್ಯತೆ ಇರುವುದರಿಂದ, ಅದನ್ನೇ ಸ್ಥಿರಪಡಿಸಿ 'ಐರಾವತದ ಕರ್ತೃ ಕುಮಾರವ್ಯಾಸ' ಎಂದು ಕೆಲವರು ಸಿದ್ಧಾಂತ ಮಾಡಿರುತ್ತಾರೆ. ಆದರೆ ಸೂಕ್ಷ್ಮ ಪರಿಶೀಲನೆಯಿಂದ ಇದು ಸತ್ಯಕ್ಕೆ ಹೊರತಾದ ವಿಚಾರ ಎನ್ನುವುದು ಸ್ಪಷ್ಟಪಡುತ್ತದೆ.

ಐರಾವತದ ಎರಡುಬಗೆಯ ಕಥೆಯಲ್ಲೂ 'ಗದುಗಿನ ವೀರನಾರಯಣ'ನ ಅಂಕಿತವಿದೆ. ಇದರಿಂದ ಈ ಎರಡು ವಿಧದ ಪದ್ಯಗುಚ್ಛಗಳನ್ನು ಕುಮಾರವ್ಯಾಸನೇ ರಚಿಸಿರುತ್ತಾನೆ ಎಂದು ಸಿದ್ಧಾಂತ ಮಾಡಬೇಕಾಗುತ್ತದೆ. ಆದರೆ ಒಬ್ಬನೇ ಕವಿ ಒಂದೇ ಕಥೆಯನ್ನು ಎರಡು ವಿಧವಾಗಿ ಹೇಳಿರುವಂತೆ ನಿಷ್ಕರ್ಷಿಸುವುದು ತಪ್ಪಾಗುತ್ತದೆ. ಆದಕಾರಣ ಅಂಕಿತವಿದ್ದ ಮಾತ್ರದಿಂದ ಅದನ್ನು ಕುಮಾರವ್ಯಾಸ ಕರ್ತೃಕ ಎಂದು ಸಿದ್ಧಾಂತಮಾಡುವುದು ಸತ್ಯಕ್ಕೆ ದೂರವಾಗುತ್ತದೆ.

---

[1] ಇದರಲ್ಲಿ 'ಕುಂತಿಯು ಮಾದ್ರಿಯೊಡನೆ ಈ ವ್ರತವನ್ನು ಮಾಡಿದಳು' ಎಂದಿದೆ. ಇದು ನಿಜಸ್ಥಿತಿಗೆ ದೂರವಾದುದು.

"ಕುಮಾರವ್ಯಾಸನೇ ತನ್ನ ದೊಡ್ಡ ಮಹಾಭಾರತದಲ್ಲಿ ಸಂಕ್ಷೇಪವಾಗಿ ಹೇಳಿದ್ದನ್ನು ಐರಾವತದಲ್ಲಿ ವಿಸ್ತರಿಸಿರುವನೆನ್ನಬಹುದು"[1] ಎಂದು ಅಭಿಪ್ರಾಯ ಪಡುವುದೂ ಸರಿಯಲ್ಲ. ಕ.ಅ.ಸಂ. ಕೆ ೫೯೬ನೇ ಮಹಾಭಾರತದ ಪ್ರತಿಯಲ್ಲಿ ೪೬೭ ಪದ್ಯಗಳಲ್ಲಿ ಈ ಕಥೆ ಇದೆ. ಪ್ರತ್ಯೇಕ ಕೃತಿಯಲ್ಲಿರುವ ಪದ್ಯಸಂಖ್ಯೆಗಿಂತ ಅಧಿಕವಾಗಿ ಇದರಲ್ಲಿ ಪದ್ಯವಿದ್ದು ಇದು ಆದಿಪರ್ವದ ೧೦ನೇ ಸಂಧಿಯಾಗಿ ಓಲೆ ಪ್ರತಿಯಲ್ಲಿ ಕಂಡುಬರುತ್ತಿರುವುದರಿಂದ ವಿಸ್ತಾರಮಾಡಿ ಐರಾವತ ಕಾವ್ಯವನ್ನು ರಚಿಸಿರುತ್ತಾನೆ ಎಂದು ಹೇಳಲೂ ಸಾಧ್ಯವಾಗುವುದಿಲ್ಲ.

ಇನ್ನು ಉಳಿದಿರುವ ಏಕೈಕ ಕಾರಣವೆಂದರೆ ಕುಮಾರವ್ಯಾಸ ಭಾರತದ ಓಲೆ ಪ್ರತಿಗಳಲ್ಲಿ ಇದು ಆದಿಪರ್ವದ ಒಂದು ಸಂಧಿಯಾಗಿ ಉಲ್ಲೇಖಿತವಾಗಿರುವುದು. ಎಲ್ಲ ಪ್ರತಿಗಳಲ್ಲೂ ಈ ಕಥಾಭಾಗ ಇದ್ದಿದ್ದರೆ ಆಗ ಇದರ ಕರ್ತೃತ್ವದ ಬಗ್ಗೆ ಸಂಶಯಕ್ಕೆ ಆಸ್ಪದವೇ ಇರುತ್ತಿರಲಿಲ್ಲ. ಕ್ರಿ.ಶ. ೧೫೫೪ರಲ್ಲಿ ಪ್ರತಿಯಾಗಿರುವ ಪ್ರಾಚೀನವಾದ ಕ. ಅ. ಸಂ. ೨೦೫ನೇ ಕ್ರಮಾಂಕದ ಓಲೆಯ ಪ್ರತಿಯಲ್ಲೇ ಈ ಕಥಾಭಾಗ ಇಲ್ಲ. ಇದರಂತೆಯೆ ಇನ್ನೂ ಕೆಲವು ಪ್ರತಿಗಳಲ್ಲಿ ಈ ಕಥಾಭಾಗ ಕಂಡುಬರದ ಕಾರಣ ಇದು ಕುಮಾರವ್ಯಾಸ ಭಾರತದ ಭಾಗವಲ್ಲವೆನ್ನುವುದು ಸ್ಪಷ್ಟಪಡುತ್ತದೆ. ಹೀಗೆ ಈ ಕಥಾಪದ್ಯಗುಚ್ಛವನ್ನು ಕುಮಾರವ್ಯಾಸ ಕರ್ತೃಕವೆಂದು ಹೇಳಲು ಯಾವ ಪ್ರಮಾಣವೂ ದೊರೆಯುವುದಿಲ್ಲ. ಕುಮಾರವ್ಯಾಸನು ಅನುಸರಿಸಿರುವ ಮೂಲಸಂಸ್ಕೃತ ಮಹಾಭಾರತದಲ್ಲೂ ಈ ಕಥೆ ಇಲ್ಲದಿರುವುದು ಮೇಲಿನ ಅಭಿಪ್ರಾಯವನ್ನು ಪುಷ್ಟೀಕರಿಸುತ್ತದೆ.

ಒಟ್ಟಿನಲ್ಲಿ ಈ ಐರಾವತನೋಂಪಿಯ ಅಭಿಮಾನಿಗಳಲ್ಲೊಬ್ಬರು ಪುರಾಣಾಂತರ್ಗತವಾದ ಈ ವ್ರತಕಥೆಯನ್ನು ಕನ್ನಡಿಸಿರುವುದನ್ನು ಪ್ರತಿಕಾರರು ಸಂಗ್ರಹಿಸಿ, ಇದು ಭಾರತದ ಕಥೆಗೆ ಸಂಬಂಧಪಟ್ಟಿರುವುದರಿಂದ ಇದನ್ನು ಕನ್ನಡದಲ್ಲಿ ಪ್ರಸಿದ್ಧವಾಗಿರುವ ಕುಮಾರವ್ಯಾಸ ಭಾರತದ ಗ್ರಂಥಭಾಗವನ್ನಾಗಿ ಮಾಡಿದರೆ ಇದೂ ಪ್ರಚಲಿತವಾಗಿ ಪ್ರಸಿದ್ಧಿಯನ್ನು ಪಡೆಯುತ್ತದೆ ಎಂಬ ಅಭಿಪ್ರಾಯದಿಂದ ಈ ಕಥೆಯನ್ನು ಕುಮಾರವ್ಯಾಸ ಭಾರತದೊಳಗೆ ಹುದುಗಿಸಿ ಪ್ರತಿಮಾಡಿರುವಂತೆ ಊಹಿಸಬಹುದಾಗಿದೆ. ಈ ಪ್ರಕ್ಷಿಪ್ತ ಕಥಾಭಾಗದಲ್ಲಿ ೪೭ ಪದ್ಯಗಳಲ್ಲಿ ಹೇಳಿರುವುದು ಈವರೆಗೂ ಬೆಳಕಿಗೆ ಬಂದಿರುವುದಿಲ್ಲ. ಇದು ಅಚ್ಚಾಗಿ ಎಲ್ಲರ ದೃಷ್ಟಿಗೂ ಬಿದ್ದರೆ ಐರಾವತ ಕಥೆಯನ್ನು ಕುಮಾರವ್ಯಾಸನು ರಚಿಸಿದನೆಂಬ ಭ್ರಾಂತಿಯು ದೂರವಾಗಿ ನಿಜಪರಿಸ್ಥಿತಿಯು ಹೊರಪಡುತ್ತದೆ ಎನ್ನುವ ಅಭಿಪ್ರಾಯದಿಂದ ಇದನ್ನು ಪ್ರತ್ಯೇಕವಾಗಿ ಸಂಪ್ರತಿಸಿ ಅಚ್ಚಿಗೆ ಸಿದ್ಧಪಡಿಸಿದೆ. ಕ. ಅ. ಸಂ. ಕೆ. ಎ ೨೨೭ ಕ್ರಮಾಂಕದ

---

[1] ಐರಾವತದ ಉಪೋದ್ಘಾತದ ಪುಟ ೪ರಲ್ಲಿ ವಿದ್ಯಾರತ್ನ ಆರ್. ಎಸ್. ಪಂಚಮುಖಿ, ಎಂ.ಎ.ರವರು ಅಭಿಪ್ರಾಯಪಟ್ಟಿರುತ್ತಾರೆ.

ಪ್ರತಿಗೆ (ಕ) ಎಂದೂ ಕ. ಅ. ಸಂ. ಕೆ. ೨ ಕ್ರಮಾಂಕದ ಪ್ರತಿಗೆ (ಗ) ಎಂದೂ ಅಂಕಿತಮಾಡಿದೆ. ಈ ಎರಡು ಪ್ರತಿಗಳ ಸಹಾಯದಿಂದ 'ಗಿರಿಜೆಯ ಮಹಾನೋಂಪಿ' ಎಂದು ಹೆಸರು ಕೊಟ್ಟಿರುವ ಪದ್ಯಗುಚ್ಛವನ್ನು ಪರಿಷ್ಕರಿಸಿದೆ.

ಗಿರಿಜೆಯ ಮಹಾನೋಂಪಿ (ಐರಾವತ)

ಸೂಚನೆ: ಪರಮ ಭಕ್ತಿಯ ಭಾವದಲಿ [1]ತಾ
[ನರಸಿ ಸುಬಲಜೆ ನೋಂತ][1] ಗಿರಿಜೆಯ
ವರಮಹಾನೋಂಪಿಯನು ನೋಂತಳು ಕುಂತಿ ವನದೊಳಗೆ

ಕೇಳು ಜನಮೇಜಯ ಧರಿತ್ರೀ
ಪಾಲ [2]ಅ[2]ಮರಾವತಿಯ ರಾಯನ
ಬೀಳುಕೊಂಡರು ನಾರ[3]ದಾದ್ಯರು [ದಿವ್ಯ]ಮುನಿವರರು[3]
ಮೇಳದ[4]ಲಿ[4] ತಾವ್ಯೆದಿ ಬಂದರು
ಲೋಲ ಭೂಲೋಕಕ್ಕೆ [5]ಅಲ್ಲಿಂ[5]
[6]ದೇಳುತವೆ[6] ಮುನಿ[7]ನಾರದನು[7] ತಿರುಗಿದನು ಗಜಪುರಕೆ ೧

ಇಳಿದು ಗಜಪುರಿಗಾಗಿ ಬರುತಿರೆ
ಹೊಳೆಯುತಿಹ ವರ ಸೂರ್ಯನಭ್ರದಿ
ನಿಳಿದವೊಲು ಮುನಿ ಬರಲು ಕಂಡರು ರಾಜಸಭೆಗೈದೆ
ಕಳಕಳವ ತಾ[8]ವೈ[8]ದೆ ಮಾಣಿಸಿ
ಹೊಳಲೊಳಗೆ ಗುಡಿಗಟ್ಟಿಯಾಕ್ಷಣ
ತಿಳಿಯಲಿಕೆ ಅರಿದೆನುತಲಿರ್ದುದು ಸಕಲಜನ[9][ವಂದು][9] ೨

ಅರಸ ಚಿತ್ರ್ಯೆಸಾಗ ಭೀಷ್ಮನು
ಧರಣಿಪತಿ ಕೃಪ ವಿದುರ ಮುಖ್ಯರು
ಪರಮ ಹರ್ಷವ ತಾ[10]ಳ್ದು ನಿಂದರು[10] ಮುನಿಯ [11]ಬರವಿನಲಿ[11]
ಸುರಪತಿಯೊ ತಾನೀತನಮೃತಾ
ಕರನೊ ಸೂರ್ಯನೊ ಮೇಣಿದಾವನೊ
ಹರ ಮಹಾದೇವೆನುತ ಬೆಜ[12]ಗಾಗಿ[12]ದರ್ುದಾಸ್ಥಾನ ೩

---

[1] ತಾ ನಿರುತದಲಿ ಗಾಂಧಾರಿ(ಕ) ವರ ನಿರುತದಲಿ ಗಾಂಧಾರಿ(ಗ) [2] ನ (ಕ) ಯ (ಗ) [3] ದರು ತಾವ್ ಮುಖ್ಯ ಮುನಿನಿಕರ(ಕ)ದಾದ್ಯರು ಮುಖ್ಯಮುನಿವರರು(ಗ) [4] ಲು(ಗ) [5] ಬಂದರು(ಕ) [6] ಮೇಳವಿಸೆ(ಕ) [7] ವಹಿಲದಲಿ(ಕ) [8] ನೈ(ಗ) [9] ನಿಕರ(ಕ)ವೃಂದ(ಗ) [10] ಳ್ದರಾಗಳು(ಕ) [11] ದರುಶನಕೆ(ಗ) [12] ಗಿನಲಿ(ಕ)

ಸಾರಿ ಬ[1]ರೆ ಬ[1]ರೆ [2]ಘುನಿಯುನಚೀದೇ[2]
ಹಾರವಿಸಿಯಿದಿ[3]ರೆದ್ದು[3] ಭೀಷ್ಮನು
ಧಾರಿಣೀಪತಿಸಹಿತ ನಡೆದ[4]ನು[4] ಮುನಿಯ ದರ್ಶನಕೆ
ವಾರಿಜಾ[5]ಸನ ಪುತ್ರನೀತನು[5]
ಮಾರ[6]ಮಣಗ[6]ತ್ಯಂತ ಪ್ರೀತನು
ವೀರನಾರದ[7]ನೆಂದು[7] ಮೆಯ್ಯಿಕ್ಕಿ[8]ದುದು[8] ಜನವೆಲ್ಲ ೪

ಇಂದು ಧನ್ಯರು[9]ನಾ[9]ವೆನುತ ನೃಪ
ವೃಂದವೆದ್ದುದು ಸಕಲ ಮುನಿಜನ
ವಂದ್ಯ ದರ್ಶನವಿದು ಅಪೂರ್ವವೆನುತ್ತ ಹರ್ಷಿಸಲು
ಬಂದನಿವರೋಲಗಕೆಯಭ್ರದಿ
[10]ನಿಂ[10]ದುಮಂಡಲ[11]ವಿ[11]ಳಿವವೊಲು ಮುನಿ
ವೃಂದ[12]ದೊಳ[12]ಗತ್ಯಧಿಕ ನಾರದ ಬರುತಲಿಂತೆಂದ ೫

ಶರಧಿ[13]ವೇಷ್ಟಿತ[13]ವಲಯದಲಿ ತಾ
ನಿರುತ ಹೋಲುವರಿಲ್ಲ ನಿಮ್ಮಯ
ಪರಮ ಪುಣ್ಯೋದಯದ ಪೂರ್ವದ ರಾಜನೀತಿಯಲಿ
ಅರಸನಡೆ[14]ವಳ[14]ಯಾಗಿ ನಿಮ್ಮಯ
ಪರಮ ಪುಣ್ಯೋದಯದ ಕೀರ್ತಿಯ
ಸುರಪತಿಯ ಸಭೆಯಲ್ಲಿ ಕೊಂಡಾ[15]ಡುವರು[15] ಮುನಿ[16]ವರರು[16] ೬

ಅರಸ ಕೇಳ್ದೈ ಬಳಿಕ ಭೀಷ್ಮನು
ವರಮುನಿಯ [17]ನುತಿಮಾಡಿ ಪೇಳ್ದನು[17]
ಸುರಪ[18]ಮುಖ್ಯಾಮರರು[18] ದೇವರು ನಿಮ್ಮ ದರ್ಶನದಿ
[19]ನಿಟಿ[19]ಕೃತಾರ್ಥರು [20]ನಾ[20]ವು ನಿಮ್ಮಯ
ಪರಮ ಮೂರ್ತಿ[21]ಯನೆಮ್ಮ ಕಂಗಳೊ[21]
ಳರರೆ ಕಂ[22]ಡೆ[22]ವು ಪೂರ್ವಜನ್ಮದ ಅಘ[23]ವಿನಾಶನವು[23] ೭

---

[1] ರುವ(ಕ) [2] ನಿಮ್ಮನಚಿದ್ದೈ(ಗ) [3] ರೈದಿ(ಗ) [4] ರು(ಕ) [5] ಸನ ಪುತ್ರನನು ಸಲೆ(ಕ) ಸುತಪುತ್ರನೀತನು(ಗ) [6] ಣಕ್ಕ(ಕ) [7] ನೋಡು(ಗ) [8] ದರು(ಗ) [9] ತಾ(ಗ) [10] ಯಿಂ(ಗ) [11] ಯಿ(ಕ) [12] ಗಳಿ(ಕ) [13] ಮಧ್ಯದ(ಕ) [14] ವಿರಿ(ಗ) [15] ಡಿದರು(ಕ) [16] ನಿಕರ(ಕ) [17] ನುತಿ ಮಾಡಿದನು ತಾ(ಕ) ಸ್ತುತಿಮಾಡಿ ಪೇಳ್ದನು(ಗ) [18] ತಿಯಮರ.ಮುಖ್ಯ(ಕ) [19] ವರ(ಕ) [20] ತಾ(ಗ) [21] ಗಳಿಂದಚಕ್ಷುಗ(ಕ) [22] ಡ(ಕ) [23] ವಿನಾಶನವ(ಕ) ದ ರಾಶಿಗಳ(ಗ).

ಬೆಂದುಹೋದವು ಸಕಲ ದುರಿತಗ
[1]ಳಿಂದು ನೀವ್ ಬರೆ[1] ನಿಮ್ಮ ಕೃಪೆಯಲಿ
ಯಿಂದು ಧನ್ಯರು [2]ನಾ[2]ವೆನುತ ಕೊಂಡಾಡಿದನು ಭೀಷ್ಮ
ತಂದೆ ಕೇಳೈ ಸಕಲ ಶಾಸ್ತ್ರದ
ಅಂದವನು ಧೃತರಾಷ್ಟ್ರಗಱುಪಿದ
ನಂದು ಮುನಿ ತಾ ಸರ್ವ ಧರ್ಮಾಧರ್ಮ ಮಾರ್ಗ[3]ಗಳ[3] ೮

ಹೇಳಿದನು ಧೃತರಾಷ್ಟ್ರಭೂಪಗೆ
ಮೇಲೆ ತಾ ಗಾಂಧಾರಿ ದೇವಿಗೆ
ಶೂಲಪಾಣಿಯ ಸತಿಯ ಪೂಜೆ[4]ಯ[4] ಪರಮಹಾಕಥೆಯ
ಸ್ಥೂಲ ಪಾಪವಿಘಾತಿಯೆಂಬು[5]ದ[5]
ಮೇಲೆ ತಾ[6]ನಿಂ[6]ದ್ರಾಣಿ [7]ನೋಂತುದ[7]
ಕೇಳೆನುತ ಸುಬಲಜೆಗೆ ನುಡಿದನು ವರಮಹಾಕಥೆಯ ೯

ಪೂರ್ವದಲಿ ಸುರಪತಿಯ ರಾಜ್ಯವ
ದೊರ್ವ ಮುನಿಪತಿಯಿಂದ [8]ಕೆಟ್ಟರೆ[8]
ಸರ್ವದೇವರ್ಕಳಿಗೆ [9]ಬಲು[9]ದಾರಿದ್ರ್ಯ[10][ವೆಯ್ದಿ][10]ರಲು
ಗರ್ವದಿಂದೈಶ್ವರ್ಯ [11][ಸಾ][11]ರಲು
ಸರ್ವಥಾಯಿದಕೊಂದುಪಾಯವ
[12]ನಿರ್ವಹಿಸಿ ನೀವ್[12] ಕರುಣಿಸೆಂದಳು ಶಚಿಯು ಗುರುಗಳಿಗೆ ೧೦

ಎಂ[13]ದೊಡಾ ಗುರು[13] ಶಚಿಗೆ ನುಡಿದನು
ಯಿಂದುಧರ[14]ವಲ್ಲಭೆಯ[14] ವ್ರತದಿಂ
ಹಿಂದೆ ಹೋದೈಶ್ವರ್ಯವೆಯ್ದುವು[15]ದೆ[15]ನಲು ಹರ್ಷದಲಿ
[16]ತಂ[16]ದೆ ಹೇಳ[17]ರಿ ಯೆ[17]ನಗೆ ನೋಂಪಿಯ
ಚಂದವನು ವಿಸ್ತರಿ[18]ಸಿ ಯೆಂ[18]ದೆನ
ಲಂದು ಗುರುಗಳು ತಿಳುಹಿದರು [19]ವರ[19]ನೋಂಪಿಯಾಕ್ರಮವ ೧೧

---

1 ಳಿಂದುಯಿಾಗಳು(ಕ) 2 ತಾ(ಗ) 3 ವನು(ಗ) 4 ಗೆ(ಗ) 5 ದು(ಗ) 6 ಯಿಂ(ಗ) 7 ತನ್ನೊಳು(ಗ) 8 ಕೆಡಲುರೆ(ಕ) 9 ತಾ(ಗ) 10 ವಾಗಿ(ಕಗ) 11 ಹಾ(ಕಗ) 12 ನಿರ್ವಹಿ… ದಲಿ(ಕ) 13 ದರಾಗಳೆ(ಗ) 14 ನರಸಿಯಳ(ಕ) 15 ವೆ(ಗ) 16 ಹಿಂ(ಕ) 17 ರೆಯೆ(ಗ) ರೆತ(ಗ) 18 ಸುಗೆಂ(ಕ) 19 ತಾವ್(ಕ)

ವರುಷ ಋತುವಿ[1][ನೊಳಿನನು][1] ಹಸ್ತದ
ವರ ಮಹಾನಕ್ಷತ್ರ ಪುಗಲಿಕೆ
ಕರಿಯ ಕುಂಭಸ್ಥಳದ ಮಧ್ಯದ ಮೇಲೆ ಗಿರಿಸುತೆಯ
[2]ವರಪ್ರತಿಷ್ಠೆಯ[2] ಮಾಡಿ [3]ವಿಧಿಯಲಿ[3]
ಹರುಷದಿಂ ಜವೆಯಾದಿಯಾಗಿಹ
ಪರಮಷೋಡಶ[4]ಧಾನ್ಯದಿಂದರ್ಚಿಪುದು ಗಿರಿಜೆಯನು[4] ೧೨

[5]ಪರಮ[5] ಭಕ್ತಿಯ ಭಾವದಲಿ [6]ತಾ
ನಿರದೆ[6] ಷೋಡಶ [7]ಧೂಪದೀಪದಿ[7]
ಪಿರಿದುಆಜ್ಯದ ದೀಪದಿಂದವೆ[8]ಧ್ಯಾನ [8]ಷೋಡಶ[9]ದಿ[9]
ನಿರುತದಲಿ ಪ್ರತಿವರುಷ[10][ವೀ ಪರಿ][10]
ವರುಷ ಷೋಡಶತನಕ ನೋನುತ
ಲಿರಲು ವುದ್ಯಾಪನೆಯ ಮಾಳ್ಪುದು ಷೋಡಶಾಂತ್ಯದಲಿ ೧೩

ಪಿರಿದುಮಹ ಕಾರ್ಯಾರ್ಥ ಸಿದ್ಧಿಯು
ಹರನ ಕೃಪೆಯಿಂದಹುದು ಯೆನಲಿಕೆ
ಸುರಪತಿಯ ಸತಿ ನೋಂತು ಪಡೆದಳು ಸಕಲ ಸಿರಿ ಜಯವ
[11]ವರ ಮಹಾ[11]ನೋಂಪಿಯನು ಮನುಜರು
ಪರಮ ಹರುಷದಿ ನೋನಲವರಿಗೆ
ಹರನು ಕರುಣಿಪನೆಂದು-ನಾರದನೊಱೆದ ಸುಬಲಜೆಗೆ ೧೪

ಕೇಳಿ ಹರುಷವ ತಾ[12]ಳ್ದು[12] ಮನದಲಿ
ಸ್ಥೂಲನೋಂಪಿಯ [13]ಮಾಳ್ಪೆ[13]ನೆಂದಾ
ಲೋಲ[14]ಮುನಿ[14] ಪೇ[15]ಳ್ದಂದದಲಿ[15] ಮಾಡಿದಳು ಗಾಂಧಾರಿ
ಕೇಳು ಭೂಪತಿಯಿತ್ತ [16]ಬ[16]ನದೊಳು
ಬಾಲೆ ಕುಂತಿ[17][ಗದೊ][17]ರ್ವ ಭೂಸುರ
ಹೇಳಿದನು ಗಾಂಧಾರಿ ದೇವಿಯು ನೋಂತ ಸಂಭ್ರಮವ ೧೫

---

1 ನ ಬೇಳ(ಕ)ನ ವೊಳಗೆ(ಗ) 2 ನಿರುತದಲಿ(ಗ) 3 ಪ್ರಾತಿಷ್ಠೆ(ಗ) 4 ದಾನದಿಂದರ್ಚಿಸಲು ಬೇಕೆಂದ(ಕ) 5 ಹಿರಿದು(ಗ) 6 ನೆಜೆನಿರುತ(ಗ) 7 ಯೋಪಚಾರದಿ(ಗ) 8 ದಿನವು(ಗ) 9 ವ(ಕ) 10 ದಿಂದವೆ(ಕ) ದಿಂದಲಿ(ಗ) 11 ಪರಮವರ(ಕ) 12 ಳಿ(ಕ) 13 ನೋವೆ(ಕ) 14 ಮತ(ಗ 15 ಳ್ದದನೊಲಿದು(ಕ) 16 ವ(ಗ) 17 ಗೆಯೊ(ಕಗ)

ಏನನೆಂಬೆನು ಸರ್ವಭೂಸುರ
ದಾನದಲಿ ದಣಿಯಿ[1]ತ್ತು ತಾನದ[1]
ನೇನ[2]ಹೇಳುವೆ[2] ಸಹಸ್ರಜಿಹ್ವೆಯ ಶೇಷಗಳವಲ್ಲ
ಮಾನನಿಧಿಯಾ ಕುಂತಿಯೆಲ್ಲವ
ಮೋನದಲಿ ತಾ ಕೇ[3]ಳ್ದು ಆಗಳು[3]
ಕಾನನದ ಮಧ್ಯದಲಿ ನೋನು[4]ವೊಡ[4]ರಿದು [5]ತವು[5]ಗೆನುತ ೭

ಅವರಿಗಾ ಗಜಪುರದ ರಾಜ್ಯದ
ತವ[6]ನಿಧಿಯು ಸಿರಿವಂತಿಕೆ[6]ಮುಗಿ
ನ್ನವರು ನೋಂತಾಪರಿಯ ಮಾಡಲುಯಿಲ್ಲ ವನದೊಳಗೆ
ನವೆ[7]ತಿಹೆವು[7] ಧನಹೀನರಾಗಿಯೆ
ಶಿವ ಶಿವಾ ಎಂದೆನುತ ಮನದಲಿ
ಹವಣಿಸುತಲಿರಲಿತ್ತಲರ್ಜುನದೇವನಾಕ್ಷಣ[8]ದಿ[8] ೮

ವರಮುನಿಗಳಾಶ್ರಮಗಳಿಂದವೆ
ನಿರುತದಲಿ ತಾ ಧರ್ಮಶಾಸ್ತ್ರದ
ಪರಮ ವಾಕ್ಯಂಗಳನು ಕೇಳಿದು ಹರ್ಷವು[9]ನನಾ[9]ಗಿ
ಬರುತ ಕಂಡನು ಕುಂತಿದೇವಿಯ
[10]ಭರದ[10]ದುಗಡವನಾಗ ಫಲುಗುಣ
ಶಿರವ ಚಾಚಿದ ಪಾದಯುಗಳಕ್ಕರಸ ಕೇಳೆಂದ ೯

ತಾಯೆ ನಿಮ್ಮಯ ದುಗುಡವೇನೆನೆ
ರಾಯ ಪಾಂ[11]ಡುವಿ[11]ನರಸಿ ನುಡಿದಳು
ಶ್ರೀ[12]ಯ[12] ಹೀನರು [13]ನಾ[13]ವು ದುಗುಡವ [14]ಮಾಡಿ[14] ಫಲವೇನು
ಆ ಯುವತಿ ಗಾಂಧಾರಿ ತಮ್ಮಯ
ಶ್ರೀಯ ಸೊಬಗಿನಲೊಂದು ದಿನದೊಳು
ಶ್ರೀಯುಮಾದೇವಿಯರ ಹ[15]ಸ್ತಿಯ[15] ನೋಂಪಿಯೆಂಬುದನು ೧೦

---

[1] ತ್ತದನು ನಾ(ಕ) ತ್ತು ತಾವದ(ಗ) [2] ನೆಂಚೆ(ಕ) [3] ಳುತಾಗಳು(ಕ)ಳ್ದು ಆಗಲು([illegible]) [4] ವುದ(ಕ) [5] ತನ(ಕ) ನಮು(ಗ) [6] ಕದಲಿ ಶ್ರೀಮಂತರೆ(ಕ) ನಿಧಿಯು ಸಿರಿವಂತರೆ([illegible]) [7] ವುತಿಹೆ(ಗ) [8] ಕೆ (ಗ) [9] ಯವಾ(ಗ) [10] ಪರಿಯ(ಕ) [11] ಡವ(ಕ) [12] ಯು(ಕಗ) [13] ತಾ([illegible]) [14] ಹಿಡಿದು(ಗ) [15] ಸ್ತದ(ಗ)

ಮಾಡಿದಳು [1]ಪದಿನಾಱು[1] ವರ್ಷವು
ರೂಢಿ ಹಸ್ತಿಯಮೇಲೆ ಗಿರಿಜೆಯ
ನಾಡೆ ಸ್ಥಾಪನೆಗೆಯ್ದು ಭೂಸುರ ತತಿಗೆ ದಾನವನು
[2]ನೀ[2]ಡಿದಳು ತಾನಧಿಕಕೀರ್ತಿಯ
ಮಾಡಿದಳು ಭುವನದೊಳು ಯೆಂ[3]ಬಿ[3]ದ
ನೋಡಿದನು ದ್ವಿಜನೊರ್ವನಲ್ಲಿಯ ದೇಶಪರ್ಯಟನು ೨೦

ಎನಲು ಫಲುಗುಣ [4]ತಾಯ ಮಾತಿಂ
ಗೆ[4]ನಿತು [5]ಘನವೀ[5] ಕಾರ್ಯವೆಂದಿದ
ಕಿನಿತು ದುಗುಡವಿದೇಕೆ ನಿಮ್ಮಯ ನೋಂಪಿ[6]ಗೀಗೆನಿತು[6]
ಎನಿತು ವಸ್ತುಗಳಾಗಬೇಕೆಂ
ಬಿನಿತುವನು [7]ನಾನೀಗ ತರಿ[7]ಸುವೆ
[8]ಮನಕೆ ಬಂದುದ[8] ಬೆಸಸಿಯೆ[9]ನೆ ಹರುಷಿಸಿದಳಾ ಕುಂತಿ[9] ೨೧

[10][ಮು][10]ರಹರಾ ಶ್ರೀಕಾಂತಯೆನುತಾ
ನರನ ವಾಕ್ಯಕೆ ಕುಂತಿಯಾಕ್ಷಣ
ಪರಮಹರ್ಷವ ತಾಳ್ದು ನುಡಿದಳು ರಾಯ ಕೇಳೆಂದ
ಹರಿಯಿತೆಲೆ ಮಗನೆನ್ನ ಚಿತ್ತದ
[11]ಪಿರಿದು[11] ದುಗುಡವಿ[12]ದೀಗ[12] ನಿನ್ನಯ
ಪರಮ ವಾಕ್ಯ[13]ವಿದೇನು ಹೇಳೆನೆ[13] ಬಳಿಕ ಫಲುಗುಣನು ೨೨

[14]ಹಿರಿದು ಜಪತಪದಿಂದೆ[14]ಪ್ರಾರ್ಥಿಸೆ
ಪರಮ ಕರುಣಾಸಿಂಧು ಮೆಚ್ಚಿಯೆ
ಹರುಷದಲಿ ವರವಿತ್ತನರ್ಜುನದೇವಗಾ ಶಿವನು
ಧರೆಯೊಳಗೆ ನಿನ್ನೊಡನೆ ಯುದ್ಧವ
ನಿರುತ ಮಾಳ್ಪಗೆ ಗೆಲವು ದೊರಕದು
ಭರವಸವು ತಾನೆಂದು ತಿರುಗಿದನಾಗ ಶಂಕರನು ೨೩

---

1 ಯಿೂರೆಂಟು(ಗ) 2 ಮಾ(ಕ) 3 ಬು(ಕ) 4 ನೆಂದ ಮಾತೆಗೆಯ(ಕ) 5 ತಾಘನ(ಕ) 6 ಯನು ನೋನೆ(ಕ) ಗೀ ಗಿಂತು(ಗ) 7 ನಾನಾಗ ಬರಿ(ಕ) ತಾನೀಗ ತರಿ(ಗ) 8 ನೆನಗೆ ನೀವೇ(ಕ) 9 ನಲಿಕೆ ದೇವಿ ಹರುಷದಲಿ(ಗ) 10 ಹ(ಕಗ) 11 ಪರಮ(ಕ) 12 ದೇನು(ಕ) 13 ವಿದೇನು ಯೆನ್ನಲು(ಕ) ವೇ ಹೇಳೆಂದು ನುಡಿಯಲು(ಗ) 14 ಬರಿದೆ ವಾಕ್ಯಗಳಿಂದೆ(ಕ)

ಬಂದು ವರವಿತ್ತಾಗ ಪೋದನು
ಮುಂದ[1]ರೋ[1]ದ್ಧರಗಧಿಕ ಪ್ರೀ[2]ತ[2]ನು
ತಂದೆ ಕೇಳೈ ಬಳಿಕ ನಿಸ್ನಯ ವಂಶಜನ ಪರಿಯು
ಅಂದಿಗವಗೊಂಬತ್ತು ವತ್ಸರ
ಸಂದಿಹುದು ಬಳಿಕಂದು[3]ಮಾ[3]ಡಿದ
ಚಂದವನು ನೀ ಕೇಳು ಭೂಪತಿಯೆಂದನಾ ಮುನಿಪ ೨೪

*ತಾಯೆ ಚಿತ್ತಯಿಸಿಂದುಧರನೆನ
ಗಾಯತದ ವರವಿತ್ತನದಱಿಂ
ಬೀಯವಾಗದೆ ನಿಮ್ಮ ಬಯಕೆಯ ಸಲಿಸುವೆನು ದಿಟಕೆ
ನ್ಯಾಯವಱಿಯದ ಕ್ರೂರಕರ್ಮರು
ರಾಯನೀತಿಯ ಮಱೆದು ನೋಂತರು
ನಾಯಿಗಳ ನೂಕವರ ಚಿತ್ತಯಿಸಿನ್ನು ಸಂಭ್ರಮವ ೨೫

ಮನಸಿನಲಿ ತಾ ನೆನೆದು ನೋಡಿದ
ಕನಕ ಹಯ ಗಜ ರಥಗಳಾವನ
ಮನೆಯಲುಂ[4]ಟೆನು[4]ತಾಗಳಱಿದನು ದೇವರಾ[5]ಜನನು[5]
ಘನತರದ [6]ಸಿರಿಯುಂಟು ವಜ್ರಿಗೆ[6]
ದಿನಕರನ ಹವಣಲ್ಲ ಪದವಿಗೆ
ಮನಕೆ ಬಂದರ್ಥವನು ಬೇಡು[7]ವೆನಿಂ[7]ದ್ರದೇವನಲಿ ೨೬

ಮೊದಲಲೇ ಸನ್ಮಾನದಿಂದ[8]ಲ[8]
ಹದನ ಬರೆದಟ್ಟುವೆನು ಆತಗೆ
ವಿದಿತದಲಿ ಗಜಸಹಿತ ಮೇನಕಿ ರಂಭೆಯೂರ್ವಶಿಯು
ಪದಕವನು ಪಾಷಾಣವನು ತಾ
ನಧಿಕ [9]ಕಪಿಲೆ[9]ಯ ಕಲ್ಪವೃಕ್ಷವ
ಸುದತಿಯರ ನೀನಿತ್ತು ಕಳು[10]ಹೆನೆ ಕಳುಹದಿರೆ ಬಳಿಕ[10] ೨೭

---

[1] ರಾ(ಕಗ) [2] ಯು(ಗ) [3] ಕೂ(ಗ) [4] ಟಿಂ(ಕ) [5] ಜಂಗೆ(ಗ) [6] ಶ್ರೀಮಂತನಾತಗೆ(ಕ) ಶ್ರೀಯುಂಟು ವಜ್ರಿಗೆ(ಗ) [7] ವಯಿಂ(ಕ) ನಿಂ(ಗ) [8] ವೆ(ಗ) [9] ಪ್ರೀತಿ(ಕ) [10] ಹನೆಯಿರಲು ಬಳಿಕಾಗ(ಕ)

* ಈ ಪದ್ಯ (ಗ) ಪ್ರತಿಯಲ್ಲಿಲ್ಲ.

ಹದನ [1]ಕಾಂಬೆ[1]ನು ಅಮರರೆಲ್ಲರ
ತಿದಿಯ ಸುಲಿ[2]ವೆನು[2] ದೇವರಾಯನು
ಕದನವನು [3]ಮಾಡಿ[3]ದರೆ ತೊಡೆವೆನು ಭಾಳದಕ್ಕರವ
ಇದು ನಿದಾನವು ಶಂಕರನು [4]ಘನ[4]
ಕದನದಲಿ [5]ನೀ ಗೆಲುವೆಯೆಂದವ[5]
ಪ[6]ದಿದೆ[6]ನಗೆ ವರವಿತ್ತು ಪೋದನು ಶಿವನ [7]ಕೃಪೆಯುಂ[7]ಟು ೨೮

ಎಂದು ಧನುವನು ಕೊಂಡು ಶರ[8]ದೊಳ[8]
[9]ಗೊಂದು ಪತ್ರವ ಬರೆದು ಕಟ್ಟಿಸೆ[9]
ಬಂದುದಮರಾವತಿಯ ಮಧ್ಯ[10]ದಿ[10] ರಾಜಸಭೆಯೊಳಗೆ
ಬಂದು ಧ್ವಜಸ್ತಂಭದಲಿ[11]ಕೀಲಿಸೆ
ಸಂದ [11]ಯಮಃ ಪುರು[12]ಹೂತ ಮು[12]ಖ್ಯರು
[13]ಬಂದ[13] ಬಾಣವ [14]ಕಂಡು[14] ಬೆಱಗಾಗಿರ್ದುದಾಸ್ಥಾನ ೨೯

ಹರಮಹಾದೇವೆತ್ತಣದು ಯಿಾ
[15]ವಿಱಿಪ[15] ಬಾಣನಿದೊಂದು ಬಂದಿದೆ
ಮುರಹರನು ತಾ ಬಲ್ಲನೆನುತವೆಯಿಂದ್ರ ಮು[16]ದ[16]ದಿಂದ
ಬರೆದ ಲೇ[17]ಖವ[17] ವಾಚಿಸಲು ತಾ
ನಿರುತವಱಿಯಲುಬಹುದು ಕಾರ್ಯ[18]ವ[18]
ಶರವನೇ ತಾ [19]ಎಂ[19]ದು ವಜ್ರಿಯು ಬೆಸಸಲಾಕ್ಷಣಕೆ ೩೦

ಮುರಹರಾ ಶ್ರೀಕಾಂತಯೆನುತಲಿ
ವರ ಮಹಾಶರದೆಡೆಗೆ ವಜ್ರಿಯು
ವರ ನಿರೂಪದಿ [20]ಗ[20]ಮಿಸಿ ತೆಗೆದನು ಬಾಣ[21]ಪತ್ರವನು[21]
ಬರೆದ [22]ಲೇಖವ[22] ವಾಚಿಸೆ[23]ನೆ ತಾ[23]
ಕರಗಳನು ಮುಗಿದೆದ್ದು ಲೇಖವ
ನಿರುತದಿಂದ[24]ವೆ[24] ವಾಚಿಸಿದ[25]ನವನಿಂ[25]ದ್ರನಿದಿರಿನಲಿ ೩೧

---

[1] ಕಾಜೆ(ಕ) ಕಾಬೆ(ಗ) [2] ಸುವೆ(ಗ) [3] ಕೆಣಕಿ(ಕ) [4] ವರ(ಕ) [5] ತಾಗೆಲುವೆನೆಂದಾ(ಗ) [6] ದವೆ(ಗ) [7] ವರವುಂ(ಕ) [8] ದಲಿ(ಕ) [9] ಯೊಂದು ಪತ್ರವ ಬರೆದು ಕಟ್ಟಲು(ಕ) ಅಂದು ಓಲೆಯ ಬರೆದು ಕಟ್ಟಿಸೆ(ಗ) [10] ದ(ಕ) [11] ತೆತ್ತಿಸಲಂದು(ಕ) [12] ಷೋತ್ತಮಾ(ಕ) [13] ಅಂದು(ಗ) [14] ತಂದು(ಕ) [15] ನಿರುತ(ಕ) [16] ಖ(ಕ) [17] ಖೆಯ(ಕ) [18] ವ(ಗ) [19] ನಿ೦(ಕ) [20] ನ(ಕ) [21] ಪುತ್ರಿಕವ(ಗ) [22] ಲೆಕ್ಕವ(ಕ) ಲೇಖೆಯ(ಗ) [23] ನಲಿಕೆ(ಕ) [24] ದ(ಗ) [25] ನಾಯಿಂ(ಗ)

ಎಲೆ ಸುರೇಶ್ವರ ನಿ[1]ನ[1]ಗೆ ವಂದಿಪೆ
ಕಳುಹುವುದು ಗಜಸಹಿತ[2][ಸುರಭಿಯ][2]
ನಳಿನಮುಖಿಯರ ರಂಭೆ[3]ಮೇನಕಿ[3] ಮುಖ್ಯನಾರಿಯರ
ಕಳುಹುವುದು ಹಯರಥವನೀಕ್ಷಣ
ಘಳಿ[4]ಲನಿಲ್ಲಿಗೆ[4]ಕನಕರತ್ನವ
ಕಳುಹುವುದು ಗಂಧರ್ವಕಿನ್ನರ ಯಕ್ಷಗುಹ್ಯಕರ ೩೨

ತಥ್ಯವಿದು ಶ್ರೀಕುಂತಿದೇವಿ[5]ಯು
ಅ[5]ರ್ಥಿಯಲಿ ಶಿವನರಸಿ ಗಿರಿಜೆಯ
ಹ[6]ಸ್ತದಾ[6] ನೋಂಪಿಯನು ನೋನಲು ಮನದ ಸಂಕಲ್ಪ
ತಥ್ಯವಿದು ಪದಿನಾಱು [7]ದಿವಸವು[7]
ಮರ್ತ್ಯ[8]ಲೋಕದೊಳಿರಿಸಿ ಬಳಿಕವ[8]
ಸತ್ಯದಲಿ ಕಳುಹು[9]ವೆನು ಯೆಂದನು ನರನು ದಿಗ್ಗಜವ[9] ೩೩

ಎಂದು ವಾಚಿ[10]ಸಲಾ[10]ಗ ಪತ್ರವ
[11]ನಂ[11]ದು ತಾ ದೇವೇಂದ್ರ ಹರುಷಿಸಿ
ಕಂದನಾ [12]ಸಾಮರ್ಥ್ಯಕಾ[12]ಗಳು ನುಡಿದನಿಂತೆಂದು
ಮಂದ[13]ರೋದ್ಧ[13]ರ ದೇವನತ್ತೆಯು
ಕಂದ[14]ನಿ[14]ವ ಸಾಮರ್ಥ್ಯ[15]ನೈ[15] ದಿಟ
ಮಂದಗಮನೆಯರುಗಳ[16]ಗಜ ಧನ[16]ಪಶುವ ಕಳು[17]ಹುವೆನು[17] ೩೪

ಎಂದು ತಾ ದೇವೇಂದ್ರ [18]ಬರೆಸಿದ
ನೊಂ[18]ದು ಲೇಖವನಾಗ ಪಾರ್ಥಗೆ
ಯಿಂದುಮುಖಿಯರ ಗಜವ ಪಶುವನು ಬೇಹ ವಸ್ತುಗಳ
ಕಂದ ನಿನ್ನಯ ಜನನಿ ನೋನಲು
ಯಿಂದು[19]ನಾ ನಿನಗೀವೆನೆ[19]ಲ್ಲವ
ಕಂದ ಸ್ವರ್ಗ[20]ದಿ[20] ಮರ್ತ್ಯಕೆಳು[21]ಹುವುದರಿದು ತನ[21]ಗೆಂದು ೩೫

---

1 ಮ(ಗ) 2 ಪಶುವನು(ಕಗ) 3 ಯೂರ್ವಶಿ(ಕ) 4 ಗೆ ನಿಲ್ಲದೆ(ಕ) ಲಲಿಲ್ಲಿಗೆ(ಗ) 5 ಗೆಯ(ಕ) 6 ತಿಯಸು(ಕ) 7 ವರ್ಷವು(ಕ) 8 ದೊಳಿರಿಸಿ ಬಳಿಕದನು ನಾವು(ಕಗ) 9 [illegible] ಬಳಿಕಾ ಕಾಮಿನೀ ಜನರ(ಕ) 10 ಸಿಲಾ(ಕ) ಸಿದಾ(ಟ) 11 ಅಂ(ಕ) 12 ಡಿದ ಮಾತಿಗಾ(ಗ) 13 ರಾಧ(ಕ) 14 ನ(ಗ) 15 ನೆನೆ(ಕ) 16 ಜೀವಿಸಲು ವನ(ಕ) 17 ಹೆಂದ(ಕ) 18 ಹರುಷಿಸಿದೊಂ(ಗ) 19 ತಾ ನಿಮಗೀವೆಯೆ(ಗ) 20 ದ(ಕ) 21 ಹಲು ಅರಿದು ತಮ(ಗ)

ನೀವು ಬಲ್ಲಂದದಲಿ ಒಯ್ವುದು
ನಾವು ಕೊಡು[1]ವೆವು[1] ಗಜವನೆಂ[2]ದೆನೆ[2]
ದೇವರಾಯನು [3]ಬರೆಸಿ ಲೇಖವನಟ್ಟಿದನು ಮರಳಿ[3]
ಆ ವಿಗಡ ಲೇ[4]ಖವನು ಕಂಡೇ[4]
ಭಾವದಲಿ ಕಲಿಪಾರ್ಥ ನೆನೆದನು
ದೇವದೇವ ಮುಕುಂದ ಮುರಹರ ನೀನೆ ಗತಿಯೆನುತ ೩೬

ಇಂದ್ರ ಪಾವಕ ಯಮ[5]ನು ನೈಋತಿ
ಚಂ[5]ದದಲಿ ತಾ ವರುಣ ವಾಯುವ
ನಂದು ನೆನೆದನು ಪಾರ್ಥ[6]ಧನಪನನಾ ಮಹೇಶ್ವರನ[6]
[7]ಇಂದುವನು ಆದಿತ್ಯದೇವರ
ನಂದು ಸುರ ತೆತ್ತೀಸ ಕೋಟಿಯ
ಚಂದದಲಿ ತಾ ಸ್ತುತಿಸಿ ಹೂಡಿದ ಧನುವಿನಲಿ ಶರವ[7] ೩೭

ಆ ವಿಬುಧಗಣವೆಯ್ದೆ ಹರ್ಷಿಸೆ
[8]ಜಾವದಲಿ[8] ಸ್ವರ್ಗಕ್ಕೆ ಸೇತುವ
ನಾ ವಿಗಡ ಕಲಿಪಾರ್ಥ ಕಟ್ಟಿದ ಶರದ ಪಂಜರವ
ದೇವರಾ[9]ಯ[9]ನು [10]ಕಂಡು ಶಿವಶಿವ[10]
[11]ದಾವ ಶರಸಂಧಾನ ತಾನಿದ
ದಾವ ಘನತರ ಸತ್ವವೆನುತವೆ ಹೊಗಳಿದನು ಸುತನ[11] ೩೮

*ಇತ್ತ ಕರಿಯನುಯಿದಿರುಗೊಂಡರು
ಮತ್ತಕಾಶಿನಿ ಭೂಪ ಭೂಸುರ
ಸತ್ತಮರು ನಲವಿಂದ ತಂದರು ವನದ ಮಧ್ಯದಲಿ
ಅತ್ತ ಗಜಪುರಿಗಾಗಿ ಭೀಮನ
ಮುತ್ತಯನ ಧೃತರಾಷ್ಟ್ರವಿದುರನ
ಪತ್ನಿಯರ ಕರೆತರಿಸೆ ಕಳುಹಿದನರಸ ಕೇಳೆಂದ ೩೯

---

1 ವುದು(ಗ) 2 ದಾ(ಕ) 3 ಕಚನಕಳುಹಿದೊಡವನುಯಿಳಿತಂದು(ಕ) 4 ಖೆಯನು ಓದಿಯೆ (ಗ) 5 ನಿರುತಿ ಆಯಂ(ಗ) 6 ಕಟ್ಟಿದ ಶರದ ಪಂಜರವ(ಕ) 7 ಇಂದ್ರ ಮೊದಲಾದಖಿಳದಿವಿಜರು ಅಂದು ಶಿವಶಿವದಾವ ಶರದಲಿ ಸಂಧಿಸಲು ಸಾಸಿಗನುಯೆಂದೇ ಹೊಗಳಿದರು ನರನ(ಕ) 8 ಭಾವದಲಿ(ಕ) ಜವದೊಳು(ಗ) 9 ಜ(ಕ) 10 ಗಜವಸತಿಯರ(ಕ) ಕಂಡು ಶಿವಶಿವ(ಗ) 11 ಕಾವಧೇನುವ ವಜ್ರವನು ರಥ ರಾವಮಾತಲಿ ಸಹಿತ ಕಳುಹಿದನರಸಕೇಳೆಂದ(ಕ)

*ಹೋಗಿ ಭೀಮನು ಕಂಡು ಭೀಷ್ಮಗೆ
ಬಾಗಿ ಶಿರವನು ಬಳಿಕ ಹೇಳಿದ
ನಾಗಮೋಕ್ತವಿಧಾನವನು ಬಿನ್ನೈಸಿ ನಲವಿನಲಿ
ಬೇಗದಲಿ ಧೃತರಾಷ್ಟ್ರ ವಿದುರಗೆ
ಬಾಗಿ ಹೇಳಲು ಬಂದುದಲ್ಲಿಗೆ
ಆಗ ಪಾಂಡವ ಸತಿಸುತರು ಕೊಂಡಾಡಿ ನಮಿಸಿದರು ೪೦

ಇಳಿದುದಾ ಗಜ ಕಾ[1]ಮಿನೀ ಜನ
ನಿಳಿದು ಬಂದುದು ಕಾಮಧೇನುವ
ಕ[1]ಳುಹಿದನು ಕಲಿಪಾರ್ಥ[2]ನನ್ವೆಗೆಯಿಂದ್ರ ನಿಮಿಷದಲಿ[2]
ಬಳಿಕ ತಾ [3]ಶ್ರೀ[3] ಕುಂತಿದೇವಿಯು
ನಳಿನನಾಭನ ನೆನೆದು ಹರ್ಷದಿ
ನಲವು ಮಿಗೆ ಗುಡಿಗಟ್ಟಿ ಋಷಿ[4]ಗಳ ದೇವ[4]ಮಾರ್ಗದಲಿ ೪೧

ನಿರುತದಲಿ ಶ್ರೀ ಗೌರಿದೇವಿಯ
ವರ ಮಹಾಕರಿಯಲ್ಲಿ ಸ್ಥಾಪಿಸಿ
ಪಿರಿದು ಆಜ್ಯದ ದೀಪದಿಂದವೆ [5]ಧಾನ್ಯ[5]ಷೋಡಶದಿ
ಸುರಮಹಾವನಿತೆಯರು ಕೂಡಿಯೆ
ಅರಸಿ ಕುಂತಿಯು ಮಾದ್ರಿ ನೋಂತಳು
[6]ಹರುಷದಲಿ[6] ಪದಿನಾಱು ವರುಷವು ಭೂಪ ಕೇಳೆಂದ ೪೨

ಆ ಮಹಾ ಮುನಿವರರ ಸತಿಯರ
[7]ನೀ[7] ಮಹಾ ಪಾಂಡುವಿನ [8]ಅರಸಿಯು[8]
ಭೀಮಸೇನನ ಕಯ್ಯಲವರನು ಕರಸಿದಳು ಗೃಹಕೆ
ಪ್ರೇಮದಲಿ ತಾನವ[9]ರುಗೂ[9]ಡಿಯೆ
ಭೂಮಿಪಾಲಕನರಸಿ ನೋಂತಳು
ಭೂಮಿಯೊಳಗೀಪರಿಯ ನೋಂತ[10]ರ[10] ಕಾಣೆ ನಾನೆಂದ ೪೩

---

* ಈ ಪದ್ಯ (ಗ) ಪ್ರತಿಯಲ್ಲಿಲ್ಲ

1 ಮಧೇನುವ ನಿಳಿದುಬಂದರು ಕಾಮಿನೀಜನವಿ(ಕ) 2 ದೇವನು ಭೂಪ ಕೇಳೆಂದ(ಕ) 3 ನಾ(ಕ) 4 ಗಳು ವೇದ(ಕ) ಯರ ದೇವ(ಗ) 5 ಧ್ಯಾನ(ಕ) 6 ನಿರುತದಲಿ(ಕ) 7 ಯಾ(ಗ) 8 ಸತಿಯರು(ಕ) 9 ರ ಕೂ(ಕ) 10 ಳ(ಗ)

ಬಳಿಕ [1]ಕುಂತೀ ಮಾದ್ರಿಗಳು ತಾವ್
ನಲವು ಮಿಗೆ[1] ಬಾಗಿನವನಿತ್ತರು
ಕಲಶ ಕನ್ನಡಿ ರತ್ನಮುತ್ತುಗಳಿಂದ [2]ಮುನಿ[2]ಗಳಿಗೆ
ಸುಲಲಿತಾಂಬರ ದಿವ್ಯ[3]ವಸ್ತ್ರವ[3]
ಪಲವು[4]ಮೌಕ್ತಿಕ ಹೇಮ[4]ರೌಪ್ಯವ
[5]ನೊ[5]ಲಿದು ದಾನವ ಮಾಡಿದರು [6]ತಾವ್[6] ಕುಂತಿಮಾದ್ರಿಯರು ೪೪

ಏನನೆಂಬೆನು ಭೂಪ ಭೂಸುರ
ದಾನದಲಿ ದಣಿಯಿತ್ತು ಬಳಿಕದ
ನೇನ[7]ಬಣ್ಣಿಪೆ[7] ಗಜಪುರ[8]ದಿ[8] ಗಾಂಧಾರಿ ನೋಂತುದಕೆ
[9]ತಾನು ನೂರ್ಮುಡಿಯೆನಿಸಿ ಮೆಱೆಯಿತ
ನೂನ ಸಂತಸದಿಂದ ನೋಂತಳು
ತಾನುಮಾದೇವಿಯರ[9] ನೋಂಪಿಯ ಶೃಂಗಗಿರಿಯೊಳಗೆ ೪೫

ನಿರುತದಲಿ ಕುಂತಿಜರನಾಗಳು
ಹರುಷಮಿಗಲಾ ಹರಿ[10]ಯು ಕಾಯಲು[10]
ವರ ಮಹಾನೋಂಪಿಯ [11]ನಿದಾನವ ಬಯಸಿದುದ ಕರಸಿ[11]
ಭರ[12]ವಸದಿ ತಾ[12]ನವರ ಕಾರ್ಯಕೆ
ನಿರುತ ಬೆಂಬಲವಾಗಿಯಿ[13]ರ್ದುದ[13]
ಮರುಳು ದುರ್ಯೋಧನನ ಮಾತೆಯು ಕೇಳಿ ಖತಿಗೊಳಲು ೪೬

ಬಳಿಕ ತಾ ವರಗಜ[14]ವ[14] ಪಶುವನು
ವೊಲಿದು ಕಾಮಿನಿ ಜನವನೆಲ್ಲವ
ಪಲವು ಮನ್ನಣೆಯಿಂದ ಕಳುಹಿದನಾಗ ಕಲಿಪಾರ್ಥ
ಎಲೆ ಮಹೀಪತಿ ಕೇಳು ನಿ[15]ನ್ನ[15]ಯ
ಕುಲಪಿತಾಮಹ[16]ನ[16]ವರನೆಲ್ಲರ
[17]ನೊ[17]ಲಿದು ಪಾಲಿಸುತಿರ್ದ ಗದುಗಿನ ವೀರನಾರಯಣ ೪೭

ಅಂತು ಸಂಧಿ ೨೧ ಕಂ ಪದ[18]೧೦೭೮[18]ಕಂ ಮಂಗಳಂ ಶ್ರೀ ಃ

---

[1] ಕುಂತೀ ದೇವಿಯರು ತಾವ್ ಪಲವು ವರ(ಕ) ಕುಂತಿಯು ಮಾದ್ರಿಯರುಗಳು ನಲವು ಮಿಗೆ(ಗ) [2] ಋಷಿ(ಕ) [3] ಭೂಷಣ(ಕ) [4] ವಿಮಲಸುವರ್ಣ(ಕ) [5] ನ(ಗ) [6] ಸಿರಿ(ಕ) [7] ನೆಂಬೆನು(ಗ) [8] ದ(ಗ) [9] ಈ ಮಹಾಸತಿ ನೂಱುಮುಡಿ ಮಿಗೆ ಯಾ ಮಹೋತ್ಸವದಿಂದೆ ನೋಂತಳು ಶ್ರೀ ಮಹಾದೇವಿಯ(ಗ) [10] ಯು ಕಾರ್ಯವ(ಕ) [11] ಲಿ ಯಾವುದ ಬಯಸಿದರೆ ತರಿಸಿ(ಕ) ನಿಧಾನವು ಬಯಸಿದುದ ತರಿಸಿ(ಗ) [12] ತವಂಶವು ಇ(ಗ) [13] ಹುದದು(ಗ) [14] ವು(ಗ) [15] ಮ್ಮ(ಕ) [16] ರ(ಕ) [17] ವೊ(ಕ) [18] ೧೪೧೪(ಗ)

ಎಚ್. ಆರ್. ದೊರೆಸ್ವಾಮಿ

ಬಡಿತ

'ಹೊತ್ತಾಯಿತು. ಬಸ್ಸಿಗೆ ಹೋಗಲೇಬೇಕು' ಎಂದು ನಿಶ್ಚಯಿಸಿ
ಬಸ್ಟ್ಯಾಂಡ್ ಬಳಿಗೆ ನಡೆದು,
'ಟಿಕೆಟ್ ಕೊಡುವಿರಾ ನನಗೊಂದು . . . . . ಊರ ಕಡೆ' ಎಂದಾಗ
'ಟಿಕೆಟ್ಟಿನ ದರದೂದಿಲ್ಲ, ಚೆಕಿಂಗ್ ನಡೆಯುವುದೂ ಇಲ್ಲ
ಹತ್ತಿರಿ ಬಸ್, ಸೀಟ್ ಹಿಡಿಯಿರಿ' ಎಂದು ಕಂಡಕ್ಟರ್
ಹಿತವಾದ ನುಡಿದಾಗ ನನಗೆಷ್ಟೋ ಆಪ್ಯಾಯವೆನಿಸಿತ್ತು.
ಬಸ್ ಹತ್ತಿದೆ—
ಹೊಗೆಕಾರಿ ಹೊರಟಿತು ಮುಂದೆ.
ನನ್ನವರು ಯಾರಾದರೂ ಇರುವರೆ
ಎಂದು ಹಿಂದಿರುಗಿ ನೋಡಲು,
ಎಲ್ಲ ಸಂತೆಯ ಗೊಜಬಿಜ.
ದಾರಿಯಲ್ಲೆಲ್ಲೋ ಒಂದೆಡೆ ಬಸ್ ನಿಂತಿತು.
ಇಳಿದವರು ಯಾರೂ ಇಲ್ಲ; ಹತ್ತಿದರು ಬಸ್ ಎಲ್ಲ—
'ರೈಟ್ ರೈಟ್'—ಎಂದಾಗ ಹೊಗೆಕಾರಿ ಮುಂದೆ ಹೊರಟಿತು.
'ಇನ್ನೇನು ಊರು ಸಮೀಪಿಸುತ್ತಿದೆ,
ಎಚ್ಚರಿರಿ ನೀವೆಲ್ಲ' ಎಂಬ ಗಡಸುದನಿಯನು ಕೇಳಿ—
ಬೆದರಿದೆ ಬೆಚ್ಚಿದೆ ಹುಚ್ಚಾದೆ,
ಬುಡಸಹಿತ ಕಿತ್ತ ಗಿಡದಂತಾದೆ—
'ಅಯ್ಯೋ ಅತ್ತ ನಾ ಬಾರೆನಯ್ಯ' ಎಂದರೂ
ಕೇಳದ ಕಂಡಕ್ಟರ್ 'ರೈಟ್ ರೈಟ್' ಎಂದ.
ಊರು ತೀರ ಸನಿಹವಾದಾಗ
ಬಂದ ದಾರಿಯ ಹಿಂದಿರುಗಿ ನೋಡಲು—
ದಾರಿಯೆಲ್ಲ ಮಸಣವಾಗಿತ್ತು;
ಎದೆಯಲ್ಲಿ ಇನ್ನೂ ಬಿಸಿ ಆರದಿತ್ತು!

ಖೋಟಾ ನಾಣ್ಯ*

ಒಂದು ನಾಣ್ಯ ಎಷ್ಟೇ ಪರಿಶುದ್ಧವಾದುದಾಗಿರಬಹುದು, ಕೆಲವೊಮ್ಮೆ ಖೋಟಾ ಯೆಂದು ತಿರಸ್ಕರಿಸಲ್ಪಡುತ್ತದೆ. ವರ್ಷಗಳು ಉರುಳಿದ ಹಾಗೆಲ್ಲ ಆ ನಾಣ್ಯ ಕೊಂಚ ತೂಕವನ್ನು ಕಳೆದುಕೊಳ್ಳಬಹುದು; ಅದರ ಮೇಲ್ಮೈ ಅಥವಾ ಅಂಚುಗಳು ಹೇಗಾದರೂ ಅಂದಗೆಡಬಹುದು. ಈ ಸಣ್ಣ ಕಾರಣಗಳಿಗಾಗಿ ಯಾರೂ ಅದನ್ನು ತೆಗೆದುಕೊಳ್ಳುವುದಿಲ್ಲ. ಕಡೆಗೆ ಒಂದು ದಿನ ಅದರಲ್ಲಿ ಇನ್ನೂ ಉತ್ತಮವಾದ ಬೆಳ್ಳಿಯ ಹೊಳಪಿದ್ದರೂ ಅದರ ಚಲಾವಣೆಯು ನಿಂತುಹೋಗಿ, ಅದು ತನ್ನ ಚಲಾವಣೆಯ ಅಂತಿಮ ಬಿಂದುವನ್ನು ತಲಪುತ್ತದೆ. ಅದರ ಜೀವನ ಚರಿತ್ರೆ ಆಮೇಲೆ ಕೊರಗಿನೊಂದಿಗೆ ಮುಕ್ತಾಯವಾಗಿ, ಹಳೆಯ ಪೆಟ್ಟಿಗೆಯ ಕತ್ತಲೆಯ ಮೂಲೆಯೊಂದನ್ನು ಸೇರಿಕೊಳ್ಳುತ್ತದೆ.

ನನ್ನ ಕಥೆ ಅಂಥ ಒಂದು ನಾಣ್ಯಕ್ಕೆ ಸಂಬಂಧಿಸಿದ್ದು, ನನ್ನ ಖಾಸಗಿ ಪೆಟ್ಟಿಗೆಯ ಏಕಾಂತವಾದ ಕತ್ತಲೆಯ ಮೂಲೆಯೊಂದರಲ್ಲಿ ಅನಂತ ವಿಶ್ರಾಂತಿಯಲ್ಲಿ ಮಲಗಿರುವ ಒಂದು ರೂಪಾಯಿ ನಾಣ್ಯ ಕುರಿತದ್ದು. ಅದು ನನ್ನ ಜೀವನದಲ್ಲಿ ಒಂದು ಮರೆಯಲಾಗದಂಥ ಘಟನೆ, ಒಂದು ದುರಂತ ಕಥೆ ಮತ್ತು ನನಗೆ ಅರಿವಿಲ್ಲ ದಂತೆಯೆ ನನ್ನ ಜೀವನದಲ್ಲಿ ಮೊಟ್ಟ ಮೊದಲ ಬಾರಿಗೆ ಪ್ರವೇಶಿಸಿದ ಒಂದು ಪ್ರಣಯ ಪ್ರಕರಣವೆಂದು ಹೇಳಬಲ್ಲೆ. ಈ ದಿನ ಆ ನಾಣ್ಯ ನ್ಯಾಯಸಮ್ಮತ ವಾದ ಚಲಾವಣೆಯಲ್ಲಿಲ್ಲ. ಆದರೆ ಆ ಪ್ರಣಯ?

ನನ್ನ ಮದುವೆಯಾಗಿ ಒಂದು ವಾರ ಕಳೆದಿತ್ತು. ನನ್ನ ಮನಸ್ಸು ಅತಿ ಸೂಕ್ಷ್ಮವಾಗಿ, ಹತ್ತಿಯಂತೆ ಹಗುರವಾಗಿತ್ತು. ನನ್ನ ಹೃದಯ ತುಂಬಿ ಹರಿವ ಗಿರಿನಿರ್ಝರಿಣಿಯಂತೆ ಮೊರೆಯುತ್ತಿತ್ತು. ನನ್ನ ದೃಷ್ಟಿ ಅರುಣರಾಗರಂಜಿತ ಮೋಡಗಳಂತೆ ವರ್ಣೋಜ್ಜ್ವಲವಾಗಿತ್ತು. ನನ್ನ ಕಿವಿಗಳಲ್ಲಿ ದೇವನರ್ತಕಿ ಮೇನಕೆಯ ನೃತ್ಯಸಂಗೀತದ ಲಯಬದ್ಧ ಪದಾಘಾತಗಳು ತುಂಬಿಕೊಂಡಿದ್ದವು. ಬಿಡುವಿಲ್ಲದ

* ಮೂಲ: ಅಸ್ಸಾಮಿ (ಇಂಗ್ಲಿಷಿನ ಮೂಲಕ ಅನುವಾದಿಸಲಾಗಿದೆ.)

ಕೆಲಸಗಳ ಮಧ್ಯದಲ್ಲಿಯೂ ಆಗ ಕೆಲವು ದಿನಗಳ ಮಟ್ಟಿಗೆ ನಾನು ರಜ ತೆಗೆದು ಕೊಂಡಿದ್ದೆ. ಷಿಲಾಂಗಿನ ನಯವಾದ ಸಿಮೆಂಟ್ ರಸ್ತೆಗಳಲ್ಲಿ ಏಕಾಂಗಿಯಾಗಿ, ಗೊತ್ತುಗುರಿಯಿಲ್ಲದೆ ಅಲೆಯುತ್ತಿದ್ದೆ. ನನ್ನ ತಲೆಯಮೇಲೆ ಸುರಗಿಯ ಮರದ ಸುಂಯ್ಗುನಾದ ನಿರಂತರವಾಗಿ ನಡೆದಿತ್ತು. ನನ್ನ ಮುಖ ಮತ್ತು ತುಟಿಗಳಿಗೆ ವಸಂತಮಾಸದ ಸುಮಧುರ ಮಾರುತ ಮುತ್ತಿಡುತ್ತಿತ್ತು.

ಅಷ್ಟೇನೂ ಪ್ರಸಿದ್ಧವಲ್ಲದ ಲೈತುಮುಕ್ರ ಬಡಾವಣೆಯ ಬಾಡಿಗೆ ಮನೆ ಯೊಂದರಲ್ಲಿ ನಾನಿದ್ದೆ. ಆಗ ನನ್ನ ಜತೆಯಲ್ಲಿದ್ದವನೆಂದರೆ ಒಬ್ಬ ಆಳು ಮಾತ್ರ. ಸಂಪೂರ್ಣ ಹೊಸ ಸನ್ನಿವೇಶದಲ್ಲಿ ನನ್ನ ಹೊಸಬಾಳನ್ನು ಆರಂಭಿಸಲು ಅನುಕೂಲ ವಾಗಲೆಂದು ಆ ಮನೆಯನ್ನು ಸ್ವಲ್ಪಸ್ವಲ್ಪವಾಗಿ ಅಗತ್ಯವಸ್ತುಗಳಿಂದ ವಾಸಯೋಗ್ಯ ವನ್ನಾಗಿ ಮಾಡಲಾರಂಭಿಸಿದ್ದೆ. ಎಲ್ಲ ವಸ್ತುಗಳನ್ನೂ ಉತ್ತಮವಾಗಿ ಜೋಡಿಸಿ ಯಾದ ಮೇಲೆ ಬಯಲುನಾಡಿನಲ್ಲಿದ್ದ ಮನೆಯವರಿಗೆ ಬರೆಯುವುದೆಂದುಕೊಂಡಿದ್ದೆ. ಅಲ್ಲಿಂದ ಈ ಪ್ರವಾಸಿಗಿರಿಧಾಮದಲ್ಲಿ ನನ್ನನ್ನು ಕೂಡಿಕೊಳ್ಳಲು ಬರಲಿದ್ದವರೆಂದರೆ, ನನ್ನ ಪತ್ನಿ, ಮುದಿತಾಯಿ ಮತ್ತು ಒಬ್ಬಳೇ ತಂಗಿ ಇಲಾ. ನನ್ನ ವೈವಾಹಿಕ ಜೀವನದ ನವ ಅಧ್ಯಾಯದ ಪವಿತ್ರ ಆರಂಭ ಷಿಲಾಂಗಿನಲ್ಲಾಗಬೇಕೆಂಬುದು ಬಹು ದಿನಗಳಿಂದಲೂ ನನ್ನ ಹೃದಯದಲ್ಲಿದ್ದ ಆಸೆ ಮತ್ತು ಯೋಜನೆಯಾಗಿತ್ತು. ಪಾಶ್ಚಿಮಾತ್ಯ ಪ್ರಣಯ ಕಾದಂಬರಿಗಳಲ್ಲಿ ನಾವು ಅಷ್ಟೊಂದು ಓದಿದ್ದಂತೆ, ಆಲ್ಪೈನ್ ಪರ್ವತದ ಹಿಮಾವೃತ ಶಿಖರಗಳನ್ನು ಏರುತ್ತಾ, ಮೆಡಿಟರೇನಿಯನ್ನಿನಲ್ಲಿ ದೋಣಿಯಾಟವನ್ನಾಡುತ್ತಾ, ನದಿಗಳಲ್ಲಿ ಸೂರ್ಯಬಿಂಬ ಮೀಯುವುದನ್ನು ನೋಡುತ್ತಾ, ನಾವಿಲ್ಲಿ ನಮ್ಮ ಮಧುಚಂದ್ರದ ರೋಮಾಂಚಕ ಅನುಭವಗಳನ್ನು ಸವಿಯಬೇಕೆಂದಿದ್ದೆವು.

ಸರ್ಕಾರಿಭವನದ ಜಾಗಟೆ ಸ್ವಲ್ಪ ಹೊತ್ತಿನ ಹಿಂದೆಯಷ್ಟೆ ಹತ್ತುಹೊಡೆಯಿತು. ಕಛೇರಿಗೆ ಹೋಗುವವರ ನಿರಂತರ ಪ್ರವಾಹ ಲಬಾನ್‌ನಿಂದಲೂ ಹರಿದಿತ್ತು. ಆ ಪ್ರವಾಹದೊಳಗೆ ನಾನು ಸೇರಿಕೊಂಡು ಅಂಚೆ ಕಛೇರಿಯ ಮೆಟ್ಟಿಲುಗಳವರೆಗೆ ಮುಂದುವರಿದೆ. ಕೊಂಚ ಭಾರವೆ ಎನ್ನಬಹುದಾದ ಪತ್ರವಿಟ್ಟು ಮುಚ್ಚಿದ್ದ ನೀಲಿಯ ಕವರೊಂದು ನನ್ನ ಕೈಯಲಿತ್ತು. ಆ ಕವರಿಗೊಂದು ಕೆಂಪು ಸ್ಟಾಂಪ್ ಕೊಂಡು ಅಂಟಿಸಿ ಅಂಚೆ ಪೆಟ್ಟಿಗೆಗೆ ಹಾಕಬೇಕಾಗಿತ್ತು. ನಾನು ಷಿಲಾಂಗಿಗೆ ಬಂದ ದಿನದಿಂದಲೂ ದಿನ ಬಿಟ್ಟು ದಿನ ಇದೇ ಕಾಲದಲ್ಲಿ ಇಂಥ ಒಂದು ಕಾಗದ ವನ್ನು ಅಂಚೆಗೆ ಹಾಕಲು ಬರುವುದು ವಾಡಿಕೆಯಾಗಿತ್ತು.

ದೀರ್ಘವಾಗಿದ್ದ ಮೆಟ್ಟಿಲುಗಳನ್ನು ಅವಸರವಸರವಾಗಿ ಹತ್ತಿ, ಸ್ಟಾಂಪ್ ಮಾರುವವನ ಸುತ್ತ ಹಾಕಿದ್ದ ಮರದ ಕಟಕಟೆಯ ಹತ್ತಿರ ನಿಂತೆ. ಹಗಲು ಹೊತ್ತಿನಲ್ಲಿ ಆ ಜಾಗ ಸ್ಟಾಂಪ್ ಕೊಳ್ಳುವವರಿಂದ ತುಂಬಿರುತ್ತದೆ. ಅದು ಎಂಥ ವರ್ಣಮಯವಾದ ಗುಂಪು! ತಾಮ್ರವರ್ಣದ ಕಣ್ಣುಗಳ ಐರೋಪ್ಯ ಮಹಿಳೆಯರು

ಎತ್ತರವೂ ದೃಢಾಂಗರೂ ಆದ ಐರೋಪ್ಯ ಮಹನೀಯರು, ಗುಡಾಣದ ಹೊಟ್ಟೆಯ ಮಾರವಾಡಿ ಬಾಬುಗಳು, ಗಡ್ಡ ಮೀಸೆಯ ಪೇಟಧಾರಿ ಸರದಾರಜೀಗಳು, ಸಮವಸ್ತ್ರ ಧರಿಸಿದ ಕಛೇರಿಯ ಸೇವಕರು, ವೈವಿಧ್ಯಮಯ ಉಡುಪು ಮತ್ತು ಚಹರೆಯ ಇತರ ಅನೇಕ ಜನರು. ಗುಂಪಿನ ಕೊನೆಯಲ್ಲಿ ಸ್ವಲ್ಪ ಅನುಕೂಲವಾದ ಜಾಗ ಮಾಡಿಕೊಂಡು ನಾನು ನನ್ನ ಸರದಿಗಾಗಿ ನಿರ್ವಿಕಾರ ಮೌನಿಯಾಗಿ ಕಾಯ ತೊಡಗಿದೆ.

ನನ್ನ ಎದುರಿಗೆ ಗಡ್ಡಧಾರಿಯಾದ ಆರು ಅಡಿ ಎತ್ತರದ ಸಿಖ್ ಮಹಾಶಯ ನೊಬ್ಬ ನಿಂತಿದ್ದ. ಅವನ ಮುಂದೆ, ಬಹುಶಃ ಆಂಗ್ಲೋ ಇಂಡಿಯನ್ ಇರಬೇಕು, ಸುಮಾರು ಹದಿನಾರು ವರ್ಷದ ಸುಂದರ ತರುಣಿಯೊಬ್ಬಳು ನಿಂತಿದ್ದಳು. ಆಕೆ ಮೊಣಕಾಲಿನವರೆಗಿದ್ದ ಆಕಾಶನೀಲಿಯ ಫ್ರಾಕ್ ಧರಿಸಿದ್ದಳು. ಅವಳ ಸುಂದರ ವಾದ ಕಾಲುಗಳು ನಗ್ನವಾಗಿದ್ದು, ಕೆಳಗೆ ಮಾತ್ರ ಅರ್ಧ ಮಡಿಸಿದ್ದ ಬಿಳಿಯ ಕಾಲುಚೀಲ ಹಾಕಿದ್ದಳು. ಎಣ್ಣೆ ಹಾಕದ ಅವಳ ಚಿನ್ನದ ಬಣ್ಣದ ಕೂದಲು ಕಪೋಲಗಳ ಮೇಲೆ ಸ್ವೇಚ್ಛೆಯಾಗಿ ಹಾರಾಡುತ್ತಿದ್ದುವು. ಅವಳ ಕಣ್ಣುಗಳು ಪಾರದರ್ಶಕವಾಗಿ ಸುಂದರವಾಗಿದ್ದುವು. ಅವಳ ನೋಟ ಅಪಾರ ತೀವ್ರತೆಯಿಂದ ಭಾವಪೂರಿತವಾಗಿತ್ತು. ಮುಚ್ಚದೆ ಉಳಿದಿದ್ದ ಅವಳ ದೇಹದ ಒಂದೊಂದು ಅಂಗವೂ ಕಾಂತಿಯುಕ್ತವಾಗಿತ್ತು. ಅವಳ ಕಡೆಗೆ ನಾನು ತತ್ಪರನಾಗಿ ನೋಡುತ್ತಾ, ಬಹು ಬೇಗ ಅವಳ ಅಪಾರ ಸೌಂದರ್ಯದಲ್ಲಿ ಲೀನನಾದೆ. ಇತರರ ದೃಷ್ಟಿಗೆ ಬೀಳದಂತೆ ಆ ಅಜಾನುಬಾಹು ಸಿಖ್ಖನನ್ನು ಭೇದಿಸಿ ಕೊಂಡು ಅವಳ ತೀರಾ ಸಮೀಪಕ್ಕೆ ಬಂದು ನಿಂತೆ. ನಾನು ಈ ಹಿಂದೆಂದೂ ಅವಳಿಗೆ ಕಂಡವನಲ್ಲವಾದುದರಿಂದ ಅವಳಲ್ಲಿ ಯಾವ ಭಾವನೆಗಳೂ ಕಂಡುಬರಲಿಲ್ಲ. ಅವಳ ಕೈಯಲ್ಲಿದ್ದ ಒಂದು ಕಟ್ಟು ಕಾಗದಗಳಿಗಾಗಿ ಆಕೆ ಹೆಚ್ಚು ಸ್ಟಾಂಪ್ ಕೊಳ್ಳುತ್ತಿರುವುದನ್ನು ಕಂಡೆ. ಕಿಟಕಿಯ ಹಲಗೆಯ ಮೇಲೆ ಒಂದೊಂದೇ ಪತ್ರವನ್ನಿಟ್ಟು ಅದರ ಮೇಲೆ ಸ್ಟಾಂಪ್ ಅಂಟಿಸುತ್ತಿದ್ದುದನ್ನು ನೋಡಿದೆ.

ನಾನು ನೋಡುತ್ತಲೇ ಇದ್ದೆ. ನನ್ನ ಆಸಕ್ತಿಯನ್ನು ಯಾವ ರೀತಿಯಲ್ಲಿಯೂ ಗೋಪ್ಯಮಾಡದೆ ಅವಳ ಕಾಗದಗಳ ಕಡೆ ನೋಡುತ್ತಾ ಹಾಗೇ ಅವುಗಳಲ್ಲಿದ್ದ ವಿಳಾಸಗಳನ್ನು ಓದತೊಡಗಿದೆ. ಇಂಗ್ಲೆಂಡಿಗೆ ಹೋಗಬೇಕಾದ ಏರ್‌ಮೇಯಿಲ್ ಕವರುಗಳು, ಕಲಕತ್ತೆಯ ಲೊರೆಟ್ಟೊ ಕಾನ್ವೆಂಟಿನ ವಿಳಾಸದ ಕವರುಗಳು, ಮದರಾಸಿನ ರೆಡ್‌ಕ್ರಾಸ್ ಹೋಂಗೆ ಹೋಗಬೇಕಾದ ಒಂದು ದೊಡ್ಡ ಥಾಂಗಿ, ಇನ್ನೂ ಅನೇಕ ಜಾಗಗಳಿಗೆ ಮತ್ತು ಜನಗಳಿಗೆ ಹೋಗುವ ಪತ್ರಗಳಿದ್ದುದನ್ನು ನೋಡಿದೆ. ಹಸಿರು ಶಾಯಿಯಲ್ಲಿ ಬರೆಯಲಾಗಿದ್ದ ಆ ಹುಡುಗಿಯ ಕೈಬರಹದ ಕಲಾತ್ಮಕತೆ ನನ್ನನ್ನು ಮುಗ್ಧವಾಗಿಸಿತು. ಸ್ಟಾಂಪ್‌ಗಳನ್ನು ಅಂಟಿಸುವುದರಲ್ಲಿ

ಅವಳ ಕೋಮಲ ಹಸ್ತಗಳ ಚುರುಕು ಚಲನೆಯನ್ನು ಕಂಡು ನಾನು ಸಂಪೂರ್ಣವಾಗಿ ಮೈಮರೆತೆ.

ಇದ್ದಕಿದ್ದಂತೆಯೇ ಆ ಗುಂಪಿನಲ್ಲಿ ಕೋಲಾಹಲವುಂಟಾಯಿತು. ಸ್ಟಾಂಪ್ ಮಾರುವವನು ಮನನೋಯುವಂತೆ ಏನೋ ಗೊಣಗಿ, ಒಂದು ರೂಪಾಯಿಯ ನಾಣ್ಯವೊಂದನ್ನು ಅವಳ ಮುಂದಕ್ಕೆ ಎಸೆದ. ಅದು ಅವಳ ಕಾಗದಗಳ ಮೇಲೆ ತಪ್ ಎಂದು ಬಿದ್ದಿತು. ಆತ ತನ್ನ ಹರುಕು ಮುರುಕು ಇಂಗ್ಲಿಷಿನಲ್ಲಿ "ಮೇಮ್‌ಸಾಬ್, ನೀವು ಕೊಟ್ಟ ಆ ನಾಣ್ಯ ಖೋಟ. ನಾನು ಅದನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ" ಎಂದು ಕಿರುಚಿದ. ಕಟ್ಟಕಡೆಯ ಸ್ಟಾಂಪನ್ನು ಕಾಗದವೊಂದಕ್ಕೆ ಅಂಟಿಸುತ್ತಿದ್ದ ಆಕೆ ಹಾಗೇ ತನ್ನ ಕಾಗದಗಳಿಂದ ತಲೆ ಎತ್ತಿ ಸೌಮ್ಯವಾಗಿ ಕೇಳಿದಳು "ಖೋಟಾ ಎಂದಿರಾ? ಅದು ಯಾರದು? ನಾನು ಕೊಟ್ಟಿದ್ದರಲ್ಲಿತ್ತೆ?"

ಸ್ಟಾಂಪ್ ಮಾರುವವನು ತನ್ನ ಕಟಕಟೆಯ ಹಿಂದಿನಿಂದ ಗುಡುಗಿದ: "ಹೌದು ಮೇಮ್ ಸಾಬ್. ಅದು ನೀವು ಕೊಟ್ಟ ಹಣದಲ್ಲೇ ಇತ್ತು." ಗುಂಪಿನಲ್ಲಿ ಹೆಚ್ಚು ಗದ್ದಲ, ಗೊಂದಲ ಉಂಟಾಯಿತು. ನಾನು ಮೊದಲು ನೋಡದ "ಖೋಟ"ವನ್ನು ಈಗ ನೋಡಿದೆ. ನಿಮಗೆ ನಂಬಿಕೆ ಇಲ್ಲದಿದ್ದರೆ ನನ್ನ ಪೆಟ್ಟಿಗೆಯನ್ನು ನೋಡಬಹುದು. ಇದಲ್ಲದೆ ಬೇರೆ ಯಾವ ರೂಪಾಯಿ ನಾಣ್ಯವು ಅಲ್ಲಿಲ್ಲ. ಮಿಕ್ಕವೆಲ್ಲ ಬರಿಯ ನೋಟುಗಳು ಮತ್ತು ಸ್ವಲ್ಪ ಚಿಲ್ಲರೆ ನಾಣ್ಯಗಳು.

ಆ ಹುಡುಗಿ ಯಾವ ಅನುಮಾನವನ್ನು ವ್ಯಕ್ತಪಡಿಸಲಿಲ್ಲ. ಆ ರೂಪಾಯಿ ನಾಣ್ಯವನ್ನು ಎತ್ತಿಕೊಂಡು ಸರಿಯಾಗಿ ಪರೀಕ್ಷಿಸತೊಡಗಿದಳು. ಆಕೆ ದಿಗ್ಭ್ರಮೆಗೊಂಡಿರುವುದು ಸ್ಪಷ್ಟವಾಗಿ ಕಾಣುತ್ತಿತ್ತು. ಆಕೆ ಅರ್ಥಶೂನ್ಯ ನಗೆಯೊಂದನ್ನು ನಕ್ಕು, ತನ್ನ ಕೆಳತುಟಿಯನ್ನು ಹೊಳೆಯುತ್ತಿದ್ದ ಹಲ್ಲುಗಳಿಂದ ಕಚ್ಚಿ ಯೋಚನಾಮಗ್ನಳಾದಳು.

ಸ್ವಲ್ಪ ಕಾಲದನಂತರ ಆಕೆ ಮತ್ತು ಗೊಂದಲಕ್ಕೊಳಗಾಗಿ, ತಲೆ ಎತ್ತಿ ತಗ್ಗಿದ ಆದರೂ ಸ್ಪಷ್ಟವಾದ ಧ್ವನಿಯಲ್ಲಿ ಮಾತನಾಡಲಾರಂಭಿಸಿದಳು: "ನಾನು ಒಂದು ರೀತಿಯ ಇಕ್ಕಟ್ಟಿನ ಪರಿಸ್ಥಿತಿಯಲ್ಲಿದ್ದೇನೆ. ನನ್ನ ಹತ್ತಿರ ಇನ್ನು ಹಣವಿಲ್ಲ. ನನಗೆ ಭಯವಾಗುತ್ತಿದೆ. ಅಲ್ಲದೆ ಸ್ಟಾಂಪ್‌ಗಳನ್ನೆಲ್ಲ ನಾನಾಗಲೆ ಉಪಯೋಗಿಸಿಬಿಟ್ಟಿದ್ದೇನೆ. ನೀವು ಒಪ್ಪುವುದಾದರೆ ನಾನೇನೊ ಅವುಗಳನ್ನು ಕಾಗದಗಳಿಂದ ಕಿತ್ತುಕೊಡಬಲ್ಲೆ. ಇಲ್ಲದಿದ್ದರೆ........?"

ಅದೊಂದು ಬಹಳ ತೊಡಕಾದ ಅಚಾತುರ್ಯದ ಸಂದರ್ಭವಾಗಿತ್ತು. ಸ್ಟಾಂಪ್‌ಮಾರುವವನಿಗೂ ಉಭಯ ಸಂಕಟಕ್ಕಿಟ್ಟುಕೊಂಡಿತು. ಗುಂಪಿನ ಎಲ್ಲಾ ಭಾಗಗಳಿಂದಲೂ ಮಾತುಗಳು ಕೇಳಿಬಂದುವು ಮತ್ತು ಈ ವಿಷಯದಲ್ಲಿ ಆಸಕ್ತಿಯಿಂದ ಭಾಗಿಗಳಾಗಿ ಎಲ್ಲರೂ ಲಘುವಾಗಿ ಟೀಕಿಸಲಾರಂಭಿಸಿದರು. ಅವ

ಪ್ರಕಾಶಮಾನವಾದ ಕಾಂತಿಯುತ ಕಣ್ಣುಗಳಲ್ಲಿ ನಾಚಿಕೆ ಮತ್ತು ಹೃದಯ ವಿದ್ರಾವಕ ಅಸಹಾಯಕತೆಗಳು ಸ್ಪಷ್ಟವಾಗಿ ಗೋಚರಿಸುತ್ತಿದ್ದುವು. ಆ ಪ್ರಕಾಶ ಮಾನವಾದ ವಿಶಾಲಾಕ್ಷಿಗಳ ಆಳದಲ್ಲಿ ಒಂದು ಕಾವ್ಯದ ಮೆರುಗು, ಒಂದು ಭಯ ಮಿಶ್ರಿತ ಚಿತ್ರ ಮತ್ತು ವಿನಯದಿಂದ ಕೂಡಿದ ಆತಂಕ ಒಂದರ ಹಿಂದೊಂದು ಹಂದುಹೋದುದನ್ನು ಕಂಡೆ.

ನಾನು ಸ್ಪಷ್ಟ ತೀರ್ಮಾನದಿಂದ ಆಕೆಯ ಹತ್ತಿರ ಹೋದೆ. ಅವಳ ದೃಷ್ಟಿಯಲ್ಲಿ ದೃಷ್ಟಿಯಿಟ್ಟು ಹೇಳಿದೆ: "ನೀವು ಒಪ್ಪುವುದಾದರೆ ನಿಮ್ಮ ರೂಪಾಯಿ ನಾಣ್ಯವನ್ನು ನನ್ನದೊಂದಕ್ಕೆ ಬದಲಾಯಿಸಿಕೊಳ್ಳುತ್ತೇನೆ. ಇದು ಇಕ್ಕಟ್ಟಿನಲ್ಲಿದ್ದ ವರಿಗೆ ಕೊಂಚ ಸಹಾಯಮಾಡಿದಂತಾಗುತ್ತದೆ ಅಷ್ಟೆ. ನಮ್ಮ ದಿನನಿತ್ಯದ ಬದುಕಿನಲ್ಲಿ ಇಂಥ ಘಟನೆಗಳು ಆಗುತ್ತಲೇ ಇರುತ್ತವೆ. ಈ ನನ್ನ ಅಲ್ಪ ಸಹಾಯವನ್ನು ನೀವು ನಿರಾಕರಿಸಲಾರಿರಿ ಎಂದುಕೊಂಡಿದ್ದೇನೆ."

ಆ ಯುವತಿ ನನ್ನತ್ತ ಪ್ರಶ್ನಾರ್ಥಕ ಮಧುರದೃಷ್ಟಿ ಬೀರಿ ಕೃತಜ್ಞತೆಯಿಂದ ನಕ್ಕಳು. ಆಕೆ ಸರಾಗವಾಗಿಯೆ ಮಾತನಾಡಿದಳು, "ನೀವು ಅಷ್ಟೊಂದು ಉದಾರತೆಯಿಂದ ಸಹಾಯಮಾಡಲು ಮುಂದೆ ಬಂದಿರುವಾಗ ನಾನು ಅದನ್ನು ಒಪ್ಪಿಕೊಳ್ಳದಿದ್ದರೆ ನಿಮಗೆ ಬೇಸರವಾದೀತೆಂದು ಯೋಚಿಸುತ್ತಿದ್ದೇನೆ. ನಿಮಗೆ ನಿಜ ಹೇಳಬೇಕೆಂದರೆ ನನಗೆ ದಿಕ್ಕೇ ತೋಚದಂತಾಗಿ, ಏನು ಮಾಡಲಿ ಎಂದು ಹುಡುಕಾಡುತ್ತಿದ್ದೆ. ನಾನು ಈಗಾಗಲೆ ಉಪಯೋಗಿಸಿರುವ ಸ್ಟಾಂಪುಗಳನ್ನು ಮಾರುವವನು ಏನೇ ಆದರೂ ಹಿಂತೆಗೆದುಕೊಳ್ಳುವುದಿಲ್ಲ. ನಾನು ಮನೆಗೆ ಹೋಗಿ ಹಣ ತರುವವರೆಗೆ ನನ್ನ ಕಾಗದಗಳನ್ನೆಲ್ಲ ಅವನ ಹತ್ತಿರ ಇಟ್ಟು ಹೋಗ ಬೇಕಾಗಿದ್ದರೆ ಅದೊಂದು ವಿಷಾದನೀಯ ಸಂಗತಿಯಾಗುತ್ತಿತ್ತು." ಅವಳು ನನ್ನ ದೃಷ್ಟಿಯಲ್ಲಿ ದೃಷ್ಟಿ ಬೆರೆಸಿ ನಾನು ಮರುಳಾಗುವಂತೆ ಸವಿಜೇನು ನಗೆ ನಕ್ಕು ಹೇಳಿದಳು. ಆ ಖೋಟಾ ನಾಣ್ಯವನ್ನು ಹೆಮ್ಮೆಯಿಂದ ಎತ್ತಿಕೊಂಡು ನನ್ನ ಪರ್ಸ್‌ನಿಂದ ಒಳ್ಳೆಯ ರೂಪಾಯಿ ನಾಣ್ಯವೊಂದನ್ನು ತೆಗೆದುಕೊಟ್ಟೆ. ಅವಳ ಎಲ್ಲಾ ಕಾಗದಗಳನ್ನು ಅಂಚೆಪೆಟ್ಟಿಗೆಗೆ ಹಾಕಲು ನಾನೇ ತೆಗೆದುಕೊಂಡೆ. ನಾನು ಆಕೆಯ ಸಾಮಾನ್ಯ ಅನುಮತಿಗೂ ಕಾಯಲಿಲ್ಲ. ಆಕೆ ಅದನ್ನು ತಡೆಯಲೂ ಇಲ್ಲ. ಅದಕ್ಕೆ ಬದಲಾಗಿ ನನ್ನ ಕಡೆಗೆ ವಿಮರ್ಶಾತ್ಮಕವಾಗಿ ನೋಡಲಾರಂಭಿ ಸಿದಳು. ಅವಳ ಎಲ್ಲಾ ಕಾಗದಗಳಿಗೂ ಸ್ಟಾಂಪ್ ಅಂಟಿಸಿದೆಯೇ ಎಂದು ಒಂದೊಂದಾಗಿ ಪರೀಕ್ಷಿಸಿದೆ. ನನ್ನ ಕಾಗದಕ್ಕಾಗಿ ಒಂದು ಸ್ಟಾಂಪ್ ತೆಗೆದು ಕೊಂಡೆ. ಕೌಂಟರಿನ ಹತ್ತಿರ ಅವಳ ಎದುರಿಗೇ ವಿಳಾಸ ಬರೆದೆ. ಅನಂತರ ಆ ಎಲ್ಲಾ ಕಾಗದಗಳನ್ನು ಅಂಚೆಪೆಟ್ಟಿಗೆಯಲ್ಲಿ ಹಾಕಿದೆ.

ನಾನು ಅಂಚೆ ಕಛೇರಿಯನ್ನು ಬಿಟ್ಟು ರಸ್ತೆಯ ಕಡೆಗೆ ಮೆಟ್ಟಲುಗಳನ್ನಿಳಿಯು ವಾಗ, ನಾವಿಬ್ಬರೂ ಬಹಳ ಕಾಲದಿಂದ ಪರಿಚಿತರೋ ಎಂಬಂತೆ, ನನ್ನ ಜೊತೆ

ಯಲ್ಲಿಯೆ ಅವಳೂ ನಡೆದುಬಂದಳು. ನಾವು ರಸ್ತೆ ತಲುಪಿದಾಗ ಇದ್ದಕಿದ್ದಂತೆಯೇ ಆಕೆ ಮೌನವಾಗಿ, ತುಟಿಯಲ್ಲಿ ತುಂಟನಗೆ ಅರಳಿಸಿ ಕೇಳಿದಳು, "ನೀವು ಅಸ್ಸಾಮಿಯೆ ಎಂದು ನಾನು ತಿಳಿಯಬಹುದೆ ?"

ಅವಳತ್ತ ನಾನು ಆಶ್ಚರ್ಯದಿಂದ ನೋಡಿದೆ. ನಾನು ಅಪ್ಪಟ ಐರೋಪ್ಯ ವೆಂದು ತಿಳಿದಿದ್ದ ನನ್ನ ಉಡುಪಿನತ್ತ ಹತಾಶೆಯಿಂದ ವೀಕ್ಷಿಸಿದೆ. ನಾನು ಕೊಂಚ ಗಾಬರಿಯಿಂದಲೇ ಉತ್ತರಿಸಿದೆ, "ಹೌದು. ನಾನು ಅಸ್ಸಾಮಿಯೇನೋ ಸರಿ. ಆದರೆ ನೀವು ಹೇಗೆ ಈ ಪ್ರಶ್ನೆ ಕೇಳಿದಿರಿ ?"

ಆಕೆ ನನ್ನತ್ತ ತುಂಟ ದೃಷ್ಟಿಯಿಂದ ನೋಡಿದಳು. ಅವಳು ಮತ್ತೆ ನಕ್ಕು ಅಪ್ಪಟ ಅಸ್ಸಾಮಿ ಭಾಷೆಯಲ್ಲಿ ಹೇಳಿದಳು, "ನಾನು ಏಕೆ ಕೇಳಿದೆ ಎಂದರೆ, ನಾನೂ ಸೌಗಾಂಗಿನ ಕ್ರೈಸ್ತ ಮತಾವಲಂಬಿ ಅಸ್ಸಾಮಿಯಾದುದರಿಂದ. ನನ್ನ ಹೆಸರು ಮಿನಿ ಬಾರ್ಬರಾ ಆಂಡ್ರ್ಯೂಸ್ ಎಂದು. ನನ್ನ ದೊಡ್ಡಕ್ಕ ಇಲ್ಲಿನ ಲೊರೆಟ್ಟೊ ಕಾನ್ವೆಂಟಿನಲ್ಲಿ ಅಧ್ಯಾಪಿಕೆಯಾಗಿ ಕೆಲಸಮಾಡುತ್ತಾಳೆ. ನಾನು ಸೀನಿಯರ್ ಕೇಂಬ್ರಿಡ್ಜ್ ಪರೀಕ್ಷೆಗೆ ಓದುತ್ತಿದ್ದೇನೆ. ನೀವು ಈಗಷ್ಟೆ ಕಾಗದ ಹಾಕಿದ ಲತಿಕಾ ನನ್ನ ಬಾಲ್ಯ ಸ್ನೇಹಿತೆ. ನಾವಿಬ್ಬರೂ ಒಟ್ಟಿಗೆ ಆಟವಾಡಿದವರು ಮತ್ತು ಬಹಳ ಆತ್ಮೀಯ ಗೆಳತಿಯರು ! ಕಳೆದ ನಾಲ್ಕು ವರ್ಷಗಳಿಂದ ನಾವು ಪರಸ್ಪರ ಭೇಟಿಯಾಗಿಲ್ಲ. ನಾನು ಊರಿಂದೂರಿಗೆ ಹೋಗುತ್ತಿದ್ದರೂ ಅವಳ ಬಗ್ಗೆ ಎಲ್ಲಾ ವಿಚಾರಗಳನ್ನು ತಿಳಿಯುತ್ತಿರುತ್ತೇನೆ. ಕೆಲವೇ ದಿನಗಳ ಹಿಂದೆ ಎಂ.ಬಿ.ಬಿ.ಎಸ್. ಡಾಕ್ಟರೊಬ್ಬರೊಂದಿಗೆ ಸೌಗಾಂಗ್‌ನಲ್ಲಿ ಮದುವೆಯಾಯಿತೆಂದು ತಿಳಿಯಿತು. ಅವಳ ಹೆಸರು ಲತಿಕಾ ಬರುವಾ ಎಂದು. ನೀವು ಈಗಷ್ಟೆ ಬರುವಾ ಎಂದು ಬರೆದದ್ದನ್ನು ನೋಡಿದೆ. ಲತಿಕಾಳ ತಂದೆಯ ಹೆಸರನ್ನು ನೀವು ವಿಳಾಸದಲ್ಲಿ ಬರೆಯುವವರೆಗೂ ನನಗೆ ಸ್ಪಷ್ಟವಾಗಿರಲಿಲ್ಲ. ಅದು ನನ್ನಲ್ಲಿ ಕುತೂಹಲವನ್ನುಂಟು ಮಾಡಿದ್ದರೂ ನಿಮ್ಮನ್ನು ಕೇಳಲು ಅವಕಾಶವಾಗಲಿಲ್ಲ. ನಿಮಗೆ ಲತಿಕಾ ಹತ್ತಿರದ ಸಂಬಂಧಿ ಇರಬೇಕು ?"

ಒಂದು ಗಳಿಗೆ ಗೊಂದಲವಾದಂತಾಗಿ ಏನು ಹೇಳಬೇಕೆಂದೇ ಹೊಳೆಯಲಿಲ್ಲ. ಕಾಲುದಾರಿಯಲ್ಲಿ ನಿಂತು ಮಧುರವಾಗಿ ಅವಳು ಮಾತನಾಡಿದಾಗ ನಾನು ಭಾವ ಪೂರಿತವಾಗಿ ಅವಳ ದೃಷ್ಟಿಯಲ್ಲಿ ದೃಷ್ಟಿ ಸೇರಿಸಿ ಅವಳ ಮಧುರವಾದ, ಹೇಳಿದಂತೆ ಬಾಗುವ ತುಟಿಗಳ ಚುರುಕು ಚಲನೆಯನ್ನು ವೀಕ್ಷಿಸುತ್ತಾ ಆನಂದಿಸಿದೆ. ಕೊಂಚ ಕಾಲದನಂತರ ತಮಾಷೆಯಾಗಿ ನಾನೇ ಉತ್ತರಿಸಿದೆ : "ಲೋಕದಲ್ಲಿ ನಡೆಯುವ ಮಹಾ ಘಟನೆಗಳ ಹಾಗೆ ನಮ್ಮ ಭೇಟಿಯೂ ಅನಿರೀಕ್ಷಿತವಾಗಿ ನಡೆದಂತೆ ಕಾಣು ತ್ತದೆ. ಆದರೆ ಈಗಾಗಲೆ ನಮ್ಮ ಮಧ್ಯೆ ಪರಿಚಯದ ಹಿನ್ನೆಲೆಯ ಎಳೆ ಇರುವುದ ರಿಂದ ಅದು ಆತ್ಮೀಯ ಸ್ನೇಹವಾಗಿ ಬೆಳೆಯುತ್ತದೆಂದು ಊಹಿಸುತ್ತೇನೆ. ನಾನು ನಿಮ್ಮ ಸ್ನೇಹಿತೆ ಲತಿಕಾಳ ಬರಿಯ ಸಂಬಂಧಿಯಲ್ಲ, ಬಹಳ ಹತ್ತಿರದ ಸಂಬಂಧಿ !

ಅದನ್ನು ತಿಳಿಯುವ ಆಸೆ ನಿಮಗಿರಬಹುದು. ಅವಳು ಕೆಲವು ದಿನಗಳ ರಜೆಯ ಮೇಲೆ ಇಲ್ಲಿಗೆ ಭೇಟಿ ಕೊಡಲಿರುವುದರ ಪೂರ್ವಭಾವಿ ತಯಾರಿಕೆಗಾಗಿಯೆ ನಾನು ಮೊದಲು ಇಲ್ಲಿಗೆ ಬಂದಿರುವುದು. ಏರ್ಪಾಡುಗಳೆಲ್ಲ ಮುಗಿಯದಿರುವುದರಿಂದ ಆಕೆ ಇನ್ನೂ ಇಲ್ಲಿಗೆ ಬಂದಿಲ್ಲ." ಷಿಲಾಂಗ್ ಟೈಲರ್ಸ್ ಮತ್ತು ಕ್ಲಾರ್ಕ್ ಸ್ಟೋರ್ಸ್ ವರೆಗೆ ನಾನೂ ಮಿನಿ ಆಂಡ್ರೂಸ್ ಜತೆ ಹೋದೆ. ಅಲ್ಲಿಂದ ನಾವು ಲಾಟ್‌ಚಂದ್ ಅಂಗಡಿಗೆ ಹೋದೆವು. ಕಡೆಯದಾಗಿ ಗೋಸಾಲ್ ಸ್ಟುಡಿಯೋ ತಲಪಿದೆವು. ನಾವು ಸಲಿಗೆಯಿಂದ ಅಕ್ಕಪಕ್ಕದಲ್ಲಿ ನಡೆಯುತ್ತಾ ಬಹು ದಿನಗಳ ಸ್ನೇಹಿತರ ಹಾಗೆ ಮಾತನಾಡಿದೆವು. ಕೊನೆಗೆ ಸರೋವರದ ಮಾರ್ಗವಾಗಿ ನಾವು ಲೈತು ಮುಖ್ರಿಗೆ ಹತ್ತಿರದ ದಾರಿ ಹಿಡಿದೆವು—ದಿಣ್ಣೆಯ ಹತ್ತಿರ ಮಿನಿ ಆಂಡ್ರೂಸ್‌ಗೆ ಗುಡ್‌ಬೈ ಹೇಳಿ ಅವಳಿಂದ ಬೇರೆಯಾದೆ. ಸರ್ಕಾರಿ ಭವನದ ಜಾಗಟೆ ಆಗಷ್ಟೆ ಹನ್ನೆರಡನ್ನು ಬಾರಿಸಿತು. ಸೂರ್ಯನ ಶಾಖ ನಿಧಾನವಾಗಿ ಏರಿತ್ತು. ನನ್ನ ಜೇಬಿನಲ್ಲಿದ್ದ ಕಡೆಯ ಬಾದಾಮಿ ಮಿಠಾಯಿಯನ್ನು ಅಗಿಯುತ್ತಾ, ಏಕಾಂತವಾದ ದಾರಿ ಹಿಡಿದು ಮನೆ ಸೇರಿದೆ. ಇದ್ದಕ್ಕಿದ್ದ ಹಾಗೆಯೆ ಮನಸ್ಸು ಭಾರವಾಗಿ ಯಾವುದೋ ಅರಿಯದ ನೋವಿನಿಂದ ತುಂಬಿದಂತಾಯಿತು.

ನಾನು ಬಹಳ ಖಿನ್ನತೆಯಿಂದ ತಾತ್ವಿಕನಾಗಲೆತ್ನಿಸಿದೆ. ಉತ್ತಮವಾದ ಬೆಳ್ಳಿಯಿಂದ ಮಾಡಿದ ಒಂದು ನಾಣ್ಯ ಖೋಟಾ ಆಯಿತೇಕೆ? ಮಿನಿ ಆಂಡ್ರ್ಯೂಸ ಳಂಥ ಚೆಲುವೆಯೂ, ಉಲ್ಲಾಸಿಯೂ ಆದ ಹುಡುಗಿಗೆ ಅಂಥ ಪೇಚಾಟದ ಸ್ಥಿತಿ ಒದಗಿತೇಕೆ?

ಒಂದು ವಾರ ಉರುಳಿತು. ಕೆಲವು ಅನಿವಾರ್ಯ ಕಾರಣಗಳಿಂದಾಗಿ ಲತಿಕಾ ಮತ್ತಿತರರಿಗೆ ಬರುವಂತೆ ನಾನು ಬರೆದ ಕಾಗದ ತಲುಪುವುದು ತಡವಾಗಿತ್ತು. ಮನೆ ಎಲ್ಲಾ ತಯಾರಿಯೊಂದಿಗೆ ಅವರ ಆಗಮನವನ್ನು ನಿರೀಕ್ಷಿಸುತ್ತಿತ್ತು. ಲತಿಕಾ ಳಿಗೆ ಅನೇಕ ಕಾಗದಗಳನ್ನು ಬರೆದೆ, ಅವಳಿಂದ ಉತ್ತರವೂ ಬಂತು. ಆದರೆ ಒಂದಲ್ಲ ಒಂದು ಕಾರಣದಿಂದ ಲತಿಕಾ ಷಿಲಾಂಗಿಗೆ ಬರುವ ಬಗ್ಗೆ ಕಾತರ ಶಕ್ತಿ ಗುಂದಿತು.

ಅದೊಂದು ಸುಂದರವೂ, ಪ್ರಶಾಂತವೂ ಆದ ಏಪ್ರಿಲ್ ತಿಂಗಳ ಪ್ರಾತಃಕಾಲ ಮನೆಯ ಕಾಂಪೌಂಡಿನ ಪಾತಿಗಳಲ್ಲಿ ಬೆಳೆದಿದ್ದ ಗಿಡಗಳು ಅರಳಿದ ವಿವಿಧವರ್ಣದ ಪುಷ್ಪಗಳಿಂದ ತುಂಬಿ ಹೋಗಿದ್ದುವು. ಅಲ್ಲಲ್ಲಿ ಗಿಡಗಳ ತುದಿಯಲ್ಲಿ ಬಣ್ಣದ ಸೊಡ ರಿನಂತೆ ಮಿರುಗುತ್ತಿದ್ದ ಇಬ್ಬನಿಯ ಹನಿಗಳನ್ನು ಕಾಣಬಹುದಿತ್ತು. ಕೆಳಗಿನ ಮೃದುವಾದ ಹುಲ್ಲುಹಾಸು ಕೂಡ ಬೆಳಗಿನ ಇಬ್ಬನಿಯಿಂದ ತೊಯ್ದಿತ್ತು.

ತೋಟದ ಮಧ್ಯದಲ್ಲಿದ್ದ ಹುಲ್ಲು ಹಸೆಯ ಮೇಲೆ ಎದುರು ಬದರಿಗಿದ್ದ ಎರಡು ಕುರ್ಚಿಗಳು ಮತ್ತು ಟೀಪಾಯನ್ನು ಇಡಲಾಗಿತ್ತು. ಮಿನಿ ಆಂಡ್ರ್ಯೂಸ್ ಕಡು ನೀಲಿಯ ಅಸ್ಸಾಮಿ ಸಿಲ್ಕಿನ ಸೀರೆ, ಮತ್ತು ಬ್ಲೌಸ್ ಮೇಲೆ ಕಸೂತಿ ಹಾಕಿದ

ಕೋಟು ಧರಿಸಿದ್ದಳು. ಅವಳ ಪಾದರಕ್ಷೆಗಳು ಉಡುಪಿಗೆ ಸರಿಯಾಗಿ ಹೊಂದಿಕೆಯಾಗಿದ್ದುವು. ಹಿಡಿತಕ್ಕೆ ಸಿಗದ ಅವಳ ಚಿನ್ನದ ಬಣ್ಣದ ತಲೆಗೂದಲನ್ನು ಎಚ್ಚರಿಕೆಯಿಂದ ಪಿನ್ನುಗಳಿಂದ ಹಿಡಿದು ಗಂಟುಹಾಕಿ ಮೇಲೊಂದು ಬಲೆಯನ್ನು ಹಾಕಲಾಗಿತ್ತು. ಅವಳು ನನಗಾಗಿ ಕೆಟಲಿನಿಂದ ಹಸಿರು ಲೋಟವೊಂದಕ್ಕೆ ಟೀ ಸುರಿಯುತ್ತಿದ್ದಳು. ಸಕ್ಕರೆ ಹಾಕಿ ತಿರುವುವಾಗ ಯೋಚನಾಪರವಾಗಿ ಹೇಳಿದಳು: "ಎಷ್ಟು ಅನಿರೀಕ್ಷಿತವಾಗಿ ಈ ಜೀವನದಲ್ಲಿ ನಾವಿಬ್ಬರು ಪರಸ್ಪರ ಸಂಧಿಸಿದ್ದೇವೆ! ಅಂಚೆ ಕಛೇರಿಯಲ್ಲಿ ಆ ದಿನ ನಡೆದ ಒಂದು ಸಣ್ಣ ಘಟನೆ, ಅದರಿಂದ ನಮ್ಮ ಅನುರಾಗ ಮತ್ತು ಸ್ನೇಹ ಉದ್ದೀಪನವಾಯಿತು. ಅದಕ್ಕಿಂತ ಒಂದು ಕ್ಷಣ ಹಿಂದೆ ನಾವಿಬ್ಬರೂ ಪರಸ್ಪರ ಅಪರಿಚಿತರಾಗಿದ್ದೆವು."

ನಾನು ಯಾಂತ್ರಿಕವಾಗಿ ಟೀ ಲೋಟವನ್ನು ಎತ್ತಿಕೊಳ್ಳುತ್ತಾ ಮಿನಿ ತೆಗೆದಿರಿಸಿದ ಒಂದು ಕ್ರೀಮ್ ಕಡ್ಡಿಯನ್ನು ತೆಗೆದುಕೊಳ್ಳುವಾಗ ಒಂದು ರೀತಿಯ ಭಾವವಾದ ಧ್ವನಿಯಲ್ಲಿ ಉತ್ತರಿಸಿದೆ: "ನಮ್ಮ ಪರಿಚಯ ಜೀವನಾರಂಭದ ಕಡೆಯಗಳಿಗೆಯಲ್ಲಾದುದೆ ದುಃಖದ ಸಂಗತಿ. ಬಹಳ ಮೊದಲೇ ಅಥವಾ ಬಹಳ ತಡವಾಗಿ ಆಯಿತು. ಸರಿಯಾದ ಕಾಲದಲ್ಲಿ ಆಗಲಿಲ್ಲ. ವಿಧಿ ವಸ್ತುಸ್ಥಿತಿಯನ್ನು ದುರಂತದ ದಾರಿಯಲ್ಲಿ ನೂಕಿ ತಾನು ಕ್ರೂರ ಸಂತೋಷ ಪಡುತ್ತದೆ ಎಂದು ಕಾಣುತ್ತದೆ."

ನನ್ನ ಭಾಷೆಯಲ್ಲಿದ್ದ ಕ್ಲಿಷ್ಟತೆಯನ್ನು ಮಿನಿ ಸೌಮ್ಯವಾಗಿ ವಿರೋಧಿಸಿದಳು. ನಾನು ಯಾವಾಗ ಏನು ಮಾತನಾಡಿದರೂ ಅರ್ಥಮಾಡಿಕೊಳ್ಳುವುದು ಕಷ್ಟವೆಂದು ನಗುತ್ತಾ ಹೇಳಿದಳು. ಸಾಮಾನ್ಯವಾದುದನ್ನು ಇತರರಿಗೆ ಅರ್ಥವಾಗದಂತೆ ಕ್ಲಿಷ್ಟವಾಗಿ ಹೇಳುವುದು ನನಗೆ ಇಷ್ಟ ಎಂದು ಅವಳು ತಿಳಿದಂತೆ ತೋರಿತು. ಸಾಮಾನ್ಯವಾಗಿ ಹೆಚ್ಚು ಜನರಿಗೆ ಇಂಥ ಕೆಟ್ಟ ಚಟ ಸ್ವಲ್ಪಮಟ್ಟಿಗಿದೆಯೆಂದು ಅವಳು ಸೇರಿಸಿದಳು.

ನಾನು ತಮಾಷೆಯಾಗಿ ನಕ್ಕು ಅವಳ ಕಣ್ಣುಗಳ ಅಪರಿಮಿತ ಕಾಂತಿಯನ್ನು ಅನುಭವಿಸಬೇಕೆಂದು ಪ್ರಯತ್ನಿಸಿದೆ. ಬಹಳ ತೊಡಕಿನ ವಿಷಯವೊಂದನ್ನು ಸರಳವೂ, ನೇರವೂ ಆದ ಭಾಷೆಯಲ್ಲಿ ಹೇಳಬೇಕೆಂಬುದು ನನ್ನ ಅದಮ್ಯ ಆಸೆಯಾಗಿತ್ತು. ಆದರೆ ನನ್ನ ಪದಗಳು ಹುರುಳಿಲ್ಲದ ಸಂಪ್ರದಾಯ ಮತ್ತು ಸಂಸ್ಕೃತಿಯ ಅಭೇದ್ಯ ಗೋಡೆಗೆ ಡಿಕ್ಕಿ ಹೊಡೆಯುತ್ತಿದ್ದುವು.

ರಾಮಕೃಷ್ಣ ಮಿಷನ್ನಿನ ಕಾಂಪೌಂಡಿಗೆ ಅಂಟಿದ ಹಾಗೆ ಒಂದು ಕಿರಿದಾದ ಬೆಟ್ಟದ ಇಡುಕಲಲ್ಲಿ ಮಾಡಿದ ದಾರಿ ಸೊಗಸಾದ ಬಿದಿರು ಹಿಂಡಲಿನ ಮಧ್ಯೆ ಹಾದು ಹೋಗುತ್ತದೆ. ಅಲ್ಲಿ ಕ್ರಮೇಣವಾಗಿ ಹುಲ್ಲಿನಿಂದ ಕೂಡಿ ಸಮತಟ್ಟಾಗಿರುವ ಬೆಟ್ಟದ ಬರಡು ತುದಿಯೊಂದು ಸಿಗುತ್ತದೆ. ಈ ಸ್ಥಳದಿಂದ ಮುಂದೆ ಪೈನ್ ಮರಗಳ ನಿರಂತರ ಸಾಲುಗಳನ್ನು ಕಾಣಬಹುದು.

ಜೋರಾಗಿ ನಡೆದುದು ಮಿನಿಯ ಕಣ್ಣುಗಳ ಪ್ರಕಾಶತೆಯನ್ನು ಉದ್ದೀಪನ ಗೊಳಿಸಿ ಆಕರ್ಷಕವಾಗಿ ಕಾಣುವಂತೆ ಮಾಡಿತು. ಅವಳ ಮೂಗಿನ ಹೊಳ್ಳೆಗಳು ಏರಿಳಿಯುತ್ತಿದ್ದವು. ಅವಳ ಕೆನ್ನೆಯು ಗುಲಾಬಿ ಕೆಂಪು ಮತ್ತೂ ಮನಮೋಹಕವಾಗಿ ಕಂಡಿತು. ಅವಳ ಇಡೀ ದೇಹ ಸುಪ್ತ ಆಸೆಗಳಿಂದ ಭಾವೋದ್ರೇಕಗೊಂಡಂತೆ ಕಾಣುತ್ತಿತ್ತು.

ನಾವು ಅಗಲವಾಗಿಯೂ, ಸಮತಟ್ಟಾಗಿಯೂ ಇದ್ದ ಬಂಡೆಯೊಂದರ ಮೇಲೆ ಅಕ್ಕ ಪಕ್ಕದಲ್ಲಿ ಕುಳಿತು ಪ್ರಪಾತದೊಳಕ್ಕೆ ಬೀಳುತ್ತಿದ್ದ ನೀರನ್ನು ನೋಡುತ್ತಿದ್ದೆವು. ಮಿನಿ ತನ್ನ ಶೂಗಳನ್ನು ತೆಗೆದಿಟ್ಟು ನಡೆದು ಸುಸ್ತಾಗಿ ಕೆಂಪಗಾಗಿದ್ದ ತನ್ನ ಪಾದ ಗಳನ್ನು ತೊರೆಯ ನೀರಿನಲ್ಲಿ ಇಳಿಬಿಟ್ಟಳು. ಆಕೆ ಕಾಲಿನಿಂದ ನೀರನ್ನು ಒದೆಯ ಲಾರಂಬಿಸಿದಳು. ಪಾರದರ್ಶಕವಾದ ನೀರಿನಲ್ಲಿ ಕಾಣುತ್ತಿದ್ದ ಅವಳ ಕಾಲುಗಳ ಸೌಂದರ್ಯವನ್ನು ಕಂಡು ಆನಂದಿಸುತ್ತಾ ನಾನು ಅದರಲ್ಲಿ ತಲ್ಲೀನನಾಗಿ ಹೋದೆ.

ಮಿನಿ ನನ್ನನ್ನು ಅಲುಗಿಸಿ ಆ ಆನಂದಪರವಶತೆಯಿಂದ ಎಚ್ಚರಗೊಳ್ಳುವಂತೆ ಮಾಡಿದಳು. "ಕವಿಯಂತೆ ಏನು ಕನಸು ಕಾಣುತ್ತಿದ್ದೀರಿ?" ಎಂದು ಒತ್ತಾಯದಿಂದ ಕೇಳಿದಳು.

ನಾನು ಪ್ರಶಾಂತವಾದ ಕೆಳಗಿನ ಕಪ್ಪನೆಯ ನೀರಿನತ್ತ ಜುಗುಪ್ಸೆಯಿಂದ ನೋಡಿ ಭಾವಾವೇಶದಿಂದ ಉತ್ತರಿಸಿದೆ: "ಸೌಂದರ್ಯದರ್ಶನ ಏಕೆ ಮನುಷ್ಯ ನನ್ನು ನಿಸ್ಸಹಾಯಕನಾಗಿ ತನ್ನತನವನ್ನು ಕಳೆದುಕೊಳ್ಳುವಂತೆ ಮಾಡುತ್ತದೆಂದು ನನಗೆ ಆಶ್ಚರ್ಯವಾಗುತ್ತದೆ. ಮನುಷ್ಯನಲ್ಲಿರುವ ಮೂಲ ಸಹಜ ಪ್ರವೃತ್ತಿಗಳನ್ನು ನಿಗ್ರಹಿಸಲಾಗದಂತೆ ಏಕೆ ಸ್ವಾಧೀನ ತಪ್ಪಿಸುತ್ತದೆ? ಮನುಷ್ಯ, ಸೌಂದರ್ಯದರ್ಶನ ವಾದೊಡನೆಯೆ ಏಕೆ ತನ್ನ ವಿದ್ಯೆ ಸಂಸ್ಕೃತಿ ನಾಗರಿಕತೆ ಎಲ್ಲವನ್ನೂ ಮರೆತು ತನ್ನ ಉಗಮದ ಆರಂಭದ ದೆಸೆಗೆ ಹಿಂತಿರುಗಿ ಪ್ರಕೃತಿಯ ಶಿಶುವಾಗಲೆತ್ನಿಸುತ್ತಾನೆ?"

ಮಿನಿ ನನ್ನ ದೇಹಕ್ಕೆ ಮತ್ತೂ ಒತ್ತಿ ಒರಗಿಕೊಂಡು ತುಟಿಯಲ್ಲಿ ತುಂಟನಗೆ ತಂದು ಕೇಳಿದಳು: "ಅದು ನಿಮಗೆ ಹೇಗನ್ನಿಸುತ್ತದೆ"? ಗೊಂದಲದಿಂದ ನಾನು ವಿಚಾರಿಸಿದೆ, "ಯಾವುದಕ್ಕೆ ಹೋಲಿಸುತ್ತಿದ್ದೀರಿ?" ಅವಳು ನಕ್ಕು ನನ್ನತ್ತ ನೋಡುತ್ತಾ ಉತ್ತರಿಸಿದಳು, "ಆ ಪ್ರಪಾತದೊಳಗೆ ಪ್ರಶಾಂತವಾಗಿ ಬೀಳುವ ನೀರು." ಯಾತನೆಯಿಂದ ಅವಳ ಕಣ್ಣಿನಲ್ಲಿ ತದೇಕ ದೃಷ್ಟಿಯಿಟ್ಟು ಗಾಢವಾದ ಭಾವೋದ್ರೇಕದಿಂದ ಉತ್ತರಿಸಿದೆ: "ಅದು ಆಳ, ಕತ್ತಲೆ, ತೀವ್ರ ಮತ್ತು ತಿರುವು".

ಮಿನಿ ಬಂಡೆಯ ಮೇಲಿನಿಂದ ಹಳ್ಳದೊಳಕ್ಕೆ ಇಳಿಯಲಪೇಕ್ಷಿಸಿದಳು. ನನ್ನ ಕೈಗಳನ್ನು ಬಲವಾಗಿ ಹಿಡಿದುಕೊಂಡು ಪಾಚಿ ಕಟ್ಟಿದ ಕಲ್ಲಿನಿಂದ ಕಲ್ಲಿಗೆ ಅವಳು ಜಗಿಯುತ್ತಿದ್ದಳು. ತೇವವಾದ ಹುಲ್ಲಿನ ಮೇಲೆ ನಡೆಯುವಾಗಿನ ಮನಃಸ್ಥಿತಿ ತನಗೆ ಬಹಳ ಪ್ರಿಯವೆಂದು ಹೇಳಿದಳು. ಅದು ಅವಳಿಗೆ ಸಂತೋಷ, ಭಾವಪರವಶತೆ ಯನ್ನುಂಟುಮಾಡುವುದಾಗಿತ್ತು. ತೊರೆಯ ಪಕ್ಕದಲ್ಲಿ ನಡೆಯುತ್ತಾ, ಭಾವಾತಿ

ರೇಕದಿಂದ ಅವಳು ಮತ್ತೆ ಅಸ್ತಿಮಿತಳಾದಳು. ಅಮಲೇರಿದವಳಂತೆ ನಗಲಾರಂಭಿಸಿದಳು. ಸುಸ್ತಾದವಳಂತೆ ನನ್ನ ದೇಹಕ್ಕೆ ಜೋತುಬಿದ್ದಳು. ನನ್ನನ್ನು ಜೊತೆಯಲ್ಲಿ ಎಳೆದುಕೊಂಡು ಮಗುವಿನಂತೆ ಬಣ್ಣದ ಚಿಟ್ಟೆಗಳನ್ನು ಓಡಾಡಿಸಿದಳು. ಗಿಡಗಳಲ್ಲಿ ಹೂವು ಕೀಳಲು ಪ್ರಯತ್ನಿಸಿ ವಿಫಲಳಾದಾಗ ನನ್ನ ಸಹಾಯ ಯಾಚಿಸಿದಳು. ತನ್ನಲ್ಲಿ ಅನೇಕ ಕಲ್ಲು ಹರಳುಗಳನ್ನು ಸಂಗ್ರಹಿಸಿಕೊಂಡು ತೊರೆಯ ನೀರಿಗೆ ಅಥವಾ ನನ್ನತ್ತ ಎಸೆಯುತ್ತಿದ್ದಳು.

ನಗುತ್ತಾ, ಓಡುತ್ತಾ, ಕಲ್ಲಿನಿಂದ ಕಲ್ಲಿಗೆ ಜಿಗಿಯುತ್ತಾ ಮಿನಿ ತೊರೆಯನ್ನು ದಾಟಲು ಪ್ರಯತ್ನಿಸುತ್ತಿದ್ದಳು. ಇನ್ನೇನು ನೀರಿನಲ್ಲಿ ಬೀಳಬೇಕು, ಅಷ್ಟರಲ್ಲಿ ನನ್ನ ಸಹಾಯಕ್ಕಾಗಿ ಕೂಗಿದಳು. ನಾನು ಅವಳಿಗೆ ಸಹಾಯ ನೀಡಲು ಓಡಿಹೋಗುವ ಹೊತ್ತಿಗೆ ತನ್ನ ಭಾರವನ್ನೆಲ್ಲ ನನ್ನ ಮೇಲೆ ಹಾಕಿ ನಾನೂ ಅಸ್ಥಿರನಾಗುವಂತೆ ಮಾಡಿದಳು. ನಾನು ಇನ್ನೇನು ಹಿಡಿತ ಕಳೆದುಕೊಳ್ಳುವುದರಲ್ಲಿದ್ದಾಗ ಕೇಕೆ ಹಾಕಿ ನಗುತ್ತಾ ವೈಯಾರದಿಂದ ನನ್ನನ್ನು ಮೇಲೆ ಎಳೆಯಲು ಪ್ರಯತ್ನಿಸುತ್ತಿದ್ದಳು. ಹೀಗೆ ನಾವು ಪರಸ್ಪರ ಸಹಾಯ ಮಾಡುತ್ತಾ, ಪರಸ್ಪರ ಎಳೆದಾಡುತ್ತಾ ಹೇಗೋ ತೊಂದರೆಯಿಲ್ಲದೆ ತೊರೆಯನ್ನು ದಾಟಿ ಹಿಂದಕ್ಕೆ ಬಂದೆವು. ಅನೇಕ ಜಾಗಗಳಲ್ಲಿ ನಾವು ಇನ್ನೇನು ಬೀಳಲಿದ್ದು ಹೇಗೋ ಪಾರಾದೆವು.

ಮಿನಿ ತೊರೆಯ ಪಕ್ಕದ ಹುಲ್ಲಿನ ಮೇಲೆ ಸಂಪೂರ್ಣ ಸುಸ್ತಾಗಿ ಮಲಗಿದಳು. ಅವಳಿಗೆ ತೀರ ಹತ್ತಿರವಾಗಿಯೆ ನಾನೂ ಜಾಗ ಮಾಡಿಕೊಂಡೆ. ಅವಳು ನೆಲದ ಮೇಲೆ ಮಲಗಿದ್ದ ಹಾಗೆ ಪೈನ್‌ಮರದ ಒಣ ಹೂಗೊಂಚಲುಗಳನ್ನು ಆರಿಸಿಕೊಂಡು ಮುಷ್ಟಿಯಿಂದ ಅದುಮಿ ಅವುಗಳಲ್ಲಿರುವ ಸುವಾಸನೆಯನ್ನು ಎಳೆದುಕೊಳ್ಳಲು ಪ್ರಯತ್ನಿಸುತ್ತಿದ್ದಳು. ಅವಳು ತಮಾಷೆಯಾಗಿ ಆ ಒಣ ಹೂವಿನ ಧೂಳನ್ನು ಗಾಳಿಗೆ ತೂರುವಳು. ಕೆಲವೊಮ್ಮೆ ತನ್ನ ಚಿನ್ನದ ಕೂದಲಿನೊಳಗೆ ಚಿಮುಕಿಸುವಳು. ಆಮೇಲೆ ಅವಳ ತಲೆಯನ್ನು ನನ್ನ ತೊಡೆಯ ಮೇಲಿಟ್ಟು ಆ ಒಣ ಹೂವಿನ ಚೂರುಗಳನ್ನು ತೆಗೆಯುವಂತೆ ಪ್ರಾರ್ಥಿಸುವಳು. ಆಗ ತನ್ನ ತಲೆಯನ್ನು ನನ್ನ ತೊಡೆಯ ಮೇಲಕ್ಕೆ ಸಂಪೂರ್ಣವಾಗಿ ಎಳೆದುಕೊಳ್ಳಲು ಅನುವು ಮಾಡಿಕೊಡುವಳು. ಆದರೆ ತಕ್ಷಣ ವಿರೋಧಿಸುವವಳಂತೆ ಹಿಂದಕ್ಕೆ ಎಳೆದುಕೊಂಡುಬಿಡುವಳು. ಕೆಲವೊಮ್ಮೆ ಅವಳ ಅನಿರ್ಬಂಧಿತ ತಲೆಗೂದಲನ್ನು ನನ್ನ ಮೊಣಕಾಲಿನ ಮೇಲೆ ಹರವುವಳು, ಆಮೇಲೆ ನಕ್ಕು ಹಿಂದಕ್ಕೆಳೆದುಕೊಳ್ಳುವಳು.

ಅವಳ ಕೂದಲಿನ ಸನ್ಮೋಹಕವಾದ ಸುವಾಸನೆ ನನ್ನನ್ನು ಮಿತಿಮೀರಿ ರೋಮಾಂಚನಗೊಳಿಸುತ್ತಿತ್ತು. ನನ್ನ ಬೆರಳುಗಳು ವಿಚಲವಾಗುತ್ತಿದ್ದುವು ಮತ್ತು ಕೈಗಳು ಹತೋಟಿ ತಪ್ಪುತ್ತಿದ್ದವು.

ಅವಳು ಎಷ್ಟೇ ಪ್ರಯತ್ನಪಟ್ಟರೂ ನನ್ನ ಕೈಗಳ ವಜ್ರಮುಷ್ಟಿಯಿಂದ ತನ್ನ ತಲೆಯನ್ನು ಬಿಡಿಸಿಕೊಳ್ಳಲಾರದವಳಾಗುತ್ತಿದ್ದಳು.

ಅವಳು ನಕ್ಕೂ ನಕ್ಕೂ ಮೈಮರೆತವಳಂತೆ ಬೀಳುತ್ತಿದ್ದಳು. ಆ ಮೇಲೆ ಕೂದಲಿನ ಮರೆಯಿಂದ ನನ್ನತ್ತ ನೋಡಿ ಇದ್ದಕ್ಕಿದ್ದಂತೆ ನಗುವುದನ್ನು ನಿಲ್ಲಿಸುತ್ತಿದ್ದಳು. ಅವಳ ಮುಖ ನನ್ನ ತೊಡೆಯ ಮೇಲಿರುತ್ತಿತ್ತು. ಮಿನಿಯ ಆಳವಾದ ಉಸಿರಾಟ ತೊರೆಯ ಪಕ್ಕದ ಮಸುಕು ವಾತಾವರಣವನ್ನು ಮತ್ತೂ ಹೆಚ್ಚಿಸಿತು.

ಮತ್ತೊಂದು ವಾರ ಕಳೆಯಿತು. ಲತಿಕಾ ಮತ್ತಿತರರು ಬರಲಿಲ್ಲ. ತಕ್ಷಣದಲ್ಲಿ ಅವರು ಬರುವ ಸೂಚನೆಯೂ ಇರಲಿಲ್ಲ. ಮನೆ ಎಲ್ಲಾ ಏರ್ಪಾಡಿನೊಂದಿಗೆ ಅವರ ಆಗಮನದ ನಿರೀಕ್ಷಣೆಯಲ್ಲಿತ್ತು. ನಾನು ಅದನ್ನು ಗಮನಿಸದವನಂತೆ ನನ್ನ ಯೋಚನಾತರಂಗದಲ್ಲಿ ಮುಳುಗಿರಲು ಯತ್ನಿಸಿದೆ. ನಾನು ಒಂದು ಕ್ಷಣವೂ ವಿಶ್ರಾಂತಿಯಿಲ್ಲದೆ ಯೋಚಿಸಿ, ಯೋಚಿಸಿ ನಿರಾಸೆಯಿಂದ ಹುಚ್ಚನಾದೆ. ಆದರೂ ನನಗೆ ಪರಿಹಾರವೇನೂ ದೊರೆಯಲಿಲ್ಲ.

ಒಂದೊಂದು ಸಾರಿ ಮಿನಿ ಹತ್ತಿರದಿಂದ ನೋಡಿ ಪ್ರಶ್ನಿಸುವಳು, "ಅಷ್ಟೊಂದು ತೀವ್ರವಾಗಿ ಏನು ಯೋಚಿಸುತ್ತಿದ್ದೀರಿ?"

ನಾನು ನೇರವಾದ ಉತ್ತರವನ್ನು ತಪ್ಪಿಸುತ್ತಿದ್ದೆ. ಕಡೆಗೊಂದು ದಿನ ನಾನು ಹೇಳಿಯೇ ಬಿಟ್ಟೆ, "ಲತಿಕಾಳ ಬಗ್ಗೆ ಯೋಚಿಸುತ್ತಿದ್ದೇನೆ."

ಅವಳು ಆಶ್ಚರ್ಯದಿಂದ ಕೇಳಿದಳು, "ಲತಿಕಾ ಬಗ್ಗೆ ನೀವು ಅಷ್ಟೊಂದು ಏಕೆ ಯೋಚಿಸುತ್ತಿದ್ದೀರಿ? ಅವಳ ಬಗ್ಗೆ ತಲೆಕೆಡಿಸಿಕೊಳ್ಳಲು ಅವಳ ಯಜಮಾನರಿದ್ದಾರೆ. ಹೌದೋ ಅಲ್ಲವೋ?"

ನನ್ನ ಹೃದಯದಿಂದ ಉಕ್ಕಿಬಂದ ಭಾವಾವೇಶವನ್ನು ತಡೆಯಲಾರದೆ ಮಾತನಾಡಿಬಿಟ್ಟೆ, "ವ್ಯಸನಕರವಾದ ಸಂಗತಿಯೆಂದರೆ ಅವಳ ಪತಿ ಈಗಲವಳ ಬಗ್ಗೆ ಚಿಂತಿಸುವುದನ್ನು ನಿಲ್ಲಿಸಿದ್ದಾನೆ. ಆತ ಮತ್ತೊಬ್ಬ ಯುವತಿಯನ್ನು ಪ್ರೀತಿಸಿದ್ದಾನೆ."

ಮಿನಿ ಈ ಬಗ್ಗೆ ವಿಪರೀತ ಆಶ್ಚರ್ಯ ವ್ಯಕ್ತಪಡಿಸಿ ಹೇಳಿದಳು, "ಅದು ಸಾಧ್ಯವೇ ಇಲ್ಲ! ಸಂಪೂರ್ಣ ಅಸಮಂಜಸ! ಅವರು ಮದುವೆಯಾಗಿ ಒಂದು ತಿಂಗಳು ಕೂಡ ಕಳೆದಿಲ್ಲ. ಇದನ್ನು ಯಾರು ನಂಬುತ್ತಾರೆ?"

ನಾನು ಮತ್ತೂ ಅವಳನ್ನು ಒಪ್ಪಿಸಲು ಪ್ರಯತ್ನಿಸಿದೆ, "ಇದು ಸತ್ಯ ಮಿನಿ. ಅವಳ ಪತಿ ನನಗೆ ಚೆನ್ನಾಗಿ ಗೊತ್ತು. ಮದುವೆಗೆ ಮುನ್ನ ಅವನ ಮನಸ್ಸು ನಿರ್ಮಲವೂ, ಅಕೃತ್ರಿಮವೂ ಆಗಿತ್ತೆಂದು ನನಗೆ ಖಚಿತಪಡಿಸಿದ್ದಾನೆ. ಇದು ಆಗಿರುವುದು ಮದುವೆಯಾದ ಒಂದು ವಾರದನಂತರ."

ಕುತೂಹಲಿತೆಯಾದ ಮಿನಿ ಮುಂದೆ ತಿಳಿಯಲಪೇಕ್ಷಿಸಿ "ಆಮೇಲೆ?" ಎಂದಳು.

ನಾನು ಅದೇ ಬಿಗುವಿನ ಧ್ವನಿಯಲ್ಲಿ ಮುಂದುವರಿಸಿದೆ: "ಆಮೇಲೆ ಇದ್ದಕಿದ್ದ ಹಾಗೆ, ಅನಿರೀಕ್ಷಿತವಾಗಿ ಅವನು ಹಿಂದೆಂದೂ ನೋಡಿ ಅರಿಯದಿದ್ದ

ಯುವತಿಯೋರ್ವಳಲ್ಲಿ ತನ್ನ ಉತ್ತಮ ಉದ್ದೇಶಗಳನ್ನು ಮೀರಿ ಪ್ರೇಮಬಂಧನದಲ್ಲಿ ಸಿಲುಕಿದ. ಆಕೆ ಬೇರೊಂದು ಧರ್ಮಕ್ಕೆ ಸೇರಿದವಳು ಮತ್ತು ಸಂಪೂರ್ಣ ವಿಭಿನ್ನ ವಾತಾವರಣವೊಂದರಲ್ಲಿ ಬೆಳೆದವಳು". ಮಿನಿಯ ಕುತೂಹಲ ಮತ್ತೂ ಹೆಚ್ಚಿ ಕೇಳಿದಳು, "ಆಮೇಲೆ ಆತ ಲತಿಕಾಳನ್ನು ಮರೆತುಬಿಟ್ಟನೆ?"

ನನ್ನಲ್ಲಿದ್ದ ಸರ್ವಸಾಮರ್ಥ್ಯವನ್ನೂ ಉಪಯೋಗಿಸಿ ಉತ್ತರಿಸಿದೆ: "ಇಲ್ಲ ಇಲ್ಲ. ಆದರಿಂದಾಗಿಯೆ ಅವನು ತೊಡಕಿನ ಸಮಸ್ಯೆಯೊಂದನ್ನು ಎದುರಿಸಬೇಕಾಗಿದೆ. ಅವನು ಈಗಲೂ ಲತಿಕಾಳನ್ನು ಹಿಂದಿನಷ್ಟೆ ಉಜ್ವಲವಾಗಿ ಪ್ರೀತಿಸುತ್ತಾನೆ. ಆವಳಲ್ಲಿ ಅವನಿಗಿರುವ ಪ್ರೇಮ ಈಗಲೂ ಕಡಮೆಯಾಗಿಲ್ಲ. ಆದರಿಂದಾಗಿಯೇ ಅವನು ಮಧ್ಯದ ದಾರಿಯೊಂದನ್ನು ಅರಸುತ್ತಿದ್ದಾನೆ. ಸಾಧ್ಯವಾದರೆ ಇಬ್ಬರೂ ಪ್ರೇಮಿಗಳ ಮಧ್ಯೆ ರಾಜಿಮಾಡಲು ಅಥವಾ ಹೊಂದಾಣಿಕೆ ತರಲು ಯತ್ನಿಸುತ್ತಿದ್ದಾನೆ."

"ಹಾಗಾದರೆ ಏನೂ ಸಮಸ್ಯೆಯೇ ಇಲ್ಲವಲ್ಲ. ಆದು ತನಗೆ ತಾನೇ ಸುಲಭವಾಗಿ ತೀರ್ಮಾನವಾದಂತಾಯಿತು. ಪ್ರೇಮ ಮತ್ತು ಮದುವೆ ಸಂಪೂರ್ಣವಾಗಿ ಬೇರೆ ಬೇರೆ. ಮನುಷ್ಯರು ಒತ್ತಾಯಪೂರ್ವಕವಾಗಿ ಅವೆರಡನ್ನು ಗಂಟು ಹಾಕಲು ಹೋಗಿ ಸಮಸ್ಯೆಗಳನ್ನು ತಂದುಕೊಳ್ಳುತ್ತೇವೆ. ಲತಿಕಾಳ ಪತಿಯ ವಿಷಯದಲ್ಲಿ ಎರಡೂ ಯಾವ ಭಿನ್ನಾಭಿಪ್ರಾಯವೂ ಇಲ್ಲದೆ ಬೇರೆಯಾಗಬಹುದು. ಆದುದರಿಂದ ಅವರು ಯಾವಾಗಲೂ ಅವರಿಬ್ಬರನ್ನೂ ಪ್ರತ್ಯೇಕವಾಗಿರಿಸಲು ಪ್ರಯತ್ನಿಸಬೇಕು."

"ಆದು ಸಾಧ್ಯವೇ ಇಲ್ಲ ಮಿನಿ," ನಾನು ಭಾವೋದ್ರೇಕದಿಂದ ವಿರೋಧಿಸಿದೆ. "ಆದೆಲ್ಲ ಬರಿಯ ಕಲ್ಪನೆಯಲ್ಲಿ ಸಾಧ್ಯವಾಗಬಹುದು. ಆದರೆ ವಾಸ್ತವವಾಗಿ ಒಂದೇ ಮಂದಿರದಲ್ಲಿ ಎರಡು ಮೂರ್ತಿಗಳನ್ನು ಆರಾಧಿಸುವುದು ಸಾಧ್ಯವಿಲ್ಲ."

ಮಿನಿ ತೀವ್ರವಾಗಿ ಮರುನುಡಿದಳು: "ಆದು ಒಂದೇ ಮಂದಿರ ಎಂದು ಯಾರು ನಿಮಗೆ ಹೇಳಿದ್ದು? ಹೊರನೋಟಕ್ಕೆ ಎಲ್ಲಾ ಮಂದಿರಗಳೂ ಒಂದೇ ರೀತಿ ಕಾಣಬಹುದಾದರೂ ವಾಸ್ತವವಾಗಿ ಅವುಗಳ ವಿಸ್ತಾರ ಮತ್ತು ವ್ಯಾಪ್ತಿ ಸಂಪೂರ್ಣ ಬೇರೆಯಾಗಿರುತ್ತದೆ. ನಾವೆಲ್ಲ ತಿಳಿದಿರುವ ಹಾಗೆ ನಿಮ್ಮ ಪತ್ನಿಯನ್ನು ಆರಾಧಿಸುವ ಸ್ಥಳ ಮನೆಯ ನಾಲ್ಕು ಗೋಡೆಗಳ ಮಧ್ಯೆ ಸೀಮಿತವಾಗಿರುತ್ತದೆ. ಆದರೆ ನೀವು ನಿಮ್ಮ ಸ್ನೇಹಿತರನ್ನು, ಇನಿಯಳನ್ನು ಆರಾಧಿಸುವ ಸ್ಥಳ ಸೀಮಾತೀತ, ಅನಂತ ಮತ್ತು ಸರ್ವವ್ಯಾಪಕವಾದುದು."

ಬಹಳ ಹುರುಪಿನಿಂದ ಮಾತನಾಡುತ್ತಿದ್ದ ಮಿನಿ ಇದ್ದಕ್ಕಿದ್ದಂತೆಯೆ ನಾಚಿಕೆಯಿಂದ ನನ್ನತ್ತ ನೋಡುತ್ತಾ ಕ್ಷಮೆ ಯಾಚಿಸುವಂತೆ ಹೇಳಿದಳು, "ದಯವಿಟ್ಟು ಕ್ಷಮಿಸಿ. ಚರ್ಚೆಯ ಕಾವಿನಲ್ಲಿ ತಿಳಿಯದೆ 'ನೀವು' ಎಂದುಪ್ಪೆಉಪಯೋಗಿಸಿಬಿಟ್ಟೆ. ನನ್ನ ಅರ್ಥ ನೀವು ಎಂದರೆ ಲತಿಕಾಳ ಪತಿ ಎಂದು."

ಅತ್ಯಂತ ಬಲತ್ಕಾರ ಮತ್ತು ಯಾತನೆಯಿಂದ ನಾನು ಅವಳ ಮುಖ ನೋಡುತ್ತಿದ್ದೆ. ದುಃಖ ಮತ್ತು ಅತೀವ ನೋವಿನಿಂದ ನಾನು ಮಾತನಾಡಲಾರದವ ನಾಗಿದ್ದೆ.

ಮತ್ತೆ ಕೆಲವು ದಿನಗಳು ಕಳೆದವು. ಮಿನಿ ಬಹಳ ಚಡಪಡಿಸತೊಡಗಿದಳು ಮತ್ತು ಲತಿಕಾ ಷಿಲಾಂಗಿಗೆ ಕೂಡಲೆ ಬರುವಂತೆ ಬರೆಯಬೇಕೆಂದು ನನ್ನನ್ನು ಪೀಡಿಸ ತೊಡಗಿದಳು. ತನ್ನ ಪ್ರೇಯಸಿಯೊಂದಿಗೆ ಬರುವಂತೆ ಲತಿಕಾಳ ಪತಿಗೂ ನಾನು ಬರೆಯಬೇಕೆಂಬುದು ಅವಳ ಆಸೆ. ಲತಿಕಾ, ಲತಿಕಾಳ ಪತಿ ಮತ್ತು ಅವರ ಪ್ರಿಯೆ ಒಟ್ಟಿಗೇ ಬಂದರೆ, ನಾನು ಸಾಧ್ಯವೇ ಇಲ್ಲ ಎಂದುಕೊಂಡಿರುವ ಸಮಸ್ಯೆಗೆ ಸುಲಭವಾಗಿ ಒಂದು ಪರಿಹಾರ ಕಂಡುಹಿಡಿಯಬಹುದೆಂದು ಅವಳು ಸದಾ ಪ್ರಯತ್ನಿಸುತ್ತಿದ್ದಳು.

"ಅದು ಸಾಧ್ಯವೇ ಇಲ್ಲ ಮಿನಿ" ಎಂದೆ ನಾನು. "ಅನೇಕರು ಹಿಂದೆ ಅಂಥ ಪ್ರಯತ್ನಮಾಡಿ ವಿಫಲರಾಗಿದ್ದಾರೆ. ಒಂದು ಗಂಡು ಎರಡು ಹೆಣ್ಣು ಅಥವಾ ಎರಡು ಗಂಡು ಒಂದು ಹೆಣ್ಣು—ಅದೊಂದು ತ್ರಿಕೋನ ಸಮಸ್ಯೆ. ಜಗತ್ತಿನಲ್ಲಿ ಜೀವ ಉಗಮವಾದಂದಿನಿಂದಲೂ ಅದಿದೆ ಮತ್ತು ಅನಂತ ಕಾಲದವರೆಗೂ ಇರುತ್ತದೆ. ಮದುವೆ ಮಿತಿಯಿಲ್ಲದ ಅನಿರೂಪಿತ ಸಮಾನತೆಯ ಹಕ್ಕುಗಳನ್ನು ಹೆಂಗಸರಿಗೆ ನೀಡುತ್ತದೆ. ಆ ಅಧಿಕಾರದ ಮೇಲೆ ಮದುವೆಯಾದ ಹೆಂಗಸರು ಅವರ ಗಂಡಂದಿರ ಮೇಲೆ ಎಲ್ಲಾ ತರದ ವಾಸ್ತವ ಮತ್ತು ಕಾಲ್ಪನಿಕ ಹಕ್ಕುಗಳನ್ನು ಹೇರಲು ಪ್ರಯತ್ನಿ ಸುತ್ತಾರೆ. ಅವಳು ಅವುಗಳಲ್ಲಿ ಎಳ್ಳಷ್ಟನ್ನು ಮತ್ತೊಂದು ವ್ಯಕ್ತಿಯೊಂದಿಗೆ ಹಂಚಿ ಕೊಳ್ಳಲು ತಯಾರಾಗಿರುವುದಿಲ್ಲ. ಅವಳ ಗಂಡ ಬೇರೆ ಹೆಂಗಸರೊಂದಿಗೆ ಪ್ರೇಮ ಬೆಳೆಸುವುದಿರಲಿ, ಬೇರೆ ಗಂಡಸರೊಂದಿಗೆ ಸ್ನೇಹದಿಂದಿರುವುದನ್ನು ಆಕೆ ಸಹಿಸುವು ದಿಲ್ಲ."

ಮಿನಿ ಆಸಕ್ತಿಯಿಂದ ಕೇಳುತ್ತಿರಲ್ಲಿಲ್ಲ. ಈಗಿನ ಕಾಲದ ವಿದ್ಯಾವತಿಯರೂ ಮುಂದುವರಿದವರೂ ನಾಗರಿಕರೂ ಆದ ಹೆಂಗಸರೂ ಅದರಿಂದ ಹೊರತಾಗಿಲ್ಲ. ಲತಿಕಾ ವಿದ್ಯಾವತಿಯೂ, ಮುಂದುವರಿದವಳೂ, ಸ್ವತಂತ್ರ ಮನಸ್ಕಳೂ ಆದ ಯುವತಿಯೆಂದು ಅವಳಿಗೆ ಗೊತ್ತು.

ಅವಳನ್ನು ಒಪ್ಪಿಸಲಾರದೆ ಬರಿದೆ ನಕ್ಕೆ. ಅವಳು ಅದೇ ಪ್ರಾರ್ಥನೆಯನ್ನು ಮುಂದುವರಿಸಿದಳು. ಕಡೆಗೆ ಒಂದು ದಿನ ನಾನು ಅದಕ್ಕೆ ಒಪ್ಪಿಕೊಂಡಾಗ ಮಿನಿ ಸಂತೋಷದಿಂದ ಉಬ್ಬಿ ಹೋದಳು.

ಲತಿಕಾ ಬಂದಳು. ಅವಳ ಜೊತೆಯಲ್ಲಿ ನನ್ನ ತಾಯಿ ಮತ್ತು ತಂಗಿ ಇಲಾ ಬಂದರು. ಅವರನ್ನು ಸ್ವಾಗತಿಸಲು ಮಿನಿ ಉದ್ದೇಶಪೂರ್ವಕವಾಗಿಯೇ ಬಸ್ ನಿಲ್ದಾಣಕ್ಕೆ ಬಂದಿರಲಿಲ್ಲ. ಆ ಸಂಜೆ ಅನಿರೀಕ್ಷಿತವಾಗಿ ಬಂದು ಅವರನ್ನು ಚಕಿತ ಗೊಳಿಸಬೇಕೆಂಬುದು ಆಕೆಯ ಉದ್ದೇಶವಾಗಿತ್ತು. ನಾನು ಅದನ್ನು ವಿರೋಧಿಸಲಿಲ್ಲ.

ತಲೆಯ ಮೇಲೆ ಬಂದಿರುವ ಈ ವಿಷಮಸ್ಥಿತಿಯ ಪರಿಹಾರಕ್ಕೆ ತಯಾರಾಗಲು ಸ್ವಲ್ಪ ಕಾಲ ದೊರೆತಂತಾಯಿತೆಂದು ನಾನು ಯೋಚಿಸಿದೆ. ಆ ದಿನ ನಾನು ಮಿನಿಯ ಬಗ್ಗೆ ಅತಿಯಾಗಿ ಯೋಚಿಸಿದಂತೆಲ್ಲ ಮಾನಸಿಕವಾಗಿ ದುರ್ಬಲನಾದೆ.

ಲತಿಕಾ ದಾರಿಯುದ್ದಕ್ಕೂ ನನ್ನ ಪಕ್ಕದಲ್ಲಿಯೇ ಇದ್ದಳು. ಅವಳು ಬಂದ ಕ್ಷಣದಿಂದಲೇ ಪ್ರೀತಿ ಮತ್ತು ಮುತುವರ್ಜಿಯಿಂದ ನೋಡಿಕೊಳ್ಳಲಾರಂಭಿಸಿ ನನ್ನನ್ನು ಪೀಡಿಸಿದಳು. ನಮ್ಮ ಮದುವೆಯಾದ ಒಂದು ತಿಂಗಳ ಅಗಲಿಕೆಯ ನಂತರ ಇದು ನಮ್ಮ ಪ್ರಥಮ ಮಿಲನ. ಅವಳು ಅದುಮಿಟ್ಟ ತನ್ನ ಯೌವನದ ಕಟ್ಟಕ್ಕರೆಯ ಉಜ್ವಲತೆಯಿಂದ ನನ್ನನ್ನು ಭಾವಪರವಶನನ್ನಾಗಿ ಮಾಡಲೆತ್ನಿಸಿದ ಳಾದರೂ, ಅದು ಕ್ಷಣ ಮಾತ್ರದ ಅಡಚಣೆಯಿಂದ ಮಾಯವಾಯಿತು. ಅಷ್ಟೇ ಅಲ್ಲ, ಅವಳು ಹೆಂಡತಿ ಮತ್ತು ಜೀವನದ ಸಂಗಾತಿಯಾಗಿ ನನ್ನ ಮೇಲೆ ಅಧಿಕಾರ ಮತ್ತು ಹಿಡಿತಗಳನ್ನು ಚಲಾಯಿಸಲು ಸಹ ಪ್ರಾರಂಭಿಸಿದಳು. ಅವಳ ಹೆಸರಿಗೆ ಸಹಜವಾಗಿ ಬಳ್ಳಿಯಂತೆ ನನ್ನನ್ನು ಮಾನಸಿಕವಾಗಿ ಮತ್ತು ಭೌತಿಕವಾಗಿ ಆವರಿಸಿ ಕೊಂಡು ಲೀನವಾಗಲೆತ್ನಿಸಿದಳು.

ಅದರಿಂದ ತಪ್ಪಿಸಿಕೊಳ್ಳಲು ಅವಳಿಂದ ದೂರವಿರಲಾರಂಭಿಸಿದೆ. ಅವಳಿಗೆ ತೀರಾ ನಿಕಟವಾಗಿ ಹೋಗಬಾರದೆಂದು ಯೋಚಿಸಿದೆ. ನಾನು ಅವಳ ಹತ್ತಿರ ಸರಿದಂತೆಲ್ಲ ಯಾವುದೋ ಅಪ್ರತ್ಯಕ್ಷ ಆತ್ಮವೊಂದು ಬಂದು ನಮ್ಮಿಬ್ಬರನ್ನೂ ಬೇರೆ ಮಾಡಲು ಪ್ರಯತ್ನಿಸುತ್ತಿತ್ತು.

ನಾನು ಲತಿಕಾಳಿಂದ ಹೇಗೋ ಪಾರಾಗಿ ನಮ್ಮ ಮಲಗುವ ಕೊಠಡಿಗೆ ಹೋದೆ. ನನ್ನ ಡ್ರಾಯರಿನಿಂದ ಮಿನಿಯ ಭಾವಚಿತ್ರವೊಂದನ್ನು ತೆಗೆದುಕೊಂಡು ವೀಕ್ಷಿಸಲಾರಂಭಿಸಿದೆ. ಅದು ನನಗೆ ಏನೂ ಪರಿಹಾರ ಒದಗಿಸಲಿಲ್ಲ. ಸಂಜೆಯಾ ದಂತೆಲ್ಲ ಮಿನಿ ಅನಿರೀಕ್ಷಿತವಾಗಿ ಕಾಣಿಸಿಕೊಳ್ಳುವುದರ ಭವಿಷ್ಯ ಏನಾಗಬಹುದೆಂದು ಗಾಬರಿಗೊಂಡೆ.

ಪ್ರಯಾಣದ ಆಯಾಸದಿಂದಾಗಿ ನನ್ನ ತಾಯಿ ಮತ್ತು ತಂಗಿ ಬೇಗ ಹಾಸಿಗೆ ಹಿಡಿದರು. ಕತ್ತಲೆ ದಟ್ಟವಾಗತೊಡಗಿತು. ದೂರ ದಿಗಂತದ ಹಳ್ಳಿಗಳಲ್ಲಿ ಮಿನುಗು ತ್ತಿದ್ದ ಅಸಂಖ್ಯಾತ ದೀಪಗಳ ಬೆಳಕನ್ನು ನೋಡಿದೆ. ಪೈನ್ ಮರಗಳ ಕಪ್ಪನೆಯ ಆಕೃತಿ ಕತ್ತಲೆಯ ಗರ್ಭದಲ್ಲಿ ಅಡಗಿತು. ದೂರದ ಬೆಟ್ಟಕ್ಕೆ ಹೋಗುವ ಕೆಂಪುರಸ್ತೆಗಳ ವಕ್ರಾಕೃತಿ ಅಸ್ಪಷ್ಟವಾಗಿ, ಕ್ರಮೇಣ ದೃಷ್ಟಿ ಪಥದಿಂದ ಮರೆ ಯಾಯಿತು.

ಲತಿಕಾ ಕಿಟಕಿಯ ಹತ್ತಿರ ನಿಂತು ಈ ಮನಮೋಹಕ ಸೌಂದರ್ಯ ದೃಶ್ಯವನ್ನು ನೋಡಿ ಆನಂದಿಸುತ್ತಿದ್ದಳು. ನಾನೂ ಅವಳ ಪಕ್ಕದಲ್ಲಿ ನಿಂತು ಯೋಚನೆಯಲ್ಲಿ ಮುಳುಗಿದೆ. ತಕ್ಷಣ ಧೈರ್ಯತಂದುಕೊಂಡು ಲತಿಕಾಳ ಕೈ ಹಿಡಿದು ಮಲಗುವ ಕೋಣೆಗೆ ಕರೆದುಕೊಂಡು ಹೋದೆ. ಅವಳಿಗೆ ಮಿನಿಯ ಭಾವಚಿತ್ರಗಳನ್ನು

ತೋರಿಸಿ ಕೇಳಿದೆ, "ಇವರನ್ನು ನೀನು ಚೆನ್ನಾಗಿ ಬಲ್ಲೆಯೆಂದು ನನಗೆ ಗೊತ್ತು; ನೀವಿಬ್ಬರೂ ಬಾಲ್ಯ ಸ್ನೇಹಿತೆಯರೆಂದು ನನಗೆ ತಿಳಿಯಿತು."

ಆಶ್ಚರ್ಯದಿಂದ ಕೂಗಿ ಲತಿಕಾ ನನ್ನ ಕೈಯಿಂದ ಆ ಭಾವಚಿತ್ರಗಳನ್ನು ಹಾರಿಸಿಕೊಂಡು ಕೇಳಿದಳು, "ಇವು ನಿಮಗೆ ಎಲ್ಲಿ ಸಿಕ್ಕಿದವು? ನನಗೆ ತಿಳಿದ ಮಟ್ಟಿಗೆ ಕಳೆದ ನಾಲ್ಕು ವರ್ಷಗಳಿಂದ ಅವಳು ಮದರಾಸಿನಲ್ಲಿ ತನ್ನ ದೊಡ್ಡಕ್ಕ ನೊಂದಿಗಿದ್ದಳು". ವಿಷಯದ ತೀವ್ರತೆಯನ್ನು ಕಡಿಮೆ ಮಾಡಲು ನಾನು ಸರಳವಾಗಿ ಹೇಳಿದೆ, "ಆಕೆ ನಿನ್ನನ್ನು ನೋಡಲು ಯಾವ ಕ್ಷಣದಲ್ಲಾದರೂ ಇಲ್ಲಿಗೆ ಬರ ಬಹುದು. ಈ ಭಾವಚಿತ್ರ ನಿನಗೆ ಮುನ್ಸೂಚನೆ ನೀಡಲು ಕೊಟ್ಟಂಥವು."

ಅನಿರೀಕ್ಷಿತವಾಗಿ ತನ್ನ ಬಾಲ್ಯ ಸ್ನೇಹಿತೆಯನ್ನು ಕಾಣುವ ಸುದ್ದಿಯನ್ನು ಕೇಳಿದ ಸಂಭ್ರಮದಲ್ಲಿ ಲತಿಕಾ ವಿವರವಾಗಿ ಪ್ರಶ್ನಿಸುವುದನ್ನೂ ಮರೆತಳು. ಬದ ಲಾಗಿ ಅವಳ ಸ್ನೇಹಿತೆಯ ಬಗ್ಗೆ ದೀರ್ಘವೂ ನಿರಂತರವೂ ಆದ ಪ್ರಶಂಸಾ ಭಾಷಣ ಕ್ಕಾರಂಭಿಸಿದಳು: "ಮಿನಿ ಸ್ವತಂತ್ರವೂ ಅಕೃತ್ರಿಮವೂ ಆದ, ನಿರ್ದಾಕ್ಷಿಣ್ಯವಾಗಿ ಇದ್ದುದನ್ನು ಇದ್ದ ಹಾಗೆ ಹೇಳುವ ಸ್ವಭಾವದ ಹುಡುಗಿ ಎಂದು ಅವಳು ಹೇಳಿದಳು. ಅವಳಿಗೆ ತನ್ನದೇ ಆದ ಒಂದು ವ್ಯಕ್ತಿತ್ವವಿದೆ. ಪಾತ್ರೆಯ ಆಕಾರಕ್ಕೆ ಹೊಂದಿ ಕೊಳ್ಳುವ ನೀರಿನಂತೆ ವ್ಯಕ್ತಿತ್ವವಿಲ್ಲದ ಹುಡುಗಿಯರಂತಲ್ಲ ಮಿನಿ." ಚಿಕ್ಕಂದಿನಿಂದಲೂ ಅವಳೊಂದಿಗೆ ತಾನು ತೀರಾ ಹತ್ತಿರವಾಗಿ ಒಡನಾಡಿದವಳೆಂದು ವರದಿ ಒಪ್ಪಿಸಿದಳು. ಮಿನಿ ತನ್ನನ್ನು ಮರೆತಿಲ್ಲವೆಂಬ ಅಚಲ ನಂಬಿಕೆ ಅವಳಿಗೆ. ತನ್ನ ಸ್ನೇಹಿತೆಯ ಆಗಮನದ ಸುದ್ದಿಯನ್ನು ಕೇಳಿದಕೂಡಲೇ ಅವಳು ಓಡಿಬರುತ್ತಾಳೆ. "ಮಿನಿ ಶಿಲಾಂಗಿನಲ್ಲಿರುವುದು, ಅವಳು ನನಗೆ ಭೇಟಿಯಾಗುತ್ತಿರುವುದು ನನಗೆ ಅತ್ಯಂತ ಆನಂದದಾಯಕ ಮತ್ತು ಸ್ಮರಣೀಯ ಘಟನೆ."

ಮಿನಿ ಸುಂಟರಗಾಳಿಯಂತೆ ಅನಿರೀಕ್ಷಿತವಾಗಿ ನಾವಿದ್ದ ರೂಮಿಗೆ ನುಗ್ಗಿದಳು. ಅವಳು ಲತಿಕಾಳ ಹೆಸರನ್ನು ಉದ್ಗರಿಸುವ ಮೊದಲೆ ಲತಿಕಾ ಅವಳ ತೋಳ ತೆಕ್ಕೆ ಯಲ್ಲಿದ್ದಳು. ಆ ಇಬ್ಬರು ಸ್ನೇಹಿತೆಯರು ತಮ್ಮ ಆಲಿಂಗನದ ಆನಂದದಲ್ಲಿ ನನ್ನ ಇರುವಿಕೆಯನ್ನೇ ಮರೆತಂತಿತ್ತು. ಕೊಠಡಿಯ ಇಡೀ ವಾತಾವರಣದ ಸ್ವರೂಪದಲ್ಲಿ ದೊಡ್ಡ ಬದಲಾವಣೆಯಾಯಿತು.

ನಾನು ಸಂಪೂರ್ಣ ಮೂಕನಾಗಿ, ನಿಶ್ಚಲನಾಗಿ ನಿಂತು ಅನೇಕ ದಿನಗಳ ಅಗಲಿಕೆಯ ನಂತರ ಸೇರಿದ ಸ್ನೇಹಜೀವಿಗಳೆರಡರ ಪ್ರೀತಿ, ಮಮತೆ ಮತ್ತು ಮಿತ್ರತ್ವದ ಸುಂದರ ದೃಶ್ಯವೊಂದನ್ನು ನೋಡಿ ಆನಂದಿಸಲು ಪ್ರಯತ್ನಿಸಿದೆ. ಸ್ವಲ್ಪ ಕಾಲದ ನಂತರ ಧೈರ್ಯ ತಂದುಕೊಂಡು 'ಮಿನಿ' ಎಂದು ಕೂಗಿದೆ.

ಮಿನಿ ನನ್ನ ಕರೆಗೆ ಓಗೊಡದೆ ಉದಾಸೀನವಾಗಿರಲೆತ್ನಿಸಿದಳು. ನಾನು ಮತ್ತೂ ಪ್ರಯತ್ನಿಸಿದೆ. ಹೊಳೆಯುವ ಕಣ್ಣುಗಳಿಂದ ಹಿಂದಕ್ಕೆನೋಡಿ ಮಗುವಿನಂಥ ಮಮತೆಯ ಧ್ವನಿಯಲ್ಲಿ ಅವಳು ಹೇಳಿದಳು: "ಮಿ॥ ಚಾಲಿಹ!" ಆ ಅಪರಿಚಿತ

ಹೆಸರು ಲತಿಕಾಳನ್ನು ಎಷ್ಟು ವಿನೋದಿಸಿತೆಂದರೆ, ಅವಳು ತನ್ನ ಸ್ನೇಹಿತೆಯ ಬೆನ್ನಿನ ಮೇಲೆ ಗುದ್ದುತ್ತಾ ನಗಲಾರಂಭಿಸಿದಳು. ಮಿನಿಯ ಕೆನ್ನೆ ಹಿಂಡುತ್ತಾ, ನನ್ನ ಸರಿಯಾದ ಹೆಸರನ್ನು ತಿಳಿಸಲು ಒಂದೊಂದೇ ಅಕ್ಷರವನ್ನು ಉಚ್ಚರಿಸುತ್ತಾ "ಕೆಟ್ಟ ಹುಡುಗಿ! ಯಾರನ್ನು ಚಾಲಿಹ ಎಂದು ಕರೆಯುತ್ತೀಯಾ? ಅವರು ಡಾ|| ಎಂ. ಪಿ. ಬರುವಾ, ಎಂ.ಬಿ.ಬಿ.ಎಸ್ ನನ್ನ.... ನನ್ನ...."

ವಿಪರೀತವಾದ ಗೊಂದಲ, ಹೆದರಿಕೆ ಮತ್ತು ನಾಚಿಕೆಯಿಂದ ಮಿನಿ ನನ್ನ ಮುಖದತ್ತ ದೃಷ್ಟಿ ಹರಿಸಿ ಬಹಳ ಕಷ್ಟದಿಂದ ವಾಕ್ಯವನ್ನು ಪೂರ್ಣಗೊಳಿಸಿದಳು. "ನಿನ್ನ.... ನಿನ್ನ.... ಯಜಮಾನರು!"

ಅನಂತರ ತುಟಿಯ ಮೇಲೆ ನಿರಾಸೆಯ ನಗುವನ್ನು ತಂದುಕೊಂಡು, "ದಯವಿಟ್ಟು ಕ್ಷಮಿಸಿ ಡಾ|| ಬರುವಾ! ನನಗೆ ನಿಮ್ಮ ಸರಿಯಾದ ಹೆಸರೂ ತಿಳಿಯದು. ಆದರೆ ನಿಮಗೆ ನನ್ನ ಸರಿಯಾದ ಹೆಸರು ಗೊತ್ತು. ಎಲ್ಲಾ ಒಂದೆ. ನಾನು ಮಿನಿ ಆಂಡ್ರೂಸ್. ಲತಿಕಾಳ ಆತ್ಮೀಯ ಗೆಳತಿ. ನಿಮಗೆ ಅಪೇಕ್ಷೆಯಿದ್ದರೆ ನನ್ನನ್ನೂ ನಿಮ್ಮ ಗೆಳತಿ ಎಂದು ಪರಿಗಣಿಸಬಹುದು."

ಮಾರನೆಯ ಬೆಳಗ್ಗೆ ಬೇರೆ ಏರ್ಪಾಡುಗಳೊಂದಿಗೆ ಅದೇ ಟೀಪಾಯಿ ಹುಲ್ಲು ಹಸಲೆಯ ಮೇಲಿದ್ದ ಅದೇ ಟೇಬಲ್ಲಿನ ಮೇಲಿತ್ತು. ಪ್ರಾತಃಸೂರ್ಯ ಹಿತವಾಗಿ ಪ್ರಕಾಶಿಸುತ್ತಿದ್ದ.

ಲತಿಕಾಳ ಕಣ್ಣುಗಳು ಇನ್ನೂ ನಿದ್ರೆಯ ಲೇಪನದಿಂದ ಭಾರವಾಗಿದ್ದುವು. ಮುಂಗುರುಳುಗಳು ಹಣೆಯಮೇಲೆಲ್ಲಾ ಹಾರಾಡುತ್ತಿದ್ದವು. ಅವಳು ನನ್ನ ಮುಂದೆ ಒಂದು ಕಪ್ ಹಿಡಿದಳು. ಯಾಂತ್ರಿಕವಾಗಿ ಅದನ್ನು ತೆಗೆದುಕೊಳ್ಳುತ್ತಾ ಸಂಕೋಚದಿಂದಲೇ ಕೇಳಿದೆ, "ಮಿನಿ ಸೊಗಸಾದ ಮತ್ತು ಬಹಳ ಒಪ್ಪವಾದ ಹುಡುಗಿ. ಆಕೆಯನ್ನು ನೀನು ಇಷ್ಟು ಅನಿರೀಕ್ಷಿತವಾಗಿ ಭೇಟಿಯಾದುದು ನಿನಗೆ ಬಹಳ ಸಂತೋಷವಾಗಿರಬೇಕು."

ಲತಿಕಾ ಉತ್ತರಿಸಿದಳು, "ಅದು ಬರಿಯ ಸಂತೋಷದ ಪ್ರಶ್ನೆಯಲ್ಲ, ನಾನು ಆನಂದಾತಿರೇಕದಿಂದ ಉಬ್ಬಿಹೋಗಿದ್ದೇನೆ. ನಾನು ಷಿಲಾಂಗಿನಲ್ಲಿ ಅವಳನ್ನು ಕಾಣುತ್ತೇನೆಂದು ಕನಸು ಮನಸಿನಲ್ಲಿಯೂ ಎಣಿಸಿರಲಿಲ್ಲ. ಅವಳು ಇನ್ನೂ ಮದರಾಸಿನಲ್ಲೇ ಇದ್ದಾಳೆಂದು ನಾನು ತಿಳಿದಿದ್ದೆ. ಅವಳು ಕಳೆದ ಒಂದು ವರ್ಷದಿಂದಲೂ ಇಲ್ಲಿ ಓದುತ್ತಿದ್ದಾಳೆಂದು ನನಗೆ ತಿಳಿದೇ ಇರಲಿಲ್ಲ."

ಮತ್ತೆ ಮೌನ ಹಿಂಬಾಲಿಸಿತು. ಕಪ್ಪು, ಸಾಸರ್ ಮತ್ತು ಚಮಚಗಳ ಕಟಕಟ ಸದ್ದು ಮಾತ್ರ ಕೇಳುತ್ತಿತ್ತು. ಮೌನವೊಡೆದು ನಾನೇ ಮುಂದುವರಿದೆ: "ಭೂತಕಾಲವನ್ನೇಕೆ ಉಪಯೋಗಿಸಿದೆ? ಆಕೆ ಈಗಲೂ ಇಲ್ಲಿಯೇ ಓದುತ್ತಿದ್ದಾಳೆ ಎಂದುಕೊಂಡಿದ್ದೇನೆ. ಕಡೆಯಪಕ್ಷ ಅದು ನನಗೆ ಗೊತ್ತಿರುವ ಸರಿಯಾದ ಸಮಾಚಾರ."

ಲತಿಕಾ ಉತ್ತರಿಸಿದಳು, "ಇಲ್ಲ. ಮುಂದೆ ಇಲ್ಲಿ ಓದುವುದಿಲ್ಲವೆಂದು ನಿನ್ನೆ ಅವಳೇ ಹೇಳಿದಳು. ಕೆಲವು ಕಾರಣಗಳಿಂದ ಅವಳು ಮದರಾಸಿಗೆ ಹಿಂತಿರುಗ ಬೇಕಾಗಿದೆ. ಈ ದಿನವೇ ಅವಳು ಷಿಲಾಂಗನ್ನು ಬಿಡುತ್ತಾಳೆ. ಆದುದರಿಂದಲೇ ನಿನ್ನೆ ರಾತ್ರಿಯೇ ಅವಳು ನನ್ನಿಂದ ಬೀಳ್ಕೊಂಡಳು." ಮತ್ತೆ ಆಳವಾದ ಮತ್ತು ಅಭೇದ್ಯವಾದ ಮೌನವಾವರಿಸಿತು. ಟೀ ಪದಾರ್ಥಗಳ ಪರಿಚಿತವಾದ ಕಟ ಕಟ ಧ್ವನಿಯೂ ಆ ಗಾಢ ಮೌನದಲ್ಲಿ ಆಗಂತುಕವಾಗಿತ್ತು.

ಆ ಅಪಶಕುನದ ಮೌನವನ್ನು ನಾನೆ ಬಹಳ ಕಷ್ಟದಿಂದ ಒಡೆದು ಶಾಂತಿ ಸ್ವರದಲ್ಲಿ ಮಾತನಾಡಿದೆ: "ಹಾಗಿದ್ದರೆ ಆಕೆ ನನಗೂ ಹೇಳಿಹೋಗಬೇಕಾದುದು ಅವಳ ಕರ್ತವ್ಯವಾಗಿತ್ತು. ಕಳೆದ ರಾತ್ರಿ ನೀನು ನನ್ನ ಹೆಸರನ್ನು ತಿದ್ದಿದಮೇಲೆ ಒಳಗಿನ ಕೊಠಡಿಗೆ ಬಂದವಳು ಮತ್ತೆ ನನ್ನೆದುರಿಗೆ ಬರಲೇ ಇಲ್ಲ. ನನ್ನ ಹರಟೆ ಯಿಂದ ನಿಮಗೆ ತೊಂದರೆಯಾಗಬಹುದೆಂದು ನಾನೂ ಬರಲಿಷ್ಟಪಡಲಿಲ್ಲ. ಆಕೆ ಹೊರಡುವ ಮುನ್ನ ನನಗೆ ಹೇಳಬೇಕಾದ್ದೇನೂ ಇರಲಿಲ್ಲವೆಂದು ಊಹಿಸು ತ್ತೇನೆ."

ಲತಿಕಾ ತಲೆಹಾಕುತ್ತಾ ಹೇಳಿದಳು: "ಅವಳು ಕೆಲವು ವಿಷಯಗಳನ್ನು ನನಗೆ ಹೇಳಿದಳು. ಅದೆಲ್ಲ ಒಮ್ಮೆ ಆಕೆ ನಿಮ್ಮೊಡನೆ ಚರ್ಚೆಯಲ್ಲಿ ಭಾಗ ವಹಿಸಿದುದು. ಅವಳ ಪ್ರಕಾರ ಅದು ಸಾಧ್ಯ, ನಿಮ್ಮ ಪ್ರಕಾರ ಅದು ಸಾಧ್ಯವಿಲ್ಲ ವಂತೆ. ಈಗ ತನ್ನ ತಪ್ಪನ್ನರಿತು ಸೋಲೊಪ್ಪಿದುದಾಗಿ ನಿಮಗೆ ತಿಳಿಸುವಂತೆ ಹೇಳಿದಳು. ಅದಕ್ಕಾಗಿ ನಿಮ್ಮಲ್ಲಿ ಕ್ಷಮೆಯನ್ನೂ ಕೇಳಿದ್ದಾಳೆ."

ವರ್ಷಗಳು ಕಳೆದುವು. ಕಾಲಚಕ್ರ ನನ್ನ ಭಾವನೆಗಳು, ಸ್ಫೂರ್ತಿ ಮತ್ತು ಮನಸ್ಸುಗಳನ್ನು ಮುಂದಗೊಳಿಸಿದೆ. ಜೀವನ ಒಂದು ಮೃತರಾಗದಂತಾಗಿದೆ. ಲತಿಕಾ ನನ್ನನ್ನು ಪೀಡಿಸುವ ಸ್ವಭಾವವನ್ನು ಬಹುಮಟ್ಟಿಗೆ ಕಡಿಮೆ ಮಾಡಿದ್ದಾಳೆ. ನಮ್ಮ ನಾಲ್ಕು ಜನ ಮಕ್ಕಳನ್ನು ನೋಡಿಕೊಳ್ಳುವುದರಲ್ಲಿಯೆ ಅವಳು ಸದಾ ಮಗ್ನಳಾಗಿರುತ್ತಾಳೆ. ಆದರೆ ಆ ಖೋಟಾ ನಾಣ್ಯವನ್ನು ಮಾತ್ರ ನಾನು ಸ್ವಲ್ಪವೂ ಮರೆಯಲು ಸಾಧ್ಯವಾಗಿಲ್ಲ.

ಕಾಲಾವಕಾಶವಿದ್ದಾಗಲೆಲ್ಲ ಅದರ ಬಗ್ಗೆ ಯೋಚಿಸುತ್ತೇನೆ ಮತ್ತು ಲತಿಕಾಳ ಡ್ರಾಯರ್‌ನಲ್ಲಿರುವ ಮಿನಿಯ ಮಸುಕಾದ ಭಾವಚಿತ್ರಗಳನ್ನು ವೀಕ್ಷಿಸುತ್ತೇನೆ. ಒಂದು ಸಾರಿ ಮಿನಿ "ಅಸೂಯೆ ಮನುಷ್ಯನ ಅತ್ಯಂತ ಪ್ರಾಚೀನವಾದ ಆಸಂಪ್ರ ದಾಯಕ ಪತಿತತೆ" ಎಂದು ಹೇಗೆ ಹೇಳಿದ್ದಳೆಂಬುದು ಈಗಲೂ ನೆನಪಿದೆ. ಇಂದಿನ ಮುಂದುವರಿದ ವಿದ್ಯಾವತಿಯರಾದ ಹೆಂಗಸರು ಅದನ್ನು ನಂಬುವುದಿಲ್ಲ. ಆದರೆ ಒಮ್ಮೊಮ್ಮೆ ನನ್ನನ್ನು ನಾನೆ ಪ್ರಶ್ನಿಸಿಕೊಳ್ಳುತ್ತೇನೆ, "ಅದರಲ್ಲೇನಾದರೂ ಸತ್ಯವಿದೆಯೆ?"

ಅನು: ಹ. ಕ. ರಾಜೇಗೌಡ

ಅನಂತಪದ್ಮನಾಭರಾವ್

ಬಯಕೆ

ನನ್ನೆಲ್ಲ
ಬುರುಗುಭಾವನೆಗಳಿಗೂ ಖಾರ ಹಚ್ಚಿ
ಒಮ್ಮೆಗೇ ಬುಕ್ಕಬೇಕೆನಿಸುತ್ತೆ.
ಎದೆಯ ಕೊಳ್ಳಿಗೆ ಡಿಸೆಂಬರಿನ ತಣ್ಣೀರು ಸುರಿದು,
ಮಂಜು ಗಡ್ಡೆಯ ಮೇಲೆ ಮಲಗಬೇಕೆನಿಸುತ್ತೆ.
ನನ್ನ ರಸ್ತೆಗೆ
ಅಚ್ಚುಗಟ್ಟಾದ ನೆಲಗಟ್ಟು ಹಾಕಿ
ಮೇಲೆ ಡಾಂಬರು ಬಳಿದು,
ಫರ್ಲಾಂಗಿಗೊಬ್ಬೊಬ್ಬ ಪಿ.ಸಿ.ಯನು ನಿಲಿಸಿ ;
ಯೋಚನೆಯ ಲಾರಿಯಲಿ ಓಡಬೇಕೆನಿಸುತ್ತೆ.
ತಲೆ–
ತೋಕೆಗಳಿರದ ಆಟ–
ಬೇಟಗಳನೆಲ್ಲ ಚಟ್ಟಹತ್ತಿಸಿ,
ಅದಕ್ಕೆ, ನನ್ನ ಗುಲಾಮತೆಗೆ–
ಸಲಾಮು ಹೊಡೆಯಬೇಕೆನಿಸುತ್ತೆ.
ಕೊನೆಗೆ
ಯಾರದೋ ಕೊರಳಿಗೆ ಜೋತುಬಿದ್ದಿರುವ
ನನ್ನ ಕೈಯನ್ನೇ ತುಂಡರಿಸಿ,
ಕುಂಟನಾಗಬೇಕೆನಿಸುತ್ತೆ.
ನನ್ನತನಕ್ಕೆ ನೇರ
ನಂಟನಾಗಬೇಕೆನಿಸುತ್ತೆ.

ಕನ್ನಡದ ಕಿಡಿಗಳು

ಕೇಶಿರಾಜನ ಪ್ರಯೋಗಗಳ ಆಕರಗಳು

ಕೇಶಿರಾಜನ 'ಶಬ್ದಮಣಿದರ್ಪಣ' ಕನ್ನಡ ವ್ಯಾಕರಣ ಪ್ರಪಂಚದಲ್ಲಿನ ಮೈಲಿಗಲ್ಲುಗಳಲ್ಲಿ ಒಂದು. ಇದರಲ್ಲಿ ವ್ಯಾಕರಣದ ಸೂತ್ರಗಳಿಗೆ ಉದಾಹರಣೆಗಳಾಗಿ, ಕನ್ನಡ ಕಾವ್ಯಗಳಿಂದ ವಿಪುಲವಾಗಿಯೂ ಹಾಗೂ ಶಾಸನಗಳಿಂದ ವಿರಳವಾಗಿಯೂ ಪ್ರಯೋಗಗಳನ್ನು ಕೇಶಿರಾಜನು ಉದಾಹರಿಸಿದ್ದಾನೆ. ಇವುಗಳಲ್ಲಿ ಹೆಚ್ಚಿನವು ರಮಣೀಯತೆಯಿಂದ ಕೂಡಿದ್ದು ಕೇಶಿರಾಜನ ಕವಿಮನೋಧರ್ಮಕ್ಕೆ ನಿದರ್ಶನ ರೂಪವಾಗಿವೆ. ಇವುಗಳನ್ನು ಉದಾಹರಿಸುವಲ್ಲಿ ಅವುಗಳ ಕರ್ತೃವಿನ ಮತ್ತು ಕೃತಿಯ ಹೆಸರುಗಳನ್ನು ತಿಳಿಸಿದ್ದರೆ ಕನ್ನಡ ಸಾಹಿತ್ಯ ಚರಿತ್ರೆಯ ಅಭ್ಯಾಸಿಗಳಿಗೆ ತುಂಬಾ ಪ್ರಯೋಜನವಾಗುತ್ತಿತ್ತೆಂಬುದರಲ್ಲಿ ಎರಡು ಮಾತಿಲ್ಲ. ಕವಿರಾಜಮಾರ್ಗಕಾರನಾಗಲಿ, ಕಾವ್ಯಾವಲೋಕನಾದಿ ಕೃತಿಕರ್ತೃ ನಾಗವರ್ಮ II ನಾಗಲಿ, ಕೇಶಿರಾಜನ ತಂದೆ ಮಲ್ಲಿಕಾರ್ಜುನನಾಗಲಿ, ತಮ್ಮತಮ್ಮ ಕೃತಿಗಳಲ್ಲಿ ಪ್ರಯೋಗಗಳ ಆಕಾರಗಳನ್ನು ತಿಳಿಸದಿರುವ ಜಾಡಿನಲ್ಲಿಯೇ ಕೇಶಿರಾಜನೂ ಸಾಗಿ ಆಕರಗಳ ಬಗೆಗೆ ಮೌನ ತಾಳಿದ್ದಾನೆ. ಆದರೂ ವೈಯಾಕರಣ ಕೇಶಿರಾಜ ತನ್ನ ಕೃತಿಯ ಆರಂಭದ ಐನೆಯ ಸೂತ್ರ ಮತ್ತು ವೃತ್ತಿಗಳಲ್ಲಿ ತನ್ನ ರಚನೆಗೆ ಲಕ್ಷ್ಯರಾದ ಹಲವರು ಕವಿಗಳ ಹೆಸರುಗಳನ್ನು ತಿಳಿಸಿದ್ದಾನೆ. ಅವರು ಗಜಗ, ಗುಣನಂದಿ, ಮನಸಿಜ, ಅಸಗ, ಚಂದ್ರಭಟ್ಟ, ಗುಣವರ್ಮ, ಶ್ರೀವಿಜಯ, ಪೊನ್ನ, ಪಂಪ, ಸುಜನೋತ್ತಂಸ (ಸೂತ್ರ ೩೦೪ರಲ್ಲಿ ಹಂಸರಾಜನ ಹೆಸರಿದೆ).

ಕೇಶಿರಾಜನಿಂದ ವ್ಯಕ್ತಿಶಃ ನಾಮನಿರ್ದೇಶಿತರಾಗದ ಕವಿಗಳಲ್ಲಿ ಈ ಕೆಲವರನ್ನು ಇಂದಿನ ಉಪಲಬ್ಧ ಕಾವ್ಯಗಳ ಮತ್ತು ಸಂಕಲನಗಳ ಸಹಾಯದಿಂದ ವಿದ್ವಾಂಸರು ಗುರುತಿಸಿದ್ದಾರೆ: ನೃಪತುಂಗ (೮೧೪-೮೭೭), ನಾಗವರ್ಮ I. (ಸು. ೯೯೦), ರನ್ನ (ಸು. ೯೯೩), ನಾಗಚಂದ್ರ (ಸು. ೧೧೪೦), ಬ್ರಹ್ಮಶಿವ (ಸು. ೧೧೪೦), ನಾಗವರ್ಮ (ಸು. ೧೧೪೫), ನೇಮಿಚಂದ್ರ (ಸು. ೧೧೭೦), ಅಗ್ಗಳ (೧೧೮೯), ಹರಿಹರ (ಸು. ೧೨೦೦), ಜನ್ನ (೧೨೦೯), ಗುಣವರ್ಮ (ಸು. ೧೨೩೫). ಉಲ್ಲೇಖಿತರಲ್ಲಿ ಗುಣನಂದಿ, ಮನಸಿಜ, ಚಂದ್ರಭಟ್ಟ, ಹಂಸರಾಜರ ಕೃತಿಗಳ ಹೆಸರುಗಳು ತಿಳಿದು ಬಂದಿಲ್ಲ. ಅಸಗ 'ಕರ್ನಾಟ ಕುಮಾರಸಂಭವ'ವನ್ನು ರಚಿಸಿದ್ದನೆಂಬ ವಿಷಯ ಇತ್ತೀಚೆಗೆ ಗೊತ್ತಾಗಿದೆ. ಗುಣವರ್ಮ I 'ಶೂದ್ರಕ', 'ಹರಿವಂಶ'ಗಳ ಕರ್ತೃ. ಶ್ರೀವಿಜಯ 'ಚಂದ್ರಪ್ರಭ ಚರಿತೆ'ಯನ್ನು

ಬರೆದ ಬಗೆಗೆ ಮುಂದಿನ ಕಾಲದ ಕವಿಗಳ ಉಲ್ಲೇಖಗಳಿವೆ. 'ಸುಜನೋತ್ತಂಸ ನೆಂಬ' ಬಿರುದಿದ್ದ ಬೊಪ್ಪಣ ಪಂಡಿತನಿಂದ ರಚಿತವಾದ 'ಗೊಮ್ಮಟಸ್ತುತಿ' ಮತ್ತು 'ನಿರ್ವಾಣ ಲಕ್ಷ್ಮೀಪತಿ ನಕ್ಷತ್ರಮಾಲಿಕೆ'ಗಳೆಂಬ ಎರಡು ಲಘುಕೃತಿಗಳು ದೊರಕಿದ್ದರೂ ಅವುಗಳಲ್ಲಿನ ಯಾವ ಪ್ರಯೋಗವೂ ಶಬ್ದಮಣಿದರ್ಪಣದಲ್ಲಿಲ್ಲ. ಉಳಿದ ಕವಿಗಳ ಕೃತಿಗಳು ಉಪಲಬ್ಧವಾಗಿವೆ. (ಕೃತಿ ಮತ್ತು ಕೃತಿಕಾರರ ಬಗೆಗೆ 'ಸಂಕೇತಸೂಚಿ' ನೋಡಿ.) ಶಬ್ದಮಣಿದರ್ಪಣದಲ್ಲಿನ ಪ್ರಯೋಗಗಳ ಆಕರಗಳನ್ನು ಗುರುತಿಸುವ ಕೆಲಸವನ್ನು ಮೊದಲು ಮಾಡಿದ ಕೀರ್ತಿ ಮದ್ರಾಸ್ ವಿಶ್ವವಿದ್ಯಾನಿಲಯದ ಕನ್ನಡ ಶಾಖೆಗೆ ಸಲ್ಲಬೇಕಾಗಿದೆ. ಅಲ್ಲಿನ ವಿದ್ವಾಂಸರಾದ ಶ್ರೀ ಎ. ವೆಂಕಟರಾವ್ ಮತ್ತು ಶ್ರೀ ಎಚ್. ಶೇಷ ಅಯ್ಯಂಗಾರ್ ಅವರು ತಮಗೆ ದೊರಕಿದ ಪ್ರಯೋಗಗಳ ಆಕರಗಳನ್ನು ತಾವು ಸಂಪಾದಿಸಿ ಪ್ರಕಟಿಸಿದ ಲಿಂಗಣಾರಾಧ್ಯ ವೃತ್ತಿ ಸಹಿತವಾದ 'ಕೇಶಿರಾಜ ವಿರಚಿತ ಶಬ್ದಮಣಿದರ್ಪಣಂ' ಕೃತಿಯ [೧೯೩೯] ಪರಿಶಿಷ್ಟ ೪ (ಪು. ೩೭೧–೮೧)ರಲ್ಲಿ ತಿಳಿಸಿದ್ದಾರೆ. ಪ್ರಸ್ತುತ ಲೇಖನದಲ್ಲಿ ಅವರು ಗುರುತಿಸಿರುವ ಪ್ರಯೋಗಗಳನ್ನು ನಕ್ಷತ್ರದ ಚಿಹ್ನೆಯಲ್ಲಿ ಸೂಚಿಸಿದೆ. ಅಲ್ಲದೆ ಅಲ್ಲಿ ಸೂಚಿಸದ ಹಲವಾರು ಪ್ರಯೋಗಗಳ ಆಕರಗಳನ್ನು ತಿಳಿಸಲಾಗಿದೆ. ಹೀಗೆ ಗುರುತಿಸುವಲ್ಲಿ ಈ ಪ್ರಯೋಗಗಳ ಆಕರಗಳ ಬಗೆಗೆ ತಿಳಿಸಿದ ಪ್ರೊ. ಡಿ. ಎಲ್. ನರಸಿಂಹಾಚಾರ್ಯರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಸಂಕೇತ ಸೂಚಿ

(೧) ಅಜಿತ—ಅಜಿತನಾಥ ಪುರಾಣ (ರನ್ನ)
(೨) ಅನಂತ—ಅನಂನನಾಥ ಪುರಾಣ (ಜನ್ನ)
(೩) ಆದಿಪು—ಆದಿಪುರಾಣ (ಪಂಪ)
(೪) ಕವಿರಾ—ಕವಿರಾಜಮಾರ್ಗ (ನೃಪತುಂಗ)
(೫) ಕಾದಂ (ಪೂ)—ಕಾದಂಬರಿ—ಪೂರ್ವಭಾಗ (ನಾಗವರ್ಮ I)
(೬) ಕಾ. ಲೋ.—ಕಾವ್ಯಾವಲೋಕನ (ನಾಗವರ್ಮ II)
(೭) ಕಾವ್ಯಸಾರ— (ಅಭಿನವವಾದಿ ವಿದ್ಯಾನಂದ)
(೮) ಗದಾಯು—ಗದಾಯುದ್ಧ (ರನ್ನ)
(೯) ಗಿರಿಜಾ—ಗಿರಿಜಾಕಲ್ಯಾಣ (ಹರಿಹರ)
(೧೦) ಚಂದ್ರಪ್ರ—ಚಂದ್ರಪ್ರಭ ಪುರಾಣ (ಅಗ್ಗಳ)
(೧೧) ಛಂದೋಂ—ಛಂದೋಂಬುಧಿ (ನಾಗವರ್ಮ I)
(೧೨) ತ್ರೈಲೋಕ್ಯ—ತ್ರೈಲೋಕ್ಯ ಚೂಡಾಮಣಿ ಸ್ತೋತ್ರ (ಬ್ರಹ್ಮಶಿವ)
(೧೩) ಪಂಪರಾ—ಪಂಪರಾಮಾಯಣ (ನಾಗಚಂದ್ರ)
(೧೪) ಪುಷ್ಪದಂ—ಪುಷ್ಪದಂತ ಪುರಾಣ (ಗುಣವರ್ಮ II)

(೧೫) ಭುವನೈ—ಭುವನೈಕರಾಮಾಭ್ಯುದಯ (ಪೊನ್ನ)
(೧೬) ಮಲ್ಲಿನಾ—ಮಲ್ಲಿನಾಥ ಪುರಾಣ (ನಾಗಚಂದ್ರ)
(೧೭) ಯಶೋಧ—ಯಶೋಧರ ಚರಿತೆ (ಜನ್ನ)
(೧೮) ರಸರ—ರಸರತ್ನಾಕರ (ಸಾಳ್ವ)
(೧೯) ಲೀಲಾ—ಲೀಲಾವತೀ ಪ್ರಬಂಧಂ (ನೇಮಿಚಂದ್ರ)
(೨೦) ವಸ್ತುಕೋ—ಅಭಿಧಾನ ವಸ್ತುಕೋಶ (ನಾಗವರ್ಮ II)
(೨೧) ಶ.ದ—ಶಬ್ದಮಣಿ ದರ್ಪಣ (ಕೇಶಿರಾಜ) ಸಂ. ಡೊ.ಲ.ನ (೧೯೫೯)
(೨೨) ಶ.ದ.ಪಾ—ಶಬ್ದಮಣಿದರ್ಪಣದ ಪಾಠಾಂತರಗಳೂ....
ಡಿ. ಕೆ. ಭೀಮಸೇನರಾವ್
(೨೩) ಶಾಂತಿಪು—ಶಾಂತಿಪುರಾಣ (ಪೊನ್ನ)
(೨೪) ಸೂ.ಸು—ಸೂಕ್ತಿ ಸುಧಾರ್ಣವ (ಮಲ್ಲಿಕಾರ್ಜುನ)
(೨೫) ಹರಿವಂಶ—(ಗುಣವರ್ಮ I)

ಪುಟ	ಪ್ರಯೋಗ	ಆಕರ	ಪುಟ	ಪ್ರಯೋಗ	ಆಕರ
೧೫	೧		೫೭	೨	
೧೫	೨		೫೭	೩	
೧೮	೧	ಸೂ.ಸು., ೧೦.೮೦	*೬೩	೧	ಆದಿಪು., ೨.೫೩ ಕಾ.ಲೋ., ೩೮
೧೮	೨		*೬೩	೨	ಕಾ.ಲೋ., ೩೫೮
*೧೮	೩	ಕಾ.ಲೋ., ೩೧೪	೬೩	೩	
೧೮	೪		೬೩	೪	
೧೮	೫		೬೩	೫	
*೧೮	೬	ಆದಿಪು. ೯.೨೧ ಕಾ.ಲೋ., ೬೪೭	೬೩	೬	
*೧೯	೧	ಕಾ.ಲೋ., ೧೩	*೬೩	೭	ಆದಿಪು., ೯.೧೩೨ ಕಾ.ಲೋ., ೧೮೭
*೨೦	೧	ಕಾ.ಲೋ., ೧೪	೬೩	೮	
೨೦	೧		೬೩	೯	ಕಾ.ಲೋ., ೧೪೦
*೨೦	೨	ಕಾ.ಲೋ., ೧೧	೬೩	೧೦	
೨೦	೩		*೬೩	೧೧	ಗದಾಯು., ೨.೧೬
೨೧	೧		೬೩	೧೨	ಆದಿಪು.,

೨೧ ೨
೨೧ ೩
*೨೪ ೧ ಕಾ.ಲೋ., ೭೭
*೨೫ ೧ ಕಾ.ಲೋ., ೧೮
೨೯ ೧
*೨೯ ೨ ಕಾ.ಲೋ., ೨೬
೨೯ ೩ ಕಾ.ಲೋ., ೨೩
೨೯ ೪
೨೯ ೫
೨೯ ೬
೨೯ ೭
೩೪ ೧ ಶ.ದ.ಪಾ.
*೩೪ ೨ [ಗುಣನಂದಿ]
೩೪ ೩
*೫೨ ೧ { ಗದಾಯು., ೩.೨೦
ಕಾ.ಲೋ., ೫೩೪
೫೨ ೨ ಸೂ.ಸು., ೧೪.೭೫
೫೨ ೩
೫೨ ೪
೫೭ ೧
*೬೬ ೨ ಕಾ.ಲೋ., ೪೮
*೬೬ ೩ ಕಾ.ಲೋ., ೫೧
೬೬ ೪ ಕಾ.ಲೋ., ೫೦
*೬೬ ೫ ಕಾ.ಲೋ., ೪೯
*೬೬ ೬ ಕಾ.ಲೋ., ೫೩
೬೬ ೭
*೬೬ ೮ ಕಾ.ಲೋ., ೫೨
೬೬ ೯
೬೬ ೧೦
*೬೬ ೧೧ ಕಾ.ಲೋ., ೧೧
೬೬ ೧೨
೬೭ ೧

೬೩ ೧೩
೬೩ ೧೪
*೬೩ ೧೫ ಕಾ.ಲೋ., ೨೯೪
೬೩ ೧೬
*೬೩ ೧೭ ಕಾ.ಲೋ., ೪೩
೬೪ ೧
೬೪ ೨
*೬೫ ೧ ಕಾವ್ಯಸಾರ., ೯೯೭
*೬೫ ೨ ಕಾ.ಲೋ., ೧೧೩
೬೫ ೩
೬೫ ೪
*೬೫ ೫ ಕಾ.ಲೋ., ೧೭೭
*೬೫ ೬ ಕಾ.ಲೋ., ೪೨
೬೫ ೭ ಸೂ.ಸು., ೮.೪೪೯
೬೫ ೮ ಲೀಲಾ., ೨.೧೦೨
೬೫ ೯ ಕಾ.ಲೋ., ೩೪
೬೫ ೧೦
*೬೫ ೧೧ ಕಾ.ಲೋ., ೪೧
*೬೬ ೧ ಕಾ.ಲೋ., ೪೭
೭೨ ೧
೭೨ ೨
*೭೨ ೩ ಕಾ.ಲೋ., ೪೪೦
೭೩ ೧ ಗಿರಿಜಾ., ೨.೯೪
೭೪ ೧ ಸೂ.ಸು., ೪.೯
೭೪ ೨
೭೪ ೩
*೭೫ ೧ ಕಾ.ಲೋ., ೫೫
೭೫ ೨ ಸೂ. ಸು., ೪.೧೩೧
೭೫ ೩
೭೫ ೪
೭೫ ೫

೬೭ ೨
೬೭ ೩
೬೭ ೪
೬೭ ೫
೬೭ ೬
೬೭ ೭
೬೭ ೮
೬೭ ೯
*೬೯ ೧ ಕವಿರಾ., ೨.೭
೬೯ ೨
೬೯ ೩
೭೧ ೧
೭೧ ೨
೭೧ ೩
*೭೧ ೪ ಕಾ.ಲೋ., ೩೩೬
*೭೧ ೫ ಕಾ.ಲೋ., ೬೬೨
*೭೧ ೬ ವಿಕ್ರಮಾ., ೬.೪೦
*೭೧ ೭ ಆದಿಪು., ೧೩.೮೪
೭೧ ೮
*೭೧ ೯ ಕಾ.ಲೋ., ೨೮
*೭೧ ೧೦ { ಅಜಿತ., ೨.೪೮
ಕಾ.ಲೋ., ೪೧೮ }
೭೧ ೧೧
೭೭ ೯ ಕಾ.ಲೋ., ೭೧
*೭೭ ೧೦ ಲೀಲಾ., ೧.೭೮
೭೭ ೧೧
೭೭ ೧೨
೭೭ ೧೩
*೭೭ ೧೪ ಕಾ.ಲೋ., ೨೦೭
*೭೭ ೧೫ ಕಾ.ಲೋ., ೭೦

*೭೫ ೬ ಕಾ.ಲೋ., ೫೭
೭೫ ೭ ಕಾ.ಲೋ., ೨೪೪
*೭೬ ೧ ಕಾ.ಲೋ., ೫೮
*೭೬ ೨ ಕಾ.ಲೋ., ೫೯
೭೬ ೩
೭೬ ೪
*೭೬ ೫ ಕಾ.ಲೋ., ೨೧೧
*೭೬ ೬ ಕಾ.ಲೋ., ೩೦೧
೭೬ ೭
೭೬ ೮
೭೬ ೯
೭೬ ೧೦ ಕಾ.ಲೋ., ೨೯೮
೭೬ ೧೧
*೭೬ ೧೨ ಕಾ.ಲೋ., ೨೯೯
*೭೭ ೧ { ಅಜಿತ., ೬.೨೭
ಕಾ.ಲೋ., ೬೪ }
೭೭ ೨
*೭೭ ೩ ಕಾ.ಲೋ., ೧೫೦
*೭೭ ೪ ಕಾ.ಲೋ., ೬೫
೭೭ ೫
೭೭ ೬ ಕಾ.ಲೋ., ೬೬
*೭೭ ೭ ಶಾಂತಿಪು., ೧.೬೩
೭೭ ೮
೭೯ ೧೩
೭೯ ೧೪
೭೯ ೧೫ { ಶೂದ್ರಕ.,
ಸೂ.ಸು., ೩.೧೩೦
ಕಾವ್ಯಸಾರ, ೧೧೧೩ }
೭೯ ೧೬
೭೯ ೧೭
೭೯ ೧೮
*೭೯ ೧೯ ಗದಾಯು., ೪.೧೬

೭೭ ೧೬
೭೭ ೧೭ ಸೂ.ಸು., ೪.೬
೭೭ ೧೮ ಸೂ.ಸು., ೩.೧೩
*೭೭ ೧೯ ಕಾ.ಲೋ., ೭೨
೭೭ ೨೦
೭೭ ೨೧ ಸೂ.ಸು., ೪.೪೬
*೭೮ ೧ ಕಾ.ಲೋ., ೭೪
೭೮ ೨
*೭೮ ೩ { ಆದಿಪು., ೪.೩೬
ಕಾ.ಲೋ., ೭೬ }
*೭೮ ೪ ಕಾಲೊ., ೭೭
೭೮ ೫ ಕಾ.ಲೋ., ೨೭
*೭೮ ೬ ಕಾ.ಲೋ., ೭೫
೭೮ ೭
೭೮ ೮
೭೮ ೯
೭೮ ೧೦
೭೮ ೧೧ ಸೂ.ಸು., ೪.೩೪
*೭೯ ೧ ಕಾ.ಲೋ., ೮೦
೭೯ ೨
೭೯ ೩ ಸೂ.ಸು., ೭.೫೫
೭೯ ೪
೭೯ ೫ { ಗಿರಿಜಾ.,
ಸೂ.ಸು., ೩.೨೦೪ }
*೭೯ ೬ ಕಾ.ಲೋ., ೮೧
೭೯ ೭ ಸೂ.ಸು., ೪.೫೧
೭೯ ೮
*೭೯ ೯ ಕಾ.ಲೋ., ೩೦೯
*೭೯ ೧೦ ಕಾ.ಲೋ., ೨೨೪
೭೯ ೧೧
೭೯ ೧೨ ಕಾ.ಲೋ., ೧೫೪
೮೫ ೨.

೭೯ ೨೦
೭೯ ೨೧ ಕಾ.ಲೋ., ೮೨
*೭೯ ೨೨ ಕಾ.ಲೋ., ೮೩
೭೯ ೨೩ ಸೂ.ಸು., ೩.೧೨
೭೯ ೨೪
೭೯ ೨೫
೮೨ ೧ ಅನಂತ., ೫.೯೯
೮೨ ೨ ಸೂ.ಸು., ೩.೧೨೮
೮೨ ೩
೮೨ ೪
೮೨ ೫ ಕಾ.ಲೋ., ೩೨೬
೮೨ ೬
೮೨ ೭ ಕಾ.ಲೋ. ೮೧
೮೨ ೮
೮೨ ೯
೮೨ ೧೦
*೮೨ ೧೧ ಕಾ.ಲೋ., ೨೦೯
೮೨ ೧೨
೮೨ ೧೩
೮೨ ೧೪
*೮೨ ೧೫ ಅನಂತ., ೫.೯೯
೮೨ ೧೬ ಸೂ.ಸು., ೩.೧೨೩
೮೩ ೧
೮೩ ೨
೮೩ ೩ ವಿಕ್ರಮಾ., ೧೩.೭೭
೮೩ ೪
೮೩ ೫ ಮಲ್ಲಿನಾ., ೨.೫೬
೮೪ ೧ ಕಾ.ಲೋ., ೨೪೯
೮೫ ೧
೧೦೭ ೬ ಕಾ.ಲೊ., ೯೪

೮೫	೩	
೮೫	೪	ತ್ರೈಲೋಕ್ಯ., ೨೭
೮೬	೧	
೮೯	೧	ಕಾದಂ
*೯೦	೧	ಕವಿರಾ., ೧.೫೯
೯೪	೧	
೯೪	೨	
೯೪	೩	
*೯೫	೧	ವಿಕ್ರಮಾ., ೭.೩೩.ವ ಕಾವ್ಯಾ., ೧೮೧
೯೫	೨	
*೯೬	೧	ವಸ್ತುಕೋ., ೨.೭
೯೮	೧	
೯೮	೨	
೯೮	೩	
*೯೮	೪	ಆದಿಪು., ೧.೯
೯೮	೫	
೯೮	೬	ಆದಿಪು., ೯.೯೩
*೧೦೦	೧	ಆದಿಪು., ೩.೪ ಕಾ.ಲೋ., ೧೩೦
೧೦೦	೨	ಆದಿಪು., ೧೧.೯೭ ಕಾ.ಲೋ., ೨೬೬
೧೦೦	೩	
೧೦೦	೪	
೧೦೩	೧	
೧೦೫	೧	
*೧೦೫	೨	ಕಾ.ಲೋ., ೬೨೩
*೧೦೫	೩	ಕಾ.ಲೋ., ೯೦
*೧೦೫	೪	ಕಾ.ಲೋ., ೧೦೨
೧೦೫	೫	

೧೦೭	೭	
೧೦೮	೧	
೧೦೮	೨	
೧೦೮	೧	
೧೦೮	೨	ಗದಾಯು., ೨.೧೧ ಕಾ.ಲೋ., ೧೪೬
*೧೦೮	೩	ವಿಕ್ರಮಾ., ೧೦.೨೫ ಕಾವ್ಯ., ೨೮೯
*೧೦೮	೪	ಕಾ.ಲೊ., ೯೫
೧೦೮	೫	
೧೦೮	೬	
೧೦೮	೭	
*೧೦೮	೮	ಕವಿರಾ., ೧.೩೨
೧೦೮	೯	
೧೦೮	೧೦	
೧೦೮	೧೧	ಕಾ.ಲೋ., ೩೨೮
೧೦೯	೧	
*೧೦೯	೨	ಕಾ.ಲೋ., ೯
೧೦೯	೩	
*೧೦೯	೪	ಕಾ.ಲೋ., ೨೮೦
೧೧೧	೧	
೧೧೧	೨	ಕಾ.ಲೋ., ೫೮
*೧೧೨	೧	ಆದಿಪು., ೧.೧೧
೧೧೨	೨	
೧೧೪	೧	
೧೧೪	೨	ಕಾ.ಲೋ., ೪೨
೧೧೪	೩	ಕಾ.ಲೋ., ೧೯೭
೧೧೪	೬	ಆದಿಪು., ೨.೫೩ ಕಾ.ಲೋ., ೩೮
*೧೧೪	೫	ಗದಾಯು., ೫.೩೬

೧೦೬	೧	ಕಾ.ಲೋ., ೧೨೩
೧೦೬	೨	
*೧೦೬	೩	ಕಾ.ಲೋ., ೬೧೫
೧೦೭	೧	
೧೦೭	೨	
೧೦೭	೩	
೧೦೭	೪	
೧೦೭	೫	ಸೂ.ಸು., ೮.೩೯೨
*೧೧೭	೩	ಕಾ.ಲೋ., ೧೧೦
೧೧೭	೪	
*೧೧೭	೫	ಆದಿಪು., ೩.೮೦ ಕಾ.ಲೋ., ೧೧೧
೧೧೮	೧	
೧೧೮	೨	
*೧೧೮	೩	[ಸುಜನೋತ್ತಂಸಾ]
*೧೧೮	೪	ಕಾ.ಲೋ., ೧೧೩
*೧೧೯	೧	ಆದಿಪು., ೧೨.೯
೧೧೯	೨	
೧೧೯	೩	
೧೧೯	೪	ಆದಿಪು., ೩.೬೮
೧೧೯	೫	
೧೧೯	೬	ಸೂ.ಸು., ೧.೩೫
*೧೨೦	೧	ಕಾ.ಲೋ., ೧೨೩
೧೨೦	೨	ಸೂ.ಸು., ೩.೩೦
*೧೨೦	೩	ಕವಿರಾ., ೧.೧೫
೧೨೦	೪	
*೧೨೧	೧	ಆದಿಪು., ೩.೧೫ ಕಾ.ಲೋ., ೧೨೩
೧೨೧	೨	
*೧೨೨	೧	ಕಾ.ಲೋ., ೩೬೪
೧೨೨	೨	ವಿಕ್ರಮಾ., ೪.೨೯
೧೨೨	೩	
೧೧೪	೬	ಕಾ.ಲೋ., ೫೩
*೧೧೫	೭	ಕವಿರಾ., ೩.೨೩೩
೧೧೫	೧	ಸೂ.ಸು., ೧೬.೫೩
೧೧೫	೨	
*೧೧೬	೧	ಕಾ.ಲೋ., ೧೯೭
೧೧೭	೨	ಕಾ.ಲೊ., ೧೦೬
೧೧೭	೧	
೧೧೭	೨	
೧೨೬	೩	
೧೨೬	೪	
*೧೨೭	೧	ಕಾ.ಲೋ., ೧೩೭
೧೨೭	೨	ಗದಾಯು., ೧೦.೨
೧೨೭	೩	
*೧೨೭	೪	ಕಾ.ಲೋ., ೧೩೮
೧೨೭	೫	
೧೨೭	೬	
೧೨೮	೧	ಕಾ.ಲೋ., ೧೬೭
*೧೨೮	೨	ಕಾ.ಲೋ., ೩೫೯
*೧೨೮	೩	ಹರಿವಂಶ
೧೨೯	೧	
೧೨೯	೨	ಸೂ.ಸು., ೪.೨೬
೧೨೯	೩	
೧೨೯	೪	
೧೨೯	೫	
೧೨೯	೬	ಸೂ.ಸು., ೮.೨೧೨
೧೨೯	೭	
೧೨೯	೮	ಶ.ದ.ಪಾ.
*೧೩೦	೧	ಭುವನೈ.
*೧೩೩	೧	ಆದಿಪು., ೩.೩೫
೧೩೩	೨	

೧೨೨ ೪
*೧೨೨ ೫ ಆದಿಪು., ೬.೩೦
*೧೨೨ ೬ ಕಾ.ಲೋ., ೫೩
೧೨೩ ೧
*೧೨೩ ೨ ಕಾ.ಲೋ., ೧೧೬
೧೨೩ ೩
೧೨೩ ೪
೧೨೩ ೫
೧೨೩ ೬
೧೨೩ ೭
೧೨೩ ೮
೧೨೪ ೧
೧೨೪ ೨
೧೨೬ ೧ ಕಾ.ಲೋ., ೧೧೮
*೧೨೬ ೨ ಕಾ.ಲೋ., ೧೧೯
೧೩೫ ೨
*೧೩೫ ೩ ಕಾ.ಲೋ., ೧೨೯
೧೩೫ ೪
೧೩೫ ೫
೧೩೫ ೬
*೧೩೬ ೧ { ಆದಿಪು., ೩.೪
  ಕಾ.ಲೋ., ೧೩೦
೧೩೬ ೨
*೧೩೬ ೩ ಕಾ.ಲೋ., ೩೧೮
೧೩೬ ೪
*೧೩೬ ೫ ವಿಕ್ರಮಾ., ೨.೪೮
೧೩೬ ೬
೧೩೬ ೭
*೧೩೬ ೮ ಆದಿಪು., ೧೩.೪೪
*೧೩೭ ೧ ಗದಾಯು., ೫.೨೦
೧೩೭ ೨
*೧೩೩ ೩ ಗದಾಯು., ೩.೫೦
೧೩೩ ೪
೧೩೩ ೫
೧೩೩ ೬
೧೩೩ ೭
೧೩೩ ೮
೧೩೩ ೯
೧೩೪ ೧
೧೩೪ ೨
*೧೩೪ ೩ ಕಾ.ಲೋ., ೧೩೨
೧೩೪ ೪
೧೩೪ ೫ ಸೂ.ಸು., ೪.೧೨೭
೧೩೪ ೬
*೧೩೪ ೭ ಕಾ.ಲೋ., ೧೩೩
೧೩೫ ೧
*೧೫೩ ೧ { ಆದಿಪು., ೧೨.೫೮
  ಕಾ.ಲೋ., ೧೯೧
೧೫೫ ೧
೧೫೫ ೨
*೧೫೬ ೧ ಕಾ.ಲೋ., ೫೦೮
೧೫೬ ೨
*೧೫೬ ೩ ವಿಕ್ರಮಾ., ೧೦.೧೦
೧೫೬ ೪
೧೫೬ ೫
೧೫೬ ೬
೧೫೭ ೧
೧೫೭ ೨
೧೫೮ ೧
೧೫೮ ೨
೧೬೦ ೧
೧೬೦ ೨

೧೩೭ ೩
*೧೩೭ ೪ ಪಂಪರಾ., ೯.೧೧೮
೧೩೭ ೫
೧೩೭ ೬
೧೩೭ ೭
೧೩೭ ೮
೧೪೧ ೧
*೧೪೧ ೨ ವಸ್ತುಕೋ., ೯೬.೩
*೧೪೫ ೧ ಕಾ.ಲೋ., ೧೨೨
೧೪೫ ೨
೧೪೫ ೩
*೧೪೫ ೪ ವಿಕ್ರಮಾ., ೪.೩೧
*೧೪೬ ೧ ಕಾ.ಲೋ., ೧೧೯
೧೪೬ ೨
೧೪೬ ೩
*೧೪೭ ೧ { ಆದಿಪು., ೩.೧೫ / ಕಾ.ಲೋ., ೧೨೩
೧೪೯ ೧
೧೫೧ ೧
*೧೫೧ ೨ { ವಿಕ್ರಮಾ., ೩.೬೧ / ಕಾ.ಲೋ., ೧೪೧
೧೭೭ ೧
೧೭೮ ೧ ವಿಕ್ರಮಾ., ೨.೮೦
೧೭೮ ೨
೧೭೮ ೩
೧೭೮ ೪
೧೭೮ ೫
೧೭೮ ೬
೧೭೮ ೭
೧೭೮ ೮
*೧೭೯ ೧ ಆದಿಪು., ೧.೩

*೧೬೧ ೧ ವಿಕ್ರಮಾ. ?
೧೬೨ ೧
೧೬೨ ೨
*೧೬೨ ೩ ಕಾ.ಲೋ., ೨೫೩
೧೬೨ ೪ ಸೂ.ಸು., ೩.೧೨
೧೬೨ ೫
೧೬೨ ೬
೧೬೩ ೧
*೧೬೩ ೪
*೧೬೪ ೧ ರಸರ., ೧.೨೭
೧೬೪ ೨
*೧೬೭ ೧ { ಭುವನೈ., / ಕಾ.ಲೋ., ೧೭೩
*೧೭೧ ೧ [ಶ್ರವಣಬೆಳಗೊಳ ಶಾಸನ [೧೨೪-
೧೭೧ ೨
*೧೭೪ ೧ ಕಾ.ಲೋ., ೧೨೨
೧೭೪ ೨
೧೭೫ ೧
*೧೭೫ ೨ ಕಾ.ಲೋ., ೨೦೭
೧೭೬ ೧
೧೮೬ ೪
೧೮೭ ೧
೧೮೭ ೨
೧೮೮ ೧
೧೮೮ ೨
*೧೮೮ ೩ ವಿಕ್ರಮಾ., ೩.೪೩
೧೮೮ ೪
೧೮೮ ೫
೧೮೯ ೧ ಪಂಪರಾ.,
*೧೯೧ ೧ ಕಾ.ಲೋ., ೨೨೪

೧೭೯ ೨
೧೭೯ ೩
೧೭೯ ೪ ವಿಕ್ರಮಾ., ೧೩.೩೭
*೧೭೯ ೫ ಯಶೋಧ., ೧.೫೨
೧೭೯ ೬
೧೭೯ ೭ ಕಾ.ಲೋ., ೮೦೪
೧೮೦ ೧
೧೮೦ ೨
೧೮೦ ೩ ಸೂ.ಸು., ೮.೧೩೪
೧೮೦ ೪
*೧೮೦ ೫ ಕಾ.ಲೋ., ೭೧೬
೧೮೦ ೬
೧೮೦ ೭
*೧೮೧ ೧ ಕಾ.ಲೋ., ೯೫೧
೧೮೧ ೨
೧೮೧ ೩ { ಕಾ.ಲೋ., ೫೬
{ ಕಾವ್ಯಸಾರ., ೫೩೨
೧೮೧ ೪
೧೮೧ ೫
೧೮೩ ೧ { ಚಂದ್ರಪ್ರ., ೮.೭೨
{ ಸೂ.ಸು., ೧೪.೭೦
*೧೮೩ ೨ ಭುವನೈ.,
*೧೮೪ ೧ ಭುವನೈ.,
೧೮೪ ೨
೧೮೪ ೩
*೧೮೬ ೧ ಕಾ.ಲೋ., ೨೫೩
೧೮೬ ೨ ಕಾ.ಲೋ., ೨೫೨
೧೮೬ ೩ ಕಾ.ಲೋ., ೨೫೪
೧೯೮ ೨
೧೯೮ ೩ ಕಾ.ಲೋ., ೨೬೨
*೧೯೯ ೧ { ಆದಿಪು., ೧.೫೦
{ ಕಾ.ಲೋ., ೨೬೩

೧೯೧ ೨
೧೯೨ ೧
೧೯೨ ೨
*೧೯೩ ೧ ಕಾ.ಲೋ., ೨೩೪
೧೯೩ ೨
*೧೯೩ ೩ ಕಾ.ಲೋ., ೨೩೫
೧೯೩ ೪ ಆದಿಪು., ೧.೬೭
೧೯೩ ೫
೧೯೩ ೬
*೧೯೩ ೭ ಕಾ.ಲೋ., ೨೨೧
೧೯೩ ೮ .ಲೀಲಾ., ೧೧.೨೭
೧೯೪ ೧ ಕಾ.ಲೋ., ೨೬೧
*೧೯೪ ೨ ಕಾ.ಲೋ., ೩೦೧
೧೯೪ ೩
೧೯೪ ೪
*೧೯೪ ೫ ವಿಕ್ರಮಾ., ೩.೨೭
೧೯೫ ೧
೧೯೫ ೨
೧೯೫ ೩
*೧೯೫ ೪ ಆದಿಪು., ೩.೧೨
೧೯೫ ೫
೧೯೫ ೬
೧೯೫ ೭
*೧೯೭ ೧ ಕಾ.ಲೋ., ೨೦೯
*೧೯೭ ೨ ಕಾ.ಲೋ., ೨೫೭
೧೯೮ ೧
*೨೦೮ ೨ ಕಾ.ಲೋ., ೩೨೩
೨೦೮ ೩
೨೦೯ ೧ ಕಾ.ಲೋ., ೩೨೬

೧೯೯ ೨
*೧೯೯ ೩ ಕಾ.ಲೋ., ೨೬೪
೧೯೯ ೪
*೧೯೯ ೫ { ಆದಿಪು., ೧೧.೯೭
ಕಾ.ಲೋ., ೨೬೬ }
೧೯೯ ೬
*೨೦೦ ೧ ಕಾ.ಲೋ., ೨೬೮
*೨೦೦ ೨ ಕಾ.ಲೋ., ೨೬೯
*೨೦೦ ೩ { ಆದಿಪು., ೯.೫೦
ಕಾ.ಲೋ., ೨೭೦ }
*೨೦೦ ೪ ಕಾ.ಲೋ., ೨೭೧
೨೦೦ ೫
೨೦೧ ೧
*೨೦೨ ೧ { ವಿಕ್ರಮಾ., ೧೦.೨೫
ಕಾ.ಲೋ., ೨೭೯ }
*೨೦೨ ೨ { ಆದಿಪು., ೬.೫
ಕಾ.ಲೋ., ೨೮೫ }
*೨೦೩ ೧ ಕಾ.ಲೋ., ೨೭೭
೨೦೩ ೨
೨೦೩ ೩
೨೦೪ ೧
೨೦೪ ೨
೨೦೪ ೩
*೨೦೪ ೪ ವಿಕ್ರಮಾ., ೩.೨೭
*೨೦೪ ೫ ವಿಕ್ರಮಾ., ೩.೨೫
೨೦೪ ೬
೨೦೪ ೭
೨೦೬ ೧
*೨೦೬ ೨ ಕಾ.ಲೋ., ೨೯೦
೨೦೬ ೩
*೨೦೬ ೪ ಕಾ.ಲೋ., ೨೯೨
*೨೦೬ ೫ ಕಾ.ಲೋ., ೨೮೮

೨೦೯ ೨
೨೧೦ ೧ ಕಾ.ಲೋ., ೩೨೫
*೨೧೦ ೨ ಕಾ.ಲೋ., ೩೨೮
*೨೧೪ ೧ ಕಾ.ಲೋ., ೩೫೩
*೨೧೯ ೧ ಕಾ.ಲೋ., ೩೩೩
೨೨೨ ೧
*೨೨೫ ೧ ಕಾ.ಲೋ., ೬೬೭
೨೨೫ ೨
೨೨೫ ೩
೨೨೫ ೪
೨೨೫ ೫
೨೨೫ ೬
೨೨೮ ೧
೨೨೮ ೨
*೨೨೮ ೩ ಲೀಲಾ., ೧.೧೧
೨೨೮ ೪ ಲೀಲಾ., ೩.೯೩
*೨೨೮ ೫ ಗದಾಯು., ೪.೫
*೨೨೮ ೬ ಕಾ.ಲೋ., ೩೧೮
೨೨೮ ೭ ಶೂದ್ರಕ
೨೨೮ ೮
*೨೨೮ ೯ ಕಾ.ಲೋ., ೩೮೫
೨೨೯ ೧
೨೨೯ ೨
೨೨೯ ೩
೨೨೯ ೪ ಆದಿಪು., ೮.೧
೨೨೯ ೫
೨೩೦ ೧
೨೩೧ ೧

*೨೦೬	೬	ಕಾ.ಲೋ., ೨೯೪
೨೦೬	೭	
*೨೦೬	೮	ಕಾ.ಲೋ., ೨೯೩
೨೦೬	೯	
*೨೦೮	೧	ಶಾಂತಿಪು., ೧೨.೭೭
೨೩೧	೭	
೨೩೧	೮	
೨೩೧	೯	
*೨೩೨	೧	ವಿಕ್ರಮಾ., ೧.೩೨
೨೩೨	೨	
೨೩೨	೩	ಸೂ.ಸು., ೧೦.೪೫
*೨೩೨	೪	ಕಾ.ಲೋ., ೩೮೮
೨೩೨	೫	
೨೩೨	೬	ಪಂಪರಾ., ೭.೯೮ ಸೂ.ಸು., ೧೦.೧೨೧
೨೩೨	೭	
೨೩೨	೮	
೨೩೨	೯	
೨೩೨	೧೦	
೨೩೨	೧೧	ಪಂಪರಾ., ೭.೯೮ ಸೂ.ಸು., ೧೦.೧೨೧
೨೩೨	೧೨	ಪಂಪರಾ., ೭.೯೮ ಸೂ.ಸು., ೧೦.೧೨೧
೨೩೪	೧	
೨೩೪	೨	
೨೩೪	೩	
೨೩೪	೪	
೨೩೪	೫	
೨೩೪	೬	
೨೩೫	೧	
೨೩೫	೨	
*೨೩೫	೩	ಗದಾಯು., ೫.೭
೨೩೧	೨	
೨೩೧	೩	
೨೩೧	೪	
೨೩೧	೫	
೨೩೧	೬	
೨೩೭	೫	
*೨೩೭	೬	ಕಾ.ಲೋ., ೩೯೩
*೨೩೮	೧	ಕಾ.ಲೋ.,೪೫೪
೨೩೮	೨	ಕಾ.ಲೋ., ೮೭೯
೨೩೮	೩	
೨೩೮	೪	
೨೩೮	೫	
೨೩೮	೬	
೨೩೮	೭	
೨೩೮	೮	
*೨೩೮	೯	ಕಾ.ಲೋ., ೩೯೯
೨೩೯	೧	
*೨೩೯	೨	ಕಾ.ಲೋ., ೯
೨೩೯	೩	
೨೩೯	೪	
೨೪೦	೧	
೨೪೦	೨	
೨೪೦	೩	
೨೪೦	೪	
*೨೪೦	೫	ಕಾ.ಲೋ. ೪೦೪
೨೪೦	೬	
೨೪೧	೧	
೨೪೧	೨	
೨೪೧	೩	ಸೂ.ಸು., ೧೮.೧೪

೨೩೫	೪	
೨೩೫	೫	
*೨೩೫	೬	ಗದಾಯು., ೫.೧೮
೨೩೫	೭	
೨೩೬	೧	ಸೂ.ಸು., ೭.೨೭
೨೩೬	೨	ಸೂ.ಸು., ೧೦.೧೪೮
೨೩೬	೩	ರಸರ., ೧.೨೮
೨೩೬	೪	
*೨೩೭	೧	ಕಾ.ಲೋ., ೩೯೫
೨೩೭	೨	ಕಾ.ಲೋ., ೩೯೬
೨೩೭	೩	
೨೩೭	೪	
೨೪೩	೪	
೨೪೩	೫	ಕಾ.ಲೋ., ೮೭೯
೨೪೩	೬	
೨೪೩	೭	
೨೪೩	೮	ಛಂದೋಂ
೨೪೩	೯	
*೨೪೩	೧೦	ವಿಕ್ರಮಾ., ೩.೧೨
೨೪೩	೧೧	
೨೪೪	೧	ಸೂ.ಸು., ೧೮.೧೪
೨೪೫	೧	
೨೪೫	೨	
*೨೪೫	೩	ಕಾ.ಲೋ., ೩೧೪
*೨೪೫	೪	ಕಾ.ಲೋ., ೪೧೨
೨೪೫	೫	
೨೪೫	೬	
*೨೪೫	೭	ಆದಿಪು., ೯.೧೩೨; ಕಾ.ಲೋ., ೧೮೭
*೨೪೬	೧	ಕಾ.ಲೋ., ೪೧೩
*೨೪೬	೨	ಕಾ.ಲೋ., ೪೧೩
೨೪೭	೧	
*೨೪೧	೪	ಕಾ.ಲೋ., ೪೦೨
*೨೪೧	೫	ಆದಿಪು., ೧.೨೪
*೨೪೧	೬	ಕಾ.ಲೋ., ೪೧೬
*೨೪೧	೭	ಕಾ.ಲೋ., ೨೯೪
೨೪೨	೧	
೨೪೨	೨	
೨೪೨	೩	
೨೪೨	೪	
೨೪೨	೫	
೨೪೩	೧	
೨೪೩	೨	
೨೪೩	೩	ಕಾ.ಲೋ., ೫೨
೨೪೯	೨	
*೨೪೯	೩	ಕಾ.ಲೋ., ೩೮೦
*೨೪೯	೪	ವಿಕ್ರಮಾ., ೬.೪೦
೨೪೯	೫	
೨೪೯	೬	
೨೪೯	೭	
೨೪೯	೮	
೨೪೯	೯	
೨೪೯	೧೦	
೨೪೯	೧೧	
೨೪೯	೧೨	
೨೫೦	೧	
೨೫೦	೨	ವಿಕ್ರಮಾ., ೫.೧೦೫
೨೫೦	೩	
೨೫೦	೪	
೨೫೦	೫	ಸೂ.ಸು., ೧೦.೧೪೮
೨೫೦	೬	ಸೂ.ಸು., ೧೩.೬
೨೫೦	೭	
*೫೧	೧	

೨೪೭ ೨
*೨೪೭ ೩ ಕಾ.ಲೋ., ೪೦೯
*೨೪೭ ೪ ಕಾ.ಲೋ., ೪೦೯
೨೪೭ ೫
೨೪೭ ೬
೨೪೭ ೭
೨೪೮ ೧
೨೪೮ ೨
೨೪೮ ೩
೨೪೮ ೪
೨೪೮ ೫
೨೪೮ ೬
೨೪೮ ೭
೨೪೮ ೮
೨೪೮ ೯
೨೪೪ ೧೦
೨೪೯ ೧
೨೫೨ ೧೨
೨೫೨ ೧೩
*೨೫೨ ೧೪ ಕಾ.ಲೋ., ೪೪೮
೨೫೨ ೧೫
೨೫೨ ೧೬
೨೫೨ ೧೭
೨೫೩ ೧
೨೫೩ ೨
೨೫೩ ೩ ಪುಷ್ಪದಂ., ೮.೮೧
೨೫೩ ೪
೨೫೩ ೫
೨೫೩ ೬ ಕಾ.ಲೋ., ೪೮
೨೫೩ ೭
೨೫೩ ೮

೨೫೧ ೨
೨೫೧ ೩
೨೫೧ ೪
೨೫೧ ೫
೨೫೧ ೬
೨೫೧ ೭
೨೫೨ ೧
೨೫೨ ೨
೨೫೨ ೩
೨೫೨ ೪
೨೫೨ ೫
೨೫೨ ೬
೨೫೨ ೭
೨೫೨ ೮
೨೫೨ ೯
*೨೫೨ ೧೦ ಗದಾಯು., ೪.೪೭
೨೫೨ ೧೧
೨೫೭ ೫ ಕಾ.ಲೋ., ೪೧೦
೨೫೭ ೬
೨೫೭ ೭
೨೫೭ ೮
೨೫೯ ೧
೨೫೯ ೨ ಸೂ.ಸು., ೩.೯೪
೨೫೯ ೩
೨೬೦ ೧ ಕಾದಂ. [ಪೂ], ೮೦
*೨೬೦ ೨ ಕಾದಂ. [ಪೂ], ೨೭೫
೨೭೫ ೧
೨೭೫ ೨
೩೦೪ ೧ { [ಹಂಸರಾಜ] ಕಾ.ಲೋ., ೨೮೪
೩೧೩ ೧ ಸೂ.ಸು., ೩.೧೩೩
೩೧೩ ೨ ಸೂ.ಸು., ೧೪.೯

೨೫೩ ೯
೨೫೪ ೧
೨೫೪ ೨
೨೫೪ ೩ ಕಾ.ಲೋ., ೪೦೧
೨೫೪ ೪
೨೫೫ ೧ ಸೂ.ಸು., ೫.೫
*೨೫೫
೨೫೫ ೨
೨೫೫ ೪
೨೫೫ ೫
೨೫೫ ೬
೨೫೬ ೧
೨೫೬ ೨
೨೫೬ ೩
೨೫೬ ೪
*೨೫೬ ೫ ಗದಾಯು., ೫.೨೦
೨೫೬ ೬
೨೫೬ ೭
೨೫೭ ೧
೨೫೭ ೨ ವಿಕ್ರಮಾ., ೯.೩೧
೨೫೭ ೩
*೨೫೭ ೪ ಶಾಂತಿಪು., ೮.೫೨

—ಎಸ್. ಶಿವಣ್ಣ

ಕಾವ್ಯಾವಲೋಕನ

ಮಾತೃಸಂಹಿತೆ, ಲೇಖಕರು ಮತ್ತು ಪ್ರಕಾಶಕರು : ಗುಂಡ್ಮಿ, ಚಂದ್ರಶೇಖರ ಐತಾಳ, ಪುಟ:೩೩, ಬೆಲೆ : ೩-೦೦, ೧೯೭೦

ಹಿಂದಿನ ಶರಣರ ವಚನಾಮೃತವನ್ನು ಸವಿದವರಿಗೆ ಇಂದಿನ ವಚನ ಸ್ರೋತವು ಸಪ್ಪೆಎನಿಸಿದರೆ ಆಶ್ಚರ್ಯವಿಲ್ಲ. ಯುಗಧರ್ಮ ಪ್ರತಿಯುಗದಲ್ಲೂ ತನಗೆ ಬೇಕಾದ ಒಂದೊಂದೇ ಸಾಹಿತ್ಯ ಪ್ರಕಾರಕ್ಕೆ ಉನ್ನತ ಗಿರಿಯನ್ನೇರಲು ಅವಕಾಶ ಮಾಡಿಕೊಡುತ್ತದೆ. ಅಂತೆಯೆ ೧೨ನೆಯ ಶ.ದ ವಚನ ವಾಙ್ಮಯವು ತನ್ನ ಶ್ರೀರೋಹಣ ಗಿರಿಯನ್ನೇರಿ ಮುಗಿಯಿತು. ಇಂದಿನ ವಚನ ಸಾಹಿತ್ಯ ಆ ಗತ ಕಾಲದ ವೈಭವದ ಗುರುತು ಅಷ್ಟೆ.

ಪ್ರೊ. ಎಸ್.ವಿ. ಪರಮೇಶ್ವರಭಟ್ಟರ ಮುನ್ನುಡಿಯನ್ನೊಳಗೊಂಡ ಗುಂಡ್ಮಿ ಚಂದ್ರಶೇಖರ ಐತಾಳರ "ಮಾತೃಸಂಹಿತೆ" ನೂರ ಒಂದು ವಚನಗಳನ್ನುಳ್ಳ ನವ್ಯ ವಚನ ಸಂಕಲನ. ಪ್ರತಿವಚನದಲ್ಲಿಯೂ "ತಿಂಗಳ ಮುಡಿದವನೆ" ಎಂಬ ಅಂಕಿತವಿದೆ.

ಪರವೂರಿಗೆ ವಿದ್ಯಾಭ್ಯಾಸಕ್ಕಾಗಿ ಬಂದ ವಚನಕಾರರು ದೂರದ ತಾಯಿಯನ್ನು ನೆನೆನೆನೆದು, ಆಕೆಯ ತ್ಯಾಗ, ಅನುಪಮ ಪ್ರೇಮ ಪ್ರೀತಿ ವಾತ್ಸಲ್ಯ, ಕರುಣೆಯನ್ನು ಕುರಿತು ನಾನಾವಿಧವಾಗಿ ಹಾಡಿಹೊಗಳಿದ್ದಾರೆ. ಹೀಗೆ ತಾಯಿ ಮತ್ತು ಮಗುವಿನ ನಡುವಿನ ವಾತ್ಸಲ್ಯ ಸಂಬಂಧವೇ ಇಲ್ಲಿ ವಸ್ತು.

ಈ ವಾತ್ಸಲ್ಯಭಾವ ಹರಿದಾಸರ ಕೀರ್ತನೆಗಳಲ್ಲಿ, ಶರಣರ ವಚನಗಳಲ್ಲಿ ಪುಟದಿದೆ. ಅಲ್ಲಿ ಇದು ದೇವ ಮತ್ತು ಭಕ್ತನ ನಡುವೆ ಸೇತುವೆಯನ್ನು ರಚಿಸಿತು; ಆದರೆ ಇಲ್ಲಿ ತಾಯಿ ಮತ್ತು ಮಗುವಿನ ನಡುವೆ ರಚಿಸಿದೆ. ಅಲ್ಲಿ ಭಕ್ತರು ಮಹಾಶಕ್ತಿಗೆ ಶರಣು ಹೋಗಿರುವುದರಿಂದ, ಮಹಾಮಾತೆಯ ಮರೆಹೋಗಿರುವುದರಿಂದ ಅವರ ಕ್ಷೇತ್ರ ವಿಶಾಲವಾಯಿತು. ಒಮ್ಮೆ ಪಶು, ಪಶುಪತಿ ಭಾವದಿಂದ; ಮತ್ತೊಮ್ಮೆ ಆಳು, ಆಳ್ದನ ಭಾವದಿಂದ; ಮಗುದೊಮ್ಮೆ ಸತಿಪತಿ ಭಾವದಿಂದ; ಇನ್ನೊಮ್ಮೆ ನರನಾರಾಯಣರ ಸಖ್ಯ ಭಾವದಿಂದ—ಹೀಗೆ ಅನೇಕ ಭಾವಗಳಿಂದ ಹಾಡಿ ಹೊಗಳಿದ್ದಾರೆ. ಆದರೆ ಈ ವಚನ ಸಂಕಲನದಲ್ಲಿ ಅಷ್ಟು ವಿಶಾಲವಾದ ಕ್ಷೇತ್ರ ದೊರೆಯಲಿಲ್ಲ. ತಾಯಿ—ಮಗುವಿನ ಸಂಬಂಧ ಲೌಕಿಕ ವಲಯದಲ್ಲೆ ಉಳಿದದ್ದರಿಂದ ಅದರ ಕ್ಷೇತ್ರ ಸೀಮಿತವಾಯಿತು. ಇದರಿಂದ ಬಸವ, ಅಲ್ಲಮ, ಅಕ್ಕಗಳಲ್ಲಿ ಬರುವ ನಾನಾಮುಖತೆ, ಜೀವನಾನುಭವ, ಭಾವಸಾಂದ್ರತೆ,

ಸಂಕೀರ್ಣತೆಗಳು ಇಲ್ಲಿಲ್ಲ. ಆ ಭವ್ಯ ಕಲ್ಪನೆಗಳು, ರೂಪಕಗಳು, ಪ್ರತಿಮೆಗಳು, ಉಪಮೆಗಳು ಈ ವಚನಗಳಲ್ಲಿಲ್ಲ. ಈ ಕಾವ್ಯ ಶೋಭಾಕರ ಗುಣ ಅಲಂಕಾರಗಳಿಲ್ಲದೆ ಕಾವ್ಯ ಶೋಭಿಸುವುದಾದರೂ ಹೇಗೆ?

ಐತಾಳರೇ ಹೇಳಿಕೊಂಡಿರುವಂತೆ—ಅವರು ತಾಯಂದಿರಲಿ ಕಂಡ ವಾತ್ಸಲ್ಯದನುಭಾವವನ್ನು ಒದ್ದಾಡಡದೆ ಇಟ್ಟಿದ್ದಾರೆ. ಅಂದರೆ ವಾತ್ಸಲ್ಯ ಭಾವವೇ ಪ್ರಧಾನ, ಅದೇ ಸ್ಥಾಯಿಭಾವ. ಆದರೆ ಆ ಸ್ಥಾಯಿಭಾವವು ವಾಸ್ತವವಾಗಿ ನಿಜಜೀವನದಲ್ಲಿ ಅಲ್ಲಲ್ಲೆ ಬಣ್ಣ ಬದಲಾವಣೆಯನ್ನು ಪಡೆಯುತ್ತದೆ, ಸ್ಥಾಯಿಭಾವದ ಮೇಲೆ ಬಂದು ಹೋಗುವ ನಿರ್ವೇದ, ಗ್ಲಾನಿ, ಶಂಕೆ ಇತ್ಯಾದಿ ಸಂಚಾರಿಭಾವಗಳ ದೆಸೆಯಿಂದ. ಕೆಲವು ವೇಳೆ ಬೇರೆ ಸ್ಥಾಯಿಭಾವಗಳೇ ಪ್ರಧಾನವಾದ ಸ್ಥಾಯಿಯನ್ನು ಬುಡಮೇಲು ಮಾಡುವಷ್ಟರಮಟ್ಟಿಗೆ ಬರುವುದೂ ಉಂಟು. ಅಂದರೆ ಭಾವಗಳ ಘರ್ಷಣೆ ಆಗುತ್ತಲೇ ಇರುತ್ತದೆ. ಇದು ಕಾವ್ಯದಲ್ಲಿ ಚಿತ್ರಿತವಾದಾಗ, ಕಾವ್ಯಲಹರಿಯ ಏರಿಳಿತ ಉಂಟಾಗುತ್ತದೆ, ಸಂಕೀರ್ಣತೆಯುಂಟಾಗುತ್ತದೆ. ಈ ವೈವರ್ಣ್ಯದಿಂದ ಕಾವ್ಯಕನ್ಯೆಯ ಮುಖ ಕೆಂಪಾಗುವುದನ್ನು ನೋಡಲು ಬಲುಚಂದ.

ಅಂಥ ಸೌಂದರ್ಯಕ್ಕೆ ಪ್ರಸ್ತುತ ಅವಕಾಶ ಕಡಿಮೆ. ಹಾಗೆ ಅಪರೂಪಕ್ಕೆ ಬಂದ ವಚನಗಳು ಚೆನ್ನಾಗಿಯೇ ಇವೆ. ಉದಾ—

ದೇವರು ದೇವರು ಎಂದೇಕೆ ಜೋತು ಬೀಳುವರೋ
ಸಂಕಟದಲೊಂದು ಹನಿಕಂಬನಿಯನೂ ಕಾಣದ ಕಗ್ಗಲ್ಲ ದೇವರೆನ್ನುವರು
ನಿಮ್ಮ ನಿಮ್ಮ ಅಮ್ಮ ನಿಮ್ಮ ನಿಮ್ಮ ಬ್ರಹ್ಮ.

ಇಲ್ಲಿ ವಚನಕಾರರು, ಮಾತೃದೇವತೆ ಎದುರಿಗಿದ್ದರೂ ಕಡೆಗಣಿಸಿ ಕಲ್ಲು ದೇವರನ್ನು ಪೂಜಿಸಹೋಗುವವರನ್ನು ಬೈದು, ಕೋಪಿಸಿ ಆಡಿದ್ದಾರೆ.

ಕೆಲವು ಮಾತುಗಳು ಕೇವಲ ಉದ್ಗಾರಗಳಾಗಿ, ತಾಯಿಯ ಬಗ್ಗೆ ವಕಾಲತ್ತು ವಹಿಸಿ, ಮಾತಾಡಿದಂತೆ ಭಾಸವಾಗುತ್ತದೆ. ಉದಾ—

"ತಾಯ ವಾತ್ಸಲ್ಯಕ್ಕೆ ಅನುಪಮವೇ ಉಪಮೆಯೆ?"
"ತಾಯ ಕಂಬನಿಯು ಒಂದೊಂದು ಅಂಬುಧಿಯ ತೂಕ"
"ಸ್ವಂತ ಮಕ್ಕಳನು ಎಲ್ಲರೂ ಮುದ್ದಿಸುವರು
ಎಲ್ಲ ಮಕ್ಕಳನು ತಾಯಿ ಮಾತ್ರ ಮುದ್ದಿಸಿಯಾಳು"

—ಈ ಮುಂತಾದ ಮಾತುಗಳು ಮಾತುಗಳಾಗಿ ಉಳಿಯುತ್ತವೆಯೇ ಹೊರತು ಅನುಭವವನ್ನು ಹೊತ್ತು ತರುವುದಿಲ್ಲ.

ಆದರೆ ಮತ್ತೆ ಕೆಲವು ಮಾತು ಅರ್ಥಪರಂಪರೆಗೇ ಕಾರಣವಾಗುತ್ತವೆ. ಅವು, ಒಂದೊಂದೂ ಓದಿದವರ ಮನದಲ್ಲಿ ಬಹುಕಾಲ ಉಳಿಯುವಂಥ ಸೂತ್ರಪ್ರಾಯವಾದ ಮಾತುಗಳು. ಉದಾ:

"ಹಸುವಿನ ಮೈಯೆಲ್ಲ ರಕ್ತದಿಂದ ನೆನೆದಿತ್ತು......
ಅದರ ನೆರಳಿನಲಿ ಆ ಎಳಗರು ತಾಯ ಮೊಲೆ ಕುಡಿದಿತ್ತು."
"ಹೆಣ್ತನದ ಹಣ್ಣು ತಾಯಿ, ವಾತ್ಸಲ್ಯ ದೇವತೆಗೆ ಹಣ್ಣುಕಾಯಿ"
"ತಾನೆಲ್ಲೆಲ್ಲಿಯೂ ಇರಲಾರನೆಂದು, ತಾಯಂದಿರನು ತಂದನೀ ಲೋಕಕ್ಕೆ."
"ಕೊಳೆಯಾದರೆ ತೊಳೆಯುವಳು, ಹಸಿವಾದರೆ ಹೊರೆಯುವಳು"
"ಹೆತ್ತ ಹೊಟ್ಟೆಗೆ ಪೆಟ್ಟಾಗದಂತೆ ಆಚರಿಸು."
"ಕಣಕಣವು ಮಣಿಯುವುದು ತಾಯಡಿಯ ಹುಡಿಗೆ
ಸಾವಿರಾರು ಪುಟ ಹೇಳುವ ವಾತ್ಸಲ್ಯವನು ಅವಳ ಬೆರಳುಗಳು ತಿಳಿಸಿದವು."

ತಾಯ ತ್ಯಾಗವು ದೊಡ್ಡದು, ಎಂದು ಅನೇಕ ವಚನಗಳ ಮೂಲಕ ಹೇಳಲು ಪ್ರಯತ್ನಿಸಿದ್ದಾರೆ. ಒಂದು ವಚನದಲ್ಲಿ—

ಅಮ್ಮ ತನ್ನ ಕಂದನ ಸುಖಕಾಗಿ
ಕಹಿಮದ್ದು ಕುಡಿದಳಂತೆ

ಎಂದು ಹೇಳುತ್ತಾರೆ. ಮತ್ತೊಂದು ದೀರ್ಘವಚನದಲ್ಲಿ (86) ತಾವು ಆಕೆಯ ಮಾತುಮೀರಿ ಬಯಲಾಟ ನೋಡಲು ಹೋದುದು, ಅಮ್ಮ ದೀಪಹಚ್ಚಿ ಇವರಿಗಾಗಿ ಕಾದು ಕುಳಿತಿದ್ದನ್ನು ಹೇಳುತ್ತಾರೆ. ಇನ್ನೊಂದು ವಚನದಲ್ಲಿ (88) ಪರೀಕ್ಷೆಯಲ್ಲಿ ಫೇಲಾದ ತಮ್ಮ ಆತ್ಮಹತ್ಯೆ ಮಾಡಿಕೊಳ್ಳುವೆನೆಂದೆನ್ನಲು "ಅಮ್ಮನಿಗೆ ರಾತ್ರಿ ಎಂದಿಲ್ಲದ ಎಚ್ಚರ"—ಎನ್ನುತ್ತಾರೆ. ಮುಗುದೊಂದು (55) ವಚನದಲ್ಲಿ ಊರಿಂದೂರಿಗೇ ಬರಗಾಲ ಬಡಿದಿರುವಾಗ, ರೊಕ್ಕಕ್ಕೆ ಅಕ್ಕಿ ಸಿಗದ ಕಾಲದಲ್ಲಿ ಎಲ್ಲರಿಗೂ ಉಣಬಡಿಸಿ ಅಮ್ಮ ಉಪವಾಸವಿದ್ದುದನ್ನು ಹೇಳುತ್ತಾರೆ.

ಇಷ್ಟು ವಚನಗಳಲ್ಲಿ ಹೇಳಿದರೂ ಆಗದ ಪ್ರಭಾವ ಜನಪದ ಕವಿಯ ಒಂದು ತ್ರಿಪದಿಯಲ್ಲಿ ಆಗುತ್ತದೆ :

ಅರಗಿನಂಥ ತಾಯಿ ಮರದಂಥ ಮಕ್ಕಳು
ಕರಗಿದರೆ ಬೆಣ್ಣೆ ತಿಳಿದುಪ್ಪದಂಥಕ್ಕ
ಕರಗಂಥ ತಾಯಿ ಇರಬೇಕ

ಈ ತ್ರಿಪದಿಯ ಅರ್ಥವು ಹಿಗ್ಗಲಿಸಿದಷ್ಟೂ ಹಿಗ್ಗುತ್ತದೆ. ತಾಯಿ ಅರಗಿನಂತೆ ಮಕ್ಕಳನ್ನು ಕಂಡರೆ ಕರಗಿ ಬಿಡುತ್ತಾಳೆ. ತಾನು ಕರಗಿ ಮಕ್ಕಳಿಗೆ ತಿಳಿದುಪ್ಪವಾಗುತ್ತಾಳೆ, ಬೆಣ್ಣೆಯಾಗುತ್ತಾಳೆ. ಇದ್ದರೆ ಕರಗುವಂಥ ತಾಯಿ ಇರಬೇಕು. ಇದರ ಅರ್ಥವ್ಯಾಪ್ತಿಗೆ, ಅನುಭವದೀಪ್ತಿಗೆ ಕಾರಣ ಅದರ ಉಪಮೆ.

ಈ ವಚನಗಳು ಹೆಚ್ಚಾಗಿ ಬುದ್ಧಿಪ್ರಧಾನವಾಗಿವೆ. ಇದಕ್ಕೆ, ಒಳ್ಳೆಯ

ಉದಾಹರಣೆ :

ದೇವವಾಣಿ ತಾಯಿಯನು 'ಮಾತೃ' ಎಂದು ಕರೆಯಿತು
ನನ್ನ ತಾಯಿನುಡಿ 'ಅಮ್ಮ' ಎಂದಿತು.
ಜಗದ ಮಹಾಭಾಷೆಗಳಲೆಲ್ಲ ತಾಯಿ 'ಮ' ಸಹಿತ.

ಇಲ್ಲಿ ಸಂಶೋಧನಾ ಪ್ರವೃತ್ತಿಯನ್ನು ಕಾಣುತ್ತೇವೆ. ಕವಿಗಳಿಗೆ ಜಗದ ಎಲ್ಲ ಭಾಷೆಗಳಲ್ಲಿಯೂ 'ತಾಯಿ' ಸಂಬೋಧನೆಯ ಶಬ್ದಗಳಲ್ಲಿ 'ಮ' ಬರುವುದನ್ನು ಗುರುತಿಸುವ ಆತುರ ಇದೆ.

ಇನ್ನು ಭಾಷೆಯ ದೃಷ್ಟಿಯಿಂದ ಹೇಳುವುದಾದರೆ, ಶ್ರೀ ಎಸ್.ವಿ. ಪರಮೇಶ್ವರ ಭಟ್ಟರೇ ಹೇಳಿರುವಂತೆ ಅದು ತುಂಬ ಸರಳ, ತುಂಬ ನೇರ. ಭಾಷೆ ಭಾವನೆಗಳ ವಿದ್ಯುದಾಲಿಂಗನವಾಗಿಲ್ಲ; ಎರಡೂ ಪ್ರತ್ಯೇಕವಾಗಿ ಉಳಿಯುತ್ತವೆ. ಬುದ್ಧಿಪೂರ್ವಕವಾಗಿ ಶಬ್ದಗಳ ಬಳಕೆಯಿದೆ. ಅರ್ಥಮಾಡಿಕೊಳ್ಳಲು ತಿಣುಕ ಬೇಕಾಗಿಲ್ಲ.

ಇವರ ವಚನಗಳನ್ನು ಘಟನಾತ್ಮಕ ವಚನಗಳೆನ್ನಬಹುದು. ಘಟನೆಯ ವಿವರಣೆಯ ಮೂಲಕ, ತಾಯಿಯ ವಾತ್ಸಲ್ಯದ ಅರಿವನ್ನು ಓದುಗನಿಗೆ ಉಂಟು ಮಾಡುವುದೆ ಇವರ ತಂತ್ರ. ಉದಾ—(ವ: 35) ತಾವು ಪರವೂರಿಗೆ ಹೊರಟಾಗ, ಮನೆಯ ಮಡದಿ, ತಂಗಿ, ಅಣ್ಣ, ತಂದೆ—ಹೀಗೆ ಒಬ್ಬೊಬ್ಬರು ಒಂದೊಂದು ಆಡುವರು. ಮಡದಿ ಎಂದು ಬರುವಿರೆಂದೂ; ತಂಗಿ ಏನು ತರುವಿ ಎಂದೂ; ಅಣ್ಣ 'ಎಷ್ಟು ತರುವಿ' ಎಂದೂ; ತಂಗಿ, ತಿಂಗಳು ತಿಂಗಳಿಗೆ ಹಣಕ್ಕೆ ತೊಂದರೆಗೊಳಿಸದಿರೆಂದೂ—ಎಚ್ಚರಿಸುವರು. ಆದರೆ ತಾಯಿಯು ಗದ್ಗದಗೊಂಡು ಕಂಬನಿದುಂಬಿ ತಬ್ಬಿ, ತುಂಬುತೋಳಲಿ ತಂಬಿಗೆಯ ತುಂಬ ತಂಬ್ಹಾಲುತಂದು "ಕುಡಿಕಂದ; ಹೋದಲ್ಲಿ ಹಾಲುಹರಿಯಲಿ"—ಎಂದು ಹರಸುತ್ತಾಳೆ.

ಈ ರೀತಿಯ ತಂತ್ರ ವಚನವನ್ನು ಅನವಶ್ಯಕವಾಗಿ ಲಂಬಿಸುತ್ತದೆ; ಭಾವ ಸಾಂದ್ರತೆಯನ್ನು ಕಡಿಮೆ ಮಾಡುತ್ತದೆ. "ಮಡದಿ ಅಂದಳು", "ಅಣ್ಣನೆಂದ" "ತಂದೆ ಎಂದರು"—ಇತ್ಯಾದಿ ಮಾತುಗಳು ವಚನದ ಬಿಗಿ ಬಂಧವನ್ನು ಸಡಿಲಗೊಳಿಸುತ್ತವೆ, ನೀರಸಗೈಯುತ್ತವೆ. ಆದರೆ ನಿರೂಪಣೆಯ ಈ ಕೊರತೆಯನ್ನು ಮತ್ತೆ ಕೆಲವು ಮಾತುಗಳು ತುಂಬಿ ಕೊಡುತ್ತವೆ. ಉದಾಹರಣೆ—ಎಂದು ಬರುವಿರೆಂದು, ಏನು ತರುವಿರೆಂದು. ಈ ಮಾತುಗಳು ಆವರವರ ಮನೋಧರ್ಮ ಹೇಳುತ್ತವೆ. ಈ ಎಲ್ಲರ ಮಾತುಗಳನ್ನು ನಮೂದಿಸಿದ ಅನಂತರ ತಾಯಿಯ ಹಾರೈಕೆಯನ್ನು ಹೇಳುವುದು ಬುದ್ಧಿಪೂರ್ವಕವಾಗಿದೆ. ಇಲ್ಲಿ ತಾಯಿಯ ಭಾವನೆಗೂ, ಇತರರ ಭಾವನೆಗೂ ಇರುವ ಅಂತರವನ್ನು ಅರಿಯಬೇಕು, ತುಲನೆ ಮಾಡಬೇಕು ಎಂಬುದೇ ವಚನಕಾರರ ಉದ್ದೇಶ. ತಾಯಿಯ ಪ್ರೀತಿಯೇ ಪ್ರೀತಿ. ಎಲ್ಲರದಕ್ಕೂ ಹೆಚ್ಚು ಎಂದು ತೋರಿಸಲೋಸುಗ ಆಕೆಯ ವರ್ತನೆಯನ್ನು ಹೇಳಿದ್ದಾರೆ. ಇದು ಸ್ವಲ್ಪ ಮಟ್ಟಿಗೆ ವಚನಕಾರರ ಉದ್ದೇಶವನ್ನು ನೆರವೇರಿಸಿದೆ.

“ ತುಂಬು ತೋಳಲಿ ತಂಬಿಗೆಯ ತುಂಬ ತಂಬ್ಹಾಲು ತಂದು........ಕುಡಿ ಕಂಡ ಹೋದಲ್ಲಿ ಹಾಲು ಹರಿಯಲಿ ”—ಎಂಬ ಮಾತು ಬಹು ಸಹಜಸುಂದರ. ಈ ಸೊಗಸಿಗೆ ಕಾರಣ ಇಲ್ಲಿಯ ಅನುಪ್ರಾಸ.

ಕೆಲವು ಬಹು ನೀರಸವಾದ ವಚನಗಳಿವೆ. ಉದಾ: (46). ಅಧಿಕಾರಿಯೊಬ್ಬನ ತಾಯಿ ಸತ್ತಿರಲು ಎಲ್ಲರೂ ಶೋಕಿಸಿದರೂ ಅಧಿಕಾರಿಗಳಿಗೆ ಮಾತ್ರ ಕಣ್ಣೀರು ಬರಲಿಲ್ಲ. ಆದರೆ ಅನಂತರ ಮನೆಗೆ ಮರಳಿದಾಗ ಎಂದಿನಂತೆ “ ಬಂದೆಯಾ ಮಗು ”—ಎಂಬ ತಾಯಿಯಿನ್ನಿಲ್ಲವೆಂದು ಬಿಕ್ಕಿಬಿಕ್ಕಿ ಅತ್ತರು. ಇಲ್ಲಿ ವಸ್ತು ವಕ್ರತೆಯಿದೆ. ಬಹು ಕೊಮಲ ಭಾವನೆ. ಆದರೆ ಅವರ ಶೈಲಿ ಆ ಭಾವನೆಯನ್ನು ಸಮರ್ಥವಾಗಿ ವ್ಯಕ್ತಪಡಿಸಲಾರದೆ ಹೋಗಿದೆ:

....
ಮನೆಗೆ ಮರಳಿದರು
ನಿತ್ಯವೂ ದಾಟುವ ಹೊಸ್ತಿಲ ದಾಟ ಒಳಗೆ ಬಂದರು
ಬಿಕ್ಕಿಬಿಕ್ಕಿ ಮಗುವಿನಂತೆ ಅತ್ತರು
ಓ ತಿಂಗಳ ಮುಡಿದವನೆ
ಅವರಂದು ಅತ್ತರು, ಮನೆಗೆ ಮರಳಿದಂದು,
ನಿತ್ಯವೂ ಆ ಹೊತ್ತು “ ಬಂದೆಯಾ ಮಗು ”
ಎಂದು ಸ್ವಾಗತ ಬಯಸುವ ತಾಯಿ ತಮಗಿಲ್ಲವೆಂದು!

ನಿತ್ಯವೂ ದಾಟುವ ಹೊಸ್ತಿಲು, ಅವರಂದು, ನಿತ್ಯವೂ ಆ ಹೊತ್ತು—ಇತ್ಯಾದಿ ಶಬ್ದಗಳು ಅಗತ್ಯವಿರಲಿಲ್ಲ. ಅವು ಕೇವಲ ವಿವರಣೆಗಳಾಗುತ್ತವೆ; ಮುಖ್ಯ ಉದ್ದೇಶಕ್ಕೆ ಪೋಷಕವಾಗಿಲ್ಲ.

ಕೆಲವು ವಚನಗಳು ಬಹು ಸೊಗಸಾಗಿವೆ—

ತಾಯಿ ಮೂಡಿದ ಅಡುಗೆ ಪರಮರುಚಿ ಇತ್ತು:
ಎಣ್ಣೆ ಇರಲಿ, ಬೆಣ್ಣೆ ಇರಲಿ,
ಇಲ್ಲದಿರೆ ತಣ್ಣೀರೇ ಇರಲಿ
ಬೇಯಿಸಿದುದೆಲ್ಲ ಭೋಜನವಾಗುತಿತ್ತು
ತಿಂಗಳ ಮುಡಿದವನೆ
ತಾಯ ವಾತ್ಸಲ್ಯದ ಒಗ್ಗರಣೆ ಅದಕ್ಕೆ ಸೇರುತ್ತಿತ್ತು

ಇದು ಒಂದು ಸುಂದರವಾದ ವಚನ. ಆಕೆ ಏನೇ ಮಾಡಲಿ, ಎಣ್ಣೆಯೋ ಬೆಣ್ಣೆಯೋ, “ ಬೇಯಿಸಿದುದೆಲ್ಲ ಭೋಜನವಾಗುತ್ತಿತ್ತು ”. ಈ ಮಾತಿನ ಸೊಗಸಿಗೆ ಕಾರಣ ಬಹುಶಃ ಅಲ್ಲಿರುವ ಭಾವತೀವ್ರತೆ ಮತ್ತು ಅದರಿಂದ ಅಪ್ರಜ್ಞಾಪೂರ್ವಕವಾಗಿ ಹೆಣೆದುಕೊಂಡ ಪ್ರಾಸ. ವಚನದ ಕೊನೆಯಲ್ಲಿ ಬರುವ “ ತಾಯ ವಾತ್ಸಲ್ಯದ ಒಗ್ಗರಣೆ ”—ಎಂಬ ಮಾತಂತೂ ವಚನಕ್ಕೆ ಕಳಶಪ್ರಾಯವಾಗಿದೆ.

ಒಗ್ಗರಣೆ, ಗಡಿಗೆಗಟ್ಟಲೆ ಸಾರಿಗೆ ಒಂದು ಚಮಚ : ಆದರೆ ಅದು ಗೊಡ್ಡುಸಾರಿಗೆ ಕಂಪು ಕೊಡುತ್ತದೆ.

ಇನ್ನು ನವ್ಯ ವಚನಸಾಹಿತ್ಯದಲ್ಲಿ ಇದರ ಸ್ಥಾನ ನಿರ್ದೇಶನ ಮಾಡುವುದಾದರೆ ಇದರ ವಚನಗಳು ಭಾವಗೀತಾತ್ಮಕವಾದ ಕುವೆಂಪು ಅವರ "ಕಿಂಕಿಣಿ" ಮತ್ತು ಬೇಂದ್ರೆಯವರ "ಕರುಳಿನ ವಚನ"ಗಳ ಗುಂಪಿಗೆ ಸೇರುವುದಿಲ್ಲ; ಆದರೆ ಟಿ. ಎಸ್. ಮಹದೇವಯ್ಯನವರ ವಚನಗಳು, ಎಸ್. ವಿ. ರಂಗಣ್ಣನವರ "ರಂಗ ಬಿನ್ನಪ" ಈ ವಚನಗಳ ಗುಂಪಿನೆಡೆಗೆ ವಾಲುತ್ತವೆ.

ನವ್ಯ ವಚನಗಳಲ್ಲಿ, ಬೇಂದ್ರೆಯವರ 'ಕರುಳಿನ ವಚನ'ಗಳಲ್ಲಿಯೂ ತಾಯಿ ಮತ್ತು ಮಗುವಿನ ನಡುವಿನ ವಾತ್ಸಲ್ಯ ಭಾವದ ಚಿತ್ರಣವಿದೆ. ಆದರೆ ಅಲ್ಲಿಯ ವಚನಗಳಿಗೂ ಇಲ್ಲಿಯ ವಚನಗಳಿಗೂ ಭಾಷೆ, ಶೈಲಿಗಳ ದೃಷ್ಟಿಯಿಂದ ಬಹು ವ್ಯತ್ಯಾಸವಿದೆ. ಇಲ್ಲಿ ವಾತ್ಸಲ್ಯಭಾವ ಮಗನ ಕಡೆಯಿಂದ ಹರಿದರೆ ಅಲ್ಲಿ ತಾಯಿಯ ಕಡೆಯಿಂದ ಹರಿದಿದೆ. ಅಲ್ಲಿ ಭಾಷೆ ಜನಪದ ಭಾಷೆ, ಅದು ವಾತ್ಸಲ್ಯದ ಸೊಗಡನ್ನು ತರುವಲ್ಲಿ ಸಮರ್ಥವಾಗಿದೆ. ಇದರ ಜೊತೆಗೆ ಅಲಂಕಾರಗಳೂ ಸೇರಿ ಕಾವ್ಯ ಸೌಂದರ್ಯ ವರ್ಧಿಸಿದೆ. ಆದರೆ "ಮಾತೃಸಂಹಿತೆ"ಯಲ್ಲಿ ಭಾಷೆ ನಾರಿಕತೆಯ ಸಾಣೆ ಹಿಡಿಯಲ್ಪಟ್ಟದೆ.

ಒಟ್ಟನಲ್ಲಿ ತಾಯಿಯನ್ನು, ಆಕೆಯ ವಾತ್ಸಲ್ಯವನ್ನು ಕುರಿತ ಇಂಥ ವಚನ ಸಂಕಲನ ಕನ್ನಡ ಸಾಹಿತ್ಯದಲ್ಲಿ ಬೇರೆ ಇಲ್ಲ ಎಂಬ ದೃಷ್ಟಿಯಿಂದ ಮಾತ್ರ ಇದು ವಿಶಿಷ್ಟ ಕೃತಿಯೇ ಹೊರತು ಕಾವ್ಯದ ದೃಷ್ಟಿಯಿಂದ ಅಲ್ಲ.

—ಕೆ. ಎಸ್. ಕುಮಾರಸ್ವಾಮಿ

ಸಕಲಜೀವಪ್ರೇಮಿ (ಪ್ರಬಂಧ ಸಂಕಲನ), ಲೇ :-'ಅಮರಾನಂದ' ಪ್ರ : ಚೆನ್ನಬಸಪ್ಪ ವಕೀಲ, ಬೆಟ್ಟದೂರು, ಮಾನ್ವಿತಾಲ್ಲೂಕು, ರಾಯಚೂರು ಜಿಲ್ಲೆ; ಪುಟ: ೮೪; ಬೆಲೆ: ೨—೦೦ ; ೧೯೬೯.

ಬಸವಣ್ಣನವರು 'ಸಕಲಜೀವಪ್ರೇಮಿ'ಯಾಗಿ ಹೇಗೆ ಮೆರೆದರೆಂಬುದನ್ನು ಶ್ರೀ 'ಅಮರಾನಂದ' ಅವರು ಹತ್ತು ಲೇಖನಗಳ ಮುಖಾಂತರ ಸಿದ್ಧಪಡಿಸಿ ಪ್ರಕಾಶ ಮಾಡಲು ಪ್ರಯತ್ನಿಸಿದ್ದಾರೆ. ಲೇಖಕರ ವಿಚಾರಶಕ್ತಿ ಆಕರ್ಷಕವಾಗಿದ್ದರೂ ಭಾಷಣಗಳ ಧಾಟಿಯಲ್ಲಿ ಬೆಳೆದಿರುವ ಎಲ್ಲ ಲೇಖನಗಳೂ ತುಂಬ ಆವೇಶಪೂರ್ಣವಾಗಿದ್ದು ಬಿರುಸಿನಿಂದ ಕೂಡಿವೆ.

ವಿಶೇಷವಾಗಿ ಬಸವಣ್ಣನವರನ್ನು ವಿಶ್ವಬಂಧುವನ್ನಾಗಿ ಹಾಗೂ ಅನನ್ಯ ಮಹಾ ಪುರುಷನನ್ನಾಗಿ ಚಿತ್ರಿಸುವ ಭರದಲ್ಲಿ ಕುಮಾರವ್ಯಾಸನಂಥ ಮಹಾ ಕವಿಯ ಮೇಲೂ ಹೇಗೆ ಬಸವಣ್ಣನವರ ವಚನಗಳ ವರ್ಚಸ್ಸು ಬಿದ್ದಿದೆ ಎಂಬುದನ್ನು ಪ್ರತಿಪಾದಿಸಲು ನಾನಾ ಕಾರಣಗಳನ್ನು ಕೊಟ್ಟದ್ದಾರೆ. ನಿದರ್ಶನಕ್ಕೆ 'ನಿನಗೆ ವೀರನಪೆ,' ಎಂಬ ನುಡಿ

ಯನ್ನು ಕುಮಾರವ್ಯಾಸ ' ಭಂಟನಹೆ ಭಕುತಂಗೆ ' ಎಂದೂ ' ಬೆಂದ ಹುಣ್ಣ ಕಂಬಿಯಲ್ಲಿ ಕೀಸುವರೆ ' ಎಂಬುದನ್ನು ' ಬೆಂದ ಹುಣ್ಣಲಿ ಸಾಸಿವೆಯು ಬಳಿಯದಿರು ' ಎಂದೂ ' ಬಾಯ ತಂಬುಲ ಮೆಲುವೆ ಬೀಳುಡೆಯ ಹೊದೆವೆ ' ಎಂಬುದನ್ನು ' ಬಾಯತಂಬುಲ ಬೀಳುಡೆಯ ಬಲದಿಂದ ಬದುಕುವೆವು ' ಎಂದೂ ಮಾರ್ಪಡಿಸಿಕೊಂಡು ಬಳಸಿದ್ದಾನೆ ಎಂದಿದ್ದಾರೆ; ಇಂಥ ಅನೇಕ ಸಾದೃಶ್ಯಗಳನ್ನು ಎತ್ತಿತೋರಿದ್ದಾರೆ. ಆದರೆ " ಇದರಿಂದ ಮಹಾಕವಿ ಕುಮಾರವ್ಯಾಸನ ಮೇಲೆ ಮಹಾನುಭಾವ ಬಸವಣ್ಣನವರ ಪ್ರಭಾವಮುದ್ರೆ ಅಚ್ಚಳಿಯದೆ ಉಳಿದಿದೆ " ಎಂದು ತೀರ್ಪು ಕೊಟ್ಟಿರುವುದು ಮಾತ್ರ ವಿಚಿತ್ರವಾಗಿದೆ. ವಾಸ್ತವವಾಗಿ ಮಹಾಕವಿಯೊಬ್ಬನು ಸಮಕಾಲೀನ ಜನಜೀವನದ ರೀತಿ ನೀತಿ ನಡಾವಳಿಗಳನ್ನು, ಗಾದೆ ಒಗಟು ನಾಣ್ಣುಡಿಗಳೇ ಮೊದಲಾದ ಜೀವಂತ ನುಡಿಗಟ್ಟನ್ನು ಔಚಿತ್ಯವರಿತು ತನ್ನ ಕಾವ್ಯಗಳಲ್ಲಿ ಬಳಸಿಕೊಳ್ಳುವುದು ಕಾವ್ಯಲೋಕಕ್ಕೇ ನಿತ್ಯವಾದ ಸತ್ಪರಿಪಾಠ. ವಚನಕಾರರೂ ಇದರಿಂದ ಹೊರತಾಗಿಲ್ಲ. ಜೊತೆಗೆ ಹಿಂದಿನ ಕವಿಗಳ ಪ್ರಭಾವ ಮುಂದಿನ ಕವಿಗಳ ಮೇಲೆ ಒಂದಿಲ್ಲೊಂದು ರೀತಿಯಲ್ಲಿ ಆಗುವುದೂ ಹೊಸ ಸಂಗತಿಯಲ್ಲ. ದೇವರ ದಾಸಿಮಯ್ಯನ ವಚನಗಳ ಪ್ರಭಾವ ಬಸವಣ್ಣ ಮೊದಲಾದ ಬಹುಮಂದಿ ಖ್ಯಾತ ವಚನಕಾರರ ಮೇಲೆ ನಿಚ್ಚಳವಾಗಿ ಆಗಿಲ್ಲವೆ? ಹೀಗೆಯೇ ದಾಸರ ಕೀರ್ತನೆಗಳಲ್ಲಿ ಕಾಣಬಹುದಾದರೂ ಅದೊಂದು ಅಪರಾಧ ಅಥವಾ ಮೊದಲಿಗರ ಮಹಾತ್ಮ್ಯೆಯನ್ನು ಪ್ರತಿಷ್ಠಾಪಿಸುವ ಸಾಧನವಾಗದು.

' ಬಸವಣ್ಣನವರ ಭಾಷೆ ' ಎಂಬ ಲೇಖನವಂತೂ ಬಹು ಭಿನ್ನಾಭಿಪ್ರಾಯಕ್ಕೆ ಸ್ವಾಗತ ನೀಡುವಂತಿದೆ. ಸುಪ್ರಸಿದ್ಧ ಸೂಕ್ತಿಯಾಗಿರುವ ' ಸತ್ಯಂವದ; ಧರ್ಮಂಚರ ' ಎಂಬುದನ್ನು ಇವರು " ಸಂಸ್ಕೃತ ಶಾಸ್ತ್ರಕಾರರ ಪ್ರಕಾರ ಸತ್ಯ ಕೇವಲ ನುಡಿಯುವುದಕ್ಕಾಗಿ ಮಾತ್ರ; ನಡೆಯುವುದಕ್ಕಾಗಿ ಅಲ್ಲ....ಸತ್ಯವನ್ನು ನುಡಿದು ಅದರಂತೆ ನಡೆಯಬಾರದೆಂಬುದೇ ಅವರ ಸ್ಪಷ್ಟ ಅಭಿಪ್ರಾಯವಾಗಿದೆ; ಅಲ್ಲ—ಸಿದ್ಧಾಂತವಾಗಿದೆ " ಎಂದು ವ್ಯಾಖ್ಯಾನಿಸಿರುವುದು ಒಂದು ನಿದರ್ಶನ. ಹೀಗೆಯೇ ' ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ' ಎಂಬ ಗೀತಾವಾಕ್ಯದ ಉದ್ದೇಶವನ್ನು ವಿವರಿಸುತ್ತ— " ನೀನು ಕರ್ಮವನ್ನು ಮಾತ್ರ ಮಾಡಲು ಅಧಿಕಾರವುಳ್ಳವನು, ಎಂದೆಂದಿಗೂ ಫಲವನ್ನು ಬಯಸಬೇಡ, ' ಎಂಬುದು ಗೀತೆಯ ಸುಪ್ರಸಿದ್ಧ ಮಾತು " ಎಂದು ಹೇಳಿ ಆ ಮಹಾಸೂಕ್ತಿಯ ಮೊನೆಯನ್ನೇ ತಪ್ಪಾಗಿ ಭಾವಿಸಿರುವುದಕ್ಕೆ ಸಾಕ್ಷಿ ನುಡಿದಿದ್ದಾರೆ.

ಕೊನೆಯಲ್ಲಿರುವ ' ಬಸವಗೀತೆ-ಭಗವದ್ಗೀತೆ " ಎಂಬ ಲೇಖನ ನಾನಾರೀತಿಯ ಮಿಥ್ಯಾರೋಪ ಹಾಗೂ ಅಪಗ್ರಹಣಗಳ ಗಣಿಯಾಗಿದೆ. ಸನಾತನ ಧರ್ಮ ಹಾಗೂ ಶಾಸ್ತ್ರಗ್ರಂಥಗಳ ಸುಪ್ರಸಿದ್ಧ ಸೂಕ್ತಿಗಳನ್ನು, ಪ್ರಹೇಳಿಕೆಗಳನ್ನು ಬುದ್ಧಿಯುಳ್ಳವರು, ಮಾತು ಬಲ್ಲವರು ಬೇಕಾದ ಹಾಗೆ ವ್ಯಾಖ್ಯಾನಮಾಡಬಹುದಾಗಿದೆ. ಪ್ರಕೃತ ಈ ಲೇಖಕರು ಭಗವದ್ಗೀತೆ ಹೇಗೆ ಮಾನವನಿಗೆ ಕೆಟ್ಟದ್ದನ್ನು ಬೋಧಿಸುತ್ತದೆ ಹಾಗೂ ಕಲ್ಯಾಣಮಾರಕವಾಗಿದೆಯೆಂಬುದನ್ನು ಸ್ಥಾಪಿಸಿರುವ ರೀತಿ ವಿನೂತನವೇ ಸರಿ. ನಿದರ್ಶನಕ್ಕೆಂದು ಒಂದೆರಡು

ಪ್ರಸಂಗಗಳನ್ನಷ್ಟೇ ಎತ್ತಿ ಬರೆಯಬಹುದು: "ಗೀತೆಯು ಭಕ್ತಿ ಜ್ಞಾನ ಕರ್ಮ.... ಆತ್ಮನ ಸ್ವರೂಪ, ಕರ್ಮದಲ್ಲಿ ಶ್ರದ್ಧೆ ಮೊದಲಾದ ಅನೇಕ ವಿಷಯಗಳನ್ನು ಹೇಳುವು ದಾದರೂ ಕಟ್ಟಕಡೆಗೆ ಪ್ರತಿಪಾದಿಸುವ ವಿಷಯವೊಂದೇ: ಯುದ್ಧಮಾಡು! ಕೊಲ್ಲು!!"

ತೀರ್ಮಾನ ನುಡಿಯುತ್ತ, "ಗೀತೆಗೂ ಬಸವಣ್ಣನವರ ವಚನಗಳಿಗೂ ಹೋಲಿಸುವುದೇ ತಪ್ಪು" ಎಂದು ಸೂಕ್ತವಾಗಿಯೆ ಹೇಳಿದ್ದಾರೆ. ಆದರೆ ಮುಂದು ವರಿದು, "ಗೀತೆ ಕೇವಲ ತರ್ಕದ ಆಧಾರದ ಮೇಲೆ ನಿಂತಿದೆ. ಬಸವಗೀತೆ ಲೋಕಾನುಭವ, ಸ್ವತಃ ಬಸವಣ್ಣನವರ ಅನುಭಾವದ ಆಧಾರದ ಮೇಲೆ ನಿಂತಿದೆ ....ಗೀತೆ ಕೊಲ್ಲುವುದೇ ಧರ್ಮ ಎಂದು ಹೇಳಿದರೆ ಬಸವಗೀತೆಯು ದಯೆಯೇ ಧರ್ಮದ ಮೂಲವೆಂದು ಸಾರುತ್ತದೆ..........." ಇತ್ಯಾದಿಯಾಗಿ ನಿರ್ಣಯಿಸಿರುವುದನ್ನು ಒಪ್ಪುವಂತಿಲ್ಲ. ಗೀತೆಯು ಪರಮೋದ್ದೇಶ ಹಿಂಸೆ ಮಾತ್ರ ವಾಗಿದ್ದರೆ ಪರಮ ಅಹಿಂಸಾವಾದಿ ಹಾಗೂ ಮಹಾಮಾನವತಾವಾದಿಯಾಗಿದ್ದ ಮಹಾತ್ಮ ಗಾಂಧಿಯವರೇಕೆ ಗೀತೆಯನ್ನು ಅಷ್ಟು ಮೆಚ್ಚಿ ಆಚರಿಸುತ್ತಿದ್ದರು?

ಪ್ರಾಚೀನಕಾಲದಿಂದಲೂ ಜನಮನದಲ್ಲಿ ಬೇರಿಳಿಸಿ ನಿಂತು, ದೃಢವಿಶ್ವಾಸ ಹಾಗೂ ನಂಬಿಕೆಗಳನ್ನು ಬೆಳೆಸಿರುವ ಧಾರ್ಮಿಕ ವಿಷಯಗಳನ್ನು ಕುರಿತ ಖಂಡನೆ ಮಂಡನೆ ಮಾಡುವ ಮೊದಲು ಮಾನ್ಯ ಲೇಖಕರೇ ಸೂಚಿಸಿರುವಂತೆ 'ನಿರ್ವಿಕಾರ ಮನಸ್ಸಿನಿಂದ, ಭಾವಶುದ್ಧಿಯಿಂದ' ತೌಲನಿಕ ಅಭ್ಯಾಸಮಾಡುವುದು, ಗುಣವಿದ್ದ ಕಡೆ ಹೃತ್ಪೂರ್ವಕವಾಗಿ ಮೆಚ್ಚಿ ಹೇಳಬೇಕಾದುದು ಸಹೃದಯನ ಪವಿತ್ರ ಧರ್ಮ. ಸ್ವಂತ ಧರ್ಮವನ್ನು ಹೊಗಳುತ್ತಿರುವಾಗ ಅನ್ಯಧರ್ಮವನ್ನು ತೆಗಳಲೇಬೇಕೆಂಬ ನಿಯಮವೇನಿಲ್ಲ. ನಿಷ್ಪಕ್ಷಪಾತವಾದ ವಿಮರ್ಶಕ ದೃಷ್ಟಿಯಿಂದ ವಿವೇಚಿಸುವುದರಲ್ಲಿ ತಪ್ಪೇನಿಲ್ಲವಾದರೂ ವಿಭಿನ್ನ ರೀತಿನೀತಿಗಳನ್ನು ಬೋಧಿಸಿ ಪ್ರತಿಪಾದಿಸುವಂಥ ಇಂಥ ಧಾರ್ಮಿಕ ಗ್ರಂಥಗಳನ್ನು ಒಂದರ ಪಕ್ಕದಲ್ಲೊಂದನ್ನಿರಿಸಿ ಅಲ್ಲಲ್ಲೇ ಎದ್ದು ಕಾಣುವ ನಾಲ್ಕಂಶಗಳನ್ನೆತ್ತಿಕೊಂಡು ಅವುಗಳ ತರತಮದ ನಿರ್ಣಯ ಮಾಡುವುದು ಅನಿವಾರ್ಯಕ್ರಮವೇನಲ್ಲ.

ಜಗತ್ತಿನ ಪ್ರತಿಯೊಂದು ಧರ್ಮದಲ್ಲೂ ಗುಣದೋಷಗಳನ್ನು ಕಾಣಬಹುದು. 'ಹಾವಿನ ಡೊಂಕು ಹುತ್ತಕ್ಕೆ ಸಸಿನ'; ನಂಬಿಕೆಯಿದ್ದಂತೆ ಧರ್ಮ.

—ಶ್ರೀನಂತ

ಶಿವಲಿಂಗಾರ್ಚನಾ ರಹಸ್ಯ, ಕರ್ತೃ: ಶ್ರೀ ಸ್ವಾಮಿ ವೀರಭದ್ರಶಿವಾಚಾರ್ಯರು; ಪ್ರಕಾಶನ: ಪರಮಾರ್ಥಧಾಮ, ಬೃಹನ್ಮಠ, ಹಲಗೂರು, ಮಂಡ್ಯ ಜಿಲ್ಲಾ, ಮೈಸೂರು ಪ್ರಾಂತ; ಪುಟಗಳು ೨೮೦ + ೨೮; ಬೆಲೆ: ಸಾಮಾನ್ಯಪ್ರತಿ ೩–೫೦, ಉತ್ತಮ ಪ್ರತಿ ೫–೦೦ ರೂ.ಗಳು.

ಈಗಾಗಲೇ 'ಶಿವೋಪಾಸನಾ ವಿವೇಕ'ವನ್ನು ಬರೆದಿರುವ ಶ್ರೀ ಸ್ವಾಮಿಜಿ ಯವರು ಅದರ ಉತ್ತರಾರ್ಧವೆನ್ನಬಹುದಾದ 'ಇಷ್ಟಲಿಂಗಾರ್ಚನಾ ರಹಸ್ಯ'ವನ್ನು

ಬರೆದು ಭಗವದ್ಭಕ್ತರಿಗೆ ಹಾಗೂ ಭಾರತೀಯ ಸಂಪ್ರದಾಯ ಮತ್ತು ಸಂಸ್ಕೃತಿ ಪ್ರಿಯರಿಗೆ ಉತ್ತಮ ಕಾಣಿಕೆ ಸಲ್ಲಿಸಿದ್ದಾರೆ.

"ಶಿವಪೂಜೆಯ ಬಗೆಗೆ ಅನೇಕ ಹೊತ್ತಿಗೆಗಳು ಪ್ರಕಟವಾಗಿವೆ. ಪೂಜಾ ಕ್ರಮಗಳು ಸಾಮಾನ್ಯವಾಗಿ ಒಂದೇ ಪ್ರಕಾರವಿರುವುದಿಲ್ಲ. ಧಾರ್ಮಿಕ ಕ್ಷೇತ್ರದಲ್ಲಿ ವೀರಶೈವಧರ್ಮವು ಒಂದು ಕ್ರಮಬದ್ಧವಾದ ಧರ್ಮವೆಂಬುದು ಒಂದೇ ಆಚಾರ ವಿಚಾರಗಳಿಂದ ತಿಳಿಯುವುದು. ಆದರೆ ಈಗ ನಮ್ಮಲ್ಲಿ ಇದರ ಕೊರತೆಯಿದೆ. ಇದಕ್ಕಾಗಿ ಪಂಡಿತರು ವಿಚಾರ ವಿನಿಮಯಮಾಡಿ ದಾರಿ ತೋರಬೇಕು" ಎಂಬ ಡಾ. ಶಿ. ಚೆ. ನಂದೀಮಠ ಅವರ ಅಭಿಪ್ರಾಯವು ಗಮನಾರ್ಹ. ಈ ಗ್ರಂಥದಲ್ಲಿ ಇಷ್ಟಲಿಂಗಾರ್ಚನಾ ರಹಸ್ಯ, ಶಿವಲಿಂಗಾರ್ಚನಾ ವಿಧಾನ; ಸಾಧನ-ಸಮನ್ವಯ ಮತ್ತು ಉಪಸಂಹಾರ ನಿತ್ಯಜೀವನ ಪ್ರಜ್ಞೆ—ಎಂಬ ಮೂರು ಪ್ರಕರಣಗಳಿವೆ.

ಪ್ರಾರಂಭದಲ್ಲಿ ಶ್ರೀಯವರು ಪಾಶುಪತ ಧರ್ಮಸ್ವರೂಪವನ್ನು ಸೂಕ್ಷ್ಮವಾಗಿ ವಿವೇಚಿಸಿ, ಇಷ್ಟಲಿಂಗಪೂಜೆಯ ಪೂರ್ವಾಂಗವಾಗಿ ಸಾಧಕನು ತಿಳಿದಿರಬೇಕಾದ ಅಂಶಗಳ ದಿಗ್ದರ್ಶನ ಮಾಡಿದ್ದಾರೆ. ಇಷ್ಟಲಿಂಗಾರ್ಚನಾ ರಹಸ್ಯ ಮತ್ತು ಶಿವಲಿಂಗಾರ್ಚನಾ ವಿಧಾನಗಳು ಶಿವಪೂಜಾ ಕ್ರಮವನ್ನು ಒಳಗೊಂಡಿವೆ. ಈ ಭಾಗದಲ್ಲಿ ಒಂದು ಅಂಶವನ್ನು ಉಲ್ಲೇಖಿಸುವುದು ಅನಿವಾರ್ಯ. ಏಕೆಂದರೆ ವೀರಶೈವರ ಇಷ್ಟಲಿಂಗಪೂಜಾ ವೈಶಿಷ್ಟ್ಯ ಸ್ಥಾವರ ಲಿಂಗಪೂಜಾದಿಗಳಿಗಿಂತ ಅನೇಕ ವಿಷಯಗಳಲ್ಲಿ ವಿಭಿನ್ನ. ವೀರಶೈವ ಧರ್ಮದಲ್ಲಿ ಷಟ್‌ಸ್ಥಲಕ್ಕೆ ಅತಿ ಮುಖ್ಯವಾದ ಸ್ಥಾನವಿದೆ. ಅದು ಇಷ್ಟಲಿಂಗ ಪೂಜಾಸಂದರ್ಭದಲ್ಲಿ ಅನ್ವಯವಾಗುವುದು ಅಗತ್ಯ. ಅಷ್ಟಾವರಣ, ಪಂಚಾಚಾರಗಳು ಷಟ್‌ಸ್ಥಲ ಸಿದ್ಧಾಂತಕ್ಕೆ ಪೂರಕವಾದವು. ಅವುಗಳ ಸಮನ್ವಯ ಕ್ರಮವನ್ನು ಮೊಗ್ಗೆ ಮಾಯಿದೇವರು "ವಿಶೇಷಾರ್ಥ ಪ್ರಕಾಶಿಕೆ" (ಅಧಿಕರಣ ೨)ಯಲ್ಲಿ ನಿರ್ದೇಶಿಸಿದ್ದಾರೆ. ಷಟ್‌ಸ್ಥಲ ಕ್ರಮದಿಂದಲೇ ವೀರಶೈವ ಪೂಜಾವಿಧಿಯು ರಚಿತವಾಗಬೇಕು. ಲಿಂ. ಹಾನಗಲ್ಲ ಕುಮಾರಸ್ವಾಮಿಗಳವರು ಈ ಕ್ರಮವನ್ನು ಅನುಸರಿಸಿ ಪೂಜಾವಿಧಿಯನ್ನು ಮೊದಲು ಪ್ರಕಟಿಸಿದರು. ಇತ್ತೀಚೆಗೆ ಪ್ರಕಟವಾದ ಸಖರಾಯಪಟ್ಟಣದ ಶ್ರೀ ಶ್ರೀ ಸದಾಶಿವಶಿವಾಚಾರ್ಯ ಮಹಾಸ್ವಾಮಿಗಳ ಮತ್ತು ಪ್ರಬೋಧ ಪುಸ್ತಕಮಾಲೆಯ 'ಷಟ್‌ಸ್ಥಲ ಲಿಂಗಪೂಜಾವಿಧಿ"ಗಳು ಈ ಮಾರ್ಗವನ್ನು ಅವಲಂಬಿಸಿವೆ. ಪ್ರಕೃತ ಗ್ರಂಥದಲ್ಲಿ ಆ ಬಗ್ಗೆ ಸೂಚನೆಯಿಲ್ಲ. ಮೇಲಾಗಿ ಶಿವಪಂಚಾಕ್ಷರೀ ಮಹಾ ಮಂತ್ರ ಜಪಾನುಷ್ಠಾನದ ಬಗೆಗೆ ಬ್ರಹ್ಮಚಾರಿ, ಗೃಹಸ್ಥ ಮತ್ತು ಸಂನ್ಯಾಸಿ (ವಿರಕ್ತ) ವರ್ಗಗಳ ನ್ಯಾಸ ವಿಧಾನ ವೈವಿಧ್ಯವಾಗಲಿ, ಶ್ರೀ ರುದ್ರ, ಪುರುಷ ಸೂಕ್ತ ಕ್ರಮಾಭಿಷೇಕ ಕ್ರಮವಾಗಲಿ ಸೇರ್ಪಡೆಯಾಗಿರುವುದಿಲ್ಲ. ಸಾಮಾನ್ಯವಾಗಿ ಶಿವ ಪೂಜೆಯ ಬಗೆಗೆ ಜಾಗ್ರತಿಯನ್ನುಂಟುಮಾಡುವ ದಿಶೆಯಲ್ಲಿ ಶ್ರೀಯವರ ಈ ಪ್ರಬಂಧ ಸಾರ್ಥಕವಾಗಿದೆ. ಮೇಲಿನ ಅಂಶಗಳು ಸೇರ್ಪಡೆಯಾಗಿದ್ದಲ್ಲಿ ಇದು ಸಾಧಕರಿಗೆ ತುಂಬಾ ಉಪಯೋಗವಾಗುತ್ತಿದ್ದುದರಲ್ಲಿ ಸಂದೇಹವಿಲ್ಲ.

ಸಾಧನ–ಸಮನ್ವಯ ಪ್ರಕರಣದಲ್ಲಿ ಇಷ್ಟಲಿಂಗಾರ್ಚನೆಗೆ ಪಂಚಸೂತಕಗಳ ನಿಷೇಧ, ಶಿವದೀಕ್ಷೆ, ಶಿವಪೂಜಾಗೃಹ, ಏಕಾಂತತೆ, ಕ್ರಿಯಾಜ್ಞಾನ ಸಮುಚ್ಚಯ, ಪೂಜೋಪಕರಣಗಳು ಮುಂತಾದುವುಗಳ ಬಗೆಗೆ ಸಪ್ರಮಾಣವಾದ ವಿಸ್ತಾರ ವಿವರಣಗಳಿವೆ. ವೇದಮಂತ್ರಗಳು ಸಸ್ವರವಾಗಿ ಮುದ್ರಿತವಾಗಿವೆ.

ಪರಿಶಿಷ್ಟದಲ್ಲಿ ಭಕ್ತರಿಗೆ ನಿತ್ಯೋಪಯುಕ್ತವಾದ ಅನೇಕ ಸಂಸ್ಕೃತ ಮತ್ತು ಕನ್ನಡ ಪ್ರಾರ್ಥನೆಗಳು ಕೊಡಲ್ಪಟ್ಟಿವೆ. ವೇದಾಗಮೋಪನಿಷತ್ಸಮ್ಮತವಾದ ಈ ಗ್ರಂಥವು ಸನಾತನ ಧರ್ಮಪ್ರಿಯರಿಗೆ ಸಂಗ್ರಹಣೀಯ ಹಾಗೂ ಅನುಷ್ಠೇಯ. ಅನೇಕ ವಿದ್ವಾಂಸರ ಸದಭಿಪ್ರಾಯಗಳಿಂದ ಸಮಲಂಕೃತವಾದ ಈ ಕೃತಿ ಭಾರತ ಸಂಸ್ಕೃತಿ, ಸಂಪ್ರದಾಯಗಳ ಅಂತರ್ಯವನ್ನು ಅರಿಯಬಯಸುವವರಿಗಂತೂ ದಾರಿ ದೀಪ. ಇಂಥ ಹಲವಾರು ಉತ್ತಮ ಕೃತಿಗಳು ಶ್ರೀಯವರ ಲೇಖನಿಯಿಂದ ಚಿಮ್ಮಲಿ.

ಬಸವಾದಿ ಗಣಚರಿತ್ರೆ ಮತ್ತು ಗಣವಚನಮಂಜರಿ, ಲೇಖಕರು: ಡಾ. ಎಸ್. ಎಂ. ಹುಣಶ್ಯಾಳ; ಪ್ರಕಾಶಕರು: ವಿಜಯ ಪ್ರಕಾಶನ, ರಾಯಚೂರು; ಪುಟಗಳು ೧೩೬ + ೧೬೦; ಬೆಲೆ: ೩ ರೂ.ಗಳು.

ಬಸವಸ್ತೋತ್ರದ ವಚನ, ಬಸವಸ್ತುತಿ, ಮತ್ತು ಪ್ರಶಸ್ತಿ ಮುಂತಾದ ಶ್ರೇಷ್ಠ ಗ್ರಂಥಗಳನ್ನು ಬರೆದು ವಿದ್ವಾಂಸರ ಅಭಿನಂದನೆಗೆ ಪಾತ್ರರಾಗಿರುವ ಶ್ರೀ ಹುಣಶ್ಯಾಳ ಅವರು ಪ್ರಕೃತ 'ಬಸವಾದಿಗಣ ಚರಿತ್ರೆ' ಮತ್ತು 'ಗಣವಚನ ಮಂಜರಿ'ಗಳನ್ನು ರಚಿಸಿ ಕನ್ನಡ ಲೋಕಕ್ಕೆ ಉತ್ತಮ ಕೊಡುಗೆ ನೀಡಿದ್ದಾರೆ. ಗ್ರಂಥದ ಮೊದಲ ವಿಭಾಗದಲ್ಲಿ ಬಸವಣ್ಣ, ಅಲ್ಲಮಪ್ರಭು, ಚನ್ನಬಸವ, ಸಿದ್ಧರಾಮ, ಅಕ್ಕಮಹಾದೇವಿ ಮುಂತಾದ ೧೧೫ ಮಂದಿ ಶಿವಶರಣರ ಜೀವನ ಪರಿಚಯವನ್ನು ಸರಲ ಕನ್ನಡದಲ್ಲಿ ಮಾಡಿಕೊಟ್ಟಿರುವುದಲ್ಲದೆ ಗಣವಚನಮಂಜರಿಯಲ್ಲಿ ಬಸವೇಶ್ವರ ಮುಂತಾದ ೧೦೮ ಮಂದಿ ಶಿವಶರಣರ ಹಾಗೂ ಮಹಾದೇವಿಯಕ್ಕ, ಲಿಂಗಮ್ಮ (ಹಡಪದಪ್ಪಣ್ಣನ ಪತ್ನಿ), ಮಹಾದೇವಿ (ಮೋಳಿಗೆ ಮಾರಯ್ಯನ ಪತ್ನಿ). ಹೀಗೆ ೩೬ ಮಂದಿ ಗಣಾಧೀಶ್ವರಿಯರ ಶ್ರೇಷ್ಠ ವಚನಗಳನ್ನು ಸಂಗ್ರಹಿಸಿದ್ದಾರೆ. ಶ್ರೀಯುತರು 'ಎಲ್ಲ ಪುರಾತನರ ವಚನ' ಎಂಬ ತಾಡೋಲೆ ಗ್ರಂಥದಿಂದ ವಚನಗಳನ್ನು ಶೋಧಿಸಿ ಈ ಗ್ರಂಥದಲ್ಲಿ ಶೇಖರಿಸಿರುವರಲ್ಲದೆ ಲಿಂ. ಡಾ. ಪಿ. ಜಿ. ಹಳಕಟ್ಟಿಯವರ ಶರಣರ ಚರಿತ್ರೆಗಳ ಸಹಾಯವನ್ನು ಪಡೆದಿರುವುದಾಗಿ ಸ್ಮರಿಸಿದ್ದಾರೆ.

ಗ್ರಂಥಕಾರರು, ಬಸವಣ್ಣನವರನ್ನು ವೀರಶೈವ ಮತಸ್ಥಾಪಕರನ್ನಾಗಿ ಭಾವಿಸಿದಂತೆ ಅವರ ಕೆಲವು ಪ್ರತಿಪಾದನೆಗಳಲ್ಲಿ ಅಭಿವ್ಯಕ್ತವಾಗುತ್ತದೆ: 'ವೀರಶೈವ ನಿರ್ಣಯಪರಮಾವತಾರ', 'ಬಸವ ಮಾಡಿದಡಾಯ್ತು ಗುರುನೆಲೆ....ಬಸವನೆ ಪರದೈವವೆಂದೆನುತಿರ್ದ'....(ಪು.೩) "ಬಸವಣ್ಣನವರ ಹುಟ್ಟಿಗೆ ಮೊದಲು ಕರ್ಣಾಟಕ

ದಲ್ಲಿ "ಶೈವಬ್ರಾಹ್ಮಣ ಮತ್ತು ಪಾಶುಪತ" ಎಂಬೆರಡು ಪಂಥಗಳಿದ್ದವು. ಶೈವ ಬ್ರಾಹ್ಮಣ ಅದ್ವೈತ ಬೋಧಿಸುತ್ತಿತ್ತು. ಪಾಶುಪತವು ಯೋಗಮಾರ್ಗ ಬೋಧಿಸುತ್ತಿತ್ತು" (ಪು. ೩) "ರೇವಣಸಿದ್ಧ, ಜಾತವೇದಮುನಿ, ಬಿಜ್ಜಳ, ಚೋಳರು ಪಾಶುಪತ ಶೈವರು" (ಪು. ೪–೫) "ಬಸವಣ್ಣ ಹೊಸಧರ್ಮದ ಪ್ರಕಾಶ ಕಂಡನು. ಹಿಂದೆ ಭರತಖಂಡದಲ್ಲಿ ಬುದ್ಧನು ಬೋಧಿಗಿಡದಡಿಯಲ್ಲಿ ಹೇಗೆ ಬೆಳಕನ್ನು ಕಂಡನೋ ಹಾಗೆ ಬಸವಣ್ಣನು ಸಂಗಮನಾಥನ ಸನ್ನಿಧಿಯಲ್ಲಿ ಲಿಂಗಪ್ರಕಾಶ ಕಂಡನು" (ಪು. ೫) "ಶೈವ ಸಿದ್ಧಾಂತದ ಭಕ್ತಿ ಮತ್ತು ಕಾಶ್ಮೀರ ಸಿದ್ಧಾಂತದ ಶಕ್ತಿ, ಆಗಮಗಳಲ್ಲಿಯ ಯೋಗ ಈ ಮೂರನ್ನು ಬಸವಣ್ಣನು ಅನುಭಾವದಲ್ಲಿ ಅಳವಡಿಸಿ "ಶಿವಾದ್ವೈತ"ವನ್ನು ರೂಪಿಸತೊಡಗಿದನು" (ಪು. ೮) ಬಸವಣ್ಣನು ತನ್ನ ಮತ ಪ್ರಸಾರಕ್ಕಾಗಿ "ಶೈವಧರ್ಮದ ನಾಡಾದ ಕಾಶ್ಮೀರದಿಂದ ಸಹಸ್ರಾರು ಜಂಗಮರನ್ನು ಅಂದರೆ ಶೈವಪಂಡಿತರನ್ನು ಕರೆತಂದನು. ಹಾಗೆಯೇ....ದಕ್ಷಿಣದಿಂದ ಎಡೆಮಠದ ನಾಗಿದೇವ ಮುಂತಾದ ಶೈವ ಪಂಡಿತರನ್ನು ಕರೆತಂದನು....ಸಂಗನುದಲ್ಲಿಯ ಶಿವಧರ್ಮ ಕಲ್ಯಾಣದ ಅನುಭವ ಮಂಟಪದಲ್ಲಿ ಸಂಪೂರ್ಣತೆ ಹೊಂದಿತು. ಅಂದರೆ ಶೈವವು ವೀರಶೈವವಾಗಿ ವಿಕಾಶಹೊಂದಿತು." (ಪು. ೯) ಇದರಂತೆ ಅಲ್ಲಮ ಪ್ರಭು ಚರಿತೆಯಲ್ಲಿ—"ಬಳ್ಳಿಗಾವಿಯಲ್ಲಿ ಒಂದು ವಿಶ್ವವಿದ್ಯಾನಿಲಯವಿತ್ತು ಅಲ್ಲಿ ಶೈವಸ್ಮಾರ್ತ, ಕಾಪಾಲಿಕ, ಪಾಶುಪತ ಮೊದಲಾದ ಪಂಡಿತರಿದ್ದರು. ಅಲ್ಲಿ ವೀರಶೈವ ಪಂಡಿತರಿಲ್ಲದ್ದು ಗಮನಾರ್ಹ", "ಬಸವಾದಿ ಪ್ರಮಥರ ಕಾಲದಲ್ಲಿಯೇ ವೀರಶೈವದ ಅಸ್ತಿತ್ವವುಂಟಾಯಿತು" (ಪು. ೫೫)—ಮುಂತಾದ ಮಾತುಗಳು ನಿದರ್ಶನ.

ಆದರೆ ಈ ಕಲ್ಪನೆಗೆ ಆಧಾರವಿಲ್ಲ. ಏಕೆಂದರೆ ಪಾಶುಪತವು ವೀರಶೈವವೇ ಎಂಬುದನ್ನು ಲೇಖಕರು ಮನಗಾಣಬೇಕು.

> ಲಿಂಗಾಂಗ ಸಂಗಿನಾಂ ಚೈವ ಪುನರ್ಜನ್ಮ ನ ವಿದ್ಯತೇ ।
> ಏಷ ಪಾಶುಪತೋಯೋಗಃ ಪಶುಪಾಶನಿವೃತ್ತಯೇ ॥ (ಶ್ರೀಕರಭಾಷ್ಯ, ಅ. ೧)

ಮುಂತಾದ ಉಕ್ತಿಗಳು ಪಾಶುಪತರು ಲಿಂಗಾಂಗಿಗಳೆಂಬುದನ್ನು ಸಾರುತ್ತವೆ. ಲಕ್ಕಣ್ಣದಂಡೇಶನು ತನ್ನ ಗುರು 'ಮಲ್ಲಿಕಾರ್ಜುನ'ನನ್ನು "ಮಹಾಪಾಶುಪತ ಸದ್ವ್ರತಗುಣಾಗ್ರಣಿ" ಎಂದು ಹೇಳಿಕೊಂಡಿದ್ದಾನೆ. ಮಾತ್ರವಲ್ಲದೆ ಬಸವಣ್ಣನಿಗಿಂತ ನೂರಾರು ವರ್ಷಗಳ ಹಿಂದೆಯೇ ದೇವರ ದಾಸಿಮಯ್ಯ (ಪು. ೭೦) ಶಂಕರ ದಾಸಿಮಯ್ಯ (ಪು. ೧೧೭) ಚನ್ನಯ್ಯ (ಪು. ೮೨) ಮುಂತಾದ ಲಿಂಗಧಾರಿಗಳಾದ ಶಿವಶರಣರಿದ್ದ ಬಗೆಗೆ ಶ್ರೀಯುತರೇ ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ದೇವರ ದಾಸಿಮಯ್ಯನ ದೀಕ್ಷಾಗುರು ಚಂದ್ರಗುಂಡದೇಶಿಕರು. ಅವರು ಶ್ರೀಶೈಲ ಪೀಠಾಧ್ಯಕ್ಷರೆಂಬುದು ಸುಪ್ರಸಿದ್ಧ. ಬಸವಣ್ಣನವರೇ ತಮ್ಮ ವಚನಗಳಲ್ಲಿ ತಮಗಿಂತ

ಹಿಂದೆ ಇದ್ದ ದಾಸಿಮಯ್ಯ ಮುಂತಾದ ಎಷ್ಟೋ ಮಂದಿ ಪುರಾತನರನ್ನು ಉಲ್ಲೇಖಿಸುತ್ತಾರೆ. ಬಸವಣ್ಣನವರು ಭಕ್ತಿಪಥಗಾಮಿಗಳೇ ಹೊರತು ಅವರು ಆಚಾರ್ಯರಾಗಿ ಸಿದ್ಧಾಂತಸ್ಥಾಪನೆಗೆ ತೊಡಗಿರುವುದು ಕಂಡುಬರುವುದಿಲ್ಲ. ಹೀಗಿರುವಾಗ ಬಸವಣ್ಣನೇ ಮತಸ್ಥಾಪಕನೆಂಬುದು ಅಭಿಮಾನದ ಪರಾಕಾಷ್ಠೆಯಾದೀತು! ಅನಿಮಿಷ (ಅಲ್ಲಮಪ್ರಭುವಿನ ಗುರು), ರೇವಣಸಿದ್ಧ, ಮರುಳಸಿದ್ಧ, ಜಾತವೇದ, ಶ್ರೀಪತಿ, ಮುಂತಾದವರು ಲಿಂಗಾಂಗಿಗಳಾದ ಪಾಶುಪತರೇ ಹೊರತು ಅಲಿಂಗಿ ಪಾಶುಪತರಲ್ಲ. ಇನ್ನು ಬಸವಣ್ಣನವರು ಅನುಭವ ಮಂಟಪದಲ್ಲಿ ಏರ್ಪಡಿಸಿದ ಶೂನ್ಯಸಿಂಹಾಸನ, ಅಲ್ಲಮ, ಚನ್ನಬಸವ, ತರುವಾಯ ಸಿದ್ಧರಾಮರು ಕ್ರಮವಾಗಿ ಅದರ ಅಧಿಪತಿಗಳೆಂದು (ಪು. ೨೬, ೩೧, ೩೬) ಹೇಳಿರುವ ಉಕ್ತಿಗಳೂ ಇತ್ತೀಚಿನ ಚಾರಿತ್ರಕ ಶೋಧನೆಗಳಿಂದ ಭಿನ್ನಾಭಿಪ್ರಾಯಕೋಟಿಗೆ ಸೇರಿವೆ. ಬಸವಣ್ಣನು ಬಿಜ್ಜಳನ ಸಮಕ್ಷ ಸ್ವೀಕರಿಸಿದ ಪ್ರಮಾಣವಚನ (ಪು. ೧೨)ವು ಕಂಚಿ ಶಂಕರಾರಾಧ್ಯನ ಸಂಸ್ಕೃತ ವೃಷಭೇಶ್ವರ ಪುರಾಣೋಕ್ತವೆಂದು ಉದಾಹರಿಸಲಾಗಿದೆ. ಆದರಲ್ಲಿ ಬರುವ "ಭಕ್ತರನ್ನು ಶಿವನೆಂದು ಭಾವಿಸುತ್ತೇನೆ. ಭಕ್ತನ ಕುಲವನ್ನು ವಿಚಾರಿಸುವುದಿಲ್ಲ. ಭಕ್ತರಲ್ಲಿ ತಪ್ಪುಗಳನ್ನೆಣಿಸುವುದಿಲ್ಲ...." ಮುಂತಾದ ಮಾತುಗಳು ಪ್ರಧಾನ ದಂಡನಾಯಕನಾಗಿ ಅಧಿಕಾರ ಸ್ವೀಕರಿಸುವ ಸಮಯದಲ್ಲಿ ರಾಜನ ಎದುರಿಗೆ ಕೊಡುವ ಪ್ರತಿಜ್ಞಾವಾಕ್ಯಗಳಾಗಿ ಕಾಣುವುದಿಲ್ಲ. ಬಸವಣ್ಣನ ಚರಿತವನ್ನು ಆತನ ವಚನಗಳ ಹಿನ್ನೆಲೆಯಲ್ಲಿ ನೋಡುವುದು ಹೆಚ್ಚು 'ಸಮಂಜಸ'ವೆಂದು ಹೇಳದೆ ವಿಧಿಯಿಲ್ಲ.

ಇತ್ಯಾದಿ ಒಂದೆರಡು ಭಿನ್ನಾಭಿಪ್ರಾಯ ವಿಷಯಗಳನ್ನು ಬಿಟ್ಟರೆ ಶ್ರೀಯುತರು ಐತಿಹಾಸಿಕವಾಗಿ ಚಿತ್ರಿಸಿರುವ ಬಸವಣ್ಣನ ಚರಿತ್ರೆ, ಅಲ್ಲಿ ಬರುವ ರಾಜಕೀಯ ಆಂದೋಳನದ ಹಿನ್ನೆಲೆ, ಅದರಿಂದಾದ ಪರಿಣಾಮ ಮುಂತಾದವುಗಳು ಸಮಂಜಸವೆನಿಸುತ್ತವೆ. ಇದೇ ನಿಟ್ಟಿನಲ್ಲಿ ಈ ಗಣಚರಿತ್ರೆಯಲ್ಲಿ ಬರುವ ಉಳಿದ ಶರಣರ ದಿವ್ಯಚರಿತ್ರೆಗಳು ಚಾರಿತ್ರಿಕ ಮೆರುಗನ್ನು ಪಡೆದು ವಾಸ್ತವಿಕೆಯ ಕಾಂತಿಯಿಂದ ಬೆಳಗಿವೆ.

'ಗಣವಚನ'ಮಂಜರಿಯಲ್ಲಿ ಸಂಗ್ರಹಿಸಿರುವ ವಚನಗಳು ಅವರವರ ಅನುಭಾವದ ಆಳನೀಳಗಳನ್ನು ಗುರುತಿಸುವ ಮಾನದಂಡಗಳಂತಿವೆ. ಎಲ್ಲಕ್ಕೂ ಹೆಚ್ಚಾಗಿ ಗ್ರಂಥದ ಕಡೆಗೆ ಸಂಗ್ರಹಿಸಿರುವ "ಗಣಾಧೀಶ್ವರಿಯರ ವಚನ ಮಂಜರಿ"ಯು ಬಸವಯುಗದ ಧಾರ್ಮಿಕ ಜಾಗ್ರತಿ ಅಂದಿನ ಮಹಿಳಾ ಲೋಕದ ಮೇಲೆ ಉಂಟುಮಾಡಿದ್ದ ಪ್ರಭಾವಕ್ಕೆ ಹೆಗ್ಗುರುತು. ಇವರಲ್ಲಿ ಹೆಸರಾಂತ ಅಕ್ಕಮಹಾದೇವಿ, ಲಿಂಗಮ್ಮ, ರಾಣಿ ಮಹಾದೇವಿ, ಸತ್ಯಕ್ಕ, ಅಕ್ಕನಾಗಲಾಂಬಿಕೆ, ಕಾಳವ್ವೆ (ಉರಿಲಿಂಗ ಪೆದ್ದಿಯ ಪತ್ನಿ), ಬೊಂತಾದೇವಿ (ರೇವಣಸಿದ್ಧರ ಪತ್ನಿ), ಲಕ್ಕಮ್ಮ (ಆಯ್ದಕ್ಕಿ ಮಾರಯ್ಯ ಪತ್ನಿ), ನೀಲಾಂಬಿಕೆ, ಗಂಗಾಂಬಿಕೆ (ಬಸವಣ್ಣ

ನವರ ಪತ್ನಿಯರು) ಮುಂತಾದವರ ವಚನಗಳು ಭಾವ ಹಾಗೂ ಅನುಭಾವ ಸೌಂದರ್ಯದಿಂದ ಸಾಹಿತ್ಯಲೋಕದಲ್ಲಿ ಚಿರಕಾಲ ಬೆಳಗುವಂತಹವು.

ಒಟ್ಟಿನಲ್ಲಿ ಶ್ರೀಯುತ ಡಾ. ಹುಣಶ್ಯಾಳ ಅವರ ಪ್ರಯತ್ನ ಸ್ತುತ್ಯ. ಅವರ ಉತ್ಸಾಹೀ ಲೇಖನಿಯಿಂದ ಹಲವಾರು ಉತ್ತಮ ಕೃತಿರತ್ನಗಳು ಹೊಮ್ಮಿಬರಲಿ.

—ಎಂ. ಜಿ. ನಂಜುಂಡಾರಾಧ್ಯ

ಯುಗಾವತಾರಿ ಗಾಂಧೀಜಿ, (ಕವನ ಸಂಕಲನ) ಲೇ: ಶಂಭುನಾಥ ಗುರುನಾಥ ರಾವಳ; ಪ್ರ: ಶಂಭುನಾಥ ರಾವಳ, ಶಿಕ್ಷಕರು, ಯುನಿವ್ಹರ್ಸಿಟಿ ಪಬ್ಲಿಕ್ ಸ್ಕೂಲ, ಧಾರವಾಡ; ಪುಟಗಳು: ೭೨; ಬೆಲೆ: ೧-೨೫, ೧೯೬೯.

ಶ್ರೀ ಶಂಭುನಾಥ ಗುರುನಾಥ ರಾವಳ ಅವರು ಗಾಂಧೀಜಿ ಅವರ ಬದುಕಿನಲ್ಲಿ ನಡೆದ ಪ್ರಮುಖ ಘಟನೆಗಳಲ್ಲಿ ಕೆಲವನ್ನು ಆರಿಸಿಕೊಂಡು ಕಥನಕವನ ರಚಿಸಿದ್ದಾರೆ. ಇಲ್ಲಿ ೨೬ ಕಥನ ಕವನಗಳಿವೆ. ಗಾಂಧೀಜಿಯವರ ಶತಮಾನೋತ್ಸವದಲ್ಲಿ 'ಯುಗಾವ ತಾರಿ ಗಾಂಧೀಜಿ' ಪ್ರಕಟವಾಗಿರುವುದು ಸಂದರ್ಭೋಚಿತವಾಗಿದೆ.

ಇಲ್ಲಿನ ಕವಿತೆಗಳನ್ನು ಸಮೀಕ್ಷಿಸಿದಾಗ ಕಾವ್ಯದ ಕಾವು ಕಡಿಮೆಯಾಗಿ ಕಾವ್ಯಾಂಶ ತೀರ ಗೌಣವಾಗಿದೆ ಎನ್ನಿಸುತ್ತದೆ. ಈ ಘಟನೆಗಳನ್ನೆಲ್ಲ ಮನೋಜ್ಞವಾದ ಗದ್ಯದಲ್ಲಿಯೇ ನಿರೂಪಿಸಿದ್ದರೆ ಚೆನ್ನಾಗಿರುತ್ತಿತ್ತು. ಕವನವನ್ನಾಗಿಸುವ ವ್ಯರ್ಥ ಹೋರಾಟ ನಡೆದಂತೆ ಕಂಡುಬರುತ್ತದೆ.

ಲೇಖಕರು ಕೆಲವು ಕಡೆ ಮೆಚ್ಚುವಂಥ ಸಾದೃಶ್ಯ, ಕಲ್ಪನೆ ಹಾಗೂ ಭಾವವನ್ನು ನೀಡಿರುವುದನ್ನು ಕಾಣಬಹುದು:

ಸಿಡಿ ಮದ್ದು ಸಿಡಿಯಿತು
ಒಡಲ ಕಿಡಿ ತಾಕಿ (ಮಾತೃ ವಿಯೋಗ)
ಸತ್ಯದಾ ಸಾರ ಬಾಪೂಜಿ
ಮಿಥ್ಯಕೆ ಜವರಾಯ (ಧರ್ಮಮೂರ್ತಿ)
ನಗೆಗಡಲು ಉಕ್ಕೇರಿ ಹೂಮಳೆಯು ಸುರಿದು
ತಳಿರು ತೋರಣಗಳೆಲ್ಲ ತಾಳ ಹಾಕಿದವು
(ಕವಿ ರವೀಂದ್ರರೊಡನೆ)

'ವಚನ ಪಾಲಕ', 'ಸಮಯಪಾಲಕ ಗಾಂಧೀಜಿ' ಈ ಕಥನ ಕವನಗಳಲ್ಲಿ ಅನವಶ್ಯಕ ವಾಗಿ ವಿಷಯವನ್ನು ವಿಸ್ತರಿಸಿದ್ದಾರೆ. ಸಂಕ್ಷಿಪ್ತತೆಯನ್ನು ಕಾಪಾಡಿಕೊಂಡಿದ್ದರೆ ಕವಿತೆಗಳಲ್ಲಿ ಸವಿಯನ್ನು ನೀಡಬಹುದಾಗಿತ್ತು. 'ಮಕ್ಕಳ ಬಾಪು' ಕಥನ ಕವನದ ನಿರೂಪಣೆಯನ್ನು ಮೆಚ್ಚಬಹುದು.

ಇಲ್ಲಿಯ ಕಥನ ಕವನಗಳು ಶೈಶವಾವಸ್ಥೆಯಲ್ಲಿವೆ; ಬಾಲಕರಿಗೆ ಹಿಡಿಸಬಹುದು.

ಲೇಖಕರು ಕಾವ್ಯದ ಭಾಷೆಯನ್ನು ಬೆಳೆಸಿಕೊಳ್ಳಬೇಕು. ಇವರ ಅಭಿವ್ಯಕ್ತಿಯಲ್ಲಿ ಹದವಿಲ್ಲ. 'ದುಗುಣವಾಯ್ತು', 'ಒಂದೊಮ್ಮೆ' ಇಂಥ ಪದಪ್ರಯೋಗಗಳು ಹಿಡಿಸವು. ಕವಿತೆ ರಚಿಸಬೇಕೆಂಬ ಹಂಬಲಕ್ಕೆ ಸಾಹಿತ್ಯಾಭ್ಯಾಸದ ಬೆಂಬಲ ಪಡೆದು ಸಾಹಿತ್ಯಸೇವೆಗೆ ಕೈಹಾಕಿ ಕಾವ್ಯಾಂಶವುಳ್ಳ ಕೃತಿಗಳನ್ನು ನೀಡಲೆಂದು ಆಶಿಸೋಣ.

—ಜಿ.ವಿ.ಡಿ.

ದೀವಿಗೆ (ಕವನ ಸಂಕಲನ), ಲೇಖಕ: ಜಿ. ಎಸ್. ಅನ್ನದಾನಿ; ಪ್ರಕಾಶನ: ಮಿತ್ರಭಾರತಿ ಪ್ರಕಾಶನ, ವಿಜಾಪುರ; ಪುಟಗಳು : ೫೪ ; ಬೆಲೆ : ಎರಡು ರೂಪಾಯಿ.

ಕವಿ ಅನ್ನದಾನಿಯವರು ಸಾಕಷ್ಟು ಎಣ್ಣೆ ಎರೆಯದೆ ದೀಪವನ್ನು ಹಚ್ಚಲು ಹೊರಟಿರುವುದು ಪ್ರಸ್ತುತ 'ದೀವಿಗೆ' ಕವನಸಂಕಲನದಲ್ಲಿ ಸ್ಪಷ್ಟವಾಗಿದೆ. ಮೂವತ್ತ ನಾಲ್ಕು ಕವನಗಳನ್ನೊಳಗೊಂಡ ಇದರಲ್ಲಿ ರಾಜಕೀಯ, ಸಾಮಾಜಿಕ, ಪ್ರೇಮ, ಕುಟುಂಬಯೋಜನೆ ಹೀಗೆ ಹಲವು ವಸ್ತುಗಳನ್ನುಳ್ಳ ಕವನಗಳಿವೆ. ಹಿರಿಯ ಕವಿಗಳನ್ನು ಹೊಗಳಿರುವ ಕವನಗಳೂ ಉಂಟು. ಕೊರತೆಯೆಂದರೆ, ವಸ್ತುವೈವಿಧ್ಯಕ್ಕೆ ತಕ್ಕಹಾಗೆ ಅಭಿವ್ಯಕ್ತಿಯಲ್ಲಿ ಆಳವಿಲ್ಲದಿರುವುದು.

ಇಲ್ಲಿನ ಕವನಗಳಲ್ಲಿ ಕವಿಯ ಮನಸ್ಸನ್ನು ಹೆಚ್ಚು ಪರಿಣಾಮಕಾರಿಯಾಗಿ ಅಭಿವ್ಯಕ್ತಪಡಿಸಲಾಗದೆ, ಭಾವಭಾಷೆಗಳಲ್ಲಿ ಸಾಮರಸ್ಯವಿಲ್ಲದೆ ಕವನಗಳು ನೀರಸ ವಾಗಿರುವುದು ಸಹೃದಯರಿಗೆ ನಿರಾಶೆಯನ್ನುಂಟುಮಾಡುತ್ತದೆ. ಭಾವನೆಗಳು ಅಂತ ರಂಗಿಕವಾದ ಹೋರಾಟದಿಂದ, ಮಥನದಿಂದ ಉದ್ಭವಿಸುವುದರ ಬದಲು ಬರೆಯಲೇ ಬೇಕೆಂದು ಹಠತೊಟ್ಟು ಹೊಸೆದಂತೆ ಕಂಡುಬರುತ್ತವೆ :

ದಿನಕರ ನಿಜ ದಿನಕರ !
ರಾಜಕೀಯ ಸಾಮಾಜಿಕ ಶೈಕ್ಷಣಿಕ ರಂಗದಲಿ
ನಿಷ್ಠೆಯಲಿ ದುಡಿವಂಥ ದೇಶಾಭಿಮಾನಿ.

ಇಲ್ಲಿ ಗದ್ಯದ ಸಾಲುಗಳನ್ನು, ಮನಸ್ಸಿಗೆ ಬಂದಂತೆ ಕತ್ತರಿಸಿ, ನವ್ಯಕಾವ್ಯ ಮಾಡಲು ಹೊರಟಿರುವ ಪ್ರಯತ್ನ ಕಂಡುಬಂದರೆ,

ಮನೆಯೊಳಗೆ ನಡಿಸಿಹನು ಕಳ್ಳಭಟ್ಟ
ಖಾದಿಬಟ್ಟೆಯ ಒಳಗೆ ಟೊಳ್ಳು ಹೊಟ್ಟ

ಎಂಬಲ್ಲಿ ಪ್ರಾಸಪ್ರಿಯತೆ ಎದ್ದು ಕಾಣುತ್ತದೆ. ಸಂಕಲನದಲ್ಲಿ ಇಂತಹುದಕ್ಕೆ ಸಾಕಷ್ಟು ಉದಾಹರಣೆಗಳಿವೆ.

'ಬಾಪೂ' ಎನ್ನುವ ಪದ್ಯದಲ್ಲಿಯೂ ಅಷ್ಟೆ: "ಸಿಡಿಮದ್ದ ತೋಪು?"; "ಶುಚಿಗೈದ ಸೋಪು"; "ಮನಮರುಗಿ ಭಾಪು"; "ಹಾಕಿಕೊಂಡನು ಮಾಪು";

ಪ್ರಾಸ ಬೇಕು. ಆದರೆ ಓದುಗರಿಗೆ ತಲೆ ಚಿಟ್ಟುಹಿಡಿಸುವಷ್ಟಾದರೆ, ಪ್ರಾಸ ತ್ರಾಸವಾಗಿ ಪರಿಣಮಿಸಿದರೆ ಕಷ್ಟ. ಪ್ರಾಸಪ್ರಿಯತೆಗೆ ಮತ್ತೊಂದು ಉದಾಹರಣೆ—

ದಿವ್ಯ ಜೀವನದಿಂದ ಕನ್ನಡವ ಬೆಳಗಿಸಿ
ಸಾಹಿತ್ಯ ಶಾರದೆಯ ವಿಧವಿಧದಿ ಸಿಂಗರಿಸಿ
ಭಕ್ತಿ ಭಾಂಡಾರಿ ಬಸವೇಶ್ವರನಭ್ಯಸಿಸಿ
'ವಚನ ಧರ್ಮದ ಸಾರ' ಕನ್ನಡ ಜನಕುಣಿಸಿ........

ಮೇಲಿನ ಸಾಲುಗಳು "ಎಂ.ಆರ್. ಶ್ರೀ. ಯವರಿಗೆ" ಕವನದಿಂದ ಆರಿಸಿದವು. ಇಂಥ ಕಡೆಗಳಲ್ಲಿ ಕಾವ್ಯಶಕ್ತಿ ಕುಗ್ಗಿ, ನಿರೂಪಣೆಯಲ್ಲಿ ಸಾಮರಸ್ಯವಿಲ್ಲದೆ ಕವನಗಳು ಜಾಳು ಜಾಳಾಗುವ ಸಂಭವವುಂಟು.

ವ್ಯವಸ್ಥಿತವಾದ ಆಲೋಚನೆಯಿಂದ ಭಾವನೆಗಳು ಉದ್ಭವವಾಗದಿದ್ದರೆ ಕವನಗಳು ಎಷ್ಟು ನೀರಸವಾಗುತ್ತವೆ ಎಂಬುದಕ್ಕೆ, "ಮಗ್ಗಿ ಕಲಿಸುವೆನು", "ದೇಶಕೆಂತು ಪೋಷಣೆ", "ಬಾಪೂ" ಮುಂತಾದ ಕವನಗಳು ಸಾಕ್ಷಿ.

ಲೇಖಕರ ಮತ್ತೊಂದು ನ್ಯೂನತೆಯೆಂದರೆ ಓದುಗರ ಆಲೋಚನೆಗೆ ಏನನ್ನೂ ಬಿಡದೆ ಎಲ್ಲವನ್ನು ತಾವೆಯೇ ಹೇಳಿ ಮುಗಿಸುವುದು. ಕೆಲವು ಕವನಗಳ ಅಂತ್ಯವೂ ಕೂಡ ಅಸಂಬದ್ಧ :

"ಹರಿಗೆ ಎಂದು ಗುಡಿಯನೊಂದು ಕಟ್ಟುತಿರುವೆಯ ?
ಹರಿಯ ವಿಶ್ವರೂಪವನ್ನು ಮರೆತು ಬಿಟ್ಟೆಯ ?"
"ನಿಂತು ಹೋಯಿತು ನಾನು ಕಟ್ಟಬೇಕೆಂದಿದ್ದ ಕವಿತಾಗುಡಿ."

ಇದ್ದುದರಲ್ಲಿ ಓದಬಹುದಾದ ಪದ್ಯಗಳೆಂದರೆ 'ಬೀದಿನಾಯಿಗೆ', 'ಗಳಗನಾಥರ ಒಂದು ದಿವ್ಯ ಸ್ಮರಣೆ'. ಕಥನಗೀತೆಗಳಂತಿರುವ 'ರಾಮಪ್ಪ ಅಸ್ತು ಎಂದ', 'ದೀವಿಗೆ' ಪದ್ಯಗಳು ಸುಮಾರಾಗಿವೆ ಎನ್ನಲು ಅಡ್ಡಿಯಿಲ್ಲ.

ಒಟ್ಟಿನಲ್ಲಿ ಸಂಗ್ರಹ ಆಶಾದಾಯಕವಾಗಿಲ್ಲ. ಲೇಖಕರಿಗೆ ಕವನಗಳನ್ನು ಬರೆಯಲೇಬೇಕೆಂಬ ಇಚ್ಛೆ ಇದ್ದರೆ ಭಾವನೆಗಳ ಅಭಿವ್ಯಕ್ತಿಯಲ್ಲಿ ಇನ್ನೂ ಮಾಗಿ, ಭಾಷೆಯ ಶುದ್ಧ ಪ್ರಯೋಗದಲ್ಲಿ ಚೆನ್ನಾಗಿ ಪಳಗಬೇಕು. ವಾಚ್ಯತೆಯನ್ನು ಹೋಗಲಾಡಿಸಿ ಸೂಚ್ಯತೆಯನ್ನು ಕಾಪಾಡಿಕೊಂಡು, ಪ್ರಾಸಪ್ರಿಯತೆಯನ್ನು ಬದಿಗಿಟ್ಟು ಭಾವ ಭಾಷೆಗಳಲ್ಲಿ ಸಾಮರಸ್ಯವನ್ನು ಕಂಡುಕೊಂಡು ಕವನಗಳನ್ನು ಬರೆದ ಪಕ್ಷಕ್ಕೆ, ಒಳ್ಳೆಯ ಕವನಗಳನ್ನು ನಿರೀಕ್ಷಿಸಲು ಸಾಧ್ಯ. ಅದಕ್ಕಾಗಿ ಹಿಂದಿನ ಮತ್ತು ಇಂದಿನ ಕಾವ್ಯಗಳ ಆಳವಾದ ಅಭ್ಯಾಸ ಅಗತ್ಯ.

—ಸದಾಶಿವ, ಎಣ್ಣೆಹೊಳೆ

ವಸ್ತುಕೋಶ

೪೭ನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಕನ್ನಡದ ಇತಿಹಾಸದಲ್ಲಿ ದಿನಾಂಕ ೨೫–೧೨–೧೯೭೦ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ದಿನ. ಅಂದು, ಐದು ದಿನಗಳು ನಡೆಯಲಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ ಮತ್ತು ೪೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಕಾರ್ಯಕಲಾಪಗಳಿಗೆ ಶುಭವನ್ನು ಹಾರೈಸಿದ ದಿನ. ನಡೆಯಲಿದ್ದ ಸಮಾರಂಭಕ್ಕೆ ನಾಡಿನ ಮೂಲೆ ಮೂಲೆಗಳಿಂದ ಆಗಮಿಸುತ್ತಿದ್ದ ಕನ್ನಡಿಗರು ಅಸಂಖ್ಯಾತ. ಎಲ್ಲರ ಮುಖದಲ್ಲೂ ಯಾವುದೋ ಹುರುಪು; ಎಲ್ಲರ ಕಣ್ಣಿಗೂ ವಿಶೇಷ ಆಕರ್ಷಣೆಯೆಂದರೆ ಸುವರ್ಣಮಹೋತ್ಸವ ಮತ್ತು ಸಾಹಿತ್ಯ ಸಮ್ಮೇಳನ ನಡೆಯಲೆಂದು ನಿರ್ಮಿಸಲಾಗಿದ್ದ ಶ್ರೀ ಬೆಳ್ಳಾವೆ ವೆಂಕಟನಾರಣಪ್ಪ ಮಂಟಪ; ಅದರ ವಿಸ್ತಾರ, ವೈಭವಗಳು !

ತಾ. ೨೫ರ ಸಂಜೆ ನಾಡಿನ ಕಲೆ, ಸಂಸ್ಕೃತಿ, ಸಾಹಿತ್ಯ ಮತ್ತು ಪತ್ರಿಕೆಗಳ ವೈಭವದ ಪರಂಪರೆಯನ್ನು ಮನಗಾಣಿಸುವ ಐದು ಪ್ರದರ್ಶನಗಳ ಉದ್ಘಾಟನೆ ನೆರವೇರಿತು. ಮಕ್ಕಳ ಮಂಟಪದ ಅಂಗಳದಲ್ಲಿ ನಡೆದ ಈ ಪ್ರದರ್ಶಗಳೆಲ್ಲದರ ಉದ್ದೇಶ ನಮ್ಮ ಸಾಹಿತ್ಯ, ಕಲೆಗಳಲ್ಲಿ ನಡೆದಿರುವ ಪ್ರಯೋಗಗಳು, ಬೆಳವಣಿಗೆಗಳನ್ನು ಪರಿಚಯಮಾಡಿಕೊಡಬೇಕೆಂಬುದು. ಪರಿಷತ್ತು ನಾಡಗೀತೆಯನ್ನಾಗಿ ಆರಿಸಿರುವ ಶ್ರೀ ಕುವೆಂಪು ವಿರಚಿತ 'ಜಯ್ ಭಾರತ ಜನನಿಯ ತನುಜಾತೆ; ಜಯಹೇ ಕರ್ಣಾಟಕ ಮಾತೆ' ಎಂಬ ಗೀತೆಯನ್ನು ನ್ಯಾಷನಲ್ ಕಾಲೇಜು ವಿದ್ಯಾರ್ಥಿನಿಯರು ಹಾಡುವುದರ ಮೂಲಕ ಅಂದಿನ ಕಾರ್ಯಕ್ರಮ ಪ್ರಾರಂಭವಾಯಿತು. ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ನಾರಾಯಣ ಅವರಿಂದ ಸ್ವಾಗತ ಭಾಷಣವಾದ ತರುವಾಯ ಕೃಷಿ ಸಚಿವ ಶ್ರೀ ಬಿ. ರಾಚಯ್ಯನವರು ಪ್ರಾಚ್ಯ ವಸ್ತು ಪ್ರದರ್ಶನವನ್ನೂ, ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಶ್ರೀ ಟಿ. ಕೆ. ತುಕೋಳರು ಚಿತ್ರಕಲಾ ಪ್ರದರ್ಶನವನ್ನೂ ಉದ್ಘಾಟಿಸಿದರು. ಪುಸ್ತಕ ಪ್ರದರ್ಶನದ ಉದ್ಘಾಟನೆ ಮಾಡಿದ ಸುಪ್ರಸಿದ್ಧ ಸಾಹಿತಿ ಶ್ರೀ ಜಿ. ಪಿ. ರಾಜರತ್ನಂ ಪರಿಷತ್ತನ್ನು "ಐವತ್ತೈದು ಕಮಾನುಗಳನ್ನು ಕೂರಿಸಿಕೊಂಡು ನಿಂತಿರುವ ಸೇತುವೆ" ಎಂದು ವರ್ಣಿಸಿ "ಕರ್ನಾಟಕವೇ ನಮಗೆ ಕೋಸಲ. ಕನ್ನಡವೇ ನಮ್ಮ ಕೋದಂಡರಾಮ. ಈ ರಾಮನ ಸೇವೆಯಿಂದಲೇ ಕನ್ನಡಿಗರ ಬಾಳ್ವೆ ಸಾರ್ಥಕ" ಎಂದು ಘೋಷಿಸಿದರು. ಹಿರಿಯ ಪತ್ರಕರ್ತ ಶ್ರೀ ದಿವಾಕರರ ಪಾಲಿಗೆ ಬಂದದ್ದು ಪತ್ರಿಕಾ

ಪ್ರದರ್ಶನದ ಉದ್ಘಾಟನೆಯ ಕಾರ್ಯ. ಅದನ್ನು ನೆರವೇರಿಸಿ ಅವರು ಪತ್ರಿಕಾ ಪ್ರದರ್ಶನದ ಔಚಿತ್ಯವನ್ನು ಒತ್ತಿ ಹೇಳಿದರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವಿಧಾನಸಭೆಯ ಅಧ್ಯಕ್ಷ ಶ್ರೀ ಎಸ್. ಡಿ. ಕೊಠಾವಳೆ ಪರಿಷತ್ತು ಕಲೆ, ಸಾಹಿತ್ಯಗಳ ಸದಭಿರುಚಿಯನ್ನು ಶ್ರೀಮಂತಗೊಳಿಸಬೇಕೆಂಬ ಸಲಹೆ ನೀಡಿದರು. ಡಾ. ಎಂ. ಚಿದಾನಂದ ಮೂರ್ತಿಯವರ ವಂದನಾರ್ಪಣೆಯೊಡನೆ ಸಭೆ ಮುಂದಿನ ಉತ್ಸವಗಳಿಗೆ ನಾಂದಿ ಹಾಡಿ ಮುಕ್ತಾಯವಾಯಿತು.

ಶನಿವಾರ, ತಾ. ೨೬-೧೨-೧೯೬೦ರಂದು 'ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ'ದ ಉದ್ಘಾಟನೆಯ ದಿನ. ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಆವರಣದಲ್ಲಿ ಸುವರ್ಣಮಹೋತ್ಸವ ಕಟ್ಟಡದ ಶಂಕುಸ್ಥಾಪನೆಯನ್ನು ಬೆಳಿಗ್ಗೆ ೮-೩೦ಕ್ಕೆ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ನೆರವೇರಿಸಿದರು.

ಹನ್ನೊಂದು ಘಂಟೆಗೆ 'ಬೆಳ್ಳಾವೆ ವೆಂಕಟನಾರಣಪ್ಪ ಮಂಟಪ'ದಲ್ಲಿ ದಿನದ ಕಾರ್ಯಕ್ರಮ ನಾಡಗೀತೆಯೊಂದಿಗೆ ಆರಂಭವಾಯಿತು. ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ನಾರಾಯಣ ಅವರು ಅತಿಥಿಗಳನ್ನು ಆದರ ಪೂರ್ವಕ ಸ್ವಾಗತಿಸಿ, ಭಾರತದಲ್ಲಿ ಚಿನ್ನದ ತವರಾದ ಕನ್ನಡ ಸಂಸ್ಕೃತಿಯ ವ್ಯಾಪ್ತಿಯನ್ನು ಸ್ಮರಿಸಿ, ಐದು ವರ್ಷಗಳ ಹಿಂದೆಯೇ ಚಿನ್ನದ ಹಬ್ಬ ನಡೆಯಬೇಕಿತ್ತೆಂದು ತಿಳಿಸಿದರು. ಕನ್ನಡಸಾಹಿತ್ಯ ಪರಿಷತ್ತಿನ ಸಾಧನೆ, ಬೆಳವಣಿಗೆಯನ್ನು ವಿಹಂಗಮ ದೃಷ್ಟಿಯಿಂದ ಸಭೆಗೆ ಪರಿಚಯಿಸಿದರು. ಕನ್ನಡ-ಕನ್ನಡ ನಿಘಂಟಿನ ಇತಿಹಾಸವನ್ನು ಪ್ರಸ್ತಾಪಿಸಿ, ಅದು ಸಂಪೂರ್ಣವಾದಾಗ "ಯಾವ ಭಾರತೀಯ ಭಾಷೆಗಳಲ್ಲಿಯೂ ಇದು ಅದ್ವಿತೀಯ ಎನ್ನಿಸಿಕೊಳ್ಳುತ್ತದೆ ಎಂಬುದು ಅಭಿಮಾನದ ಸಂಗತಿ" ಎಂದು ಆಶಿಸಿದರು. "ಒಟ್ಟಿನಲ್ಲಿ, ಕನ್ನಡದಿಂದಲೇ ಕನ್ನಡಿಗರಿಗೆ ಮುಕ್ತಿ, ಕನ್ನಡದ ಮೂಲಕವೇ ಕನ್ನಡ ಜನ ಬೆಳೆಯಬೇಕು, ತಾವು ಬೆಳೆದು ಕನ್ನಡ ನಾಡಿನ ಮತ್ತು ಭಾರತದ ಎಲ್ಲ ಸಂಪತ್ತನ್ನು ಬೆಳೆಸಬೇಕು, ಎಂಬುದೇ ಈ ಐವತ್ತೈದು ವರ್ಷಗಳಲ್ಲಿ ನಮ್ಮ ಮಂತ್ರವಾಗಿದೆ. ಕನ್ನಡ ನಾಡಿನ ಸೇವೆ, ಆ ಮೂಲಕ ಈ ಪವಿತ್ರ ರಾಷ್ಟ್ರದ ಸೇವೆ—ಇದೇ ಕನ್ನಡ ಸಾಹಿತ್ಯ ಪರಿಷತ್ತಿನ ಭಾಗ್ಯವಾಗಿದೆ"—ಎಂದು ಪರಿಷತ್ತಿನ ಚೈತನ್ಯದ ಮೂಲವನ್ನು ಘೋಷಿಸಿದರು. ಎಲ್ಲ ಹಂತಗಳಲ್ಲಿ ಕನ್ನಡವನ್ನು ಶಿಕ್ಷಣ ಮಾಧ್ಯಮ, ಆಡಳಿತ ಭಾಷೆಯನ್ನಾಗಿ ಮಾಡುವವರೆಗೆ ಸತತ ಶ್ರಮಿಸಬೇಕೆಂದು ಹಾರೈಸಿ, ಕನ್ನಡದ ಈ ನಿಲಯದಲ್ಲಿ ಸೇವೆ ಸಲ್ಲಿಸಿದ ಹಿರಿಯರನ್ನು ಭಕ್ತಿಯಿಂದ ಸ್ಮರಿಸಿದರು.

ಉಪರಾಷ್ಟ್ರಪತಿ ಶ್ರೀ ಜಿ. ಎಸ್ ಪಾಠಕ್, ಡಾ. ಡಾ. ಎಸ್. ರಾಧಾಕೃಷ್ಣನ್ ಮುಂತಾದ ಮಹನೀಯರು ಕಳುಹಿಸಿದ್ದ ಶುಭ ಸಂದೇಶಗಳನ್ನು ಪರಿಷತ್ತಿನ ಮಾಜಿ ಅಧ್ಯಕ್ಷ ಶ್ರೀ ಜಿ. ವೆಂಕಟಸುಬ್ಬಯ್ಯನವರು ಓದಿದರು.


ಬಳಿಕ ರಾಜ್ಯಪಾಲ ಶ್ರೀ ಧರ್ಮವೀರ ಅವರಿಂದ ಪರಿಷತ್ತಿನ ಹೊನ್ನುಹಬ್ಬ

ವನ್ನು ದೀಪವನ್ನು ಬೆಳಗುವುದರ ಮೂಲಕ ಉದ್ಘಾಟಿಸಲಾಯಿತು. ಕನ್ನಡ ಭಾಷೆಗೆ ಇರುವ ಸಮೃದ್ಧತೆ, ಪ್ರಾಚೀನತೆ, ರಾಜಕೀಯವಾಗಿ ಅದರ ಚರಿತ್ರೆ, ಆಧುನಿಕ ಯುಗದಲ್ಲಿ ಪಾಶ್ಚಾತ್ಯ ಪ್ರಭಾವದಿಂದಾಗಿ ಸಾಹಿತ್ಯ ಬೆಳೆದ, ಬೆಳೆಯುಯುತ್ತಿರುವ ರೀತಿಯನ್ನು ವಿವರಿಸಿದ ರಾಜ್ಯಪಾಲರು ಮುಂದುವರಿದು, ಇಡೀ ಭಾರತಕ್ಕೆ ಏಕಲಿಪಿ ಇರುವುದು ಸೂಕ್ತವೆಂದೂ ಅದು ಕಾರ್ಯರೂಪಕ್ಕೆ ಬರುವ ವರೆಗೆ, ಹತ್ತಿರದ ಭಾಷೆಗಳ ಸಾಮಾನ್ಯಲಿಪಿಗೆ ಯತ್ನಿಸಬೇಕೆಂದೂ ನುಡಿದರು. ದೇವನಾಗರಿ ಅಥವಾ ರೋಮನ್ ಲಿಪಿಗಳಲ್ಲಿ ಯಾವುದಾದರೂ ಒಂದು ಅದಕ್ಕೆ ಯೋಗ್ಯವಾದೀತೆಂಬ ಸೂಚನೆಯನ್ನಿತ್ತರು.

ಕನ್ನಡದ ಭೀಷ್ಮ ಶ್ರೀ ಡಿ. ವಿ. ಜಿ. ಅವರಿಂದ ಶುಭ ಹಾರೈಕೆ : "ಈ ಸಂಸ್ಥೆ ಹುಟ್ಟಿದ ದಿವಸ, ಅದರ ಕಾರ್ಯದಲ್ಲಿ ಭಾಗವಹಿಸಿದ್ದ ನನಗೆ ಈ ದಿನವನ್ನು ನೋಡುವ ಅವಕಾಶ ದೊರೆತದ್ದು ಕನಕಾಭಿಷೇಕ ಮಾಡಿಸಿಕೊಂಡ ಸಂತೋಷ ತಂದುಕೊಟ್ಟಿದೆ"—ಇದು ಡಿ. ವಿ. ಜಿ. ಯವರ ತೃಪ್ತಿ. ಜಗನ್ಮಾತೆ ಸರಸ್ವತಿಯ ಸನ್ನಿಧಾನದಲ್ಲಿ ಭಾಷಾ ವೈಷಮ್ಯಕ್ಕೆ ಸ್ಥಾನವಿಲ್ಲ. ಕನ್ನಡಕ್ಕಾಗಲಿ, ಕನ್ನಡ ಸಾಹಿತ್ಯ ಪರಿಷತ್ತಿಗಾಗಲಿ ಇತರರಲ್ಲಿ, ಅನ್ಯಭಾಷೆಗಳಲ್ಲಿ ದ್ವೇಷವಿಲ್ಲ ಎಂದು ಸ್ಪಷ್ಟ ಪಡಿಸಿದ ಅವರು, ಪರಿಷತ್ತು ಏನನ್ನು ಸಾಧಿಸಿದೆ ಎಂದು ಕೇಳುವವರಿಗೆ ಅದರ ಸಾಧನೆಯ ವಿವಿಧ ಹಂತಗಳನ್ನು ತೆರೆದು ತೋರಿಸಿದರು. "ಕನ್ನಡಕ್ಕೊಂದು ಭಾಷೆ, ಸಾಹಿತ್ಯವಿದೆ ಎನ್ನುವ ಅರಿವು ಜನತೆಗೆ ಬಂದದ್ದೇ ಪರಿಷತ್ತಿನಿಂದ" ಎಂದೂ ಅದರಿಂದ ಕರ್ಣಾಟಕ ಸಂಘಗಳು ಬೆಳೆದು ಬಂದ ಬಗೆಯನ್ನೂ, 'ಕನ್ನಡ ಚಳುವಳಿ'ಯಲ್ಲಿ ಕನ್ನಡಿಗರಿಗಿರುವ ನವೋತ್ಸಾಹವನ್ನೂ ಪ್ರಸ್ತಾಪಿಸಿದರು. "ಉತ್ಸಾಹ ಬೆಳವಣಿಗೆಯ ಲಕ್ಷಣ. ಆದರೆ ಅದು ಸ್ವಾಭಾವಿಕವಾಗಿ ಉದ್ವೇಗಕ್ಕೆ ತಿರುಗುತ್ತದೆ. ಹಾಗಾಗದಂತೆ ನೋಡಿಕೊಳ್ಳಬೇಕು. ಈ ಉತ್ಸಾಹಕ್ಕೆ ಒಂದು ರೂಪಕೊಟ್ಟು ಕಾರ್ಯೋನ್ಮುಖಗೊಳಿಸುವುದು ಪರಿಷತ್ತಿನ ಜವಾಬ್ದಾರಿ"—ಎಂದು ನುಡಿದರು ಡಿ. ವಿ. ಜಿ.

ಪರಿಷತ್ತು ಆರಂಭವಾದ ಕಾಲದಲ್ಲಿ ಕನ್ನಡದಲ್ಲಿ ಒಂದಾದರೂ ದಿನಪತ್ರಿಕೆ ಇರಲಿಲ್ಲ; ಹಾಗೆಯೇ ಕನ್ನಡ ಸಂಘ–ಸಂಸ್ಥೆಗಳೂ ಸಹ. ಮೊದಲು ಶ್ರೀ ಎ. ಆರ್. ಕೃ. ಮತ್ತು ಶ್ರೀ ಟಿ. ಎಸ್. ವೆಂಕಣ್ಣಯ್ಯನವರ ಪರಿಶ್ರಮದಿಂದ ಸೆಂಟ್ರಲ್ ಕಾಲೇಜು ಕರ್ಣಾಟಕ ಸಂಘ ರೂಪುಗೊಂಡಿತು. ಈಗ ದಿನಪತ್ರಿಕೆಗಳು, ಕನ್ನಡ ಸಂಘಗಳ ಎಷ್ಟಿವೆ?–ಎಂದು ಅಚ್ಚರಿಗೊಂಡ ಡಿ. ವಿ. ಜಿ. ಕಾರ್ಯೋನ್ಮುಖವಾದ ಕನ್ನಡ ಸಂಘ ಸಂಸ್ಥೆಗಳ ಒಂದು 'ಖಾನೇಷುಮಾರಿ' ತಯಾರಿಸಿ ಎಂದು ಪರಿಷತ್ತಿನ ಅಧ್ಯಕ್ಷರಿಗೆ ಸೂಚನೆಯನ್ನಿತ್ತರು.

ಕನ್ನಡದಲ್ಲಿ ಪಂಡಿತರ ಕೊರತೆಯ ಬಗ್ಗೆ ವಿಷಾದಿಸಿದ ಆಚಾರ್ಯರು "ಶ್ರೀಕಂಠಯ್ಯ, ಕೃಷ್ಣಶಾಸ್ತ್ರೀ, ವೆಂಕಟನಾರಾಣಪ್ಪ ಈಗ ಇಲ್ಲ. ಇರುವವರು



ಪರಿಷತ್ತಿನ ಅಧ್ಯಕ್ಷರ ಸ್ವಾಗತ ಭಾಷಣ



ಡಿ. ವಿ. ಜಿ. ಯವರ ಶುಭ ಹಾರೈಕೆ

ಡಿ. ಎಲ್. ನರಸಿಂಹಾಚಾರ್ಯರೊಬ್ಬರೇ ". ಆದ್ದರಿಂದ "ಬರೆಯಲು ಸಾಧಕವಾದ ಸಾಮುಗ್ರಿ, ಶಬ್ದ, ವ್ಯಾಕರಣ, ಛಂದಸ್ಸು, ಅಲಂಕಾರ, ಭಾಷಾ ಮರ್ಯಾದೆ ಗಳನ್ನು ತಿಳಿದಿರುವ ಪಂಡಿತರ ಅಗತ್ಯ "ವನ್ನು ಮನಮುಟ್ಟುವಂತೆ ಹೇಳಿದರು. "ಡಾ. ಎಂ. ವಿಶ್ವೇಶ್ವರಯ್ಯನವರು ನುಡಿದಂತೆ, ಕನ್ನಡ ಪ್ರಾದೇಶಿಕವಾಗಿರಬೇಕು, ವಿಶ್ವವ್ಯಾಪಿಯೂ ಆಗಬೇಕು. ಲೋಕದಲ್ಲಿ ಸ್ವಾರಸ್ಯವಾದುದನ್ನು ಕನ್ನಡಕ್ಕೆ ತಂದು ಲೋಕಗ್ರಾಹ್ಯವಾದುದನ್ನು ಕನ್ನಡ ನೀಡಬೇಕು "—ಎಂದು ಪ್ರಸ್ತುತ ಪರಿಸ್ಥಿತಿಯನ್ನು ಸೂಕ್ತವಾಗಿ ವಿವೇಚಿಸಿ ತಮ್ಮ ಶುಭ ಹಾರೈಕೆಗಳನ್ನು ಸಲ್ಲಿಸಿದರು, ಡಿ. ವಿ. ಜಿ.

" ಪ್ರಪ್ರಥಮ ಮಹಾಕಾರ್ಯ " ಎಂದು ಭಾವಿಸಿ ಕನ್ನಡ-ಕನ್ನಡ ನಿಘಂಟಿನ ಪ್ರಥಮ ಸಂಪುಟವನ್ನು ಬಿಡುಗಡೆ ಮಾಡಿದ ಹಣಕಾಸಿನ ಸಚಿವ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಪರಿಷತ್ತಿನ ಯಾವುದೇ ಕೆಲಸ ಹಣದ ಕೊರತೆಯಿಂದ ನಿಲ್ಲಿಸುವುದು ಬೇಡವೆಂದು ಹೇಳಿ, "ಸರ್ಕಾರದ ಸಹಾಯ ಸಿಕ್ಕುವ ಭರವಸೆ ಇರುವಾಗಲೇ ಹೆಚ್ಚಿನ ಕೆಲಸ ಮಾಡಿಸಿಕೊಳ್ಳಿ " ಎಂಬ ಸೂಚನೆ ನೀಡಿದಾಗ ದೀರ್ಘ ಕರತಾಡನ ವಾಯಿತು. ಭಾಷೆಯ ಬಗ್ಗೆ ಕನ್ನಡಿಗರ ಸಹನಶೀಲತೆ ಅಪಾರವೆಂದು ನುಡಿದು "ಮೂರು ಕೋಟಿ ಕನ್ನಡಿಗರ ಮಾನಾಪಮಾನದ ಪ್ರಶ್ನೆ, ಅಳಿವು ಉಳಿವುಗಳ ಪ್ರಶ್ನೆ ಎದುರಾದಾಗ ರಣಕಹಳೆಗೆ ಸಿದ್ಧತೆ ಮಾಡಿಕೊಂಡಿರಿ " ಎಂದು ಅಖಿಲ ಕರ್ಣಾಟಕದ ಪ್ರತಿನಿಧಿಗಳಿಗೆ ಚೈತನ್ಯದಾಯಕ ನುಡಿಗಳನ್ನಾಡಿದರು.

ಸುವರ್ಣ ಮಹೋತ್ಸವದ ವರ್ಷದಲ್ಲಿ ತ್ರೈಮಾಸಿಕ ಯೋಜನೆಯ ಪ್ರಕಾರ ಪರಿಷತ್ತು ಪ್ರಕಟಿಸಲು ಉದ್ದೇಶಿಸಿರುವ ೫೦ ಪುಸ್ತಕಗಳಲ್ಲಿ ಹದಿಮೂರು ಪುಸ್ತಕ ಗಳನ್ನು ಶಿಕ್ಷಣಸಚಿವ ಶ್ರೀ ಕೆ. ವಿ. ಶಂಕರಗೌಡರು ಬಿಡುಗಡೆ ಮಾಡಿ 'ಪರಿಷತ್ತಿನ ಈ ಪ್ರಕಟಣೆ ಸಮಯೋಚಿತ ' ಎಂದರು.

ಹೊನ್ನುಹಬ್ಬದ ಸವಿನೆನಪಿಗಾಗಿ ಸಿದ್ಧವಾಗಿದ್ದ ಸ್ಮರಣಸಂಚಿಕೆ 'ಚಿನ್ನದ ಬೆಳಸು ' ಗ್ರಂಥವನ್ನು ಕೇಂದ್ರ ಸಚಿವ ಶ್ರೀ ಕೆ. ಹನುಮಂತಯ್ಯನವರು ಬಿಡುಗಡೆ ಮಾಡಿ ಪರಿಷತ್ತಿಗಾಗಿ ಸೇವೆ ಸಲ್ಲಿಸಿದ ಗುರುಹಿರಿಯರನ್ನು ಸ್ಮರಿಸಿಕೊಂಡರು. ಸಕಲ ಭಾಷಾಸಾಹಿತ್ಯ ಪರಿಷತ್ತುಗಳಿಗೆ ಕೇಂದ್ರ ಪರಿಷತ್ತೊಂದಿದ್ದರೆ ನಾನಾ ಭಾಷಾ ಪ್ರತಿನಿಧಿಗಳ ನಡುವೆ ಮಧುರ ಬಾಂಧವ್ಯ ಬೆಳೆಯಲು ಸಾಧ್ಯವಾಗುತ್ತ ದೆಂದು ಸಲಹೆ ಕೊಟ್ಟು "ನಾವು ನಮ್ಮ ಭಾಷಾ ಮಟ್ಟವನ್ನು ಅಂತರರಾಷ್ಟ್ರೀಯ ಮರ್ಯಾದೆ ಪಡೆಯುವ ಹಂತಕ್ಕೇರಿಸಿ, ಆ ಕಾಲವನ್ನು ಕಾಣಬೇಕು " ಎಂದು ಆಶಿಸಿದರು.

ಅನಂತರ ಸಮಾರಂಭದ ಅಧ್ಯಕ್ಷರಾದ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಕನ್ನಡ ನಾಡು—ನುಡಿಗೆ ಈ ಉತ್ಸವವು ಶೋಭಾಯಮಾನವಾಗಲೆಂದು ಹಾರೈಸಿದರು. "ಕನ್ನಡದಲ್ಲಿ ನವ್ಯಪ್ರಯೋಗಗಳು ಬಂದಿದ್ದರೆ ಅವು ಗುಡಿ

ಗೋಪುರಗಳಿಲ್ಲದ ಈ ಪರಿಷನ್ಮಂದಿರದಿಂದಲೇ. ಕಾವ್ಯವಾಚನದ ಅಭಿರುಚಿ ಮೂಡಿದ್ದೂ ಈ ಮಂದಿರದಿಂದಲೇ; ಇದು ಶುದ್ಧ ಸಾಂಸ್ಕೃತಿಕ ಸಂಸ್ಥೆ" ಎಂದು ಶ್ಲಾಘಿಸಿದರು. "ಕನ್ನಡ ಆಡಳಿತ ಭಾಷೆ ಬೇಗನೆ ಆಗಲೆಂದು ನನ್ನ ಆಸೆ. ಇಂದೇ ಆದರೆ ಸಂತೋಷ. ಪಂಡಿತೋತ್ತಮರ ಸಲಹೆ, ಮಾರ್ಗದರ್ಶನ ಪಡೆದು ಅವರು ತೋರಿದ ದಾರಿಯಲ್ಲಿ ನಾನು ನಡೆಯಲು ಸಿದ್ಧ. ಶೀಘ್ರದಲ್ಲಿ ಆಗುವ ಸೂಚನೆ ಇದೆ"—ಇದು ಮುಖ್ಯಮಂತ್ರಿಗಳು ಅಂದು ಕನ್ನಡ ಆಡಳಿತ ಭಾಷೆಯಾಗುವುದರ ಬಗ್ಗೆ ವ್ಯಕ್ತಪಡಿಸಿದ ಸ್ಪಷ್ಟವಾದ ಅಭಿಪ್ರಾಯ. ಆಧುನಿಕ ಕನ್ನಡ ಸಾಹಿತ್ಯದ ನಿಲುವು, ವ್ಯಾಪ್ತಿಯನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಷತ್ತಿನ ಕಾರ್ಯವ್ಯಾಪ್ತಿ ಇನ್ನೂ ಅಧಿಕವಾಗಬೇಕೆಂದರು. ಅಧ್ಯಕ್ಷರ ಭಾಷಣ ಪ್ರಾರಂಭವಾಗಿ ಮುಕ್ತಾಯವಾಗುವವರೆಗೂ ಸುಮಾರು ಐದಾರು ಸಲವಾದರೂ ಹರ್ಷಪುಲಕಿತವಾದ ಜನಸಮೂಹ ಸುದೀರ್ಘ ಕರತಾಡನ ಮಾಡಿತು.


ಸಾಹಿತ್ಯ ಪರಿಷತ್ತಿನ ಕಾರ್ಯಸಮಿತಿ ಸದಸ್ಯ ಪ್ರೊ. ಆರ್. ವೈ. ಧಾರವಾಡಕರ್ ಅವರ ವಂದನಾರ್ಪಣೆಯೊಡನೆ ಬೆಳಗಿನ ಕಾರ್ಯಕ್ರಮ ಮುಕ್ತಾಯವಾಯಿತು.

'ಅಂತರ್‌ಭಾರತಿ' ವಿಚಾರ ಸಂಕಿರಣ

ಅಂದು ಮಧ್ಯಾಹ್ನ ೩-೧೫ಕ್ಕೆ 'ಅಂತರ್‌ಭಾರತಿ' ವಿಚಾರ ಸಂಕಿರಣ ವೇದಘೋಷದೊಡನೆ ಆರಂಭವಾಯಿತು. ರಾಷ್ಟ್ರಕವಿ ಕುವೆಂಪುರವರ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾರಂಭ ಒಂದು ಅಪರೂಪ ಸನ್ನಿವೇಶ. ಮೊದಲಸಲ ವಿವಿಧ ಭಾಷಾ ವಿದ್ವಾಂಸರ ಸಂಗಮವಾಗಿ ಒಬ್ಬೊಬ್ಬರೂ ತಮ್ಮ ತಮ್ಮ ಭಾಷೆಯ ಒಲವು-ನಿಲವನ್ನು ಸಭೆಗೆ ಪರಿಚಯಿಸಬೇಕಾಗಿತ್ತು. ಇತರ ಭಾಷಾ ಬಂಧುಗಳಿಂದ ಅವರ ಭಾಷೆ, ಸಾಹಿತ್ಯ ಸಂಸ್ಕೃತಿಗಳ ಪರಿಚಯ ಪಡೆಯುವುದು ಪ್ರತಿ ಸಮ್ಮೇಳನಗಳಲ್ಲಿ ನಡೆದು ಬಂದಿದೆ. ಮೊದಲು ಪರಿಷತ್ತಿನ ಅಧ್ಯಕ್ಷರು, "ಭಾಷೆ ಹಲವು, ಆದರೆ ಮೂಲ ಒಂದೇ–ಎಂಬ ಸಾರ್ವಕಾಲಿಕ ಸತ್ಯವನ್ನು ಕನ್ನಡಿಗರು ಮರೆತಿಲ್ಲ ಎಂಬುದಕ್ಕೆ ಸಾಕ್ಷಿ ಈ ವಿಚಾರಸಂಕಿರಣ" ಎಂದರು. ಪ್ರಾಸ್ತಾವಿಕ ಭಾಷಣ ಮಾಡಿದ ಗೋಷ್ಠಿಯ ನಿರ್ದೇಶಕ ಡಾ. ರಂ. ಶ್ರೀ. ಮುಗಳಿಯವರು "ಭಿನ್ನತೆಯಲ್ಲಿ ಏಕತೆ ಇರುವ ಭಾರತಾಂಬೆಯ ವೈಶಿಷ್ಟ್ಯವನ್ನು ಬೆಳಗುವ ಸಂಕೇತವಿದು" ಎಂದು ಸಾರಿ ಈ ಲೇಖನಗಳನ್ನು ಮುಂದೆ ಸಂಕಲನ ರೂಪದಲ್ಲಿ ಪ್ರಕಟಿಸಲಾಗುವುದೆಂದರು. ಮರಾಠಿ, ಅಸ್ಸಾಮಿ ಮತ್ತು ಪಂಜಾಬಿ ಸಾಹಿತ್ಯ ವಿಮರ್ಶಕರು ಅನಿವಾರ್ಯ ಕಾರಣದಿಂದ ಬರಲಾಗದಿದ್ದರೂ ಸಂಕಿರಣ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ವ್ಯಾಪಿಸಿತ್ತು. ಸೋದರ ಭಾಷೆ ಸಾಹಿತ್ಯಗಳಲ್ಲಿ ಭಾವೈಕ್ಯ, ಸೌಜನ್ಯ ಮೂಡಿಸುವ ಪರಿಷತ್ತಿನ ದೂರದೃಷ್ಟಿಯ ಪ್ರತೀಕವಾಗಿತ್ತು ಈ ಗೋಷ್ಠಿ.



ಪರಿಷತ್ತಿನ ಪ್ರಕಟನೆಗಳ ಬಿಡುಗಡೆ



‘ಚಿನ್ನದ ಬೆಳಸು’ ಬಿಡುಗಡೆ

ಗೋಷ್ಠಿಯಲ್ಲಿ ಪಾಲ್ಗೊಳ್ಳದಿದ್ದರೂ ತಮ್ಮ ಲೇಖನ ಕಳುಹಿಸಿದ್ದ ವಂಗ ಭಾಷೆಯ ಕವಯಿತ್ರಿ ಶ್ರೀಮತಿ ನವನೀತಾ ಸೇನ್‌ರವರ ಲೇಖನವನ್ನು ಶ್ರೀ ನಾರಾಯಣ ಸಂಗಮ ಅನುವಾದ ಮಾಡಿ ಓದಿದರು. ಅವರ ಬರಹದ ತಿರುಳಿಷ್ಟು: "ಇಂದು ಬಂಗಾಳಿ ಜನರಿಗೆ ಸಾಹಿತ್ಯ 'ಮಾದಕ ಮತಿ ವ್ಯಾಪಾರ'. ಹದಿನೆಂಟರ ಹರೆಯದಲ್ಲಿ ಕವಿತೆ ಬರೆಯದವರೇ ಇಲ್ಲ. ಕಲ್ಕತ್ತೆಯ ಹಾದಿಬೀದಿಗಳಲ್ಲಿ ಯಾವ ಅಡ್ಡಿಯೂ ಇಲ್ಲದೆ ಸ್ಫೋಟಗೊಳ್ಳುವ ಬಾಂಬುಗಳ ಸ್ಫೋಟದ ಪ್ರತಿಕ್ರಿಯೆಯೇ ಸಾಹಿತ್ಯದಲ್ಲೂ ಕಂಡುಬರುತ್ತಿದೆ. ನಗ್ನ ಸತ್ಯವನ್ನೆದುರಿಸುವ ಕುರುಹು-ನೆನಹು ಇಂದಿನ ವಂಗ ಸಾಹಿತ್ಯದಲ್ಲಿ ಎದ್ದು ಕಾಣುತ್ತಿದೆ; ಭಾವಪೂರಕಕ್ಕೂ, ಅಂತ ರ್ಲಕ್ಷ್ಯಕ್ಕೂ ಸಮಾನ ಪೂರೈಕೆಯುನ್ನದು ತೋರುತ್ತಿದೆ."

"ಭಾರತೀಯ ಆಂಗ್ಲೇಯ ಸಾಹಿತ್ಯದ ಒಲವುನಿಲವುಗಳು ತೀರಾ ಸ್ವಸ್ಥ ವಾಗಿವೆ. ಇದೇ ಸ್ವಾಸ್ಥ್ಯ ನಮ್ಮ ರಾಜಕೀಯ, ಆರ್ಥಿಕ ರಂಗಗಳಲ್ಲಿ ಗೋಚರಿ ಸಿದ್ದರೆ ಭಾರತದ ಪ್ರಗತಿ ಅಂತರರಾಷ್ಟ್ರೀಯ ಮಟ್ಟಕ್ಕೇರುತ್ತಿತ್ತು."—ಇದು ಭಾರತೀಯ ಸಾಹಿತ್ಯ ಅಕಾಡೆಮಿಯ ಉಪಾಧ್ಯಕ್ಷ ಡಾ. ಕೆ. ಆರ್. ಶ್ರೀನಿವಾಸ ಅಯ್ಯಂಗಾರ್ ಅವರ ಲೇಖನದ ಸಾರ. ತರುವಾಯ ಗುಜರಾತಿ ಭಾಷೆಯ ಪ್ರತಿನಿಧಿ ಶ್ರೀ ಗುಲಾಬ್‌ದಾಸ್ ಬ್ರೋಕರ್ ಅವರು "ಅಸ್ಥಿರತೆ ತಾಂಡವಿಸುತ್ತಿರುವ ಈ ಯುಗದಲ್ಲಿ ಪರಂಪರೆಗೆ ಚ್ಯುತಿ, ಅಶ್ಲೀಲ ಶೃಂಗಾರಗಳ ಸೋಗು ಮಿತಿಮೀರಿದ್ದು ಈ ಪ್ರವೃತ್ತಿ ವಿಪರ್ಯಯವಾಗಿ ಮತ್ತೆ ಸೌಂದರ್ಯೋಪಾಸನೆಯ ಮಟ್ಟಕ್ಕೆ ಗುಜರಾತಿ ಸಾಹಿತ್ಯ ಹಿಂತಿರುಗುತ್ತಿದೆ" ಎಂದರು.

ಹಿಂದೀ ಸಾಹಿತ್ಯದ ಪ್ರತಿನಿಧಿ ಶ್ರೀ ಎಂ. ಕೆ. ಭಾರತೀರಮಣಾಚಾರ್ ಆಧುನಿಕ ಹಿಂದೀ ಸಾಹಿತ್ಯ ಹೇಗೆ ಭಾರತದ ಎಲ್ಲ ಪ್ರಾಂತೀಯ ಭಾಷೆಗಳಿಂದ ಪ್ರೇರಣೆ ಪಡೆದು ವರ್ಧಿಸುತ್ತಿದೆಯೆಂಬುದನ್ನು ನಿರೂಪಿಸಿದರು. ಬಳಿಕ ಕನ್ನಡದ ಪ್ರತಿನಿಧಿಯಾಗಿ ಶ್ರೀ ಸಾ. ಶಿ. ಮರುಳಯ್ಯ ತಮ್ಮ ವೈಚಾರಿಕ ಬರಹವನ್ನೋದಿದರು. "ವೇಷ ಬೇರೆ ಯಾದರೂ ಭಾಷೆ ಒಂದೇ. ೧೯೫೦ರ ನಂತರ ಅಡಿಗರ ಹಾದಿಯಲ್ಲಿ ನಡೆದು ನವ್ಯ ಪಂಥ ಶೈಲ ಶಿಖರದಲ್ಲಿದೆ. ಸ್ವಚ್ಛಂದತೆ, ವಾಸ್ತವಿಕತೆ ಮತ್ತು ಬದುಕಿನ ಸಮ ಕಾಲೀನ ಪ್ರಜ್ಞೆಗಳೇ ಪ್ರಧಾನವಾಗಿ ವ್ಯಕ್ತವಾಗುವ ನವ್ಯಪಂಥದಲ್ಲಿ ಯಾರು ಯಾರನ್ನೂ ಅನುಕರಿಸುತ್ತಿಲ್ಲ"—ಎಂದು ಹೇಳಿ ಕನ್ನಡದಲ್ಲಿ ಕಳೆದ ಒಂದು ದಶಕದ ಸಾಹಿತ್ಯಸೃಷ್ಟಿ ಅಮೋಘವಾದುದೆಂದರು.

ಅರ್ಥವಾಗದಿದ್ದರೂ ಕೇಳಲು ಹಿತವೆನಿಸಿದ ಕಾಶ್ಮೀರಿ ಪ್ರತಿನಿಧಿ ಶ್ರೀ ಪಿ. ಎನ್. ಪುಷ್ಪರ ಲೇಖನ ಬಹುಪಾಲು ಸಭಿಕರಿಗೆ ಬಹುವಾಗಿ ಹಿಡಿಸಿತು. "ಆಗಿಂದಾಗ್ಗೆ ಅತಿಕ್ರಮಣ, ಆಘಾತಕ್ಕೆ ಈಡಾದ ಕಾಶ್ಮೀರಿ ಸಾಹಿತ್ಯ ಶಾಂತಿಗಾಗಿ ತವಕಿಸುತ್ತಿದೆ" ಎಂದು ಹೇಳಿ ಮುಂದಿನಸಲ ಕನ್ನಡನಾಡಿಗೆ ಬಂದಾಗ ಕನ್ನಡದಲ್ಲೇ ಕಾಶ್ಮೀರಿ ಸಾಹಿತ್ಯದ ಪರಿಚಯ ನೀಡುವ ವಾಗ್ದಾನ ನೀಡಿದಾಗ ಕರತಾಡನವಾಯಿತು.

ಶ್ರೀ ಕೆ. ಪಿ. ಶಂಕರನ್ ಮಲೆಯಾಳಿ ಭಾಷೆಯನ್ನು ಸ್ಥೂಲವಾಗಿ ಪರಿಚಯಿಸಿದರು. ಅನಂತರ, ಭಾರತೀಯ ಭಾಷೆಗಳ ನಡುವೆ ಸರ್ಕಾರೇತರ ಭಾವೈಕ್ಯ ಸಾಧನೆಯ ಪ್ರಯತ್ನ ನಡೆಯಬೇಕೆಂದು ಓರಿಯಾ ಭಾಷೆಯ ಶ್ರೀ ಅನಂತ ಪಾಟ್ನಾಯಿಕ್ ಸೂಚಿಸಿದರು. ಪ್ರೊ. ಎಂ. ವರದರಾಜನ್ ತಮಿಳು ಭಾಷೆಯನ್ನು ಕುರಿತ ತಮ್ಮ ಲೇಖನ ಓದಿದರು. "ಸಾಹಿತ್ಯದಲ್ಲಿ ಸತ್ವವಿರುವುದನ್ನು ಕಾಲ ಸ್ವೀಕರಿಸಿ ಉಳಿದು ದನ್ನು ಬಿಟ್ಟುಬಿಡುತ್ತದೆ" ಎಂದರು. ಕೊನೆಯದಾಗಿ, ಶ್ರೀ ನಾರ್ಲ ವೆಂಕಟೇಶ್ವರ ರಾವ್ "ಇತ್ತೀಚಿಗೆ ತೆಲುಗು ಸಾಹಿತ್ಯದಲ್ಲಿ "ದಿಗಂಬರ ಕವಿ"ಗಳು ಪ್ರಸಿದ್ಧಿಗೆ ಬರುತ್ತಿದ್ದಾರೆ. ನೂತನ ಪ್ರಜ್ಞೆ. ಆದರ್ಶ ಸಮಾಜ ನಿರ್ಮಾಣದ ಆಕಾಂಕ್ಷೆ ಮತ್ತು ಧೈರ್ಯವಾದ ಅಭಿವ್ಯಕ್ತಿ ಕಂಡುಬರುತ್ತಿದೆ" ಎಂದು ಹೇಳಿದರು.

ತರುವಾಯ ವಿಚಾರ ಸಂಕಿರಣದ ಅಧ್ಯಕ್ಷ ಪೀಠದಿಂದ ಶ್ರೀಕವಿ ಕುವೆಂಪು ರವರು ಸರ್ವಭಾಷಾಮಯೀ ಸರಸ್ವತಿಯೂ ತಾಯಿ ಭಾರತಿಯ ಪ್ರತಿರೂಪವೆಂದು ಆಶಿಸಿ ಅಂತರ್‌ಭಾರತಿಯ ಉದ್ದೇಶ, ಭಾರತದ ಸಾಂಸ್ಕೃತಿಕ ಭಾವರೂಪದ ಸಮಷ್ಟಿ ಯನ್ನು ಪ್ರತಿನಿಧಿಸುವುದೇ ಆಗಿದೆ ಎಂದರು. ಭಾರತದ ವಿವಿಧ ಭಾಷೆಗಳ ಪ್ರತಿನಿಧಿಗಳ ಆಗಮನ, ತಾಯಿ ಭಾರತಿ ತನ್ನ ಚತುರ್ದಶ ಬಾಹುಗಳಿಂದ ನಮ್ಮನ್ನು ಆಲಿಂಗಿಸಿ ದಂತಾಗಿದೆ ಎಂದು ಕುವೆಂಪು ಹರ್ಷಿಸಿದರು. "ಭಾರತೀಯ ಭಾಷಾಕ್ಷೇತ್ರಗಳು ವಿವಿಧವಾದರೂ ಭಾರತೀಯತ್ವ ಒಂದೇ ಆಗಿದೆ. ಭರತಖಂಡ ಇದುವರೆಗೂ ಕಾಪಾಡಿಕೊಂಡು ಬಂದಿರುವ ಅಖಂಡತ್ವ ಯಾವ ರಾಜಕೀಯ ರಂಗದಿಂದಲೂ ಚ್ಯುತಿ ಪಡೆಯದು. ಇದು ಅನಾದಿ, ಅನಂತ"—ಎಂದು ರಾಷ್ಟ್ರೈಕ್ಯದ ಸಮನ್ವಯ ಸೂತ್ರವನ್ನು ಸಾರಿದ ಅವರು ಕನ್ನಡದ ನೆಲ, ಶಂಕರ ರಾಮಾನುಜ ಮುಂತಾದ ಮಹಿಮಾನ್ವಿತರಿಂದ ಹೇಗೆ ಸಾಂಸ್ಕೃತಿಕ ಬೀಡಾಗಿ ಪರಿಣಮಿಸಿದೆ ಎಂಬುದನ್ನು ವಿವರಿಸಿದರು.

ಅದೇ ಸಂಜೆ ೬ ಗಂಟೆಗೆ ಸಾಹಿತ್ಯ ಪರಿಷತ್ತು ಬೆಳ್ಳಾವೆ ವೆಂಕಟನಾರಣಪ್ಪ ಮಂಟಪದಲ್ಲಿಯೇ ಗಣ್ಯವ್ಯಕ್ತಿಗಳಿಗೆ ಸನ್ಮಾನ ಸಮಾರಂಭವನ್ನೇರ್ಪಡಿಸಿತ್ತು. ಸಾಹಿತ್ಯ,ಸಂಗೀತ, ವಿಮರ್ಶೆ, ಸಂಶೋಧನೆ, ಕಲೆ, ಇತ್ಯಾದಿ ಕ್ಷೇತ್ರಗಳಲ್ಲಿ ಗಣ ನೀಯವಾದ ಸೇವೆ ಸಲ್ಲಿಸಿದವರನ್ನು ಪರಿಷತ್ತು ಗೌರವಿಸುವುದರ ಮೂಲಕ ಕನ್ನಡ ಜನತೆಯೇ ಗೌರವಿಸಿತು. ಸಂಸ್ಥಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪ ನವರು ಈ ಸಮಾರಂಭದ ಅಧ್ಯಕ್ಷರು. ಡಾ. ಮಾಸ್ತಿಯವರು ಇದರ ಯಾಜ ಮಾನ್ಯ ವಹಿಸಿದ್ದರು. ಪೂಜ್ಯ ಮಾಸ್ತಿಯರೇ ಸನ್ಮಾನಿತರಿಗೆಲ್ಲ ಹಾರ ತೊಡಿಸಿದರು. ಶಾಲು ಹೊದಿಸಿ ಭುಜ ತಟ್ಟುತ್ತಿದ್ದರು. ಫಲಪತ್ರಗಳೊಡನೆ ಪ್ರಶಸ್ತಿಪತ್ರ, ದಂತದ ಪ್ರತಿಮೆಗಳನ್ನು ನೀಡಿ ಹೃದಯಪೂರ್ವಕವಾಗಿ ಆಶೀರ್ವದಿಸುತ್ತಿದ್ದರು. ಸನ್ಮಾನಿತ ರನೇಕರು ಅಣ್ಣ ಮಾಸ್ತಿಯವರ ಅಡಿಗೆರಗಿ, ಧನ್ಯಭಾವದಿಂದ ಹಿಂದಿರುಗುತ್ತಿದ್ದರು. ಈ ಸಂದರ್ಭದಲ್ಲಿ ಸನ್ಮಾನಿತರ ಹೆಸರುಗಳು ಈ ಕೆಳಕಂಡಂತಿವೆ:



‘ಅಂತರ್ ಭಾರತಿ’ಯ ಅಧ್ಯಕ್ಷರಾಗಿ ಕುವೆಂಪು



ಸನ್ಮಾನಿತರಿಗೆ ಶಾಸ್ತ್ರಿಯವರ ಆಶೀರ್ವಾದ

ಸರ್ವಶ್ರೀ ಕೆ. ಎಸ್. ನರಸಿಂಹಸ್ವಾಮಿ–ಕಾವ್ಯ; ಪರ್ವತವಾಣಿ–ನಾಟಕ; ಬಾಳಪ್ಪ ಏಣಗಿ–ಅಭಿನಯ; ತ. ರಾ. ಸುಬ್ಬರಾವ್—ಕಾದಂಬರಿ; ಕೀರ್ತಿನಾಥ ಕುರ್ತಕೋಟಿ–ವಿಮರ್ಶೆ; ಎಲ್. ಬಸವರಾಜು–ಸಂಶೋಧನೆ; ಬಿ. ಶಂಕರ ಭಟ್ಟ–ಶಿಶು ಸಾಹಿತ್ಯ; ಸಿ. ಎನ್. ಶ್ರೀನಿವಾಸ ಅಯ್ಯಂಗಾರ್–ವಿಜ್ಞಾನ ವಿಚಾರ ಸಾಹಿತ್ಯ; ಬುರ್ಲಿಬಿಂದುಮಾಧವ–ಗ್ರಂಥಪ್ರಕಾಶನ; ವೀರಕೇಸರಿ ಸೀತಾರಾಮ ಶಾಸ್ತ್ರಿ–ವೃತ್ತ ಪತ್ರಿಕಾ ಕ್ಷೇತ್ರ; ಬಸವಯ್ಯ ಮೈಸೂರು–ಶಿಲ್ಪಕಲೆ; ಎನ್. ಲಕ್ಷ್ಮೀನಾರಾಯಣರಾವ್–ಶಾಸನ ಸಂಶೋಧನೆ; ಡಾ. ಆರ್. ಸಿ ಹಿರೇಮಠ–ಗ್ರಂಥ ಸಂಪಾದನೆ; ವೀಣೆ ವೆಂಕಟಸುಬ್ಬರಾವ್–ಸಂಗೀತ; ಎನ್. ಲಕ್ಷ್ಮೀನಾರಾಯಣ–ಚಲನ ಚಿತ್ರ; ಮಾಂಬಾಡಿ ನಾರಾಯಣ ಭಾಗವತರು–ಯಕ್ಷಗಾನ; ಎನ್. ಕೆ. ಕುಲಕರ್ಣಿ–ಪ್ರಬಂಧ; ಶ್ರೀಮತಿ ಎಚ್. ಆರ್. ಲೀಲಾವತಿ–ಭಾವಗೀತೆಪ್ರಸಾರ; ಕ.ರಾ.ಕೃ.–ಜನಪದ ಸಾಹಿತ್ಯ ಸಂಗ್ರಹ; ಡಾ. ಎಸ್. ಶ್ರೀಕಂಠಶಾಸ್ತ್ರೀ–ವಿದ್ವತ್ತು; ಎಸ್. ವಿ. ಪರಮೇಶ್ವರ ಭಟ್ಟ–ಅನುವಾದ; ಹು. ಮ. ರಾಮಾರಾಧ್ಯ–ಗಮಕ ಕಲೆ; ಕೌಶಿಕ್, ಬೆಂಗಳೂರು–ನೃತ್ಯ ಕಲೆ; ಡಾ. ಎಂ. ಶಿವರಾಂ–ಹಾಸ್ಯ ಸಾಹಿತ್ಯ; ವೇಣುಗೋಪಾಲ ದಾಸರು–ಹರಿಕಥೆ; ಶ್ರೀಮತಿ ವಾಣಿ–ಮಹಿಳಾ ಲೇಖಕಿ; ಎಸ್. ಆರ್. ಸಿದ್ಧರಾಜು–ಕನ್ನಡ ಶೀಘ್ರಲಿಪಿ; ಕೆ. ಅನಂತಸುಬ್ಬರಾಯ–ಕನ್ನಡ ಟೈಪ್ ರೈಟಿಂಗ್; ಜಿ. ವೆಂಕಟಸುಬ್ಬಯ್ಯ–ಪರಿಷತ್ತಿನ ಸೇವೆ.

ಕೆಲವು ಅನಿವಾರ್ಯ ಕಾರಣಗಳಿಂದ ಸಭೆಗೆ ಬಾರದಿದ್ದ ಡಾ. ಎಸ್. ಶ್ರೀಕಂಠಶಾಸ್ತ್ರಿ, ಶ್ರೀ ವೀರಕೇಸರಿ ಸೀತಾರಾಮ ಶಾಸ್ತ್ರಿ, ವಿದ್ವಾನ್ ಬಿ. ಶಂಕರ ಭಟ್ಟರ ಪರವಾಗಿ ಅವರ ಬಂಧುಗಳು ಸನ್ಮಾನ ಸ್ವೀಕರಿಸಿದರು.

ಸನ್ಮಾನಿತರ ಪರವಾಗಿ ಪ್ರೊ. ಎಸ್. ವಿ. ಪರಮೇಶ್ವರ ಭಟ್ಟರು ಮಾತಾಡಿ, "ಇದು ಸಕಾಲ ದೃಷ್ಟಿ, ಆಗಬೇಕಾದ ಕಾಲದಲ್ಲಿ ಆದ ಕಾರ್ಯ" ಎಂದು ಪರಿಷತ್ತಿಗೆ ಕೃತಜ್ಞತೆ ಸಲ್ಲಿಸಿ, 'ನಿಮ್ಮ ಮುಂಡಿಗೆ ಹೂವ ತರುವೆನಲ್ಲದೆ ಹುಲ್ಲ ತಾರೆನೆ'ಂದು ವಚನ ನೀಡಿದರು.

ಸನ್ಮಾನಿತರಿಗೆಲ್ಲಾ ಅಣ್ಣನ ಸ್ಥಾನದಲ್ಲಿ ನಿಂತು ತುಂಬು ಹೃದಯದಿಂದ ಶುಭ ಹಾರೈಕೆ ಕೋರಿದ ಮಾಸ್ತಿಯವರು, "ಈ ಸಮಿತಿ ಸನ್ಮಾನಿಸಿದರೂ ಸಂತೋಷ; ಇಲ್ಲದಿದ್ದರೂ ಸಂತೋಷ. ಕಲಾವಿದ ಸಂಗೀತಗಾರ–ಯಾರೇ ಆಗಿರಲಿ, ಆತ ಮರ್ಯಾದೆಗಾಗಿ ಕಾದಿರುವುದಿಲ್ಲ, ಆದರೆ ಆತನಲ್ಲಿನ ಪ್ರತಿಭೆಯನ್ನು ಗುರುತಿಸಿ ಸನ್ಮಾನಿಸುವುದು ಜನತೆಯ, ಸಾಹಿತ್ಯ ಸಂಘಗಳ ಕೆಲಸ........ಕನ್ನಡ ತಾಯಿಯ ಅಕ್ಕರೆಯ ಮಕ್ಕಳಾದ ನಿಮ್ಮನ್ನೆಲ್ಲಾ ತಾಯಿ ಗುರುತಿಸಿದ್ದಾಳೆ. ಸಂತೋಷಪಡಿ" ಎಂದು ಮತ್ತೊಮ್ಮೆ ಹರಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀ ಎಸ್. ನಿಜಲಿಂಗಪ್ಪನವರು ಅಂದು ರಾಜಕೀಯದಿಂದ ತಮಗೆ ದೊರೆತ ಮಾನಸಿಕ ಬಿಡುಗಡೆಗೆ ತೃಪ್ತಿಪಟ್ಟರು. ಅಲ್ಲಿ

ಒಗ್ಗೂಡಿದ್ದ ಜನಸಮೂಹವನ್ನು ಕಂಡ ಅವರು ಅದನ್ನು 'ಕನ್ನಡದ ವಿರಾಟ್ ರೂಪ'ವೆಂದು ಬಣ್ಣಿಸಿದರು. ಚಿನ್ನದ ಹಬ್ಬದ ಸವಿಯನ್ನುಂಡ ಅವರು "ಈ ಸಂಸ್ಥೆಯ ವಜ್ರಮಹೋತ್ಸವದಲ್ಲಿಯೂ ಅಣ್ಣಾ ಮಾಸ್ತಿಯವರು ಬಂದು, ಆಶೀರ್ವಾದ ನೀಡಲಿ. ನಾನೂ ಬರುತ್ತೇನೆ" ಎಂದು ಆಶಿಸಿದರು.

ಪರಿಷತ್ತಿನ ಕಾರ್ಯದರ್ಶಿ ಶ್ರೀ ಹಂಪ. ನಾ. ರಿಂದ ವಂದನಾರ್ಪಣೆಯೊಡನೆ ಹೊನ್ನುಹಬ್ಬ ಮುಕ್ತಾಯವಾಯಿತು. ಮಧ್ಯ ರಾತ್ರಿಯವರೆಗೂ ಮನರಂಜನಾ ಕಾರ್ಯಕ್ರಮಗಳು ಒಂದಾದಮೇಲೊಂದು ನಡೆಯುತ್ತಲೇ ಇದ್ದವು.

೪೭ನೆಯ ಕನ್ನಡ ಸಾಹಿತ್ಯ ಸಮ್ಮೇಳನ : ತಾ. ೨೬-೧೨-೧೯೭೦

ಸಮ್ಮೇಳನಾಧ್ಯಕ್ಷರ ಮೆರವಣಿಗೆ: ಅಂದು ಬೆಳಿಗ್ಗೆ ೪೭ನೆಯ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಪ್ರೊ. ದೇ. ಜವರೇಗೌಡರನ್ನು ಅಲಂಕೃತ ಸಾರೋಟಿನಲ್ಲಿ ಮೈಸೂರು ಬ್ಯಾಂಕ್ ಚೌಕದಿಂದ 'ಬೆಳ್ಳಾವೆ ವೆಂಕಟನಾರಣಪ್ಪ ಮಂಟಪ'ಕ್ಕೆ ಉತ್ಸಾಹ, ಸಡಗರಗಳಿಂದ ಅಭೂತಪೂರ್ವ ವೈಭವದೊಡನೆ ಕರೆದುಕೊಂಡು ಹೋಗಲಾಯಿತು. ಅಶ್ವಾರೂಢ ರಥಾರೋಹಣ ಮಾಡುವ ಮುನ್ನ ಶ್ರೀ ದೇ. ಜವರೇಗೌಡರು ಶ್ರೀ ಆಂಜನೇಯ ದೇವಸ್ಥಾನಕ್ಕೆ ಹೋಗಿ ಪೂಜಿಸಿ, ಪ್ರಸಾದ ಸ್ವೀಕರಿಸಿ ಹೊರಬಂದರು. ಮೆರವಣಿಗೆಯ ತೇರನ್ನವರು ಏರುತ್ತಿದ್ದಂತೆ ಕನ್ನಡ ದುಂದುಭಿ ಮೊಳಗಿತು, ಎಲ್ಲೆಲ್ಲಿಯೂ ಜಯಘೋಷ, ಕರತಾಡನ ಕೇಳಿ ಬಂದಿತು. ಹಿರಿ-ಕಿರಿಯರನೇಕರು ಪುಷ್ಪಹಾರ ಸಮರ್ಪಿಸಿದರು. ಅವೆನ್ಯೂ ರಸ್ತೆಯ ಮಾರ್ಗವಾಗಿ ಸಮ್ಮೇಳನಾಧ್ಯಕ್ಷರ ಮೆರವಣಿಗೆ ಹೊರಟಾಗ ಹಾದಿಯ ಇಕ್ಕೆಲಗಳಲ್ಲೂ ಅಗಾಧ ಜನಸ್ತೋಮ ನೆರೆದಿತ್ತು. ಮೆರವಣಿಗೆಯ ಮಾರ್ಗಗಳಲ್ಲಿ ಅಲ್ಲಲ್ಲಿ ತಳಿರು ತೋರಣ, ಕಮಾನುಗಳನ್ನು ನಿರ್ಮಿಸಿ 'ಕನ್ನಡದ ಸೇನಾನಿ'ಯನ್ನು ಸ್ವಾಗತಿಸಲಾಗಿತ್ತು. ದೇಜಗೌ ಹಸನ್ಮುಖಿಯಾಗಿ ಸಾರೋಟಿನಲ್ಲಿ ಮಂಡಿಸಿದ್ದರು. ಮಕ್ಕಳ ಕೂಟದ ದಳ ಮೆರವಣಿಗೆಗೆ ಹೊಸ ಕಳೆ ತಂದಿತ್ತು. ರಥ ಮುಂದೆ ಮುಂದೆ ಚಲಿಸಿದಂತೆ ಕನ್ನಡಿಗರು ಫಲಪುಷ್ಪಗಳನ್ನರ್ಪಿಸಿ ಗೌರವಿಸುತ್ತಿದ್ದರು. ಮೆರವಣಿಗೆ ಚಾಮರಾಜ ಪೇಟೆ, ಸಾಹಿತ್ಯ ಪರಿಷತ್ತಿನ ಮಾರ್ಗವಾಗಿ ಸಮ್ಮೇಳನ ಮಂಟಪಕ್ಕೆ ಬರುವ ವೇಳೆಗೆ ಹನ್ನೆರಡು ಗಂಟೆಯ ಸಮಯವಾಗಿತ್ತು. ಶ್ರೀ ದ. ರಾ. ಬೇಂದ್ರೆಯವರೊಡನೆ ಬಂದ ಅಧ್ಯಕ್ಷರನ್ನು ಸುಮಂಗಲಿಯರು ಪೂರ್ಣಕುಂಭ ಗೌರವದೊಡನೆ ಸ್ವಾಗತಿಸಿ ವೇದಿಕೆಗೆ ಕರೆತಂದರು. ಸಮ್ಮೇಳನಾಧ್ಯಕ್ಷರನ್ನು ಕಂಡ ಸಭೆ ದೀರ್ಘ ಚಪ್ಪಾಳೆಯೊಡನೆ ಸ್ವಾಗತಿಸಿತು. ಉತ್ಸಾಹ ಸಾಗರದಲ್ಲಿ ಮುಳುಗಿದ್ದ ಸಭೆ ಬೃಹತ್ತಾಗಿತ್ತು.

ವೇದಿಕೆಯ ಒಂದು ಪಕ್ಕದಲ್ಲಿ ಬೆಳ್ಳಾವೆಯವರ, ಮತ್ತೊಂದು ಪಕ್ಕದಲ್ಲಿ ಪ್ರಥಮ ಸಮ್ಮೇಳನಾಧ್ಯಕ್ಷ ಎಚ್. ವಿ. ನಂಜುಂಡಯ್ಯನವರ ಭಾವಚಿತ್ರಗಳ

ನ್ನಲಂಕರಿಸಲಾಗಿತ್ತು. ನಾಡಗೀತೆಯನ್ನು ಹಾಡಿದ ಬಳಿಕ ವಿವಿಧ ಸಂಘ-ಸಂಸ್ಥೆಗಳಿಂದ ಸಮ್ಮೇಳನಾಧ್ಯಕ್ಷರಿಗೆ ಪುಷ್ಪವರ್ಷ ಕರೆಯಲಾಯಿತು. ಸೊಲ್ಲಾಪುರ, ಮುಂಬಯಿ, ಕಾಸರಗೋಡು, ಹೈದರಾಬಾದ್ ಇತ್ಯಾದಿ ಕನ್ನಡ ಸಂಘ ಸಂಸ್ಥೆಗಳ ಪರವಾಗಿ ಪ್ರತಿನಿಧಿಗಳು ಹಾರ ಸಮರ್ಪಿಸಿದರು. ನಗರ ವಿಶ್ವವಿದ್ಯಾನಿಲಯದ ಉಪಕುಲಪತಿ ಶ್ರೀ ಟಿ. ಕೆ. ತುಕೋಳರು ಹಾರ ಸಮರ್ಪಿಸಲು ಬಂದಾಗ ಇಬ್ಬರು ಉಪಕುಲಪತಿಗಳ ಸಮಾಗಮವಾಗಿ ಸಭಿಕರಿಗೆ ಆನಂದವಾಯಿತು. ಶ್ರೀ ಶ್ರೀ ಶ್ರೀ ಶೃಂಗೇರಿ ಜಗದ್ಗುರುಗಳು ಕಳುಹಿಸಿದ್ದ ಸಂದೇಶ ಹಾಗೂ ಆಶೀರ್ವಾದವನ್ನು ಓದಲಾಯಿತು.

ಸ್ವಾಗತ ಭಾಷಣದಲ್ಲಿ ಪರಿಷತ್ತಿನ ಅಧ್ಯಕ್ಷರು, ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರದಲ್ಲಿ ಪರಿಷತ್ತು ಸಲ್ಲಿಸುತ್ತಿರುವ ಸೇವೆಯನ್ನು ವಿವರಿಸಿ, ಪರಿಷತ್ತಿನ ಸ್ಥಾಪನೆಗಾಗಿ, ಅದನ್ನು ಬೆಳಸುವ ಸಲುವಾಗಿ ದುಡಿದ ಮಹನೀಯರನ್ನು ಸ್ಮರಿಸಿದರು. ಶ್ರೀ ದೇಜಗೌರವರ ವ್ಯಕ್ತಿತ್ವವನ್ನು ಸ್ಫುಟವಾದ ಮಾತುಗಳಲ್ಲಿ ಚಿತ್ರಿಸಿ ಸರ್ವರನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

೪೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನೆ ಮಾಡಿದವರು ಶ್ರೀ ಸಿದ್ಧಗಂಗಾ ಮಠಾಧೀಶರಾದ ಶ್ರೀ ಶಿವಕುಮಾರ ಸ್ವಾಮಿಗಳು. ಸಮ್ಮೇಳನದ ಜವಾಬ್ದಾರಿಯನ್ನು ಸೂಚಿಸಿದ ಶ್ರೀಯುತರು, "ಯಾವುದು ನಮ್ಮ ಆಸ್ತಿಯಾಗಿತ್ತೋ ಅದು ಕೈಬಿಟ್ಟುಹೋಗುವ ಸನ್ನಿವೇಶವುಂಟಾಗಿದೆ. ಆದ್ದರಿಂದ ಮಹೋನ್ನತವಾದ ಸಂಘಟಿತ ಶಕ್ತಿ ಗಳಿಸಿ ಗಡಿ ರಕ್ಷಣೆ ಮಾಡಬೇಕಾಗಿದೆ" ಎಂದು ಕರ್ತೃತ್ವ ಶಕ್ತಿಯ ಆವಶ್ಯಕತೆಯನ್ನು ನಿರೂಪಿಸಿದರು. ಸ್ವಾಭಿಮಾನವಿಲ್ಲದ ಯಾವ ರಾಷ್ಟ್ರವೂ ಉದ್ಧಾರವಾಗದು ಎಂದು ತಿಳಿಸಿದ ಅವರು 'ಸಾಹಿತ್ಯ ಸಮ್ಮೇಳನ ಮತ್ತು ಸಾಹಿತ್ಯ ಪರಿಷತ್ತುಗಳು ಈ ಪರಿಸ್ಥಿತಿಯಲ್ಲಿ ಯೋಗ್ಯ ಮಾರ್ಗದರ್ಶನ ಮಾಡಬೇಕು' ಎಂದು ಸೂಚಿಸಿದರು. "ಕೇಂದ್ರ ಸರ್ಕಾರದ ನಿಲುವಿನಿಂದ ಉಂಟಾಗಿರುವ ಪ್ರಕ್ಷುಬ್ಧ ವಾತಾವರಣದಿಂದ ಜನಮನ ಕಲಕಿದೆ. ಕನ್ನಡ ನಾಡಿನ ಭವಿಷ್ಯ ಕುರಿತು ಚಿಂತನೆ ಮಾಡಬೇಕಾದ ಪರಿಸ್ಥಿತಿಯಲ್ಲಿದ್ದೇವೆ ನಾವು"—ಎಂದು ಜನತೆಯನ್ನು ಎಚ್ಚರಿಸಿದರು. ಸಮ್ಮೇಳನಾಧ್ಯಕ್ಷರನ್ನು 'ಕನ್ನಡ ನಾಡಿನ ನೆಚ್ಚಿನ ಕುವರ' ಎಂದು ಸಂಬೋಧಿಸಿದ ಅವರು, ಶ್ರೀ ದೇಜಗೌರವರ ನೇತೃತ್ವದಲ್ಲಿ ಕನ್ನಡ ನುಡಿಯು ಸಂಕಷ್ಟ ಪರಿಹಾರವಾಗಿ ಔನ್ನತ್ಯಕ್ಕೇರುವುದರಲ್ಲಿ ಸಂಶಯವಿಲ್ಲವೆಂದರು.

"ಕತ್ತಿಗಿಂತ ಲೇಖನಿ ಹೆಚ್ಚು ಪ್ರಬಲ" ಎಂದು ನುಡಿದ ಶ್ರೀಗಳು ಮಂಟಪದಲ್ಲಿ ನೆರೆದಿದ್ದ ಬರಹಗಾರರಿಗೆಲ್ಲಾ "ನೈತಿಕ ಪತನದಿಂದ ಸಮಾಜವನ್ನು ಮೇಲೆತ್ತುವಲ್ಲಿ ಸಾಹಿತಿಗಳು ಅಮೋಘವಾಗಿ ಶ್ರಮಿಸಬೇಕು" ಎಂದು ಕರೆ ನೀಡಿದರು. "ಕನ್ನಡಿಗರಲ್ಲಿ ಮಹಾ ಚೈತನ್ಯವನ್ನು ಅಂಕುರಿಸುವ ಕಾರ್ಯ ಆಗಬೇಕಾಗಿದೆ........ಸ್ವಾಭಿಮಾನವಿಲ್ಲದಿದ್ದಲ್ಲಿ ಉದ್ಧಾರವಿಲ್ಲ. ಅದನ್ನು ಬೆಳೆಸಿ

ಕೊಳ್ಳಬೇಕು" ಎಂದ ಸ್ವಾಮಿಗಳು, ಶೀಘ್ರವಾಗಿ ಕನ್ನಡದ ಸ್ವರ್ಣಯುಗ ಆರಂಭ ವಾಗಲಿ ಎಂದು ಘೋಷಿಸಿದರು. ಶ್ರೀಗಳು ಸರಕಾರಕ್ಕೆ ಕೊಟ್ಟ ಒಂದು ಸೂಚನೆ ಎಂದರೆ ಪಂಡಿತ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪಂಡಿತರಿಗೂ ಇತರ ಪದವೀಧರ ಶಿಕ್ಷಕರ ಸ್ಥಾನವನ್ನೇ ಕಲ್ಪಿಸಬೇಕೆಂಬುದು.

ಶ್ರೀಗಳವರಿಂದ ಉದ್ಘಾಟನಾ ಭಾಷಣವಾದ ಬಳಿಕ ೪೬ನೆಯ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದ ಡಾ. ಆ. ನೇ. ಉಪಾಧ್ಯೆಯವರು ಮಾತ ನಾಡಿದರು. ಅವರು ಸಮ್ಮೇಳನಾಧ್ಯಕ್ಷರನ್ನು ಕುರಿತು "ಸಮ್ಮೇಳನದ ಅಧ್ಯಕ್ಷ ಪೀಠ ಬೆಳ್ಳಿಯ ಕಿರೀಟ ಮಾತ್ರ. ಆದರೆ ಇದು ಅವರ ತಲೆಯ ಮೇಲೆ ಹೊನ್ನಿನ ಕಿರೀಟವಾಗಿ ಶೋಭಿಸಲಿ. ಈ ಸುವರ್ಣ ಕಿರೀಟಕ್ಕೆ ಅವರು ಅಧಿಕ ಹೊಳಪು ತರುವಂತಾಗಲಿ" ಎಂದು ಹರಸಿದರು. ತಾವು ಮಾಡದ ಎಷ್ಟೋ ವಿಶೇಷ ಕಾರ್ಯಗಳನ್ನು ದೇಜಗೌರವರು ಹೆಚ್ಚು ಶೀಘ್ರವಾಗಿ ನಿರ್ವಹಿಸುವರೆಂಬ ನಂಬಿಕೆ ಯನ್ನು ವ್ಯಕ್ತಪಡಿಸಿದರು.

೪೭ನೆಯ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಶ್ರೀ ದೇಜಗೌ ಅಧ್ಯಕ್ಷ ಪೀಠದಿಂದ ಮಾಡಿದ ಭಾಷಣದ ಕೆಲವು ಭಾಗಗಳಿವು :

"ಕನ್ನಡಕ್ಕಾಗಿ ಕೈಯೆತ್ತು, ನಿನ್ನ ಕೈ ಕಲ್ಪವೃಕ್ಷವಾಗುತ್ತದೆ" ಎಂದು ಗುರು ನೀಡಿದ ಮಂತ್ರ ದೀಕ್ಷೆಯನ್ನು ತ್ರಿಕರಣಶುದ್ಧಿಯಾಗಿ ಬಳಸಿದುದರಿಂದ, ನನ್ನೆಲ್ಲ ವ್ಯವಹಾರಗಳಿಗೂ ಅದೇ ಸ್ಫೂರ್ತಿಶಕ್ತಿಯಾದದ್ದರಿಂದ, ಅದೇ ನನ್ನ ಜೀವನಮಂತ್ರವಾದದ್ದರಿಂದ, ನನ್ನ ಸುತ್ತಮುತ್ತಣ ಗುರುಹಿರಿಯರಿಗೆ ಮತ್ತು ಕಿರಿಯರಿಗೆ ತಕ್ಕಮಟ್ಟಿಗಾದರೂ ತೃಪ್ತಿಯಾಗುವಂತೆ ಹಗಲಿರುಳು ದುಡಿದು, ನನ್ನ ಇತಿಮಿತಿಗಳೊಳಗೆ ಸಾಧ್ಯವಾದಷ್ಟು ಸೇವೆಯನ್ನು ಪ್ರಾಮಾಣಿಕವಾಗಿ ಸಲ್ಲಿಸಿದ್ದೇ ನೆಂದರೆ ಅಹಂಕಾರದ ಮಾತೆಂದು ತಾವು ತಿಳಿಯಕೂಡದೆಂದು ವಿನಮ್ರನಾಗಿ ಪ್ರಾರ್ಥಿಸುತ್ತೇನೆ. "ಎನಗಿಂತ ಕಿರಿಯರಿಲ್ಲ"ವೆಂಬುದೇ ನನ್ನ ಸ್ಪಷ್ಟ ಮತ. ಈ ಸ್ಥಾನಮಹಿಮೆಯಿಂದ ದೊರಕಬಹುದಾದ ಸಕಲ ಮರ್ಯಾದೆಯನ್ನು ಗುರು ಹಿರಿಯರಿಗೂ ಕಿರಿಯ ಮಿತ್ರರಿಗೂ ನನ್ನ ನಿಮ್ಮ ಹೃದಯಗಳಲ್ಲಿದ್ದು ನಮ್ಮನ್ನು ಸದಾ ಪೊರೆಯುತ್ತಿರುವ, ಪ್ರಚೋದಿಸುತ್ತಿರುವ ಕನ್ನಡಾಂಬೆಯ ರೂಪದ ಪರಮೇಶ್ವರಿಗೂ ಸಮರ್ಪಿಸುತ್ತೇನೆ.

ಮೈಸೂರು ವಿಶ್ವವಿದ್ಯಾನಿಲಯಕ್ಕೂ ಕನ್ನಡ ಸಾಹಿತ್ಯ ಪರಿಷತ್ತಿಗೂ ಅತಿಶಯವಾದ ಆತ್ಮೀಯ ಸಂಬಂಧವಿದೆಯೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಪರಿಷತ್ತಿನ ಸಂಸ್ಥಾಪಕರಲ್ಲೊಬ್ಬರಾಗಿ, ಪ್ರಥಮ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರಾದ ಶ್ರೀ ಹೆಚ್.ವಿ. ನಂಜುಂಡಯ್ಯನವರು ಧರ್ಮ ಕರ್ಮ ಸಂಯೋಗ ದಿಂದ ಕನ್ನಡ ನಾಡಿನಲ್ಲಿ ಪ್ರಪ್ರಥಮವಾದುದಾಗಿದ್ದು ಭರತಖಂಡದ ಪ್ರಾಚೀನ ಮಹಾವಿದ್ಯಾಲಯಗಳಲ್ಲಿ ಒಂದಾದ ಮೈಸೂರು ವಿಶ್ವವಿದ್ಯಾನಿಲಯದ ಪ್ರಪ್ರಥಮ

ಕುಲಪತಿಯಾದದ್ದು ಮಹತ್ವಪೂರ್ಣವೂ ಧ್ವನಿಯುಕ್ತವೂ ಆದ ಮಹಾಘಟನೆ ಯೆಂದೇ ಹೇಳಬಹುದು. ಒಂದು ದೃಷ್ಟಿಯಲ್ಲಿ ಈ ಎರಡೂ ಮಹಾಸಂಸ್ಥೆಗಳು ಅವರ ಮಾನಸಶಿಶುಗಳು. ಆ ಪುಣ್ಯಪುರುಷನ ತಪಶ್ಶಕ್ತಿಯಿಂದ ಈ ಎರಡು ಮಹಾ ಸಂಸ್ಥೆಗಳು ಕನ್ನಡ ನಾಡು ನುಡಿಗಳಿಗೆ ಶಂಕರಶಕ್ತಿಯಾಗಿ, ಕನ್ನಡಿಗರ ಆಶೋತ್ತರ ಗಳಿಗೆ ಕಲ್ಪವೃಕ್ಷವಾಗಿ, ಭರತಖಂಡವಷ್ಟೇ ಅಲ್ಲ, ಜಗತ್ತಿನ ಸಂಸ್ತುತಿಗೆ ಪಾತ್ರವಾಗಿ ಗಗನೋಪಮವಾಗಿ ಭವ್ಯವಾಗಿ ಬೆಳೆದು ನಿಂತಿವೆ. ಅಂದಿನಿಂದ ಇಂದಿನ ತನಕ ಈ ಎರಡು ಮಹಾಸಂಸ್ಥೆಗಳ ನಂಟು ದಿನದಿನಕ್ಕೆ ವರ್ಧಿಸುತ್ತ, ಅದು ಅದ್ವೈತಸಿದ್ಧಿ ಮುಖವಾಗಿರುವಂತೆ ತೋರುತ್ತದೆ.

ಪರಿಷತ್ತು ಶುರುವಾದಾಗಿನಿಂದ ಅವಸ್ಥಾತ್ರಯಗಳಲ್ಲಿಯೂ ನಾಡುನುಡಿ ಗಳಿಗೆ ಮಹಾರಕ್ಷೆಯಾಗಿ ಜನತೆಯ ಆಶೋತ್ತರಗಳಿಗೆ ನಾಲಗೆಯಾಗಿ ದಿನಕಳೆದಂತೆಲ್ಲ ಚೈತನ್ಯದಾಯಿಯಾಗಿ ವಿಗುರ್ವಣಶಕ್ತಿಯಾಗಿ ಬೆಳೆಯುತ್ತಿದೆ. ಬೆಳ್ಳಾವೆ ವೆಂಕಟ ನಾರಣಪ್ಪ, ಬಿ.ಎಂ. ಶ್ರೀಕಂಠಯ್ಯ, ಡಿ.ವಿ.ಜಿ., ಮಾಸ್ತಿ, ಶಿವಮೂರ್ತಿಶಾಸ್ತ್ರಿ, ಅನಕೃ ಮೊದಲಾದ ಮಹಾನುಭಾವರು ತಮ್ಮ ತನುಮನಧನಗಳನ್ನು ಧಾರೆ ಯೆರೆದು ಈ ಮಹಾಸಂಸ್ಥೆಯನ್ನು ದೊಡ್ಡದು ಮಾಡಿದ್ದಾರೆ. ಭಾಷಾಸಾಹಿತ್ಯ ಸಂಬಂಧವಾದ ಎಲ್ಲ ಚಟುವಟಿಕೆಗಳಿಗೆ ಅದು ಪರೋಕ್ಷವಾಗಿಯೊ ಪ್ರತ್ಯಕ್ಷವಾಗಿಯೊ ಪ್ರೋತ್ಸಾಹ ನೀಡುತ್ತ ಬಂದಿದೆ. ಅದಕ್ಕೆ ಭವ್ಯವಾದ ಕಟ್ಟಡಗಳಿಲ್ಲ, ಬೃಹತ್ತಾದ ಗ್ರಂಥಾಲಯವಿಲ್ಲ, ಲಕ್ಷಗಟ್ಟಲೆ ನಿಧಿಯಿಲ್ಲ, ಸಿಬ್ಬಂದಿವರ್ಗ ದೊಡ್ಡದಿಲ್ಲ; ಒಟ್ಟನಲ್ಲಿ ಅದು ತೇಲುನೋಟಕ್ಕೆ ಎದ್ದು ಕಾಣುವಂಥದಲ್ಲ. ಆದರೆ ಅದರ ಇತಿಹಾಸದ ಕಡೆಗೆ ಕಣ್ಣು ಹಾಯಿಸಿದಾಗ, ಅದರ ಅಭ್ಯುದಯಕ್ಕಾಗಿ ದುಡಿದಿರುವ ಮಹನೀಯರ ಹೆಸರುಗಳನ್ನು ಸ್ಮರಿಸಿಕೊಂಡಾಗ, ಪರಿಷತ್ತೆಂದರೆ ಕಲ್ಲು ಇಟ್ಟಿಗೆ ಗಾರೆಗಳ ಕಟ್ಟಡವಲ್ಲ, ಕನ್ನಡನಾಡಿನ ಏಕೀಕರಣವನ್ನು ಸಾಧಿಸಿ, ಕನ್ನಡ ಜನಮನ ವನ್ನೊಂದು ಮಾಡಿ, ಕರ್ನಾಟಕ ಸಂಸ್ಕೃತಿಯ ಮಹಾಜ್ಯೋತಿಯಾಗಿ ಕ್ಷೇಮಂಕರಿ ಯಾಗಿ ಕನ್ನಡವಿರ ವೆಡೆಯಲ್ಲೆಲ್ಲ ರಾರಾಜಿಸುವ ಮಹಾಶಕ್ತಿಯೆಂದು ವೇದ್ಯ ವಾಗದಿರದು. ಅದು ಕನ್ನಡ ಜನತೆಯ ಏಕೈಕ ಪ್ರಾತಿನಿಧಿಕ ಸಂಸ್ಥೆ. ಅದು ಆಗ ಮತ್ತು ಈಗ ತನ್ನ ಮುಂದಿರಿಸಿಕೊಂಡಿರುವ ಧ್ಯೇಯೋದ್ದೇಶಗಳು ಹಲವು; ಅವುಗಳನ್ನೆಲ್ಲ ತಾನೇ ಏಕಾಕಿಯಾಗಿ ಕಾರ್ಯಗತಗೊಳಿಸಬೇಕೆಂಬ ದೃಷ್ಟಿಯಿರ ಲಾರದು. ನಾಡುನುಡಿಗಳ ಏಳ್ಗೆಗಾಗಿ ದುಡಿಯುತ್ತಿರುವ ನಾನಾ ಸಂಘಸಂಸ್ಥೆ ಗಳಿಗೆ ಮಹಾವಿದ್ಯಾಲಯಗಳಿಗೆ ಸಂಪರ್ಕಶಕ್ತಿಯಾಗಿ ಸ್ಫೂರ್ತಿಶಕ್ತಿಯಾಗಿ, ಆ ಮೂಲಕ ತನ್ನ ಧ್ಯೇಯೋದ್ದೇಶಗಳನ್ನು ಈಡೇರಿಸಿಕೊಳ್ಳುತ್ತ ಮಾತೃಶಕ್ತಿಯಾಗಿ ಮೆರೆಯಬೇಕಾಗಿದೆ. ಆ ಧ್ಯೇಯೋದ್ದೇಶಗಳಲ್ಲಿ ಬಹುಪಾಲು ಈಗಾಗಲೇ ವಿಶ್ವ ವಿದ್ಯಾನಿಲಯಗಳಲ್ಲಿ ಅನೇಕ ಪ್ರಕಾಶನಸಂಸ್ಥೆಗಳಲ್ಲಿ ಕಾರ್ಯರೂಪಕ್ಕೆ ಬರುತ್ತಿವೆ. ಪ್ರಾಚೀನ ಗ್ರಂಥಗಳ ಪರಿಷ್ಕರಣ ಸಂಶೋಧನೆ ಸಾಹಿತ್ಯೇತರ ಗ್ರಂಥಗಳ ರಚನೆ

ಪಾರಿಭಾಷಿಕ ಶಬ್ದಕೋಶಗಳ ಪ್ರಕಟನೆ—ಈ ಮಹತ್ಕಾರ್ಯಗಳೆಲ್ಲ ಹಿಂದಿನಿಂದ ವಿಶ್ವ ವಿದ್ಯಾನಿಲಯಗಳಲ್ಲಿ ಯಶಸ್ವಿಯಾಗಿ ಕೈಗೂಡುತ್ತಿವೆ. ತಾನೇ ಕೆಲವು ಕಾರ್ಯ ಕ್ರಮಗಳನ್ನು ನೇರವಾಗಿ ಜರುಗಿಸುವುದರ ಜತೆಗೆ ಅಲ್ಲಲ್ಲಿ ನಡೆಯುತ್ತಿರುವ ಕಾರ್ಯ ಗಳನ್ನು ಸಂಘಟಿಸಬೇಕಾಗುತ್ತದೆ. ಪರಿಷತ್ತು ಈವರೆವಿಗೆ ಮಾಡಿರುವ ಕೆಲಸ ಗಾತ್ರದ ದೃಷ್ಟಿಯಿಂದ ಕಡಮೆಯಾದರೂ ಮಾಡಿಸಿರುವ ಕೆಲಸ ಅಗಾಧವಾಗಿದೆ ಯೆಂದು ಹೇಳಬಹುದಾಗಿದೆ. ಸಮ್ಮೇಲನಗಳ ಮೂಲಕ ಅದು ಸಾಧಿಸಿರುವ ಜನ ಜಾಗೃತಿ ಹಾಗೂ ಸಂಘಟನೆ, ಸಾಹಿತಿಗಳಿಗೆ ನೀಡಿರುವ ಪ್ರೋತ್ಸಾಹ, ಸರ್ಕಾರ ಹಾಗೂ ರಾಜಕೀಯ ಶಕ್ತಿಗಳ ಮೇಲೆ ಬೀರಿರುವ ಪ್ರಭಾವ, ಇವು ಸಾಮಾನ್ಯ ವೇನಲ್ಲ. ಈ ದೃಷ್ಟಿಯಿಂದ ಪರಿಷತ್ತಿನ ಈ ಅರ್ಧಶತಮಾನದ ಸಾಧನೆ ಸಿದ್ಧಿಗಳನ್ನು ಅಳೆಯಬೇಕಾಗಿದೆ. ಹಾಗೆ ಅಳೆದಾಗ ಅವು ಯಾರಿಗಾದರೂ ಸಮಾಧಾನವುಂಟು ಮಾಡಿಯಾವೆಂದು ಹೇಳಬಹುದಾಗಿದೆ. ಈಗ ಪರಿಷತ್ತಿಗೆ ಹಿಂದಿನ ಭವ್ಯ ಪರಂಪರೆಗನುಗುಣವಾದ ನಾಯಕತ್ವ ದೊರೆತಿದೆ. ಶ್ರೀ ಜಿ. ನಾರಾಯಣ ಅವರ ದಕ್ಷ ನೇತೃತ್ವದಲ್ಲಿ ಮುಖ್ಯ ಗುರಿಯ ಕಡೆಗೆ ಶೀಘ್ರವಾಗಿ ಸಾಗಿ ತನ್ನ ಅಸ್ತಿತ್ವವನ್ನು ಹಿಂದಿಗಿಂತ ಮುಂದೆ ಹೆಚ್ಚು ಸಾರ್ಥಕಪಡಿಸಿಕೊಂಡೀತೆಂಬ ಭರವಸೆ ಈಗಾಗಲೆ ಬಲ್ಲವರ ಮನಸ್ಸಿನಲ್ಲಿ ಮೂಡಿದೆ.

ಕನ್ನಡ ಭಾಷಾಸಾಹಿತ್ಯಗಳಂತೆ ಪ್ರಜ್ವಲವೂ ವೈವಿಧ್ಯಮಯವೂ ಸಂಪತ್ ಸಮೃದ್ಧವೂ ರಮ್ಯವೂ ಅವಿಚ್ಛಿನ್ನವೂ ಆದ ಸುದೀರ್ಘ ಇತಿಹಾಸವುಳ್ಳ ಭಾಷಾ ಸಾಹಿತ್ಯಗಳು ಜಗತ್ತಿನಲ್ಲಿಯೇ ಅತಿ ವಿರಳವೆಂದು ಹೇಳಿದರೆ ಅದು ಅಂಧಾಭಿಮಾನದ ಅತಿಶಯೋಕ್ತಿಯ ಜಲ್ಪವೆಂದು ಯಾರೂ ಕಡೆಗಣಿಸಬಾರದು. ಚಕ್ರವರ್ತಿಗಳು ಮಹಾಮಂತ್ರಿಗಳು ದಂಡಾಧೀಶರು ಸಂತರು ಸಮಾಜಸುಧಾರಕರು ವಿರಕ್ತರು ಸ್ತ್ರೀಯರು ವಿವಿಧ ಕಾಯಕದವರು ಭಾಷಾಸಾಹಿತ್ಯಗಳ ಮೇಲ್ಮೆಗಾಗಿ ತಮ್ಮ ಪ್ರತಿಭೆಯನ್ನು ಧಾರೆಯೆರೆದಿದ್ದಾರೆ. ಕಾಲಕಾಲಕ್ಕೆ ಸಂಸ್ಕೃತ ಪ್ರಾಕೃತ ಸಾಗರಗಳಿಂದ ಹರಿದುಬಂದ ಜ್ಞಾನವಾಹಿನಿಗಳನ್ನು ಗರ್ಭೀಕರಿಸಿಕೊಂಡು, ಅನೇಕ ಮತಗಳ ಸಂಘರ್ಷ ಸಂಮಥನಗಳಿಂದ ಸಂಲಬ್ಧವಾದ ಸಂಜೀವಿನೀ ಶಕ್ತಿಗಳಿಂದ ಪರಿಪುಷ್ಟಿ ಗೊಂಡು, ಕನ್ನಡ ಜನದ ಆಶೆ ಆಕಾಂಕ್ಷೆಗಳನ್ನು ಪ್ರತಿಬಿಂಬಿಸುತ್ತ, ಜನಜೀವನ ವನ್ನು ರೂಪಿಸುತ್ತ, ಕನ್ನಡ ಸಾಹಿತ್ಯ ಮಹಾಪೂರವಾಗಿ ಹರಿದುಬಂದಿದೆ; ಕನ್ನಡ ಭಾಷೆ ಶ್ರೀಮಂತವಾಗಿ ವಿಕಾಸಗೊಂಡಿದೆ. ಸ್ವಾತಂತ್ರ್ಯ ಚಳುವಳಿಯ ಫಲವಾಗಿ, ಪಾಶ್ಚಾತ್ಯ ಸಾಹಿತ್ಯ ಸಂಪರ್ಕದ ಪರಿಣಾಮವಾಗಿ ಕನ್ನಡ ಸಾಹಿತ್ಯವೃಕ್ಷ ಶಾಖೋ ಪಶಾಖೆಗಳಾಗಿ ಒಡೆದು ಫಲಪುಷ್ಪಗಳಿಂದ ಸಮೃದ್ಧವಾಗಿದೆ. ಪ್ರಾಯಃ ಒಂದೆರಡು ಭಾಷೆಗಳ ಸಾಹಿತ್ಯವನ್ನು ಬಿಟ್ಟರೆ ಗಾತ್ರವಿಸ್ತಾರ ವೈವಿಧ್ಯ ಶ್ರೀಮಂತತೆ ಗಳಲ್ಲಿ ಪ್ರಪಂಚದ ಯಾವ ಭಾಷೆಯ ಸಾಹಿತ್ಯದೊಡನೆಯಾದರೂ ಹೆಗಲೆಣೆಯಾಗಿ ಇದು ನಿಲ್ಲಬಲ್ಲುದೆಂದು ಧೈರ್ಯವಾಗಿ ಹೇಳಬಹುದಾಗಿದೆ. ಈ ಐವತ್ತು ಅರವತ್ತು

ವರ್ಷಗಳಿಂದೀಚೆಗೆ ನೂರಾರಲ್ಲ, ಸಾವಿರಾರು ಮಂದಿ ಸಾಹಿತ್ಯದೇವಿಗೆ ನಾನಾ ರೀತಿಗಳಲ್ಲಿ ಭಾವ ಬುದ್ಧಿಗಳನ್ನು ಧಾರೆಯೆರೆಯುವ ಮೂಲಕ ಕೈಂಕರ್ಯವೆಸಗಿ ಆ ಕ್ಷೇತ್ರವನ್ನು ಶ್ರೀಮಂತಗೊಳಿಸುತ್ತಿರುವುದು ಸಂತೋಷದ ಹಾಗೂ ಅಭಿಮಾನದ ವಿಷಯವಾಗಿದೆ. ಪಾಶ್ಚಾತ್ಯ ಬುದ್ಧಿಯ ಬಸಿರಿನಲ್ಲಿ ಉಗಮಗೊಂಡ ಸಾಹಿತ್ಯ ಪಂಥಗಳೆಲ್ಲ ಒಂದಲ್ಲ ಒಂದು ರೀತಿಯಲ್ಲಿ, ಒಂದಲ್ಲ ಒಂದು ಪ್ರಮಾಣದಲ್ಲಿ ಇಲ್ಲಿಯೂ ಪ್ರಯೋಗಗೊಂಡು, ಅವುಗಳ ಯೋಗ್ಯತೆಗೆ ತಕ್ಕಂತೆ ಜನಪ್ರಿಯವಾಗಿ, ವಿವಿಧಾಭಿರುಚಿಯ ಜನಮನವನ್ನು ತಣಿಸುತ್ತಿವೆ.

ಇದೆಲ್ಲ ಸ್ತುತ್ಯವಾದದ್ದೆ, ತೃಪ್ತಿಕರವಾದದ್ದೆ. ಆದರೆ ಹಿಂದಿನ ಕಾಲದಲ್ಲಿ ಆಗಾಗ್ಗೆ ಮತೀಯ ಕ್ಷೇತ್ರದಲ್ಲಿ ಕಂಡುಬರುತ್ತಿದ್ದ ಬರ್ಬರ ಸಹಜವಾದ ಅಸಹ್ಯ ಕಲಹಗಳ ಮಂದ ಛಾಯೆಯೂ, ಇಂದಿನ ರಾಜಕೀಯ ಕ್ಷೇತ್ರದಲ್ಲಿ ಹೊಗೆಯಾಡುತ್ತಿರುವ ಹಾನಿಕರವಾದ ಗುಂಪುಗುಳಿತನವೂ ಸಾಹಿತ್ಯಕ್ಷೇತ್ರಕ್ಕೆ ಹಬ್ಬುತ್ತಿರುವುದು ಯಾವ ದೃಷ್ಟಿಯಿಂದಲೂ ಶ್ರೇಯಸ್ಕರವಲ್ಲ. ಇದರಿಂದ ಸಮಾಜದಲ್ಲಿ ಕ್ಷೋಭೆಯಾಗದಂತೆ ನೋಡಿಕೊಳ್ಳಬೇಕಾದ್ದು ವಿವೇಕವುಳ್ಳ ಸಾಹಿತಿಗಳ ಜವಾಬ್ದಾರಿಯಾಗಿದೆ. ಮೂರ್ತಿ ಭಂಜನೆಯ ಮೂಲಕ ಒಂದು ಹಿರಿಯ ಸಂಸ್ಕೃತಿಯನ್ನು ಹಾಳುಮಾಡಬಹುದೆಂಬ ಕಾಫರ್ ಪ್ರವೃತ್ತಿ, ಪಿತೃಭ್ರಾತೃಹನನದ ಮೂಲಕ ದೊರೆಗದ್ದುಗೆಯನ್ನು ದಕ್ಕಿಸಿಕೊಳ್ಳಬೇಕೆಂಬ ಔರಂಗಜೇಬ್ ಮನೋಧರ್ಮ ನ್ಯಾಯವಲ್ಲ. ದೇಶ ಚೂರು ಚೂರಾದಷ್ಟು ಸಚಿವಸ್ಥಾನಗಳು ವೃದ್ಧಿಯಾಗುತ್ತವೆ, ಮನೆ ಇಬ್ಭಾಗ ಮುಬ್ಭಾಗವಾದದ್ದಾದರೆ ಜಾಗ್ರತೆ ಯಜಮಾನರಾಗಬಹುದು ಎಂಬ ವಿಚ್ಛಿದ್ರಕಾರಕ ಭಾವನೆ ಸೃಜನಶೀಲರಾದ ಸಾಹಿತಿಗಳ ಮನಸ್ಸಿನಿಂದ ತೊಲಗಬೇಕು. ಹಳೆಯದನ್ನೆಲ್ಲ ಅಳಿಸಿ, ಹಿರಿಯರ ಬೂದಿಯ ಮೇಲೆ ಹೊಸದನ್ನು ಬೆಳೆಸುವ, ಎಳೆಯರನ್ನು ನೆಲೆಗೊಳಿಸುವ ಭ್ರಾಮುಕಬುದ್ಧಿ ತ್ಯಾಜ್ಯ. ಪ್ರತಿಯೊಂದು ಸಾಹಿತ್ಯಕೃತಿಯೂ ಸ್ವಂತ ಸಾಮರ್ಥ್ಯದ ಮೇಲೆ ನಿಲ್ಲಬೇಕೇ ಹೊರತು ಗುಂಪುಗುಳಿತನದ ಆಧಾರದ ಮೇಲೆ ಹಬ್ಬುವುದು ಸಾಧ್ಯವಿಲ್ಲ. ಮತ್ತೊಬ್ಬನ ಗೋರಿಯ ಮೇಲೆ ತನ್ನ ಕೀರ್ತಿಲತೆಯನ್ನು ಹಬ್ಬಿಸುತ್ತೇನೆನ್ನುವ ಸಾಹಿತಿ ಎಗ್ಗನೇ ಸರಿ. ಹಳತು ಹೊಸತರ ಸಂಘರ್ಷ ಸೃಷ್ಟಿ ಕಾಲದಿಂದ ಇದ್ದದ್ದೇ. ಸಂಘರ್ಷವೇ ಜೀವನ, ಸ್ತಬ್ಧತೆಯೆ ಮರಣ. ಮಕ್ಕಳ ಹುಟ್ಟಿನಿಂದ ತಂದೆ ತಾಯಿಯರಿಗೆ ಮರಣ ಲಭಿಸುವ ಪ್ರಸಂಗ ವೃಶ್ಚಿಕಕುಲಕ್ಕೆ ಮಾತ್ರ ಮೀಸಲಾಗಿರಲಿ. ಹಳತು ಹೊಸತುಗಳ ಬೆರಕೆಯೇ ಆದರ್ಶ ಜೀವನದ ರಹಸ್ಯ. ಅವು ಗಂಗೆ ಯಮುನೆಯರಂತೆ ಒಂದಾಗಿ ಹರಿಯಬೇಕು; ಹಾಲು ಜೇನುಗಳಂತೆ ಮಧುರವಾಗಿ ಬೆರೆಯಬೇಕು. ಕಾಲಕ್ಕನುಗುಣವಾಗಿ ಹೊಂದಿಕೊಳ್ಳದ, ಯುಗಧರ್ಮವನ್ನು ಪ್ರತಿಬಿಂಬಿಸದ, ಆಗಾಗ್ಗೆ ನವೋನವವಾಗದ, ಹೊಸ ಗಾಳಿಯನ್ನು ಸೇವಿಸದ ಸಾಹಿತ್ಯ ದುರ್ಬಲವಾಗುವುದು ಖಂಡಿತ; ಅಂತೆಯೆ ಸಮಾಜವನ್ನು ಶುದ್ಧಿಗೊಳಿಸಬೇಕಾದ, ಮಾನವಕೋಟಿಗೆ ಆದರ್ಶಪ್ರಾಯವಾಗಿರಬೇಕಾದ ಸಾಹಿತಿಯ ಗುಂಪುಗುಳಿತನದಿಂದ ಆ ಕ್ಷೇತ್ರ ಕ್ಷಯವಾಗುವುದು ನಿಜ.

ಇಂದು ರಮ್ಯ–ನವ್ಯಗಳ ನಡುವೆ ಖಡ್ಗದ ಮಸೆತ ನಡೆದಿದೆ. ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ರಮ್ಯಪಂಥ ಸುವರ್ಣಯುಗವನ್ನು ನಿರ್ಮಿಸಿತೆಂಬ, ಅದರಿಂದ ಕನ್ನಡದ ಶ್ರೀಮಂತತೆ ಮುಗಿಲುಮುಟ್ಟಿತೆಂಬ, ಅದು ಕನ್ನಡ ಜನದ ಮನಸ್ಸನ್ನು ಸೂರೆಗೊಂಡಿತೆಂಬ ವಾಸ್ತವ ಸಂಗತಿಯನ್ನು ಯಾರೂ ಮರೆಯುವಂತಿಲ್ಲ. ಆ ಪಂಥ ಯಾವುದೇ ದೇಶದಲ್ಲಾಗಲೀ ಸಾಹಿತ್ಯವಾಹಿನಿಗೊಂದು ಹೊಸತಿರುವನ್ನೂ, ಕೃತಿಕಾರರಿಗೆ ಸ್ವಾತಂತ್ರ್ಯವನ್ನೂ, ಹೊಸತಂತ್ರವನ್ನೂ ನೀಡಿದ್ದಲ್ಲದೆ, ಭಾವಾನುಭವಾಲೋಚನೆಗಳು ಸಹ ಹೊಸ ಬಣ್ಣವನ್ನು ತಾಳಿದವು; ಆ ಕಾಲಕ್ಕೆ ಅದು ಕ್ರಾಂತಿಪಂಥವೇ ಆಗಿತ್ತು; ಅದು ತನ್ನ ಕರ್ತವ್ಯವನ್ನು ಸಂಪೂರ್ಣವಾಗಿ ಪೂರೈಸಿತು; ಅದು ಮತ್ತೆ ಹೊಸದಾಗಬೇಕಾಗಿದ್ದರೂ ಖಂಡನೀಯವಲ್ಲ. ಕಾಲ ಬದಲಾವಣೆಯಾದಂತೆಲ್ಲಾ ರಮ್ಯಕವಿತೆ ನವ್ಯವಾದದ್ದನ್ನೂ ಗಮನಿಸಬಹುದು. ಮತಗಳ ಪಥ ಭಿನ್ನವಾದರೂ ಗುರಿ ಅಭಿನ್ನವಾಗಿರುವಂತೆ, ಎಲ್ಲ ಸಾಹಿತ್ಯ ಪಂಥಗಳ ಗುರಿ ಸೌಂದರ್ಯೋಪಾಸನೆ. ರಮ್ಯವಾಗಲಿ ನವ್ಯವಾಗಲಿ ಸೌಂದರ್ಯಾಂಶವಿಲ್ಲದ ಕಾವ್ಯ ತ್ಯಾಜ್ಯವಾಗುತ್ತದೆ. ರಸಾಸ್ವಾದನೆಯೇ ಎಲ್ಲ ಸಾಹಿತ್ಯದ ಗುರಿಯೆನ್ನುವುದಾದರೆ ಘರ್ಷಣೆ ಅನಾವಶ್ಯಕ. ಆದ್ದರಿಂದ ರಮ್ಯ–ನವ್ಯಗಳ ಭಿನ್ನತೆ ಬಾಹ್ಯಶರೀರಕ್ಕೆ ಸಂಬಂಧಿಸಿದ್ದೇ ಹೊರತು ಅಂತರಂಗಕ್ಕಲ್ಲ.

ಈ ನವ್ಯತೆ ಸಾಹಿತ್ಯೇತಿಹಾಸದಲ್ಲಿ ಮೇಲಿಂದ ಮೇಲೆ ಎದ್ದುಕಾಣುವ ವಿಶಿಷ್ಟ ಪ್ರವೃತ್ತಿ; ಪಂಥ ಪ್ರತಿಪಂಥಗಳ ಪರ್ಯಾಯವೇ ಸಾಹಿತ್ಯೇತಿಹಾಸ. ಒಂದು ದಿಕ್ಕಿನಲ್ಲಿ ಹರಿಯುತ್ತಿರುವ ನದಿ ಇದ್ದಕ್ಕಿದ್ದಂತೆ ತನ್ನ ಪಾತ್ರವನ್ನು ಬದಲಾಯಿಸಿದ್ದಾದರೆ, ಆ ಬದಲಾವಣೆ ಅಥವಾ ತಿರುವಿಗೆ ಆಧುನಿಕವೆಂದೋ ನವ್ಯವೆಂದೋ ಹೊಸ ಹೆಸರಿಡಲು ಪ್ರಯತ್ನಿಸುತ್ತೇವೆ. ವೈವಿಧ್ಯ ಅಥವಾ ನವ್ಯತೆ ಪ್ರತಿಯೊಬ್ಬ ಮಾನವನೂ ದಿನಬೆಳಗಾದರೆ ಅಪೇಕ್ಷಿಸುವ ವಿಷಯ. ಬೆಳಗಿನ ಸಾರು ಸಂಜೆಗೆ ಬೇಸರವಾಗುತ್ತದೆ; ನಿನ್ನೆಯ ಊಟ ಇಂದು ಸೇರುವುದಿಲ್ಲ. ರಸನೆಗೆ ದಿನದಿನವೂ ಒಂದೊಂದು ರುಚಿ ಬೇಕು. ನಮ್ಮ ವೇಷಭೂಷಣಗಳಲ್ಲಿಯೂ ಆಗಾಗ್ಗೆ ಕ್ರಾಂತಿಯನ್ನು ನಿರೀಕ್ಷಿಸುತ್ತೇವೆ. ಕರ್ಣಕೇಶ ಬೇಸರವಾದಾಗ ಕಪೋಲಕೇಶ ಚಾಲ್ತಿಗೆ ಬರುತ್ತದೆ. ಹೊಸ ಹೊಸ ಫ್ಯಾಷನ್ನು ಅಥವಾ ಗತ್ತುಗಳು ಕಲಿಯ ಸಾಮ್ರಾಜ್ಯದಲ್ಲಿ ಅನಿವಾರ್ಯ. ಒಂದು ಪಂಥ ತನ್ನ ಹೊಸತನವನ್ನು ಕಳೆದುಕೊಂಡು ಸಂಪ್ರದಾಯದ ಕೆಸರಿನಲ್ಲಿ ಹಳಸತೊಡಗಿದಾಗ ನವ್ಯತೆ ತಲೆದೋರುತ್ತದೆ. "ಅಪೂರ್ವಮಾಗೆ ಪೇೞ್ದ ಕವೀಶ್ವರರಿಲ್ಲ" ಎಂದು ಹೇಳಿ ಪಂಪ ಆ ಕಾಲಕ್ಕೇ ಹೊಸತನವನ್ನು ಮೆರೆದನು. ನಯಸೇನ ಚಂಪೂಧಾಟಿಯಲ್ಲಿ ಕಾವ್ಯರಚನೆ ಮಾಡಿದರೂ ಅನೇಕ ರೀತಿಗಳಲ್ಲಿ ನೂತನತೆಯನ್ನು ತೋರಿದನು. ಹೊಸ ಹೊಸ ಯುಗದ ಆವಶ್ಯಕತೆಗನುಗುಣವಾಗಿ ರಗಳೆ ಷಟ್ಪದಿ ಸಾಂಗತ್ಯ ಮೊದಲಾದ ಪ್ರಕಾರಗಳು ಕುಸುಮಿಸಿದುವು. ಮತ್ತೆ ನವೋದಯ ಕಾಲದಲ್ಲಿ ಮಹಾಕ್ರಾಂತಿ ನಡೆಯಿತೆಂದೇ ಭಾವಿಸಬಹುದಾಗಿದೆ. ವಸ್ತು

ವಿಚಾರ ಅಭಿವ್ಯಕ್ತಿ ಮತ್ತು ಭಾಷೆಗಳ ದೃಷ್ಟಿಯಿಂದ ಅವುಗಳಲ್ಲಿ ಗೋಚರವಾದ ನವ್ಯತನ ಅಂದಿನ ಜನಮಾನಸವನ್ನು ಸೆರೆ ಹಿಡಿಯಿತು; ಇಂದಿನ ಜನಮನದಿಂದ ತಿರೋಹಿತವಾಗಿಲ್ಲ. ನವಯುಗದ ಅಭೀಪ್ಸೆಯ ಅಭಿವ್ಯಕ್ತಿಯನ್ನಲ್ಲಿ ಕಾಣಬಹುದು.

ವಾಸ್ತವತೆ (Realism), ಸಹಜತೆ (Naturalism), ಅತಿವಾಸ್ತವತೆ (Sur—realism), ಪ್ರತೀಕವಾದ (Symbolism), ಪ್ರತಿಮಾವಾದ (Imagism) ಮೊದಲಾದ ವಾದಗಳು ಪಾಶ್ಚಾತ್ಯರಲ್ಲಿ ಬಳಕೆಯಲ್ಲಿವೆ. ಅಷ್ಟೋ ಇಷ್ಟೋ ಅವು ನಮ್ಮ ಕಡೆಗೂ ಹರಿದು ಬರುತ್ತಿವೆ. ಆದರೆ ಅವು ಭಾರತೀಯ ಧ್ವನಿಯಾಗಿ ಪರಿವರ್ತನೆಗೊಂಡು ಬರಬೇಕು; ಭಾರತೀಯತ್ವವನ್ನೇ ಅಲುಗಾಡಿಸುವಂಥ ವಾದ ಎಷ್ಟೇ ಉತ್ತಮವಾದುದಾಗಿರಲಿ ಶ್ರೇಯಸ್ಕರವಲ್ಲ. ವಿದೇಶೀಯತೆ ದೇಶೀಯತೆಗೆ ಶರಣಾಗಿ ಬಂದಾಗ ಮಾತ್ರ ಅದು ಪುರಸ್ಕಾರಯೋಗ್ಯವಾಗುತ್ತದೆ. ಅಂಧಾನುಕರಣೆ ಕಟ್ಟಿಕೊಂಡ ಅಥವಾ ಕಟ್ಟಿಸಿಕೊಂಡ ಮೀಸೆಹಲ್ಲುಗಳಂತೆ, ನರೆಗೂದಲಿಗೆ ಹಾಕಿಕೊಂಡ ಬಣ್ಣದಂತೆ ಬಹುಕಾಲ ಬಾಳುವಂಥದೂ ಅಲ್ಲ, ಇದ್ದದ್ದರೊಡನೆ ಹೊಂದಿಕೊಳ್ಳುವಂಥದೂ ಅಲ್ಲ; ಅಷ್ಟೇ ಅಲ್ಲ, ಅದು ವಿಕಾರಕ್ಕೆಡೆಗೊಡುವುದೂ ಉಂಟು. ಒಟ್ಟಿನಲ್ಲಿ ಯಾವ ವಾದವೇ ಬರಲಿ, ಯಾವ ಪಂಥವೇ ಇರಲಿ ಅದು ಜನಾಂಗದ ಜಾಯಮಾನಕ್ಕನುಗುಣವಾಗಿರಬೇಕು; ಅದರಲ್ಲಿ ನೆಲದ ಕಂಪು ಎರಚುತ್ತಿರಬೇಕು. ಪಂಥಗಳು ಹಲವಾರಿದ್ದರೂ ಅವೆಲ್ಲವನ್ನೊಳಕೊಂಡ ಸಾಹಿತ್ಯಪಂಥ ಮಾತ್ರ ಒಂದೇ. 'ಏಕಂ ಸತ್ ವಿಪ್ರಾ ಬಹುಧಾ ವದಂತಿ.' ನಾವೆಲ್ಲರೂ ಏಕಮೇವಾದ್ವಿತೀಯವಾದ ಆ ಮಹಾಪಂಥಕ್ಕೆ ಸೇರಿದವರೆಂಬ ಭಾವನೆ ನಮ್ಮಲ್ಲಿ ಮೂಡುವಂತಾಗಲೆಂದು ಹಾರೈಸೋಣ. ಒಟ್ಟಿನಮೇಲೆ ಕನ್ನಡದಲ್ಲಿ ಭಾವಸಾಹಿತ್ಯ ತೃಪ್ತಿಕರವಾಗಿ, ಕೆಲವು ಸ್ತರಗಳಲ್ಲಿ ಶಿಖರಪ್ರಾಯವಾಗಿ, ಕೆಲಮಟ್ಟಿಗಾದರೂ ಜಗತ್ತಿನ ಶ್ರೇಷ್ಠ ಸಾಹಿತ್ಯಗಳೊಡನೆ ಹೊಯ್‌ಕಯ್ಯಾಗಿ ಆಶಾದಾಯಕವಾಗಿ ಬೆಳೆದಿದೆ, ಬೆಳೆಯುತ್ತಿದೆಯೆಂದು ಧೈರ್ಯವಾಗಿ ಹೇಳಬಹುದು.

ಕನ್ನಡ ಗದ್ಯಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ: ಕನಿಷ್ಠಪಕ್ಷ ಎರಡೂವರೆಸಾವಿರ ವರ್ಷಗಳಿಂದಾದರೂ ಅದು ಕನ್ನಡಿಗರ ನಾಲಗೆಯಲ್ಲಿ ಕುಣಿಯುತ್ತಿದೆ, ಅವರ ಅಭೀಷ್ಟವನ್ನು ನೆರವೇರಿಸುತ್ತಿದೆ, ಅವರ ಬಾಳನ್ನು ತಿದ್ದುತ್ತಿದೆ; ಒಂದೂವರೆ ಸಾವಿರ ವರ್ಷಗಳಿಂದ, ಆಂಗ್ಲರ ಆಳ್ವಿಕೆಯ ಕಾಲ ವಿನಾ, ಅದು ಆಡಳಿತ ಭಾಷೆಯಾಗಿ ಮೆರೆದಿದೆ. ಇದಕ್ಕೆ ಶಾಸನಗಳು ಸಾಕ್ಷಿಯಾಗಿವೆ; ವಡ್ಡಾರಾಧನೆ ಧರ್ಮಾಮೃತ ಹರಿಹರನ ಕೃತಿಗಳಲ್ಲಿ ಶರಣರ ವಚನಗಳಲ್ಲಿ ಬರುವ ಗದ್ಯವೇ ಪ್ರಮಾಣವಾಗಿದೆ. ಹಳಗನ್ನಡ ಕಾವ್ಯಗಳಲ್ಲಿ ಬರುವ ಗದ್ಯದಲ್ಲಿ ಕನ್ನಡತನ ನಾಚಿಕೆಯಿಂದ ಇಣುಕುತ್ತಿರುವುದು ನಿಜ. ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಿಂದೀಚೆಗೆ ಅದು ಮತ್ತೆ ತಲೆಯೆತ್ತಿ ವಿಜೃಂಭಿಸುತ್ತಿರುವುದು ಸರ್ವವೇದ್ಯವಾದ ಸಂಗತಿ. ಲೋಕ ವ್ಯವಹಾರಗಳು ವಿಸ್ತೃತವಾದಂತೆಲ್ಲ, ವಿಚಾರಶಕ್ತಿ ಪ್ರಖರ

ವಾದಂತೆಲ್ಲ, ಚಿಂತನಮಂಥನಗಳು ಪ್ರಜ್ವಲಿಸಿದಂತೆಲ್ಲ, ಅಧ್ಯಯನ ಸಂಶೋಧನೆಗಳು ಪ್ರಬಲಿಸಿದಂತೆಲ್ಲ, ಅನುಭವಾಲೋಚನೆಗಳ ಸಂಘರ್ಷಣೆ ತೀಕ್ಷ್ಣವಾದಂತೆಲ್ಲ, ಒಟ್ಟಿನಲ್ಲಿ ಜನಾಂಗ ದೊಡ್ಡದಾದಂತೆಲ್ಲ ಕನ್ನಡವೂ ನಾನಾ ಮುಖವಾಗಿ ಬೆಳೆಯುತ್ತಿದೆ. ಹಿಂದೆಂದೂ ಕಂಡರಿಯದಿದ್ದ ಪ್ರಶ್ನೆಗಳೂ ಸಮಸ್ಯೆಗಳೂ ಕಣೆಗೆದರಿ ಮಾನವ ಮತಿಯನ್ನು ನಡುಗಿಸಿವೆ. ಗತಕಾಲದ ಕಿಟಕಿಯನ್ನು ತೆರೆಯಲು ಹವಣಿಸುತ್ತಿರುವ ಇತಿಹಾಸಜ್ಞರು, ನಿಸರ್ಗದ ರಹಸ್ಯಗಳನ್ನು ಭೇದಿಸಲು ಯತ್ನಿಸುತ್ತಿರುವ ವಿಜ್ಞಾನಿಗಳು, ಮಾನವ ಜೀವನದ ಮೌಲ್ಯಗಳ ಚಿಂತನೆಯಲ್ಲಿ ನಿರತರಾಗಿರುವ ದಾರ್ಶನಿಕರು, ಆಜನ್ಮಸಿದ್ಧ ಹಕ್ಕುಗಳ ಪ್ರತಿಪಾದನೆಯಲ್ಲಿ ಹಾಗೂ ಸಾಧನೆಯಲ್ಲಿ ಆಸಕ್ತರಾಗಿರುವ ರಾಜನೀತಿಜ್ಞರು, ಸಾಮಾಜಿಕ-ಆರ್ಥಿಕ-ನೈತಿಕ-ಸಾಂಸ್ಕೃತಿಕ ಸಮಸ್ಯೆಗಳ ವಿಶ್ಲೇಷಣೆಯಲ್ಲಿ ತೊಡಗಿರುವ ವಿಚಾರಮತಿಗಳು, ಕ್ಷಿತಿಜಗಳನ್ನು ವಿಸ್ತರಿಸುತ್ತಿರುವ, ನೂತನ ಜಗತ್ತುಗಳನ್ನು ಪ್ರವೇಶಿಸುತ್ತಿರುವ ಕವಿ ವಿಜ್ಞಾನಿಗಳು, ಜಗತ್ತಿನ ಕ್ಷಣಕ್ಷಣದ ವಿದ್ಯಮಾನಗಳನ್ನೆಲ್ಲ ಅಂಗೈಯಲ್ಲಿ ತೋರಿಸುತ್ತ ವಿಚಾರಮತಿಗಳಿಗೆ ಆಹಾರವನ್ನೂಡುತ್ತಿರುವ ಪತ್ರಿಕಾಕರ್ತರು—ಒಟ್ಟಿನಲ್ಲಿ ಕಲಿತವರ, ಕಲಿಯದವರ, ಸರ್ವಾಭಿರುಚಿಯ, ಸಕಲ ದರ್ಜೆಯ ಜನರ ಬಹುಮುಖವಾದ ಚಟುವಟಿಕೆಗಳಿಂದ ಸ್ಪಂದಿಸುತ್ತಿರುವ ಬಾಳಿಗೆ, ಆ ಬಾಳನ್ನು ರೂಪಿಸುತ್ತಿರುವ ಎಲ್ಲ ಸ್ಪಂದನಗಳಿಗೆ ಗದ್ಯ ಮಾಧ್ಯಮವಾಗುತ್ತಿದೆ, ನಾನಾ ಮುಖವಾಗಿ ನಾನಾ ಆಯಾಮುಗಳಲ್ಲಿ ವಿಸ್ತಾರವಾಗುತ್ತಿದೆ; ಸ್ವಾತಂತ್ರ್ಯಾನಂತರ ಹಾಗೂ ಭಾಷಾವಾರು ಪ್ರಾಂತ್ಯಗಳ ವಿಂಗಡಣೆಯಾದನಂತರ ಕನ್ನಡ ಗದ್ಯ ವ್ಯಾಪಕವಾಗಿ ಬೆಳೆಯುತ್ತಿದೆ, ತನ್ನತನವನ್ನು ಕಂಡುಕೊಳ್ಳುತ್ತಿದೆ.

ಕನ್ನಡಗದ್ಯ ಭಾವಸಾಹಿತ್ಯ ಕ್ಷೇತ್ರದಲ್ಲಿ ದಾಪುಗಾಲು ಹಾಕುತ್ತಿದ್ದರೂ, ವಿಚಾರ ಸಾಹಿತ್ಯ ಕ್ಷೇತ್ರದಲ್ಲಿ ತಿಪ್ಪತಿಪ್ಪ ಹೆಜ್ಜೆ ಹಾಕುತ್ತಿದೆಯೆಂದೇ ಹೇಳಬಹುದಾಗಿದೆ. ಇದಕ್ಕೆ ಮುಖ್ಯಕಾರಣ ನಮ್ಮ ಶಿಕ್ಷಣಪದ್ಧತಿ. ದಾಸ್ಯಶೃಂಖಲೆಯಿಂದ ನರಳುತ್ತಿದ್ದ, ವಿದೇಶೀಯ ಶಿಕ್ಷಣಪದ್ಧತಿಯಿಂದ ಆತ್ಮತೇಜಸ್ಸನ್ನು ಕಳೆದುಕೊಂಡಿದ್ದ ಭರತಖಂಡದಲ್ಲಿ ಸ್ವತಂತ್ರ ವಿಚಾರಧಾರೆಗಾಗಲಿ ವ್ಯವಸ್ಥಿತವಾದ ಸಂಶೋಧನೆಗಾಗಲಿ ಅವಕಾಶವಾಗಲಿಲ್ಲ. ಪರಭಾಷಾ ಮಾಧ್ಯಮ ನಮ್ಮ ಜನರ ಪ್ರತಿಭೆಯನ್ನು ಒಣಗಿಸಿತು, ಕಲ್ಪನಾ ಸಾಮರ್ಥ್ಯವನ್ನು ಬಂಜೆಗೊಳಿಸಿತು, ಬುದ್ಧಿಶಕ್ತಿಯನ್ನು ಕುಬ್ಜಗೊಳಿಸಿತು. ಇದರಿಂದಾಗಿ ಪಾಮರರಲ್ಲಿರಲಿ, ಪಂಡಿತರಲ್ಲಿಯೇ ವಿಜ್ಞಾನ ಸಂವೇದನೆ ಸಂಸ್ಫುರಿಸಲಿಲ್ಲ; ಸಮಾಜದಲ್ಲಿ ವಿಜ್ಞಾನಪ್ರಜ್ಞೆ ಮೂಡಲಿಲ್ಲ; ವೈಜ್ಞಾನಿಕ ಮನೋಭಾವ ಜನಜೀವನದಲ್ಲಿಳಿಯಲಿಲ್ಲ. ಪರಭಾಷೆ ಸ್ವತಂತ್ರಾಲೋಚನೆಗೆ ಮಾರಕ, ವಿಚಾರ ಶಕ್ತಿಗೆ ಬಾಧಕ. ಯಾವ ಕ್ಷೇತ್ರದಲ್ಲಾಗಲಿ ವ್ಯಾಸಂಗ ಬೋಧನೆ ಚರ್ಚೆ ಚಿಂತನ ಮಂಥನ ಭಾಷಣಗಳು ನಿರಂತರವಾಗಿ ನಡೆದದ್ದಾದರೆ ಅದಕ್ಕೆ ಸಂಬಂಧಿಸಿದ ಭಾಷೆ ಸಂಸ್ಕಾರಗೊಳ್ಳುತ್ತದೆ, ಮಾಗುತ್ತದೆ, ಅದಕ್ಕೆ ಬನಿ

ತನಿ ಚೇಗುಗಳು ಲಭಿಸುತ್ತವೆ. ಹುಲುಸಾಗಿ ಬೆಳೆದಿರುವ ಕನ್ನಡ ಸಾಹಿತ್ಯವನ್ನು ತಕ್ಕಮಟ್ಟಿಗಾದರೂ ಓದಿಕೊಂಡು, ಸಾಧನಾಭ್ಯಾಸಗಳಿಂದ ಪ್ರತಿಭೆಯನ್ನು ನಿಶ್ಚಿತಗೊಳಿಸಿಕೊಂಡು, ಜ್ಞಾನಸಂಪತ್ತನ್ನು ಹೆಚ್ಚಿಸಿಕೊಂಡ ಯಾವ ವ್ಯಕಿಯಾದರೂ ವೈಜ್ಞಾನಿಕ ಸಾಹಿತ್ಯವನ್ನು ವಿಪುಲವಾಗಿ ಸೃಷ್ಟಿಸಬಹುದು; ತಾನಾರಿಸಿಕೊಂಡ ವಿಷಯದಲ್ಲಿ ಸದಾ ಮಗ್ನವಾಗಿದ್ದು, ಅದರ ಪಾಂಡಿತ್ಯದಿಂದ ಅವರ ವ್ಯಕ್ತಿತ್ವ ವಿಕಾಸಗೊಂಡಿದ್ದರೆ, ಯಾವ ಭಾಷೆಯಲ್ಲಾದರೂ ಸರಿಯೇ ಆ ವ್ಯಕ್ತಿತ್ವ ಅಭಿವ್ಯಕ್ತಗೊಳ್ಳಲು ಹವಣಿಸುತ್ತದೆ. ವಿಷಯ ಸಂಪತ್ತಿಯಿಂದ ತಾಕತ್ತು ದೊರೆಕೊಳ್ಳುತ್ತದೆ; ತಾಕತ್ತಿದ್ದಗೆ ಚೈತನ್ಯೋತ್ಸಾಹಗಳು ಗರಿಗೆದರುತ್ತವೆ; ಅವು ಹೇಗಾದರೂ ಪ್ರಕಟಗೊಳ್ಳಲು ಪ್ರಯತ್ನಿಸುತ್ತವೆ. ಕನ್ನಡದಲ್ಲಿ ವೈಜ್ಞಾನಿಕ ಗ್ರಂಥಗಳಿಲ್ಲ, ಅದು ವಿಜ್ಞಾನದ ಭಾಷೆಯಾಗಿ ಬೆಳೆದಿಲ್ಲವೆಂದರೆ ಅದಕ್ಕೆ ದಾಸ್ಯಸ್ಥಿತಿ ಹೇಗೆ ಕಾರಣವೋ, ನೂರೈವತ್ತು ವರ್ಷಗಳಿಂದ ವಿಜ್ಞಾನವನ್ನು ಬೋಧಿಸುತ್ತ ಈ ಕಡೆಗೆ ಗಮನ ಹರಿಸದ ನಮ್ಮ ಪಂಡಿತರೂ ಕಾರಣವೆಂದು ಹೇಳಬೇಕಾಗಿದೆ.

ವಿಜ್ಞಾನ ಪ್ರಪಂಚದಲ್ಲಿ ಒಂದು ಪದಕ್ಕೆ ಒಂದೇ ಅರ್ಥ; ಆ ಪದ ಸೂಚಿಸುವ ವಸ್ತು ಅಥವಾ ಭಾವನೆ ಒಂದೇ ಒಂದಾಗಿರಬೇಕು. ಆದ್ದರಿಂದ ವಾಸ್ತವವಾಗಿ ಪಾರಿಭಾಷಿಕ ಪದಗಳೆಲ್ಲ ಅಂಕಿತನಾಮಗಳು. ಅವನ್ನೂ ಸಂಕೇತ ಚಿಹ್ನೆಗಳನ್ನೂ ಸದ್ಯಕ್ಕೆ ಸ್ವಸ್ವರೂಪದಲ್ಲಿಯೇ ಬಳಸಿಕೊಳ್ಳಬಹುದು. ಸದ್ಯದ ವ್ಯಾವಹಾರಿಕ ಭಾಷೆಯಂತೆ ಪ್ರಾರಂಭದಲ್ಲಿ ಆಂಗ್ಲಪದ ಹಾಗೂ ಆಂಗ್ಲ ನುಡಿಗಟ್ಟುಗಳೂ, ವಿದೇಶೀಯ ವರ್ಣದ ಕೃತಕ ಶೈಲಿಯೂ ಕಾಣಿಸಿಕೊಳ್ಳಬಹುದು. ಆ ಪದಗಳು ಮೊದಮೊದಲು ಕನ್ನಡದ ನಾಲಗೆಗೆ ಕಷ್ಟವಾಗಿ, ಕಿವಿಗೆ ಕರ್ಕಶವಾಗಿ ಕಾಣಬಹುದು. ದೀರ್ಘಪ್ರಯೋಗದಿಂದ ಹಾಗೂ ಗಾಢವಾದ ಸಂಪರ್ಕದಿಂದ ಅವೂ ಸಂಸ್ಕೃತ ಅಥವಾ ಹಿಂದೂಸ್ಥಾನೀ ಶಬ್ದಗಳಂತೆ ಕನ್ನಡದ ಶಬ್ದಗಳೊಡನೆ ಹೊಂದಿಕೊಳ್ಳುತ್ತವೆ. ಕಾಲಕ್ರಮೇಣ ಅವುಗಳಲ್ಲಿ ಕೆಲವನ್ನು ತುಸು ಬದಲಾಯಿಸಿಕೊಂಡೋ, ವಿಶೇಷ ಕಾರಣಗಳಿದ್ದರೆ ಕೆಲವಕ್ಕೆ ಬೇರೆ ಶಬ್ದಗಳನ್ನು ಟಂಕಿಸಿಕೊಂಡೋ ನಮ್ಮ ಭಾಷೆಯ ಜಾಯಮಾನಕ್ಕೆ ತಕ್ಕಂತೆ ಶಾಸ್ತ್ರಭಾಷೆಯನ್ನು ರೂಪಿಸಿಕೊಳ್ಳಬಹುದು. ಅದು ಮೂರ್ತ ಸ್ವರೂಪವನ್ನು ತಾಳುವ ಕಾಲದಲ್ಲಿ ಏಕರೂಪತೆಯನ್ನು ನಿರೀಕ್ಷಿಸಲಾಗದು. ತಜ್ಞರು ತಮತಮಗೆ ತೋರಿದ ರೀತಿಯಲ್ಲಿ ಗ್ರಂಥರಚನೆ ಬೋಧನೆಗಳಿಗೆ ಭಾಷೆಯನ್ನು ಬಳಸಲಿ. ಎರಡು ಮೂರು ವರ್ಷಗಳನಂತರವೊ ದಶಕದನಂತರವೊ ಯಾವ ಪದ ಸರಿ, ಯಾವ ಪದ ತಪ್ಪು ಎನ್ನುವುದನ್ನು ನಿರ್ಧರಿಸಲಿ. ಆ ಹೊತ್ತಿಗೆ ಯಾವ ಪದ ಕನ್ನಡಕ್ಕೊಗ್ಗುತ್ತದೆನ್ನುವ ಸಂಗತಿ ಬಳಕೆಯಿಂದಲೇ ನಿರ್ಣಯವಾಗುತ್ತದೆ; ಗ್ರಾಹ್ಯವಲ್ಲದ ಅಥವಾ ಅದರ ಮರ್ಯಾದೆಗೊಗ್ಗದ ಪದ ತಾನಾಗಿಯೇ ಕಳಚಿಕೊಳ್ಳುತ್ತದೆ. ಬಳಕೆಯಿಂದ ಮಾತ್ರ-ವಿಜ್ಞಾನ ಭಾಷೆಯ ಸಲ್ಲಕ್ಷಣಗಳಾದ ನಿಖರತೆ ನಿರ್ದುಷ್ಟತೆ ಸ್ಪಷ್ಟತೆ

ಸಾಮಂಜಸ್ಯ ಸೌಂದರ್ಯಗಳು ಸಮನಿಸುತ್ತವೆ; ಆದರ ಹಳ್ಳ ತಿಟ್ಟುಗಳು ಸಮನಾಗಿ ಅಂಕುಡೊಂಕುಗಳು ಸಸಿನಗೊಂಡು ಶಯ್ಯೆ ಹಿತಕರವಾಗುತ್ತದೆ. ಕನ್ನಡದಲ್ಲಿ ಆಲೋಚನೆ ಮಾಡಿ, ಕನ್ನಡದಲ್ಲಿ ಪಾಠ ಹೇಳಿದಾಗ ವಿಜ್ಞಾನ ಭಾಷೆ ತಾನಾಗಿಯೇ ಹದಗೊಳ್ಳುತ್ತದೆ; ಬೇಡವೆಂದರೂ ಅಪಾರ ಸಂಖ್ಯೆಯಲ್ಲಿ ಗ್ರಂಥ ಗಳು ಹೊರಬೀಳುತ್ತವೆ.

ಕನ್ನಡ ಗದ್ಯದ ಬೆಳೆವಣಿಗೆ ಶಿಕ್ಷಣ ಮಾಧ್ಯಮವನ್ನವಲಂಬಿಸಿದೆ; ಶಿಕ್ಷಣ ಮಾಧ್ಯಮದ ಯಶಸ್ಸು ಆಡಳಿತ ಮಾಧ್ಯಮವನ್ನವಲಂಬಿಸಿದೆ; ಆಡಳಿತ ಮಾಧ್ಯ ಮದ ಜಾರೀಕರಣ ಹಿಡಿಮುಂದಿ ಅಧಿಕಾರಿಗಳ ಮನೋಧರ್ಮವನ್ನವಲಂಬಿಸಿದೆ. ಬೂರ್‌ಜ್ವಾ ಭಾವನೆಯಿಂದಾಗಲಿ, ಆಂಗ್ಲರ ಪ್ರಸಾದದಿಂದೊದಗಿರುವ ಗುಲಾಮಿ ಭಾವನೆಯಿಂದಾಗಲಿ ನಾವಿನ್ನೂ ಮುಕ್ತರಾಗಿಲ್ಲ. ಪರಭಾಷೆಯ ಆಡಳಿತ ಮಾಧ್ಯಮ ಪ್ರಜಾಸತ್ತೆಯ ಮುಖಕ್ಕೆಸೆದ ಅವಹೇಳನವಾಗಿದೆ; ಪರಭಾಷಾ ಶಿಕ್ಷಣ ಮಾಧ್ಯಮದ ಮುಂದುವರಿಕೆ ಶಿಕ್ಷಣ ಕ್ಷೇತ್ರದ ಅಸ್ತಿತ್ವವನ್ನೇ ಪ್ರಶ್ನಿಸುವ, ಅದರ ವಿಫಲತೆಯನ್ನು ಸಾರುವ ಅನಿಷ್ಟವಾಗಿದೆ. ಜಗತ್ತಿನ ಯಾವ ಸ್ವತಂತ್ರ ರಾಷ್ಟ್ರ ದಲ್ಲಿಯೂ ಇಂಥ ಶೋಚನೀಯ ಪರಿಸ್ಥಿತಿಯಿಲ್ಲ. ಗುರುಶಿಷ್ಯರಿಗೆ ಹಾಗೂ ಮಂತ್ರಿ-ಪ್ರಜೆಗಳಿಗೆ ಹೃದಯ ಸಂವಾದವಿಲ್ಲದಾಗ ಶಿಷ್ಯನ ಏಳ್ಗೆಯಾಗಲಿ ಪ್ರಜೆಯ ಕ್ಷೇಮ ಸಾಧನೆಯಾಗಲಿ ಸಾಧ್ಯವಾಗುವುದಿಲ್ಲ. ಈ ಹೃದಯ ಸಂವಾದ ಸ್ವಭಾಷೆಯ ಮೂಲಕ ಸಾಧ್ಯ. ದೇಶ ಭಾಷೆಯಲ್ಲಿ ಪಾಠ ಕಲಿಯುವುದೆಂತು ವಿದ್ಯಾರ್ಥಿಯ ಹಕ್ಕೋ, ಅಂತೆಯೇ ಆ ಮೂಲಕ ತಮಗೆ ಆಡಳಿತ ಬೇಕೆಂದು ಕೇಳುವುದೂ ಪ್ರಜೆಯ ಹಕ್ಕು. ಕನ್ನಡ ಭಾಷೆಯ ಶ್ರೀಮಂತತೆ ಎಂತು ಶಿಕ್ಷಣ ಮಾಧ್ಯಮದ ಸಾಧ್ಯತೆಯನ್ನು ಘೋಷಿಸುತ್ತದೆಯೋ ಅಂತೆಯೇ ಸಹಸ್ರ ಸಹಸ್ರ ಶಾಸನಗಳು ಆಡಳಿತ ಮಾಧ್ಯಮದ ಸುಲಭತೆಯನ್ನು ಸಾರಿ ಹೇಳುತ್ತಿವೆ. ರಾಷ್ಟ್ರ ಪ್ರಗತಿಯ ಕಣ್ಣೆಲೆಗಳಂತಿರುವ ಈ ಎರಡು ಕ್ಷೇತ್ರಗಳಲ್ಲಿ ಕನ್ನಡ ತಾನೇ ತಾನಾದಾಗ ಗದ್ಯ ವಿರಾಟ್ ರೂಪವನ್ನು ತಾಳುತ್ತದೆ. ತನ್ನ ಮಾಟ ಧಾಟಿ ಲಯ ಧ್ವನಿಸ್ವರೂಪಗಳಿ ಗನುಗುಣವಾಗಿ ಜಗತ್ತಿನ ಯಾವ ಭಾಷೆಗಳಿಂದಾದರೂ ಪದ ಪದಗುಚ್ಛಗಳನ್ನಳ ವಡಿಸಿಕೊಳ್ಳುವ ವ್ಯಾಪಕ ಶಕ್ತಿಯನ್ನು ಪಡೆದುಕೊಂಡಾಗ, ಅವುಗಳನ್ನು ಜೀರ್ಣಿಸಿ ಕೊಳ್ಳುವಂಥ ಅಗ್ನಿಶಕ್ತಿಯನ್ನು ಹೆಚ್ಚಿಸಿಕೊಂಡಾಗ ಅದಕ್ಕೆ ಸರ್ವಶಕ್ತಿಯೊದಗು ತ್ತದೆ. ಗದ್ಯದ ಭಾಷೆ ಬೆಳೆಯದಿದ್ದರೆ ಸ್ಪಷ್ಟಾಲೋಚನೆ ಅಸಾಧ್ಯ, ಆಲೋಚನೆ ಶೂನ್ಯವಾದರೆ ಭಾಷೆಯ ಬೆಳೆವಣಿಗೆ ಅಸಾಧ್ಯ, ಅಂತೆಯೇ ಇವೆರಡೂ ಪರಸ್ಪರಾವ ಲಂಬಿ ಎಂಬುದನ್ನು ಯಾರೂ ಮರೆಯುವಂತಿಲ್ಲ.

ಕನ್ನಡ ಗದ್ಯವನ್ನು ಸರ್ವಾಂಗಸುಂದರವಾಗಿ ಬೆಳೆಸುವ ದೃಷ್ಟಿಯಿಂದ ಮತ್ತೊಂದು ಕಾರ್ಯ ಅತ್ಯಗತ್ಯವಾಗಿ ಆಗಬೇಕಾಗಿದೆ. ಪದ್ಯದಲ್ಲಾಗಲಿ ಗದ್ಯ ದಲ್ಲಾಗಲಿ ಮಣ್ಣಿನ ವಾಸನೆ ಹೊಡೆಯಬೇಕಾದರೆ ಇತರ ಪರಿಕರಗಳ ಜತೆಗೆ

ದೇಸಿ ನುಡಿಗಟ್ಟನ್ನು ಹೆಚ್ಚು ಹೆಚ್ಚಾಗಿ ಬಳಸಬೇಕಾಗುತ್ತದೆ. ಆಡುಮಾತನ್ನು ಗ್ರಾಂಥಿಕ ಭಾಷೆಯಲ್ಲಿ ಅಳವಡಿಸಿಕೊಂಡದ್ದಾದರೆ ಭಾಷೆಗೆ ಬಿಗಿ ಬನಿ ಬಂಡ ಬೆಡಗು ಬಿನ್ನಾಣಗಳು ತಾವಾಗಿಯೇ ಒದಗಿ, ಅದು ಸದಾ ನಿತ್ಯನೂತನವಾಗಿರುತ್ತದೆ, ಜೀವಂತವಾಗಿರುತ್ತದೆ. ಆಡುಮಾತಿನ ಪೊಗರು ಹೊಳಪು ಕೂರ್ಪು ಕೆಚ್ಚು ಜೀವಂತಿಕೆಗಳು ಗ್ರಾಂಥಿಕ ಭಾಷೆಗಿರುವುದಿಲ್ಲ. ಒಂದು ಮಾತು ಅಥವಾ ಒಂದು ನುಡಿಗಟ್ಟು ಬಳಕೆಯಿಂದ ಜೀವಂತವಾಗುತ್ತದೆಯೇ ಹೊರತು ಹೊಳಪೇರುತ್ತದೆಯೇ ಹೊರತು ಸವೆಯುವುದಿಲ್ಲ; ಅದು ಹಲವು ನಾಲಗೆಗಳಲ್ಲಿ ಕುಣಿದಷ್ಟೂ ಕೂರ್ಪು ಸನುನಿಸುತ್ತದೆ; ಅದೇ ಮಾತು ಗ್ರಾಂಥಿಕ ಭಾಷೆಯಲ್ಲಿ ಸೇರಿಕೊಂಡು ಆಡುಮಾತಿನಿಂದ ಹೊರತಾದರೆ ನಿರ್ಜೀವವಾಗುತ್ತದೆ, ಕಾಂತಿಹೀನವಾಗುತ್ತದೆ. ಶೈಲಿಯಲ್ಲಿ ದೇಸಿಯನ್ನು ಸಾಧಿಸಬೇಕಾದರೆ ಆಡುಮಾತಿನ ಹಸಾದ ಅತ್ಯಾವಶ್ಯಕ. ಇದಕ್ಕಾಗಿ ಹಳ್ಳಿಗಳಲ್ಲಿ ಬಳಕೆಯಲ್ಲಿರುವ, ಯಾವ ಪಂಡಿತಕೋಶದಲ್ಲಿಯೂ ಸಿಗದ ಮಾತುಗಳನ್ನು ಸಂಗ್ರಹಿಸಬೇಕು. ವಿದ್ಯಾಭ್ಯಾಸ ಸಾರ್ವತ್ರಿಕವಾದಂತೆಲ್ಲ ಈ ಮಾತುಗಳು ನಾಚಿಕೊಂಡು ಮರೆಯಾಗುತ್ತವೆ. ಹಣ ಕಳೆದುಹೋದರೆ ಅದು ಮತ್ತೆ ಸಿಗಬಹುದು, ಸಿಗದಿದ್ದರೂ ಬಾಧಕವಿಲ್ಲ, ಸಂಪಾದಿಸಬಹುದು. ಆದರೆ ಒಮ್ಮೆ ಮರೆಯಾದ ಮಾತು ಎಂದೆಂದಿಗೂ ಮರೆತಂತೆಯೆ. ಅದು ದುಡ್ಡು ಕೊಟ್ಟರೆ ಸಿಗುವಂಥದಲ್ಲ. ಒಂದೊಂದು ಮಾತಿಗೆ ಬೆಲೆಕಟ್ಟೋಣವೂ ಸಾಧ್ಯವಿಲ್ಲ. ಈಗ ಬಳಕೆಯಲ್ಲಿರುವ ಸಹಸ್ರ ಸಹಸ್ರ ಪದಗಳನ್ನು ಸಂಗ್ರಹಿಸಿ ಪ್ರಕಟಿಸುವುದಾದರೆ ಅದು ಕಿಟ್ಟೆಲ್ ಕೋಶದಷ್ಟೇ ಗಾತ್ರವಾಗುತ್ತದೆ.ಆ ಅಕ್ಷಯನಿಧಿ ಸಾಹಿತಿಗಳ ಕೈಗೆ ದೊರೆತಾಗ ಕನ್ನಡ ಗದ್ಯ ಕಲ್ಪನೆಗೆ ಮೀರಿ ಪರಿಪುಷ್ಟಗೊಳ್ಳುತ್ತದೆ. ಇದಕ್ಕಾಗಿ ವಿಶ್ವವಿದ್ಯಾನಿಲಯಗಳು, ಪರಿಷತ್ತು ಹಾಗೂ ಕನ್ನಡ ಸಂಘಗಳು ಪರಸ್ಪರ ಸಹಕರಿಸಿ ಈ ಅಮೂಲ್ಯ ನಿಧಿಯನ್ನುಳಿಸಿಕೊಳ್ಳಬೇಕಾಗಿದೆ.

ಕನ್ನಡ ಸಂಸ್ಕೃತಿಯ ಅಧ್ಯಯನದಲ್ಲಿ ಹಾಗೂ ಅದರ ಸಂವರ್ಧನೆಯಲ್ಲಿ ಗಣ್ಯ ಪಾತ್ರ ವಹಿಸಬೇಕಾದ ಜಾನಪದ ಇನ್ನೂ ನಿರ್ಲಕ್ಷ್ಯಕ್ಕೊಳಗಾಗಿರುವುದು ದುರ್ದೈವದ ಸಂಗತಿಯಾಗಿದೆ. ಅನೇಕ ಜ್ಞಾನವಿಜ್ಞಾನ ಶಾಖೆಗಳಿಗೆ ಮಾತೃಸ್ವರೂಪವಾದ ಜಾನಪದ ಸಾಮಗ್ರಿಯನ್ನು ಸಾರ್ಥಕವಾಗಿ ಬಳಸಿಕೊಳ್ಳುವತನಕ ಸಂಸ್ಕೃತಿ ಸಾಹಿತ್ಯ ಮಾನವಿಕ ಶಾಸ್ತ್ರಗಳನ್ನು ಕುರಿತ ಅಧ್ಯಯನ ಸಂಪೂರ್ಣವಾಗುವುದಿಲ್ಲ. ನಮ್ಮ ಪುಸ್ತಕಜ್ಞಾನ ರೂಪುಗೊಂಡದ್ದು ಕೇವಲ ನಿನ್ನೆ ಮೊನ್ನೆ. ಅನಾದಿಕಾಲದಿಂದ ಬೆಳೆದು ಬಂದ ಜ್ಞಾನರಾಶಿ ಜಾನಪದ ರೂಪದಲ್ಲಿ ಇನ್ನೂ ಅಜ್ಞಾತವಾಸವನ್ನನುಭವಿಸುತ್ತಿದೆ. ನಮ್ಮ ಕಲೆ ಹಾಗೂ ವಿಜ್ಞಾನಗಳ ಬೇರುಗಳನ್ನು ಜಾನಪದದ ಬಸಿರಲ್ಲಿ ಗುರುತಿಸಬಹುದಾಗಿದೆ. ಆಧುನಿಕ ನಾಗರಿಕತೆಯ ಮಾರಿಹಲುಬೆಗೆ ಸಿಕ್ಕಿ ಜರ್ಝರಿತಗೊಳ್ಳುವ ಮುನ್ನ, ಅದರ ಬೇಗೆಗೆ ಸಿಕ್ಕಿ ಸೀದು ಹೋಗುವ ಮುನ್ನ, ಜೀವನದ ಮೌಲ್ಯಗಳೆಲ್ಲ ರೂಪಾಂತರ ಹೊಂದಿ ಅದು

ವಿಸ್ಮೃತಿಯ ಗರ್ಭದಲ್ಲಿ ಹೂತುಹೋಗುವ ಮುನ್ನ ಅದನ್ನು ಸಂಗ್ರಹಿಸಿ, ವಿಶ್ಲೇಷಿಸಿ, ವ್ಯವಸ್ಥೆಗೊಳಿಸಬೇಕಾದದ್ದು ನಾಡಿನ ಆದ್ಯಕರ್ತವ್ಯವಾಗಿದೆ. ಈಗಾಗಲೇ ಆ ನಿಟ್ಟಿನಲ್ಲಿ ತಕ್ಕಮಟ್ಟಿನ ಕೆಲಸ ನಡೆದಿದೆ; ಆದರೆ ಆಗಬೇಕಾದದ್ದು ಸಾಸಿರಮಡಿ ಯಿದೆ, ಮಿಲಿಯಮಡಿಯಿದೆ.

ಕರ್ಣಾಟಕದ ಎಲ್ಲ ಕಡೆಯ ಜನಜೀವನಕ್ಕೆ ಸಂಬಂಧಿಸಿದ ಸಾಮಗ್ರಿಗಳನ್ನು ಕಲೆಹಾಕಬೇಕು; ತ್ರುಟಿತವಾಗಬಹುದಾದ ಅಥವಾ ಅಪರೂಪವಾದ ವಸ್ತುಗಳ ಚಿತ್ರಗಳನ್ನು ಬರೆಸಿಡಬೇಕು; ಕಲಾವಿದರ ಭಾವಚಿತ್ರಗಳನ್ನು ಒಟ್ಟುಗೂಡಿಸಬೇಕು; ಮೂಲ ಮಟ್ಟುಗಳ ಧ್ವನಿಮುದ್ರಣ ಕಾರ್ಯವನ್ನು ತಳುವಿಲ್ಲದೆ ಕೈಗೊಳ್ಳಬೇಕು; ಆಚಾರ ಸಂಪ್ರದಾಯ ನಂಬಿಕೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸ ಬೇಕು; ಗಾದೆಗಳನ್ನು ಶೇಖರಿಸಬೇಕು; ಜತೆಗೆ ಸಂಶೋಧನೆ ನಡೆಯಬೇಕು. ಇದಕ್ಕೆಲ್ಲ ಸಾಕಷ್ಟು ಧನ ಹಾಗೂ ಜನಸಹಾಯ ಬೇಕು. ಗ್ರಾಮಾಂತರ ಪ್ರದೇಶ ದೊಡನೆ ಸಂಪರ್ಕವಿಟ್ಟುಕೊಂಡಿರುವ ಎಲ್ಲ ದರ್ಜೆಯ ಅಧ್ಯಾಪಕರು ಹಾಗೂ ನೌಕರರು ನಾಲ್ಕಾರು ವರ್ಷ ಆಸಕ್ತಿ ವಹಿಸಿ ಪ್ರಾಮಾಣಿಕವಾಗಿ ಸಹಕಾರ ನೀಡು ವುದಾದರೆ ಈ ಮಹತ್ಕಾರ್ಯ ಸುಲಭಸಾಧ್ಯವಾದೀತು. ಇದು ಕೂಲಿಯ ಕೆಲಸ ವಾಗದೆ ಪ್ರೇಮದ ಸಾಧನೆಯಾಗಬೇಕು. ನಮ್ಮ ಜನತೆಯಲ್ಲಿ ರಾಷ್ಟ್ರೀಯ ಪ್ರಜ್ಞೆ ಕುದುರಬೇಕಾದರೆ ಭಾವೈಕ್ಯ ಸಿದ್ಧಿಸಬೇಕಾದರೆ ನಮ್ಮ ಸಂಸ್ಕೃತಿಯ ನೆಲೆಯನ್ನು ಕಾಣಬೇಕಾದರೆ, ನಮ್ಮ ಸಾಹಿತ್ಯ ಕಲೆಗಳು ಪುನರುಜ್ಜೀವನಗೊಳ್ಳಬೇಕಾದರೆ, ಗ್ರಾಮಾಂತರದ ಜನತೆಯಲ್ಲಿ ಆತ್ಮಪ್ರತ್ಯಯ ಮೂಡಬೇಕಾದರೆ, ಕೊನೆಗೆ ನಮ್ಮ ಭಾಷೆಯಲ್ಲಿ ಕಸುವು ಬನಿ ಸಮನಿಸಬೇಕಾದರೆ ನಾವು ಜಾನಪದವನ್ನೇ ಮರೆಹೋಗ ಬೇಕು. ಈ ಕ್ಷೇತ್ರದಲ್ಲಿ ನಿರೀಕ್ಷಿತ ಸಿದ್ಧಿ ಕೈಗೂಡಬೇಕಾದರೆ ಸಮಾಜದಲ್ಲಿ ಜಾನಪದ ಪ್ರಜ್ಞೆಯುರಳಬೇಕು, ದೇಶದಲ್ಲಿ ಅನುಕೂಲ ವಾತಾವರಣ ಸೃಷ್ಟಿಯಾಗಬೇಕು, ಕಲಾವಿದ-ಸಂಗ್ರಹಕ-ಸಂಶೋಧಕರಿಗೆ ಸಾಕಷ್ಟು ಪ್ರೋತ್ಸಾಹ ನೀಡಬೇಕು; ಈ ಉದ್ದೇಶ ಸಾಧನೆಗಾಗಿ ಮೈಸೂರಲ್ಲಿ ಸಂಸ್ಥಾಪನೆಗೊಂಡಿರುವ ಅಖಿಲ ಕರ್ಣಾಟಕ ಜಾನಪದ ಪರಿಷತ್ತಿಗೆ ಸರ್ಕಾರ ಉದಾರವಾಗಿ ಸಹಾಯಧನ ಕೊಡಬೇಕಾಗಿದೆ.

ಈಗ ಕನ್ನಡದ ಕೆಲಸ ಹತ್ತಾರು ಕಡೆಗಳಿಂದ ಯಶಸ್ವಿಯಾಗಿ ನಡೆಯುತ್ತಿದೆ. ಕಳೆದ ಶತಮಾನದ ಮಧ್ಯ ಭಾಗದಿಂದ ಶಾಸನದ ಇಲಾಖೆ ವಿದ್ಯಾಭ್ಯಾಸದ ಇಲಾಖೆಗಳ ಮೂಲಕ, ಕಾವ್ಯಕಲಾನಿಧಿ ಕಾವ್ಯಮಂಜರಿ ಬೇಸಿಲ್‌ಮಿಷನ್ ಮುದ್ರಣಾಲಯ ಮೊದಲಾದ ಖಾಸಗಿ ಸಂಸ್ಥೆಗಳ ಮೂಲಕ ಪ್ರಾರಂಭವಾದ ಪ್ರಕಟಣಕಾರ್ಯ ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲೆ, ಮೈಸೂರು ಹಾಗೂ ಕರ್ಣಾಟಕ ವಿಶ್ವವಿದ್ಯಾನಿಲಯಗಳ ಪ್ರಸಾರಾಂಗಗಳ ಮೂಲಕ ದಿನೇ ದಿನೇ ವೃದ್ಧಿ ಗೊಂಡು, ಸ್ವಾತಂತ್ರ್ಯೋತ್ತರ ಕಾಲದಲ್ಲಿ ವಿದ್ಯುದ್ವೇಗದಿಂದ ಸಾಗುತ್ತಿದೆ. ಜಗತ್ತಿನ ಮೂರ್ನಾಲ್ಕು ವಿಶ್ವವಿದ್ಯಾನಿಲಯಗಳನ್ನು ಬಿಟ್ಟರೆ ಮೈಸೂರು ವಿಶ್ವವಿದ್ಯಾನಿಲಯದ

ಪ್ರಕಟನಶಾಖೆ ಅತ್ಯಂತ ದೊಡ್ಡದೆಂದು ಹೇಳಬಹುದು. ಈಗಂತು ದಿನಬೆಳಗಾದರೆ ಒಂದೆರಡು ಹೊಸ ಪುಸ್ತಕಗಳು ಕೈ ಸೇರುತ್ತವೆ. ಅವನ್ನು ಓದುವುದಿರಲಿ, ಅವುಗಳ ಹೆಸರನ್ನು ಸಹ ನೆನಪಿನಲ್ಲಿಟ್ಟುಕೊಳ್ಳುವುದು ಕಷ್ಟವಾಗಿದೆ.

ಭಾಷಾಭಿವೃದ್ಧಿಗೆ ನೆರವಾಗಿರುವ ಪ್ರಕಾಶನ ಸಂಸ್ಥೆಗಳಿಗೆ ಉಚಿತವರಿತು ಪ್ರೋತ್ಸಾಹ ನೀಡಬೇಕಾದುದು ಸರ್ಕಾರದ ಹಾಗೂ ಜನತೆಯ ಕರ್ತವ್ಯ. ಜನತೆಯ ಪ್ರೋತ್ಸಾಹವೊಂದಿದ್ದರೆ ಬೇರೆ ಯಾರ ಸಹಾಯವೂ ಬೇಕಿಲ್ಲ. ಸಾಕ್ಷರತೆ ಹೆಚ್ಚಿದಂತೆಲ್ಲ ಅಕ್ಷರಸ್ಥರ ಜ್ಞಾನದಾಹವನ್ನು ಪರಿಹರಿಸುವ ಸಲುವಾಗಿ ಗ್ರಂಥಾಲಯಗಳು ಹೋಬಳಿಗೊಂದರಂತಾದರೂ ಸ್ಥಾಪನೆಗೊಳ್ಳಬೇಕು. ಅವರ ಮನಸ್ಸನ್ನು ಒಳ್ಳೆಯ ದರ ಕಡೆಗೆ ಸೆಳೆಯದಿದ್ದರೆ ಸಾಕ್ಷರರು ರಾಕ್ಷಸರಾಗುವ ಸಂಭವವುಂಟು. ಈ ಪ್ರವೃತ್ತಿಯನ್ನು ತಡೆಗಟ್ಟುವ ಸಲುವಾಗಿ ಅವರಿಗೆ ಒಳ್ಳೆಯ ಸಾಹಿತ್ಯವನ್ನೊದಗಿಸ ಬೇಕು. ಒಂದು ನಾಡಿನ ಸಂಸ್ಕೃತಿಯ ಮಾನದಂಡ ಗ್ರಂಥಾಲಯ. ಗ್ರಂಥಾಲಯ ಗಳು ಹೆಚ್ಚಿದಂತೆಲ್ಲ ಪ್ರಕಾಶನ ಸಂಸ್ಥೆಗಳ ಅದೃಷ್ಟವೂ ಕುದುರಬಹುದು. ಯೂರೋಪಿನ ರಾಷ್ಟ್ರಗಳಂತೆ ವಿದೇಶಗಳಿಂದ ಆಮದಾಗುತ್ತಿರುವ ಪುಸ್ತಕಗಳನ್ನೂ ಕನಿಷ್ಠ ಮಿತಿಗಿಳಿಸಿದ್ದಾದರೆ ನಮ್ಮ ಪ್ರಕಾಶಕರ ಪರಿಸ್ಥಿತಿ ಸುಧಾರಿಸೀತು. ಯಾವ ಗ್ರಂಥಾಲಯದಲ್ಲಿಯೇ ಆಗಲಿ—ಕಾಲೇಜು ಗ್ರಂಥಾಲಯ ವಿನಾ-ಇಂಗ್ಲೀಷ್ ಪುಸ್ತಕಗಳ ಸಂಗ್ರಹ ಬೇಕಾಗುವುದಿಲ್ಲ. ಮೈಸೂರು ನಗರದ ಸಾರ್ವಜನಿಕ ಗ್ರಂಥಾಲಯದಲ್ಲಿ ಒಂದು ತಿಂಗಳ ಅವಧಿಯಲ್ಲಿ ಓದುಗರು ಎರವಲು ಪಡೆಯುವ ಇಂಗ್ಲಿಷ್ ಪುಸ್ತಕಗಳ ಸರಾಸರಿ ಸಂಖ್ಯೆ ಹತ್ತೊ—ಹನ್ನೆರಡೊ ; ಕನ್ನಡ ಪುಸ್ತಕಗಳ ಸಂಖ್ಯೆ ಕನಿಷ್ಠ ಒಂದು ಸಾವಿರ. ಇಷ್ಟೇ ಅಲ್ಲ, ಕಾಲೇಜು ಗ್ರಂಥಾಲಯಗಳಲ್ಲಿ ಸಹ ವಿದ್ಯಾರ್ಥಿಗಳು ಓದುವ ಇಂಗ್ಲಿಷ್ ಪುಸ್ತಕಗಳ ಸಂಖ್ಯೆ ತೀರ ಕಡಮೆ. ಪ್ರಯೋಜನವಿಲ್ಲದ ಬಾಬ್ತುಗಳಿಗೆ ಹಣ ಪೋಲು ಮಾಡುವುದು ದ್ರೋಹವಾಗುತ್ತದೆ. ಸಂಘವೋ ಸಂಸ್ಥೆಗಳೋ ಅಥವಾ ಸರ್ಕಾರವೋ ಪ್ರಕಾಶಕರು ಪ್ರಕಟಿಸುವ ಉತ್ತಮ ಗ್ರಂಥಗಳಿಗೆ ಬಹುಮಾನ ನೀಡುವುದು ಸೂಕ್ತ ; ಇಲ್ಲವಾದರೆ ಅಂಥ ಗ್ರಂಥಗಳ ಪ್ರತಿ ಗಳನ್ನು ಬಹು ಸಂಖ್ಯೆಯಲ್ಲಿ ಕೊಳ್ಳಬೇಕಾದದ್ದು ಧರ್ಮ.

ಕನ್ನಡ ಶ್ರೀಮಂತವಾಗಿ ಬೆಳೆದಿದೆಯೆನ್ನುವುನ್ನು ಪ್ರಮಾಣಪೂರ್ವಕವಾಗಿ ತೋರಿಸುವ ಸಲುವಾಗಿ ಇಷ್ಟೆಲ್ಲ ಪ್ರವರ ಹೇಳಬೇಕಾಯಿತು. ಅದು ಎಷ್ಟು ಎತ್ತರ ಕ್ಕಾದರೂ ಬೆಳೆಯಬಲ್ಲದು, ಎಷ್ಟು ವ್ಯಾಪಕವಾಗಿಯಾದರೂ ಪಸರಿಸಬಲ್ಲದೆನ್ನು ವುದಕ್ಕೆ ಈಗಾಗಲೇ ಸಾಕಷ್ಟು ಸಾಕ್ಷ್ಯ ದೊರೆಯುತ್ತದೆ. ಇಷ್ಟಾದರೂ ಅದನ್ನು ಶಿಕ್ಷಣ ಮಾಧ್ಯಮಕ್ಕೆ ಹಾಗೂ ಆಡಳಿತ ಮಾಧ್ಯಮಕ್ಕೆ ಬಳಸಲು ಜನ ಹಿಂಜರಿಯು ತ್ತಿದ್ದಾರೆ. ಈಗಂತೂ ಅದಕ್ಕೆ ಯಾವ ತೊಡಕುಗಳೂ ಇಲ್ಲ. ಗೆಜೆಟ್ಟು ಕನ್ನಡ ದಲ್ಲಿ ಪ್ರಕಟವಾಗುತ್ತಿರುವಾಗಅದು ಆಡಳಿತ ಮಾಧ್ಯಮವಾಗಲಾರದೆಂದು ಯಾರೂ ಹೇಳುವಂತಿಲ್ಲ. ಸಬ್‌ಡಿವಿಜನ್ ಮಟ್ಟದಲ್ಲಿ ಅದು ಮಾಧ್ಯಮವಾಗಬಲ್ಲುದಾದರೆ

ಮೇಲಿನ ಹಂತಗಳಲ್ಲಿ ಏಕಾಗಬಾರದು? ಒಬ್ಬಿಬ್ಬರು ಅಧಿಕಾರಿಗಳ ಪ್ರತಿಷ್ಠೆಗಾಗಿ ಪ್ರಜೆಗಳ ಹಿತವನ್ನು ಬಲಿಗೊಡಬಾರದು. ಅವಶ್ಯವಾದರೆ ಅಡ್‌ಮಿನಿಸ್ಟ್ರೇಟಿವ್ ಟ್ರೈನಿಂಗ್ ಇನ್‌ಸ್ಟಿಟ್ಯೂಟನಂಥ ಸಂಸ್ಥೆಗಳಲ್ಲಿ ಅಧಿಕಾರಿಗಳಿಗೆ ಕನ್ನಡದಲ್ಲಿ ತರಬೇತಿ ನೀಡಬಹುದು. ಕೇಂದ್ರ ಸಾರ್ವಜನಿಕ ಸೇವಾ ಆಯೋಗ ದೇಶ ಭಾಷೆಗಳಲ್ಲಿ ಮಿತವಲಯದಲ್ಲಾದರೂ ಸ್ಪರ್ಧಾಪರೀಕ್ಷೆಗಳನ್ನು ನಡಸುತ್ತಿರುವಾಗ ರಾಜ್ಯದ ಆಯೋಗ ಕನ್ನಡವನ್ನು ನಿರ್ಲಕ್ಷಿಸಿರುವುದು ದುರ್ದೈವ. ಕನ್ನಡರಾಜ್ಯದ ಕಚೇರಿಗಳಿಗೆ ಬೇಕಾದ ಜನರಿಗೆ ಕನ್ನಡದಲ್ಲೇಕೆ ಪರೀಕ್ಷೆ ಏರ್ಪಡಿಸಬಾರದು?

ನಮ್ಮ ತಾಯಿಗೆ ನಾವಲ್ಲದೆ ಹೊರಗಣ ಜನ ಗೌರವ ತೋರಿಸುವುದುಂಟೆ? ನಮ್ಮ ಭಾಷೆಗೆ ನಾವು ಪುರಸ್ಕಾರ ನೀಡದಿದ್ದರೆ ವಿದೇಶೀಯರಿರಲಿ, ಕೇಂದ್ರ ಸರಕಾರವೂ ಆ ಕಡೆ ತಿರುಗಿ ನೋಡುವುದಿಲ್ಲ. ಉತ್ತರದವರಿಗೆ ದಕ್ಷಿಣ ಭಾಷೆಗಳೆಂದರೆ ತಮಿಳು ಅಥವಾ ತೆಲುಗು. ಈ ಅವಜ್ಞೆಗೆ ನಮ್ಮ ಮುಂದಾಳುಗಳ ಅಭಿಮಾನಶೂನ್ಯತೆ ಹಾಗೂ ಮೌಢ್ಯಗಳೆ ಕಾರಣ. ಆಕಾಶವಾಣಿ, ಯೋಜನಾ, ಸೈನಿಕ ಸಮಾಚಾರ ಮೊದಲಾದ ಕೇಂದ್ರ ಸರ್ಕಾರದ ಪತ್ರಿಕೆಗಳು ಬೇರೆ ಭಾಷೆಗಳಲ್ಲಿ ಪ್ರಕಟವಾಗುತ್ತಿರುವಂತೆ ಕನ್ನಡದಲ್ಲಿ ಆಗುತ್ತಿಲ್ಲ. ಅವುಗಳ ಇಂಗ್ಲಿಷ್ ಪ್ರತಿಗಳಿಗೆ ನಮ್ಮ ಸರ್ಕಾರ ಹಾಗೂ ಇತರ ಸಂಸ್ಥೆಗಳು ಚಂದಾಹಣ ನೀಡುತ್ತಿವೆ. ಕನ್ನಡದಲ್ಲಿ ಅವುಗಳನ್ನು ಪ್ರಕಟಿಸುವ ತನಕ ಅವುಗಳನ್ನು ಮಾತ್ರವಲ್ಲ, ಕೇಂದ್ರ ಸರ್ಕಾರದ ಇತರ ಎಲ್ಲ ಪ್ರಕಟನೆಗಳನ್ನು ಬಹಿಷ್ಕರಿಸಬೇಕು. ಇದಕ್ಕೂ ಮಣಿಯದಿದ್ದಲ್ಲಿ ಮುಂದಿನ ನೇರವಾದ ಕಾರ್ಯಕ್ರಮಗಳು ಅನಿವಾರ್ಯವಾಗುತ್ತವೆ.

ಭರತಖಂಡದಲ್ಲಿಯೇ ನಮ್ಮ ಭಾಷೆಗೆ ಬೆಲೆಯಿಲ್ಲದಿರುವಾಗ ಬೇರೆ ದೇಶಗಳಲ್ಲಿ ಅದರ ಹೆಸರು ಸಹ ಗೊತ್ತಿರುವುದಿಲ್ಲ. ಯೂರೋಪಿನ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ತಮಿಳು ಸಂಸ್ಕೃತ ಹಿಂದಿಗಳ ಬೋಧನೆಗೆ ಅವಕಾಶವುಂಟು; ಕೆಲವುಕಡೆ ಬಂಗಾಳಿ ತೆಲುಗುಗಳಿಗೂ ಅವಕಾಶವುಂಟು. ಮಾಸ್ಕೊ ಆಕಾಶವಾಣಿಯಲ್ಲಿ ಕನ್ನಡದ ವಿಭಾಗವುಂಟು. ವಿಶ್ವವಿದ್ಯಾನಿಲಯದಲ್ಲೇಕೆ ಕನ್ನಡ ಕಲಿಸಬಾರದೆಂದು ಅಲ್ಲಿಯ ಪ್ರಾಧ್ಯಾಪಕರನ್ನು ಕೇಳಿದಾಗ ಅವರಿಂದ ಬಂದ ಪ್ರಶ್ನೆಗಳಿವು : ನಿಮ್ಮ ಭಾಷೆ ಶಿಕ್ಷಣ ಮಾಧ್ಯಮವಾಗಿದೆಯೆ? ಆಡಳಿತ ಮಾಧ್ಯಮವಾಗಿದೆಯೆ? ಅವರೇ ಮಾತು ಮುಂದುವರಿಸಿ "ನಿಮ್ಮಲ್ಲಿಯೇ ಅದಕ್ಕೆ ಸರಿಯಾದ ಸ್ಥಾನಮಾನಗಳಿಲ್ಲದಿರುವಾಗ ನಮ್ಮ ವಿದ್ಯಾರ್ಥಿಗಳು ಅದನ್ನು ಕಲಿತರೆ ಬರುವ ಪ್ರಯೋಜನವೇನು? ನಿಷ್ಪ್ರಯೋಜಕವಾದ ಕೆಲಸಕ್ಕೆ ನಾವು ಸಿದ್ಧರಾಗಿಲ್ಲ" ಎಂದರು. ಬಂಗಾಳಿ ತಮಿಳು ಭಾಷೆಗಳ ವಿಷಯ ಪ್ರಸ್ತಾಪಿಸಿದಾಗ ಅವರು ಒಪ್ಪಬಹುದಾದ ಉತ್ತರ ನೀಡಲಿಲ್ಲ.

ಅನ್ಯಭಾಷೆಗಳಿಂದ ಕನ್ನಡಕ್ಕೆ ಗಂಡಾಂತರವೊದಗುವುದಾದರೆ ಅದು ಮೊದಲು ಹಿಂದಿಯಿಂದ. ದಿ.ಎ.ಆರ್. ಕೃಷ್ಣಶಾಸ್ತ್ರಿಗಳು ೨೬ನೆಯ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷಭಾಷಣದಲ್ಲಿ ನುಡಿದಿದ್ದ ಭವಿಷ್ಯ ಇಂದು ನಿಜವಾಗುತ್ತಿದೆ:

"ರಾಷ್ಟ್ರಭಾಷೆಯೊಂದು ಅವಶ್ಯಕವೆಂಬುದೇ ನನಗೆ ಸಂದೇಹ. ಇಷ್ಟು ದೊಡ್ಡ ಖಂಡಕ್ಕೆ ಅದು ಸಾಧ್ಯವಾಗುತ್ತದೆಯೋ ಎಂಬುದು ಇನ್ನೂ ಸಂದೇಹ . . .ಇದನ್ನು (ಹಿಂದಿ) ಬೆಳೆಯಗೊಡುವುದರಿಂದ ಕನ್ನಡಕ್ಕೆ ಪ್ರಯೋಜನವಿಲ್ಲ, . . .ಕನ್ನಡಕ್ಕೆ ಕ್ಷೇಮವಿಲ್ಲ . . .ಬೀದಿಯಲ್ಲಿ ಎಷ್ಟೋ ಜನ ಹೋಗುತ್ತಾರೆ; ಅವರ ತಳ್ಳಿಯೆಲ್ಲಾ ನಮಗೇಕೆ? ಆದರೆ ಮನೆಬಾಗಿಲನ್ನು ಕಿತ್ತುಕೊಳ್ಳಲು ಬಂದರೆ ಯಾರು ಸುಮ್ಮನಿರುವುದಕ್ಕಾಧೀತು? . . .ಹಿಂದಿಗಾಗಿ ಹಣವನ್ನೂ ಜನವನ್ನೂ ಅಭಿಮಾನವನ್ನೂ ಕೊಟ್ಟು ಅದನ್ನು ತುಂಬಿಕೊಳ್ಳುವುದು ನ್ಯಾಯವೇ ವಿಚಾರಮಾಡಿ." ಮೂವತ್ತು ವರ್ಷಗಳ ಹಿಂದೆ ಅವರು ಆಡಿದ ಮಾತಿನ ಕಟುಸತ್ಯ ಕನ್ನಡಿಗರನ್ನು ಜರ್ಝರಗೊಳಿಸುತ್ತಿದೆ. ತಾವು ದಕ್ಷಿಣದ ಯಾವ ಭಾಷೆಯನ್ನೂ ವ್ಯಾಸಂಗ ಮಾಡದೆ ಉತ್ತರದವರು ದಕ್ಷಿಣದವರ ಮೇಲೆ ತಮ್ಮ ಭಾಷೆಯನ್ನು ಹೇರಲು ಹವಣಿಸುತ್ತಿದ್ದಾರೆ. ಇಂಗ್ಲಿಷನ್ನು ಹೊರಗೆ ನೂಕಿ ಅದರ ಸ್ಥಾನದಲ್ಲಿ ತಾನು ಭದ್ರವಾಗಿ ನೆಲೆಯೂರಿ ದೇಶಭಾಷೆಗಳನ್ನು ಮೂಲೆ ಗುಂಪಾಗಿ ಒತ್ತರಿಸುವುದೇ ಹಿಂದಿಯ ಮುಖ್ಯೋದ್ದೇಶವಾಗಿದೆ. ಕೇವಲ ಸಂಪರ್ಕ ಭಾಷೆಯಾಗಿರುವಷ್ಟರಿಂದ ಅದಕ್ಕೆ ತೃಪ್ತಿಯಿಲ್ಲ. ಇಂದು ಇಂಗ್ಲಿಷ್ ಸಂಪರ್ಕ ಭಾಷೆಯಾಗಿದೆ. ನೂರಕ್ಕೊಬ್ಬನಿಗೆ ಅದು ಬಂದರೆ ಹೆಚ್ಚು. ಅಂತೆಯೇ ಹಿಂದಿ ಕಲಿಯಬೇಕಾಗಿಲ್ಲ. ಜೀವಮಾನದಲ್ಲೆಲ್ಲ ತನ್ನೂರು ಬಿಟ್ಟು ಹೊರಗೆ ಹೋಗದಿರುವ ಹಳ್ಳಿಗನಿಗೆ ಹಿಂದಿಯೇಕೆ ಬೇಕು? ದಿಲ್ಲಿಯ ಸಂಸತ್ ಸದನಕ್ಕೆ ಹೋಗುವವರು, ಕೇಂದ್ರ ಸರ್ಕಾರದೊಡನೆ ವ್ಯವಹಾರ ನಡೆಸುವ ನೌಕರರು, ಅದನ್ನು ಕಲಿತರೆ ಸಾಕು. ಅದೂ ಎಷ್ಟು? ವ್ಯವಹಾರಕ್ಕೆಷ್ಟು ಬೇಕೊ ಅಷ್ಟೆ. ಅನಾವಶ್ಯಕವಾಗಿ ಕಲಿತದ್ದೆಲ್ಲ ನಿಷ್ಪ್ರಯೋಜಕವಾಗುತ್ತದೆ. ಯಾರು ಯಾವ ಭಾಷೆಯನ್ನು ಎಷ್ಟು ಕಲಿಯಬೇಕೆನ್ನುವ ಔಚಿತ್ಯಜ್ಞಾನ ಹಿಂದೀ ಪ್ರೇಮಿಗಳಲ್ಲಿರುವುದಾದರೆ ದೇಶದಲ್ಲಿ ಭಾಷಾ ಸಮಸ್ಯೆ ಕ್ಷಣಾರ್ಧದಲ್ಲಿ ಪರಿಹಾರವಾಗುತ್ತದೆ; ಈ ತತ್ತ್ವವನ್ನು ಮರೆತು ಎಲ್ಲರಿಗೂ ಚೆನ್ನಾಗಿ ಕಲಿಸುತ್ತೇವೆಂದು ಹೊರಟರೆ ರಾಷ್ಟ್ರೈಕ್ಯಕ್ಕೆ ಭಂಗವೊದಗೀತು. ಭರತ ಖಂಡಕ್ಕೊಂದು ಸಂಪರ್ಕಭಾಷೆ ಬೇಕು, ನಿಜ. ಆದರೆ ಅದೇ ಸರ್ವಮುಖ್ಯವಲ್ಲ. ಇಂಗು ಸಾರಿಗೆ ಬೇಕು, ನಿಜ; ಎಷ್ಟು ಬೇಕೋ ಅಷ್ಟೇ. ಹೆಚ್ಚಾದರೆ ಗತಿ! ಚತ್ರಿ ಎಕ್ಕಡ ಕೋಟು ಪೇಟ ಎಲ್ಲ ಬೇಕು ಮನುಷ್ಯನಿಗೆ. ಆದರೆ ಅವು ಎಲ್ಲಿರಬೇಕೊ ಅಲ್ಲಿದ್ದರೆ ಭೂಷಣವೇ ಹೊರತು, ಸ್ಥಾನಾಂತರವಾದರೆ ಅಸಾಮಂಜಸ್ಯ ವೊದಗುತ್ತದೆ, ನಗೆಪಾಟಲಾಗುತ್ತದೆ.

ಕೆಲವು ದಿನಗಳ ಹಿಂದೆ ಬೆಂಗಳೂರಲ್ಲಿ ಹಿಂದೀ ವಿಶ್ವವಿದ್ಯಾಲಯವೊಂದು ಸ್ಥಾಪನೆಗೊಳ್ಳುವುದಾಗಿ ಸುದ್ದಿ ಹೊರಟಿತ್ತು. ಕೇಂದ್ರ ಸರ್ಕಾರ ತೋರಿಸುವ ಆಮಿಷಗಳಿಗೆ ರಾಜ್ಯಸರ್ಕಾರ ಬಲಿಯಾಗುವುದಾದರೆ ಸಾವಿರಾರು ವರ್ಷಗಳಿಂದ ಹೊರವಾಗಿ ಬೆಳೆದು ಬಂದಿರುವ ಕನ್ನಡ ಭಾಷೆ ಮತ್ತು ಕನ್ನಡ ಸಂಸ್ಕೃತಿಗಳಿಗೆ

ತಿಲತರ್ಪಣವೆರೆದಂತೆಯೇ ಲೆಕ್ಕ; ಆಗ ಕನ್ನಡ ರಾಜ್ಯ ನಿರ್ಮಾಣವಾದಂತೆಯೇ. ಸ್ವಭಾಷೆ ಸ್ವಸಂಸ್ಕೃತಿಯ ಉತ್ತೇಜನಕ್ಕಾಗಿ ಒಂದು ಹೊಸ ವಿಶ್ವವಿದ್ಯಾನಿಲಯ ಸಂಸ್ಥಾಪನೆಗೊಳ್ಳುವುದು ಸಹಜ. ಬೆಂಗಳೂರಲ್ಲಿರುವ ಹಿಡಿಮಂದಿ ಹಿಂದೀ ಯರಿಗಾಗಿ ಕೋಟಿಗಟ್ಟಲೆ ರೂಪಾಯಿ ಖರ್ಚುಮಾಡಿ ಒಂದು ವಿಶ್ವವಿದ್ಯಾನಿಲಯ ವನ್ನು ಸ್ಥಾಪಿಸುವುದು ಎಗ್ಗತನ. ನಮ್ಮಲ್ಲಿ ಸ್ವಾಭಿಮಾನವೇನೂ ಇಲ್ಲ; ಹೋಗಲಿ, ರಾಜಕೀಯ ಸ್ವಾರ್ಥಕ್ಕಾಗಿ ಕನ್ನಡಿಗರು ಕಟ್ಟಿರುವ ರಾಜ್ಯವನ್ನಾಗಲಿ, ಅದರ ರಾಜಧಾನಿಯಾದ ಬೆಂಗಳೂರನ್ನಾಗಲಿ ಉತ್ತರದವರಿಗೆ ಮಾರುವುದು ಸರಿಯಲ್ಲ. ರಾಜಕಾರಣಿಯ ಕಣ್ಣಿಗೆ ಕಾಣುವುದು ಇಂದಿನ ಸುಖ ಮಾತ್ರ; ಸಾಹಿತಿ ನೂರು ವರ್ಷಗಳಾಚೆ ನೋಡುತ್ತಾನೆ. ಒಂದು ಭಾಷೆಗೆ ಸಂಬಂಧಿಸಿದ ವಿಶ್ವವಿದ್ಯಾನಿಲಯ ಆ ಭಾಷೆ ಪ್ರಚಾರದಲ್ಲಿರುವ ಪ್ರದೇಶದಲ್ಲಿ ಸ್ಥಾಪನೆಯಾಗತಕ್ಕದ್ದು ಸಹಜವೆಂಬ ಸರಳ ತತ್ತ್ವ ಎಂಥ ಮಂದಮತಿಗಾದರೂ ಹೊಳೆಯಬೇಕಾದ ವಿಷಯ. ಬೆಂಗಳೂರಲ್ಲಿ ತಮಿಳರಿದ್ದಾರೆಂಬ ಕಾರಣದಿಂದ ಅದನ್ನು ತಮಿಳುನಾಡಿಗೆ ಮಾರಿ ಬಿಡುವುದು ತರವಲ್ಲ. ಕೇಂದ್ರ ಸರ್ಕಾರದ ಬೊಕ್ಕಸದಲ್ಲಿ ಹಣ ಹೇರಳವಾಗಿದ್ದರೆ ನದೀ ಯೋಜನೆಗಳಿಗಾಗಿ ವಿದ್ಯುಚ್ಛಕ್ತಿ ಯೋಜನೆಗಳಿಗಾಗಿ ಕಾರ್ಖಾನೆಗಳ ಸ್ಥಾಪನೆ ಗಾಗಿ ಸುರಿಯಲಿ; ಆದರ ಪ್ರಯೋಜನ ಶ್ರೀಸಾಮಾನ್ಯನಿಗೆ ಲಭಿಸುವಂತಾಗಲಿ. ಹೊಟ್ಟೆಗೆ ಹಿಟ್ಟಿಲ್ಲದಾಗ ಜುಟ್ಟಿಗೆ ಮಲ್ಲಿಗೆ ಹೂವೇಕೆ? ಇಂಥ ದುಂದುಗಾರಿಕೆ ಖಂಡನೀಯ. ಹಿಂದಿಯ ಮೂಲಕ ಕಲಿಯಬೇಕೆನ್ನುವವರು ದೆಹಲಿಗೆ ಹೋಗಲಿ, ಆಗ್ರಾಕ್ಕೆ ಹೋಗಲಿ, ಕಾಶಿಗೆ ಹೋಗಲಿ. ಅಂಥವರಿಗೆ ತಿಂಗಳಿಗೆ ಒಂದು ಸಾವಿರ ರೂಪಾಯಿ ವಿದ್ಯಾರ್ಥಿವೇತನ ಕೊಡೋಣ. ಈ ಹೊತ್ತು ಬೇರೆ ವಿಷಯಗಳನ್ನು ಕಲಿಯುವ ನಮ್ಮ ವಿದ್ಯಾರ್ಥಿಗಳು ಉತ್ತರದ ವಿಶ್ವವಿದ್ಯಾನಿಲಯಗಳಿಗೆ ಹೋಗುವು ದಿಲ್ಲವೆ? ಕೇಂದ್ರ ಸರ್ಕಾರದ ನೌಕರರು ಸಹ ಇಲ್ಲಿ ನೆಲೆಯಾಗಿ ನಿಲ್ಲುವುದಿಲ್ಲ. ನಿಲ್ಲಲಿ, ಬಿಡಲಿ, ಇಲ್ಲಿರುವವರಾದರೂ ಇಲ್ಲಿಯ ಭಾಷೆಯ ಮೂಲಕ ವಿದ್ಯೆ ಕಲಿಯಲಿ. ಇಲ್ಲಿಯ ೨೨ ಕೋಟಿ ಜನರು ಹಿಂದಿ ಕಲಿಯಬೇಕೆಂದು ಅವರು ಅಪೇಕ್ಷಿಸುವು ದಾದರೆ, ನಾಲ್ಕಾರು ಜನರಾದರೂ ಭಾವೈಕ್ಯದ ದೃಷ್ಟಿಯಿಂದಾದರೂ ಕನ್ನಡ ಕಲಿಯಲೆಂದು ನಾವು ಹೇಳಬೇಕಾಗುತ್ತದೆ.

ಹಿಂದೀ ಮಾಧ್ಯಮದ ತರಗತಿಗಳನ್ನು ತೆರೆಯುವುದರಿಂದುಂಟಾಗುವ ಪರಿಣಾಮಗಳನ್ನು ಕುರಿತು ಯಾರೂ ಆಳವಾಗಿ ಆಲೋಚಿಸಿದಂತೆ ತೋರುವುದಿಲ್ಲ. ಹಿಂದೀ ಮಾಧ್ಯಮದ ತರಗತಿಗಳಲ್ಲಿ ವಿದ್ಯಾರ್ಥಿಸಂಖ್ಯೆ ತೂಕತಪ್ಪಿ ಬೆಳೆದಾಗ, ಇಡೀ ಒಂದು ಕಾಲೇಜೇ ಹಿಂದೀ ಕಾಲೇಜಾಗಿ ಪರಿವರ್ತನೆಗೊಂಡಾಗ, ಆ ತರಗತಿಯೊ ಆ ಕಾಲೇಜೊ ಇರುವ ಪ್ರದೇಶ ಕನ್ನಡನಾಡಿನಲ್ಲುಳಿಯುವುದಿಲ್ಲ. ಬೀದರಿನ ಒಂದು ಕಾಲೇಜಿನಲ್ಲಿ ಹಿಂದಿಯೇ ಶಿಕ್ಷಣ ಮಾಧ್ಯಮವಾಗುವುದಾದರೆ ಆ ಪ್ರದೇಶ ಕನ್ನಡ ನಾಡಿನ ಭಾಗವಲ್ಲವೆಂಬುದಕ್ಕೆ ಸಾಕ್ಷಿಯನ್ನೊದಗಿಸಿದಂತಾಗುತ್ತದೆ. ಬೆಳಗಾಂ

ಕಾರವಾರ ಮೊದಲಾದ ಪ್ರದೇಶಗಳಲ್ಲಿ ಸರ್ಕಾರವಾಗಲಿ, ವಿದ್ಯಾ ಇಲಾಖೆಯಾಗಲಿ, ವಿಶ್ವವಿದ್ಯಾನಿಲಯವಾಗಲಿ ಮೊದಲಿಂದ ಕನ್ನಡವನ್ನು ಬಲಪಡಿಸಿದ್ದರೆ ಅವಕ್ಕೆ ಅಪಾಯವೊದಗುತ್ತಿರಲಿಲ್ಲ. ಬೆಳಗಾಂ ನಗರವನ್ನು ಬಿಟ್ಟುಕೊಡುವುದರಿಂದಲೆ ಮಹಾರಾಷ್ಟ್ರೀಯರ ಭೂಮಿದಾಹ ಹಿಂಗುವುದಿಲ್ಲ. ಈ ಪ್ರಶ್ನೆ ಬಗೆಹರಿದ ಕೂಡಲೆ ಅವರ ಕಾಕದೃಷ್ಟಿ ಕಾರವಾರದ ಕಡೆಗೆ ಹರಿಯುತ್ತದೆ, ಅನಂತರ ಬೀದರ್ ಜಿಲ್ಲೆಯ ಕಡೆಗೆ ಸರಿಯುತ್ತದೆ. ನರ್ಮದಾ ಕಾವೇರಿಗಳ ನಡುವೆ ವ್ಯಾಪಿಸಿದ ಕನ್ನಡನಾಡು ಈಚಿನ ಕನ್ನಡಿಗರ ಹೇಡಿತನದಿಂದಾಗಿ ಸಂಕುಚಿತವಾಯಿತು. ನಮ್ಮಲ್ಲಿ ದೂರ ದೃಷ್ಟಿ ವಿಚಾರಶಕ್ತಿಗಳ ಅಭಾವದಿಂದಾಗಿ ಈ ಸಂಕೋಚವ್ಯಾಪಾರ ಇಲ್ಲಿಗೇ ಮುಕ್ತಾಯಗೊಳ್ಳುವಂತೆ ಕಾಣುವುದಿಲ್ಲ. ರಾಜ್ಯದ ಸಮಗ್ರತೆಯನ್ನು ರಕ್ಷಿಸ ಬೇಕಾದ್ದು ವಿಶ್ವವಿದ್ಯಾನಿಲಯದ ಆದ್ಯ ಕರ್ತವ್ಯ.

ಸಮಗ್ರತೆಯ ಮಾತು ಬಂದಾಗ ಇತರ ಭಾಷೆಗಳಿಗೆ ಸಂಬಂಧಿಸಿದ ಸಮಸ್ಯೆಗಳು ನೆನಪಿಗೆ ಬರುತ್ತವೆ. ಮೈಸೂರು ಸರ್ಕಾರ ಉದಾರವಾಗಿ ಹಲವಾರು ಭಾಷೆಗಳಿಗೆ ಪ್ರೋತ್ಸಾಹ ನೀಡುತ್ತಿರುವುದು ಸ್ತುತ್ಯವಾದ ವಿಷಯ. ಆದರೆ ಈ ಔದಾರ್ಯ ಕನ್ನಡಿಗರಿಗೆ ಕನ್ನಡನಾಡಿಗೆ ಕನ್ನಡ ನುಡಿಗೆ ಉರುಳಾಗಬಾರದು. ನಿರ್ದಿಷ್ಟ ಸಂಖ್ಯೆಯ ವಿದ್ಯಾರ್ಥಿಗಳಿದ್ದರೆ ಅವರವರ ಭಾಷೆಯೇ ಮಾಧ್ಯಮವಾಗುಳ್ಳ ಶಾಲೆ ಗಳನ್ನು ತೆರೆಯಬೇಕೆಂದು ಕಾನೂನಿದೆ. ಈ ಕಾನೂನನ್ನು ನಮ್ಮ ಸರ್ಕಾರ ಅಕ್ಷರಶಃ ಪಾಲಿಸುತ್ತಿರುವಂತೆ ನೆರೆಯ ಸರ್ಕಾರಗಳು ಪಾಲಿಸುತ್ತಿಲ್ಲ. ಬೇರೆ ಭಾಷೆಯ ಶಾಲೆಗಳನ್ನು ತೆರೆಯಲು ವಿದ್ಯಾರ್ಥಿಸಂಖ್ಯೆಯ ಜತೆಗೆ ಪ್ರಜಾಸಂಖ್ಯೆ ಯನ್ನು ಸಹ ಆಧಾರವಾಗಿಟ್ಟುಕೊಳ್ಳಬೇಕಾದ್ದು ನ್ಯಾಯ. ಲಕ್ಷಗಟ್ಟಳೆ ಕನ್ನಡಿಗ ರಿರುವ ಮದ್ರಾಸಿನಲ್ಲಿ ನೀಲಗಿರಿಯಲ್ಲಿ ಕನ್ನಡದ ಶಾಲೆಗಳಿಲ್ಲ; ಹಿಡಿಸಂಖ್ಯೆಯ ತಮಿಳರಿರುವ ಶಿವಮೊಗ್ಗೆಯಲ್ಲಿ ತಮಿಳು ಶಾಲೆಯಿದೆ. ಅವರೂ ಜನಸಂಖ್ಯೆಯ ಆಧಾರದ ಮೇಲೆ ಶಾಲೆಗಳನ್ನು ತೆರೆಯುವುದಾದರೆ ನಾವೂ ಅದಕ್ಕನುಗುಣವಾಗಿ ತೆರೆಯಬಹುದು ತಮಗೆ ಶಾಲೆ ಬೇಕೆಂದು ಅಲ್ಲಿಯ ಕನ್ನಡಿಗರು ಒತ್ತಾಯ ಮಾಡುವುದಿಲ್ಲ, ನಿಜ. ಇದಕ್ಕೆ ಕಾರಣವೇನಿರಬಹುದೆಂದು ಹಿರಿಯರು ಆಲೋಚಿ ಸಿದ್ದಾರೆಯೆ? ತಮಗೆ ಕನ್ನಡ ಶಾಲೆ ಬೇಕೆಂದು ತಮಿಳುನಾಡಿನ ಕನ್ನಡಿಗರು ಬೇಡಿಕೆ ಸಲ್ಲಿಸಿದನಂತರ ಅವರು ಅಲ್ಲಿ ಉಳಿಯುವಂತಿಲ್ಲ. ಕನ್ನಡಿಗರೆಲ್ಲಿಯೇ ಇರಲಿ, ಅವರ ರಕ್ಷಣೆ ಕನ್ನಡ ಸರ್ಕಾರದ ಹೊಣೆ. ಅದಿರಲಿ, ಕನ್ನಡ ರಾಜ್ಯದಲ್ಲಿ ಭಾಷಾ ದ್ವೀಪಗಳು ದಿನೇ ದಿನೇ ಹೆಚ್ಚುತ್ತ ಹೋದರೆ ರಾಜ್ಯದ ಸಮಗ್ರತೆ ಉಳಿಯಲಾರದು. ಅದು ಉಳಿಯಬೇಕಾದರೆ ರಾಜ್ಯದಲ್ಲಿ ಬಾಳಬೇಕೆನ್ನುವ ಜನರೆಲ್ಲ ಹಾಗೂ ಸರ್ಕಾರಿ ನೌಕರಿ ಬೇಕಾದವರೆಲ್ಲ ಕಡ್ಡಾಯವಾಗಿ ಕನ್ನಡ ಕಲಿಯಬೇಕು; ಕನ್ನಡ ಗೊತ್ತಿಲ್ಲ ದವರಿಗೆ ಸರ್ಕಾರದಲ್ಲಾಗಲಿ ಖಾಸಗಿ ಸಂಸ್ಥೆಗಳಲ್ಲಾಗಲಿ ನೌಕರಿ ಕೊಡಕೂಡದು. ಶಿಕ್ಷಣಮಾಧ್ಯಮ ಯಾವುದೇ ಇರಲಿ ಕನ್ನಡ ಕಲಿಸದ ಪ್ರಾಥಮಿಕ ಶಾಲೆಗಳು

ರಾಜ್ಯದಲ್ಲಿರಬಾರದು. ಪ್ರೌಢಶಾಲೆಗಳಲ್ಲಂತು ಕನ್ನಡವೇ ಕಡ್ಡಾಯವಾಗಿ ಶಿಕ್ಷಣ ಮಾಧ್ಯಮವಾಗಬೇಕು. ಭಾಷೆಗಳೆಲ್ಲ ಒಟ್ಟಾಗಿ ಕನ್ನಡಕ್ಕೆ ಅಧೀನವಾಗಿ ಬಾಳುವುದಾದರೆ ನಾಡಿನ ಸಮಗ್ರತೆಯುಳಿಯುತ್ತದೆ, ಅವು ಪ್ರತ್ಯೇಕವಾಗಿ ಉಳಿಯುವುದಾದರೆ ಸಮಗ್ರತೆಯಳಿಯುತ್ತದೆ. ಆ ಅಸಮಗ್ರತೆಯ ಹಾನಿಕಾರ ಪರಿಣಾಮ ಅನೂಹ್ಯ.

ಕನ್ನಡಕ್ಕೆ ಮನ್ನಣೆಯನ್ನು ದೊರಕಿಸುವ ವಿಷಯದಲ್ಲಿ ಈ ತನಕ ಪರಿಷತ್ತು ಮಂದಗತಿಯಿಂದಲೇ ಸಾಗುತ್ತಿತ್ತೆನ್ನಬಹುದು. ಈ ದಿಶೆಯಲ್ಲಿ ಸಾರ್ವಜನಿಕಾಭಿಪ್ರಾಯವನ್ನು ರೂಢಿಸಿ ಸರ್ಕಾರ ಹಾಗೂ ವಿಶ್ವವಿದ್ಯಾನಿಲಯಗಳ ಮೇಲೆ ಒತ್ತಾಯ ತರಲು ಪರಿಷತ್ತು ಶ್ರಮಿಸಬೇಕಾಗಿದೆ. ಇಂಥ ಒತ್ತಾಯಕ್ಕೆ ಇದು ಸಕಾಲ. ಕನ್ನಡ ನಾಡಿನಲ್ಲೆಲ್ಲ ಕನ್ನಡ ಪ್ರಜ್ಞೆ ಮೂಡಿದೆ. ಈ ಕೂಡಲೆ ಆಡಳಿತದ ಎಲ್ಲ ಹಂತಗಳಲ್ಲಿ ಕನ್ನಡ ಮಾಧ್ಯಮವನ್ನು ಜಾರಿಗೆ ತರುವಂತೆ ಸರ್ಕಾರವನ್ನು ಪ್ರೇರಿಸಬೇಕು. ಈಗತಾನೆ ಪಿಯುಸಿ ಮಂಡಲಿ ರಚನೆಯಾಗಿದೆ. ಕನ್ನಡವೇ ಪ್ರಧಾನ ಮಾಧ್ಯಮವಾಗಿರಬೇಕೆಂದು ಪಠ್ಯಕ್ರಮ ನಿಯೋಜನೆಗಾಗಿ ರಚನೆಗೊಂಡಿದ್ದ ಪರಿಣತಮಂಡಲಿ ನಿರ್ಧರಿಸಿದೆ. ಆ ನಿರ್ಧಾರದ ವಿರುದ್ಧವಾಗಿ ಅಲ್ಲೊಂದು ಇಲ್ಲೊಂದು ಒಡಕುದನಿ ಕೇಳಿಸುತ್ತಿದೆ. ಆ ನಿರ್ಧಾರ ಯಶಸ್ವಿಯಾಗಿ ಕಾರ್ಯರೂಪಕ್ಕೆ ಬರುವಂತೆ ಪರಿಷತ್ತು ತನ್ನೆಲ್ಲ ಶಕ್ತಿಸಾಮರ್ಥ್ಯಗಳನ್ನು ವಿನಿಯೋಗಿಸಬೇಕಾಗಿದೆ. ಕನ್ನಡ ನುಡಿಯ ಹಾಗೂ ಕನ್ನಡನಾಡಿನ ಉಳಿವಳಿವಿನ ಪ್ರಶ್ನೆ ಇದರ ಜಯಾಪಜಯಗಳನ್ನವಲಂಬಿಸಿದೆ. ಪರಿಷತ್ತು ಪಿಯುಸಿ ಮಂಡಲಿಯ ಹಿಂದೆ ಬಲವಾಗಿ ನಿಂತಲ್ಲಿ ಅದು ಖಂಡಿತ ಯಶಸ್ವಿಯಾಗುತ್ತದೆಂದು ಧೈರ್ಯವಾಗಿ ಹೇಳಬಲ್ಲೆ.

ಪರಿಷತ್ತಿನ ಯೋಜನೆಗಳಲ್ಲೊಂದು ರಾಜಧಾನಿಯಲ್ಲಿ ಕನ್ನಡದ ಅಭಿಮಾನವನ್ನು ಬೆಳೆಸುವುದು. ಈ ಹಿಂದೆ ಶ್ರೀ ಅ.ನ. ಕೃಷ್ಣರಾಯರೂ ಅವರ ಬೆಂಬಲಿಗರೂ ಕೆಲವು ಕಾರ್ಯಕ್ರಮಗಳನ್ನು ಕೈಕೊಂಡು ಮಾರ್ಗದರ್ಶನ ನೀಡಿದ್ದಾರೆ. ಕನ್ನಡ ಪಕ್ಷ ಮತ್ತು ಕನ್ನಡ ಚಳುವಳಿಗಾರರು ಈ ದಿಶೆಯಲ್ಲಿ ಸಾಕಷ್ಟು ಸೇವೆ ಸಲ್ಲಿಸಿದ್ದಾರೆ, ಸಲ್ಲಿಸುತ್ತಿದ್ದಾರೆ. ಕನ್ನಡನಾಡಿನ ಹೃದಯ ಅದರ ರಾಜಧಾನಿ; ಹೃದಯವೇ ರೋಗಪೀಡಿತವಾದರೆ ದೇಹದ ಗತಿಯೇನು ? ಈ ದೇಹಕ್ಷೇಮದ ದೃಷ್ಟಿಯಿಂದ ಹೃದಯಕ್ಕೆ ಚಿಕಿತ್ಸೆ ಈ ಕೂಡಲೆ ನಡೆಯಬೇಕಾಗಿದೆ.

ಉತ್ತಮ ಸಾಹಿತ್ಯಸೃಷ್ಟಿಗನುಕೂಲವಾದ ವಾತಾವರಣವನ್ನು ಸೃಷ್ಟಿಸಬೇಕಾದದ್ದು ಪರಿಷತ್ತಿನ ಧರ್ಮ. ಕನ್ನಡ ಲೇಖಕರ ಆರ್ಥಿಕ ಪರಿಸ್ಥಿತಿ ನೆಟ್ಟಗಿಲ್ಲವೆನ್ನುವುದು ಎಲ್ಲರ ಅನುಭವಕ್ಕೂ ಬಂದಿರುವ ವಿಷಯ. ಲೇಖನ ವ್ಯವಸಾಯವೇ ಪ್ರಧಾನ ವೃತ್ತಿಯಾದವರ ಜೀವನಯಾಪನೆ ಸಲೀಸಾಗಿ ನಡೆಯುವಂತೆ ದ್ರವ್ಯ ಸಹಾಯ ನೀಡಲು ಒಂದು ನಿಧಿಯನ್ನು ಸ್ಥಾಪಿಸುವುದೊಳ್ಳೆಯದು. ಲೇಖಕರು ದುಡ್ಡಿಗಾಗಿ ಪ್ರಕಾಶಕರ ಮನೆಗಳಿಗೆ ಅಲೆಯುವಂತಾಗಬಾರದು; ಪಠ್ಯಪುಸ್ತಕ ಸಮಿತಿಯ ಕೃಪಾಭಿಕ್ಷೆಗಾಗಿ ತೊಳಲಾಡುವಂತಾಗಬಾರದು.

ಇಂಥ ಎಷ್ಟೋ ಯೋಜನೆಗಳು ಶ್ರೀ ನಾರಾಯಣರ ಮನೋಗರ್ಭದಲ್ಲಿ ಹುದುಗಿವೆಯೆಂಬುದನ್ನು ಬಲ್ಲೆ. ಅವರು ಬರಿಯ ಭಾವುಕರಲ್ಲ, ಕನಸುಗಾರರಲ್ಲ, ವಾಸ್ತವವಾದಿಗಳು, ಕ್ರಿಯಾಶೀಲರು ಎಂಬುದನ್ನು ಬಲ್ಲೆ. ಬಹುಶೀಘ್ರವಾಗಿ ಅವೆಲ್ಲ ಕಾರ್ಯರೂಪಕ್ಕಿಳಿಯಲಿ, ಅವರ ಕಾಲದಲ್ಲಿ ಪರಿಷತ್ತಿನ ಕೀರ್ತಿ ದಿಗ್ದಿಗಂತ ವ್ಯಾಪಿಯಾಗಲಿ ಎಂದು ಹಾರೈಸುತ್ತೇನೆ.

ಕನ್ನಡನಾಡಿನ ಗಡಿಯ ರಕ್ಷಣೆ ಪರಿಷತ್ತಿನ ಮತ್ತೊಂದು ಮಹತ್ತರ ಕರ್ತವ್ಯ. ಬೆಳಗಾಂ ಎಲ್ಲಿದ್ದರೇನು? ಕಾಸರಗೋಡು ಎಲ್ಲಿದ್ದರೇನು? ತಾಳವಾಡಿ ಎಲ್ಲಿದ್ದರೇನು? ಎಂತಿದ್ದರೂ ಅವು ಭರತಖಂಡದ ಭಾಗ ತಾನೆ? ಎಂದು ಪ್ರಶ್ನಿಸುವ ಲಾಂಗೂಲಚಾಲನ ಪ್ರವೃತ್ತಿಯ ಜನ ನಮ್ಮಲ್ಲಿ ಇಲ್ಲದಿಲ್ಲ. ಹಣ ಎಲ್ಲಿದ್ದರೇನಂತೆ? ನಿನ್ನ ಜೇಬಿನಲ್ಲಿದ್ದರೇನು? ನನ್ನ ಜೇಬಿನಲ್ಲಿದ್ದರೇನು? ಎಂದು ಕೇಳಿದರೆ ಅವರೇನು ಉತ್ತರ ಹೇಳಿಯಾರೊ ಕಾಣೆ. ಹೊನ್ನಿಗೆ ಅನ್ವಯಿಸುವ ಹೋಲಿಕೆಯನ್ನು ಹೀಗೆಯೇ ಮುಂದುವರಿಸಿದ್ದಾದರೆ ಅಂಥವರು ಬಾಯಿಮುಚ್ಚಿಕೊಂಡಾರು. ಉಭಯ ಪಕ್ಷಗಳ ಸಮ್ಮತಿಯಿಂದ ರಚನೆಗೊಂಡ ಮಹಾಜನ ಆಯೋಗದ ವರದಿಯನ್ನು ಜಾರಿಗೆ ತರದಿರುವುದು ಸರ್ಕಾರದ ದೌರ್ಬಲ್ಯಕ್ಕೆ ಸಾಕ್ಷಿಯಾಗಿದೆ; ಕನ್ನಡಿಗರ ಮುಖಕ್ಕೆಸೆದ ಸವಾಲಾಗಿದೆ. ಪಂಜಾಬ್ ಹರಿಯಾಣ ಪ್ರಾಂತ್ಯಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ದಿಟ್ಟತನದಿಂದ ಪರಿಹರಿಸಿದ ಪ್ರಧಾನಿಯವರು ಈ ವಿಷಯದಲ್ಲಿ ಹಿಂಜರಿದದ್ದು ವಿಸ್ಮಯವೇ ಸರಿ. ಕನ್ನಡಿಗರು ತಂತಮ್ಮ ಭಿನ್ನತೆಗಳನ್ನು ತೊರೆದು, ಸ್ವಾರ್ಥವನ್ನು ಮರೆತು, ಒಟ್ಟುಗೂಡಿ, ಧೈರ್ಯದಿಂದ ವರ್ತಿಸದಿದ್ದರೆ ಬೆಳಗಾಂ ಕಳಚಿಹೋದೀತು. ಅದರ ಹಿಂದೆ ಒಂದಾದ ಮೇಲೊಂದು ಜಿಲ್ಲೆಗಳು ನಗರಗಳು ಕೈಬಿಟ್ಟಾವು! ಈ ಮಹತ್ಕಾರ್ಯ ಸಾಧನೆಯಲ್ಲಿ ಪರಿಷತ್ತಿನ ಪಾತ್ರ ಮಹತ್ತರವಾದುದಾಗಬೇಕಾಗಿದೆ.

ಈ ಸಂದರ್ಭದಲ್ಲಿ ಕನ್ನಡನುಡಿಗೆ ಹಾಗೂ ಕರ್ಣಾಟಕದ ಕಲೆಗಳಿಗೆ ಇಂದಿನ ಮೈಸೂರು ಸರ್ಕಾರ ನೀಡುತ್ತಿರುವ ಪ್ರೋತ್ಸಾಹವನ್ನು ನೆನೆಯದಿದ್ದರೆ ಕರ್ತವ್ಯಚ್ಯುತಿಯ ಆರೋಪಕ್ಕೆ ಗುರಿಯಾಗಬೇಕಾದೀತು. ಶ್ರೀ ವೀರೇಂದ್ರ ಸಂಪುಟದ ಅರ್ಥ ಸಚಿವರೂ ವಿದ್ಯಾಸಚಿವರೂ ಸ್ವಯಂ ಕಲಾಭಿಜ್ಞರಾದದ್ದರಿಂದ, ಕನ್ನಡ ನುಡಿಯ ಮಹತ್ತನ್ನು ಬಲ್ಲವರಾದ್ದರಿಂದ ಕನ್ನಡ ಭಾಷಾಸಾಹಿತ್ಯ ಸಂಬಂಧವಾದ ಯೋಜನೆಗಳಿಗೆ ಕೈ ಕೊಕ್ಕರಿಸದೆ ಉದಾರವಾಗಿ ದ್ರವ್ಯಸಹಾಯ ನೀಡುತ್ತಿದ್ದಾರೆ. ಇಂಥ ಯೋಜನೆಗಳಿಗೆ ಅವರೆಂದೂ ಇಲ್ಲ ಎಂದವರಲ್ಲ. ಒಂದೂಕಾಲು ಕೋಟಿ ರೂಪಾಯಿ ವೆಚ್ಚ ತಗಲುವ ಕನ್ನಡ ವಿಶ್ವಕೋಶದ ಬೃಹದ್ಯೋಜನೆ ಹಾಗೂ ಇಪ್ಪತ್ತೈದು ಲಕ್ಷ ವೆಚ್ಚದ ಜ್ಞಾನಗಂಗೋತ್ರಿಗೆ ಮಂಜೂರಾತಿ ನೀಡಿದೆ. ದುಡ್ಡಿನ ಅಭಾವದಿಂದಾಗಿ ವಿಶ್ವವಿದ್ಯಾನಿಲಯಗಳ ಪ್ರಕಟಣಕಾರ್ಯ ಕುಂಠಿತವಾಗಿಲ್ಲ. ಸಂಗೀತ ನಾಟಕ ಅಕಾಡೆಮಿ, ಸಾಹಿತ್ಯ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್ತು


ಮೊದಲಾದ ಸಾಂಸ್ಕೃತಿಕ ಸಂಸ್ಥೆಗಳಿಗೆ ಯಾವ ಕೊಕ್ಕೆಯೂ ಇಲ್ಲದೆ ಧನಸಹಾಯವನ್ನು ನೀಡುತ್ತಿದೆ. ಮೇಲಾಗಿ, ಅನೇಕ ಸಾಹಿತಿಗಳಿಗೆ ಹಾಗೂ ಕಲಾವಿದರಿಗೆ ಜೀವಾವಧಿ ವೇತನವನ್ನು ನೀಡುತ್ತಿದೆ. ಈ ಜೀವನಾಂಶ ಯೋಜನೆ ಇನ್ನೂ ವಿಸ್ತೃತವಾಗುವ ಭರವಸೆಯಿದೆ. ಪರಿಷತ್ತಿಗೆ ನೀಡುವ ಸಾಲಿಯಾನ ಸಹಾಯ ದ್ರವ್ಯ ಐದುಲಕ್ಷಕ್ಕಾದರೂ ಹೆಚ್ಚಬೇಕಾದದ್ದು ನ್ಯಾಯ. ಕನ್ನಡ, ಶಿಕ್ಷಣ ಹಾಗೂ ಆಡಳಿತ ಮಾಧ್ಯಮವಾಗಬೇಕೆಂಬುದು ಈ ಸರ್ಕಾರದ ಸಂಕಲ್ಪವಾಗಿದೆ; ಪ್ರತಿಗಾಮಿ ಶಕ್ತಿಗಳ ಕಾರಣವಾಗಿ ಆ ಸಂಕಲ್ಪ ಇನ್ನೂ ಈಡೇರದಿರುವುದು ನಾಡಿನ ದುರ್ದೈವ.

ಒಟ್ಟಿನಲ್ಲಿ ಇದೊಂದು ಪರ್ವಸಮಯ. ವಿಶ್ವವಿದ್ಯಾನಿಲಯಗಳು, ಕನ್ನಡ ಸಾಹಿತ್ಯಪರಿಷತ್ತು, ಕರ್ನಾಟಕ ವಿದ್ಯಾವರ್ಧಕ ಸಂಘ, ಕರ್ನಾಟಕ ಇತಿಹಾಸ ಸಂಶೋಧನ ಮಂಡಲಿ, ವಯಸ್ಕರ ಶಿಕ್ಷಣ ಸಮಿತಿ—ಈಗ ಏಕೀಭವಿಸಿ ಕನ್ನಡ ನಾಡು ನುಡಿಗಳ ಏಳ್ಗೆಗಾಗಿ ದುಡಿಯುವುದಾದರೆ ಎರಡು ಮೂರು ವರ್ಷಗಳಲ್ಲಿ ಕನ್ನಡ ಕವಿಸಂತರ, ಭಾಷಾಭಿಮಾನಿಗಳ, ಇಡೀ ಕನ್ನಡ ಜನತೆಯ ಕನಸು ನನಸಾಗುವುದರಲ್ಲಿ ಸಂದೇಹವಿಲ್ಲ. ಎಲ್ಲ ಕನಸುಗಳು ನನಸಾಗಿ ಕನ್ನಡ ನುಡಿ ಜಗತ್ತಿನ ಶ್ರೇಷ್ಠ ಭಾಷೆಗಳಲ್ಲೊಂದಾಗಲಿ, ಕನ್ನಡ ನಾಡಿನ ಕೀರ್ತಿ ಜಗದಗಲಕ್ಕೂ ಹರಡಲೆಂದು ಒಕ್ಕೊರಲಿನಿಂದ ಹಾರೈಸೋಣ.

ಬಂಧುಗಳೆ, ನಾವು ಎಂಥ ಅಮೂಲ್ಯವಾದ ಪಿತ್ರಾರ್ಜಿತ ಆಸ್ತಿಗೆ ಹಕ್ಕುದಾರರೆನ್ನುವುದನ್ನು ಮರೆಯದಿರೋಣ. ಅದರ ಹಿರಿಮೆಗರಿಮೆಗಳನ್ನು ನೆನೆದಾಗ ಮೈ ಪುಳಕಗೊಳ್ಳುತ್ತದೆ. ನಮ್ಮ ನುಡಿ ಅತ್ಯಂತ ಪ್ರಾಚೀನವಾದದ್ದು; ಇಂದು ಅಂತರರಾಷ್ಟ್ರೀಯ ಖ್ಯಾತಿಗೆ ಪಾತ್ರವಾಗಿ ಮೆರೆಯುತ್ತಿರುವ ಭಾಷೆಗಳು ಇನ್ನೂ ಭ್ರೂಣಾವಸ್ಥೆಯಲ್ಲಿದ್ದಾಗಲೇ ವಿಶ್ವಸಾಹಿತ್ಯದ ಮಟ್ಟಕ್ಕೇರಬಲ್ಲ ಮೇರು ಕೃತಿಗಳಿಗೆ ಜನ್ಮನೀಡಿದ ಭಾಷೆಯಿದು; ಇನ್ನೂ ನೆರೆಹೊರೆಯ ರಾಜ್ಯಗಳು ಕಣ್ಣು ಬಿಡದಿದ್ದಾಗ ಭರತಖಂಡದಲ್ಲಿ ನಾಯಕಸ್ಥಾನದಲ್ಲಿದ್ದ ನಾಡು ನಮ್ಮದು; ಹಿಂದೂ ಸಂಸ್ಕೃತಿಯನ್ನು ರಕ್ಷಿಸಿದ ವಿಜಯನಗರ ಸಾಮ್ರಾಜ್ಯವನ್ನು ಸೃಷ್ಟಿಸಿದ ಹಿರಿಯ ನಾಡು ಇದು; ಸರ್ವಮತ ಧರ್ಮಗಳ ಆಡುಂಬೊಲವಾಗಿ ಮತಸಹಿಷ್ಣುತೆಗೆ ಹೆಸರಾದ ನಾಡು ಇದಲ್ಲದೆ ಬೇರೊಂದಿಲ್ಲ; ಕರ್ನಾಟಕ ಸಂಗೀತದ ಜನ್ಮಭೂಮಿ, ಶಿಲ್ಪ ಕಲೆಯ ತವರು, ಚಿತ್ರಕಲೆಯ ಸೀಮೆ ನಮ್ಮದು; ಇಮ್ಮಡಿ ಪುಲಿಕೇಶಿ ವಿಷ್ಣುವರ್ಧನ ಶಾಂತಲೆ ನೃಪತುಂಗ ಕೃಷ್ಣ ಮೂರನೆಯ ಗೋವಿಂದರ, ಬಸವ ವಿದ್ಯಾರಣ್ಯರ, ಶಾರ್ಙ್ಗದೇವ ವಿಜ್ಞಾನೇಶ್ವರರ, ಜಿನಸೇನ ಗುಣಭದ್ರರ, ಡಂಕಣ ಜಕಣರ, ಪಂಪ ರನ್ನ ಹರಿಹರ ರಾಘವಾಂಕ ನಾರಣಪ್ಪ ಪುರಂದರದಾಸ ಕನಕದಾಸರ, ಇನ್ನೂ ಎಷ್ಟೆಷ್ಟೋ ಕವಿಗಳ ಕಲಿಗಳ ದೊರೆಗಳ ಕಲಾವಿದರ ಸಂತರ ಶರಣರ ದಾಸರ, ಕರ್ನಾಟಕ ಸಂಸ್ಕೃತಿಯನ್ನು ಬೆಳೆಸಿ, ಭಾರತೀಯ



ಸಮ್ಮೇಳನಾಧ್ಯಕ್ಷರಾದ ದೇಜಗೌ



ಕವಿಗೋಷ್ಠಿಯ ಅಧ್ಯಕ್ಷ ಬೇಂದ್ರೆಯವರು

ಸಂಸ್ಕೃತಿಯನ್ನು ಬೆಳಗಿದ ಮಹಾಮಹಿಮರ ಪೀಳಿಗೆಗೆ ಸೇರಿದವರೆಂಬ ಹೆಮ್ಮೆ ನಮ್ಮದು; ಈ ಹೆಮ್ಮೆಗೆ ಪಾತ್ರರಾದ ನಾವು ಯಾರಿಗೂ ಕೀಳಲ್ಲ, ಯಾರಿಗೂ ಅಂಜಬೇಕಾಗಿಲ್ಲ, ಯಾರಿಗೂ ತಲೆಬಾಗಬೇಕಾಗಿಲ್ಲ. ಅವರು ಹಿಂದೆ ಬಿಟ್ಟು ಹೋಗಿರುವ ತಪಶ್ಶಕ್ತಿ ನಮಗಿಂದು ರಕ್ಷೆಯ ಪರಿವೇಷವಾಗಿದೆ; ಇಂಥ ಆಸ್ತಿಗೆ ಹಕ್ಕುದಾರರಾದ ನಾವು ದರಿದ್ರರಲ್ಲ, ಆಗರ್ಭ ಶ್ರೀಮಂತರು. ನುಡಿಯ ಆಳಿವುಳಿವು ನಮ್ಮ ಆಳಿವುಳಿವು; ನಾಡು ನುಡಿಗಳಿಗೊದಗುವ ಅನ್ಯಾಯ ಅಪಚಾರಗಳನ್ನು ಸಹಿಸೆವು. ನಾಡುನುಡಿಗಳ ಅಭ್ಯುದಯವೊಂದೇ ನಮ್ಮ ಬಾಳಿನ ಏಕೈಕ ಗುರಿ; ಇದಕ್ಕಾಗಿ ನಾವು ಎಂಥ ತ್ಯಾಗಕ್ಕಾದರೂ ಸಿದ್ಧವೆಂದು ಈ ಎಲ್ಲ ಪೂರ್ವಜರ ಹೆಸರಿನಲ್ಲಿ, ಜೋತಿಶ್ಶರೀರಿಗಳಾಗಿ ಈ ಮಹೋತ್ಸವವನ್ನು ದರ್ಶಿಸುತ್ತಿರುವ ಅವರ ನೇತೃತ್ವದಲ್ಲಿ ನಾವು ದೀಕ್ಷಾಬದ್ಧರಾಗೋಣ.

ಕವಿಸಮ್ಮೇಳನ

ಅಂದಿನ ಕವಿಸಮ್ಮೇಳನ ಸಾಹಿತ್ಯಸಮ್ಮೇಳನಕ್ಕೆ ಒಂದು ಅಚ್ಚಳಿಯದ ಕಾಂತಿಯನ್ನು ತಂದುಕೊಟ್ಟಿತು. ಕನ್ನಡನಾಡಿನ ಶ್ರೇಷ್ಠ ಕವಿಗಳನ್ನೆಲ್ಲಾ ಒಂದು ವೇದಿಕೆಯ ಮೇಲೆ ಕಂಡು ಸಭೆ ಹರ್ಷೋದ್ಗಾರ ಮಾಡಿತು. ಗೋಷ್ಠಿಗೆ ಇಮ್ಮಡಿ ಕಳೆ ಬಂದದ್ದು ಬಹುಪಾಲು ಕನ್ನಡದ ವರಕವಿ ಡಾ|| ದ. ರಾ. ಬೇಂದ್ರೆಯವರ ಅಧ್ಯಕ್ಷತೆಯಿಂದ. ಡಾ|| ಜಿ. ಎಸ್. ಶಿವರುದ್ರಪ್ಪನವರು ಗೋಷ್ಠಿಯ ನಿರ್ದೇಶಕ ರಾಗಿ ಅಖಂಡ ಕರ್ನಾಟಕವನ್ನು ಪ್ರತಿನಿಧಿಸುವಂತೆ ಈ ಕವಿಸಮ್ಮೇಳನ ಏರ್ಪಟ್ಟಿದೆ ಯೆಂದೂ, ಇಲ್ಲಿ ಮೂರು ನಾಲ್ಕು ತಲೆಮಾರಿನಿಂದ ಬರೆಯುತ್ತಿರುವ ಕವಿಗಳು ಸಮಾವೇಶಗೊಂಡಿರುವರೆಂದೂ ಕವಿಗಳ ಪರಿಚಯಮಾಡಿಕೊಟ್ಟರು. ಸಮ್ಮೇಳನಕ್ಕೆ ಪ್ರಾರ್ಥನೆಯ ರೀತಿಯಲ್ಲಿ ಬೇಂದ್ರೆಯವರು ತಮ್ಮ 'ಕನ್ನಡನಾಡು ನನ್ನದು' ಕವಿತೆಯ ಮೂರು ಚರಣಗಳಿಗೆ ನಾಲ್ಕನೆಯದನ್ನು ಸೇರಿಸಿ ಮೊದಲು ಹಾಡಿದರು.

ಬಳಿಕ ಕನ್ನಡನಾಡಿನ ನಾನಾ ಭಾಗಗಳಿಂದ ಆಗಮಿಸಿದ್ದ ಹದಿನೇಳು ಜನ ಕವಿಗಳು ತಂತಮ್ಮ ಕವನಗಳನ್ನೋದಿದರು.

ಕವಿ ಪು.ತಿ.ನ. ಮೊದಲು ನಾಣ್ಯದ ದೌರ್ಬಲ್ಯ ಮತ್ತು ಅದರ ಜಂಬವನ್ನು ಕುರಿತ ವಿಡಂಬನಾತ್ಮಕ ಪದ್ಯ ಓದಿ 'ಹಳಮೋರೆ' ಎಂಬ ಮತ್ತೊಂದು ಪದ್ಯವನ್ನು ಓದಿದರು. ಕನ್ನಡದ ಒಲವಿನ ಕವಿ ಕೆ.ಎಸ್. ನರಸಿಂಹಸ್ವಾಮಿ "ಮುಚ್ಚಿದ ಕಿಟಕಿ" ಯಲ್ಲಿನ ಸ್ವಾರಸ್ಯವನ್ನು ಸೂಸಿದರು. 'ನಂಬಿಕೆ', 'ನಗರದಲ್ಲಿ ನೆರಳು'–ಈ ಕವನಗಳನ್ನೋದಿದವರು ಚೆನ್ನವೀರ ಕಣವಿ. 'ರಾಮನ್ ಸತ್ತ ಸುದ್ದಿ' ತಮ್ಮ ಮನದ ಮೇಲುಂಟುಮಾಡಿದ ಪರಿಣಾಮ ತಮ್ಮ ಸುತ್ತಲೂ ಕಾಣದಾದಾಗ 'ಯಾರು ಸತ್ತರೂ ಅಷ್ಟೇ, ರಾಮನ್ ಸತ್ತರೂ ಅಷ್ಟೆ, ರಸಲ್ ಸತ್ತರೂ ಅಷ್ಟೆ' ಎಂದು ಉದ್ಗರಿಸಿದ ಶ್ರೀ ನಿಸಾರ್ ಅಹಮದ್, 'ಸಂಜೆ ಐದರ ಮಳೆ'ಯೆಂಬ

ಮತ್ತೊಂದು ಕವನವನ್ನು ಓದಿದರು. ಬೆಳ್ಳಕ್ಕಿಗಳ ಹಾರಾಟವನ್ನು ಹಾಡಿ ಬಣ್ಣಿಸಿದ ಕವಿ ಎಸ್.ಆರ್. ಎಕ್ಕುಂಡಿ, 'ಲೆನಿನರ ನೆನಪಿಗಾಗಿ' ಎಂಬ ಮತ್ತೊಂದು ಕವನವನ್ನೂ ಓದಿದರು. 'ಋಷ್ಯಶೃಂಗ' ಎಂಬ ಪ್ರಣಯ ಗೀತೆಯನ್ನು ಚಂದ್ರಶೇಖರ ಕಂಬಾರರು ವಾಚಿಸಿದರು. ಸುಮತೀಂದ್ರ ನಾಡಿಗರು 'ಎಂದೂ ಕೇಳದ ಹೊಸ ಕಥೆಯೊಂದ' ಹೇಳಿ ಟೀಕಿಸಿದರು. ಸಾಂಸಾರಿಕ ವಿರಸ ಚಿತ್ರಿಸಿದ ಜಿ. ಎಸ್. ಸಿದ್ಧಲಿಂಗಯ್ಯ 'ಕಾಮಣ್ಣ ಮಕ್ಕಳ' ವ್ಯಾಪಾರವನ್ನು ಬಿತ್ತರಿಸಿದರು. ಚಂದ್ರಕಾಂತ ಕುಸನೂರರಿಗೆ ಹೊಸ ಮಗುವಿನ ಜನನ "ಹಿಗ್ಗಿನಂಗಳದಲ್ಲಿ ಹುಗ್ಗಿ ಬಂದಂತಾಯಿತು". 'ವಾಚಕರ ವಾಣಿ"ಯ ಬಗ್ಗೆ ಕಟಕಿಯಾಡಿದ ಕೆ. ಪಿ. ತೇಜಸ್ವಿ 'ಸ್ಕೂಟರ್' ಮೇಲೆ ತಮ್ಮ ಅನುಭವವನ್ನು ರೂಪಿಸಿದರು. ಕಯ್ಯಾರ ಕಿಞ್ಞಣ್ಣರೈ ದೆಹಲಿಯ ರಾಜಘಾಟ್ ಸಮಾಧಿಯ ಕರಿಶಿಲೆಯ ಮೇಲಿದ್ದ 'ಹೇ ರಾಮ' ಎಂಬಕ್ಷರಗಳನ್ನು ನೋಡಿ ಪ್ರಚೋದಿತರಾಗಿ ಬರೆದಿದ್ದ ಕವನವನ್ನೋದಿದರು. 'ಬೂರ್ಜ್ವಾ'–ಈ ತರಹದ ಪ್ರಾಣಿಗಳು ಎಲ್ಲೆಲ್ಲೂ ಇರಬಹುದು. ನಿಮ್ಮಲ್ಲಿ ಇರಬಹುದು; ನನ್ನಲ್ಲೇ ಇರಬಹುದು',–ಎಂದು ತಮ್ಮ ಕವನ ಓದಿದವರು ಎಚ್. ಎಂ. ಚನ್ನಯ್ಯನವರು. ಅವರು ಓದಿದ ಮತ್ತೊಂದು ಕವನ 'ಹಯಗ್ರೀವ'. ಕೆ. ಎನ್. ಶಿವಪ್ಪ 'ಸಂತೆ' ಮತ್ತು 'ನನಗೆ ತೋಚಿದ್ದು' ಎಂಬೆರಡು ಕವನಗಳನ್ನು ಓದಿದರು. 'ಅವತಾರಗಳ ಅರ್ಥ ಕಂಡದ್ದು ನಿನ್ನಿಂದ ಬಾಪು' ಎಂದು 'ಗಾಂಧೀ ಜಯಂತಿಯನ್ನು ನೆನೆದು' ಬರೆದಿದ್ದ ಸಿ.ಪಿ.ಕೆ. ಅವರು 'ಅಜ್ಞಾತ ಕವಿಗಳ ಕಾವ್ಯ'ಕ್ಕೆ ಪ್ರಚೋದನೆಯನ್ನು ಕಂಡು 'ನಮ್ಮನ್ನೆಲ್ಲ ಅಷ್ಟಿಟ್ಟು ಮಟ್ಟಿಗೆ ಕವಿಗಳನ್ನಾಗಿ ಮಾಡಿದ ಓ ಕಾಮುವೆ ನಿನಗೆ ನಮಸ್ಕಾರ' ಎಂದು ಉದ್ಗರಿಸಿದರು. 'ಹಾವು ಮತ್ತು ಕಾಮು', 'ಸ್ನಾನಗೃಹ', 'ಬೆಳಗು' ಎಂಬ ಮೂರು ಕವನಗಳನ್ನು ಶ್ರೀ ಕೃಷ್ಣ ಆಲನಹಳ್ಳಿಯವರು ಓದಿದರು. ತಪ್ಪಾಗಿ ತಿಳಿಯುವುದರಿಂದಾಗಿ ವ್ಯಕ್ತಿಗಳ ನಡುವೆ ಏಳುವ ಮಾನಸಿಕ 'ಗೋಡೆ'ಯನ್ನು ಚಿತ್ರಿಸಿದ ಕವಿ ಡಾ|| ಜಿ. ಎಸ್. ಶಿವರುದ್ರಪ್ಪನವರು 'ಭೀಮಾಲಾಪ'ದಲ್ಲಿ ಪರಿಸ್ಥಿತಿಯ ಅಸಹಾಯಕತೆಯನ್ನು ರೂಪಿಸಿದರು.

ವರಕವಿ ಬೇಂದ್ರೆಯವರ ಅಧ್ಯಕ್ಷತೆ ಎಂದ ಮೇಲೆ ಕವಿಗೋಷ್ಠಿಯ ವೈಶಿಷ್ಟ್ಯ ಹೇಳಬೇಕಾದುದಿಲ್ಲ. ಕೊನೆಯಲ್ಲಿ ಬೇಂದ್ರೆಯವರೂ ತಮ್ಮೆರಡು ಕವನಗಳನ್ನು ಭಾವನಾಪೂರ್ಣರಾಗಿ ಹಾಡಿ ನಲಿದರು. "ಕವಿತೆ ಕಡಿದ ತಿಗಣೆಯಂತಲ್ಲ; ಅದು ಪಚನವಾಗಬೇಕು; ಆಮೇಲೆ ವಿಚಾರ ಮಾಡಬೇಕು. ಮತ್ತೆ ಮತ್ತೆ ಕೇಳಬೇಕು, ಅನಿಸಬೇಕು. ಕೇಳಿಯೂ ತಿಳಿದಿಲ್ಲ ಎನಿಸಬೇಕು. ತಿಳಿದರೂ ಮತ್ತೆ ಕೇಳಬೇಕು ಎಂದು ಆಸೆಯಾಗಬೇಕು; ಕವಿತೆ ಸಾರ್ಥಕವಾಗುವುದು ಕೇಳುವ ಕಿವಿಯಲ್ಲಿ; ಕವಿಯ ಹೃದಯದಲ್ಲೇ ಅಲ್ಲ" ಎಂದು ಕಾವ್ಯದ ಸರಳ ಸೂತ್ರವನ್ನು ನೀಡಿದರು. ತರುಣ ಕವಿಗಳ ವಾಗ್ಧೋರಣೆಯನ್ನು ಮೆಚ್ಚಿದ ಕವಿ "ಕಾಲಿಗೆ ಸಿಕ್ಕ ಚೆಂಡನ್ನು

ಒದೆಯುವಾಗ ಫೌಲ್ ಆಡುತ್ತಾರೆ. ಅದು ಫೌಲ್ ಅಂತ ಆಡೋದಿಲ್ಲ. ಆಡೋಕೆ ಹೋಗಿ ಫೌಲ್ ಆಡಿ ಬಿಡ್ತಾರೆ. ಆದ್ರೆ ನೋಡೋವ್ರು ಎದುರಿಗೆ ಇರ್‍ತಾರೆ ಅಂತ ಗೊತ್ತಿರಬೇಕು" ಎಂದು ಗಂಭೀರವಾಗಿ ನುಡಿದರು. 'ಅಂಬಿಕಾ ತನಯದತ್ತ'ರ ಕಾವ್ಯವಾಹಿನಿ ನಿರಂತರವಾಗಿ ಹರಿದು ಶಬ್ದದ ನಡಗೆ, ಭಾವೋ ತ್ಕರ್ಷದಿಂದ ಸಹೃದಯರಿಗೆ ರಸಾನುಭೂತಿಯನ್ನುಂಟುಮಾಡಿತು.

ಅನಂತರ ಜನಪದ ಗೀತೆ ಮತ್ತು ಕತೆಗಳನ್ನು ಕುರಿತು ಇಬ್ಬರು ವಿದ್ವಾಂಸರು ಉಪನ್ಯಾಸ ನೀಡಿದರು. ಮೊದಲು ಶ್ರೀ ಕೆ. ಆರ್. ಲಿಂಗಪ್ಪನವರು ಕೆಲವು ಜಾನಪದ ಹಾಡುಗಳನ್ನು ವಿವಿಧ ಮಟ್ಟುಗಳನ್ನು ತೋರುವ ದೃಷ್ಟಿಯಿಂದ ಸಭೆಗೆ ಪರಿಚಯ ಮಾಡಿಕೊಟ್ಟರು. ಈ ಎಲ್ಲ ಜನಪದ ಗೀತೆಗಳ ಹಿನ್ನೆಲೆಯಲ್ಲಿ ಅಡಗಿರುವ ಜೀವನ ದರ್ಶನವನ್ನು ಅವರು ಸೊಗಸಾಗಿ ಎತ್ತಿ ತೋರಿದರು. ಬಳಿಕ ಶ್ರೀ ಸಿಂಪಿ ಲಿಂಗಣ್ಣನವರು ಜನಪದ ಕಥೆ ಮತ್ತು ಗೀತೆಯ ಬಗ್ಗೆ ಒಂದು ಅತ್ಯುತ್ಕೃಷ್ಟ ಲೇಖನವನ್ನು ಓದಿದರು.

ಸಾಹಿತ್ಯಗೋಷ್ಠಿ : ೨೮–೧೨–೧೯೭೦.

ಬೆಳಗ್ಗೆ ೯–೩೦ಕ್ಕೆ ಪ್ರಾರಂಭವಾದ 'ಸಾಹಿತ್ಯ ಗೋಷ್ಠಿ' ೧೯೬೦ರ ನಂತರದ ಕನ್ನಡ ಸಾಹಿತ್ಯ ಸೃಷ್ಟಿಯ ಸಮೀಕ್ಷೆ ಮಾಡುವ ನಿಟ್ಟಿನಿಂದ ಹೊರಟು ಉನ್ನತ ಮಟ್ಟದ ವಿಚಾರ ಶೀಲತೆಯನ್ನು ಸಹೃದಯ ಪ್ರೇಕ್ಷಕವೃಂದಕ್ಕೆ ಒದಗಿಸಿಕೊಟ್ಟಿತು. ಏಳು ಮಂದಿ ವಿದ್ವಾಂಸರು ಸಾಹಿತ್ಯದ ನಾನಾ ಪ್ರಕಾರದ ಬೆಳಸನ್ನು ಸಮೀಕ್ಷಿಸಿದರು.

ಗೋಷ್ಠಿಯ ಅಧ್ಯಕ್ಷರಾದ ಶ್ರೀ ಕೀರ್ತಿನಾಥ ಕುರ್ತಕೋಟಿ ಸಾಹಿತ್ಯ ವಿಮರ್ಶೆಯ ವ್ಯಾಪ್ತಿ, ಇತಿಮಿತಿ, ಆಗುಹೋಗುಗಳನ್ನು ತಮ್ಮ ಪ್ರಬಂಧದಲ್ಲಿ ಮುಖ್ಯವಾಗಿ ಗುರುತಿಸಿದರು. "ಸತತವಾದ ಸಾಹಿತ್ಯವಾಹಿನಿಗೆ ಸಾರ್ವಕಾಲಿಕ ವಾದ ಒಂದು ಮಾನದಂಡವಿರದು. ಬೆಳೆದ ಬರಹದೊಡನೆ ಅದರ ಸ್ವರೂಪ ನಿರ್ಧರಿಸುವುದು ಮತ್ತು ಸಂಸ್ಕೃತಿಯೊಡನೆ ಅದರ ಸ್ವರೂಪ ನಿರ್ಧರಿಸುವುದು ವಿಮರ್ಶಕನ, ವಿಮರ್ಶೆಯ ಹೊಣೆ"–ಇದು ವಿಮರ್ಶಾಕಾರ್ಯದ ಬಗ್ಗೆ ಅವರು ಕೊಟ್ಟ ಸೂತ್ರ. ವಿಮರ್ಶೆಯ ಪ್ರತಿಕ್ರಿಯೆಯ ಜೀವಂತತೆಯನ್ನು, ಕನ್ನಡದಲ್ಲಿ ವಿಮರ್ಶಾ ಕ್ಷೇತ್ರ ಈಗೀಗ ಪರಿಣತ ಸ್ಥಿತಿಯನ್ನು ಪಡೆಯುತ್ತಿರುವುದನ್ನು ಅವರು ಪರಿಶೀಲಿಸಿದರು.

ಸಾಹಿತ್ಯದಲ್ಲಿ 'ನವ್ಯತೆ' ಮೈದೋರಿ ಸಾಕಷ್ಟು ಕಾಲ ಆಗಿದ್ದರೂ ಅದರ ಬಗ್ಗೆ ವಾದವಿವಾದಗಳು ಇನ್ನೂ ಬಗೆ ಹರಿದಿಲ್ಲವೆಂದು ಹೊಸದು, ಹಳೆಯದರಲ್ಲಿರುವ ವಿರೋಧವನ್ನು ಸೂಚಿಸಿದ ಕುರ್ತಕೋಟಿ "ವಿವಾದಗಳು ವೈಚಾರಿಕತೆಯ ಮಟ್ಟದಿಂದ ಕೆಳಗಿಳಿದು ವ್ಯಕ್ತಿನಿಂದೆಯ ಮಟ್ಟಕ್ಕೆ ತಲುಪುವುದು ವಿಷಾದಕರ" ಎಂದರು. "ನವ್ಯ ಸಾಹಿತ್ಯ ತಾಂತ್ರಿಕತೆಗೆ ಅತ್ಯಂತ ಮಹತ್ವಕೊಟ್ಟಿದೆ.

ಅನುಭವ ಮತ್ತು ವೈಚಾರಿಕತೆ ವ್ಯಾಪಕವಾಗಿರುವುದಲ್ಲದೆ ಬಹಳ ಗಂಭೀರವಾಗಿಯೂ ಇದೆ. ವೈಚಾರಿಕತೆ ಪದ್ಯದಲ್ಲಿ ವಾಚ್ಯವಾಗಿ, ಗದ್ಯದಲ್ಲಿ ವ್ಯಂಗ್ಯವಾಗಿ ನವ್ಯಕಾವ್ಯದಲ್ಲಿ ಬಂದಿದೆ. ನಮ್ಮ ವೈಚಾರಿಕತೆಯಲ್ಲಿ ನಮ್ಮಲ್ಲಿ ಹುಟ್ಟಿಬಂದುದೆಷ್ಟು, ಬೇರೆ ಕಡೆಯಿಂದ ತೆಗೆದುಕೊಂಡುದೆಷ್ಟು ಎಂಬುದರ ವಿಚಾರ ಮುಖ್ಯ. ಅಮೇರಿಕೆಯ ಗೋದಿ ನಮ್ಮ ಅನ್ನದ ಕೊರತೆಯನ್ನು ನೀಗಿಸುವಂತಾಗಬಾರದು. ಅನುಭವ ಮತ್ತು ವೈಚಾರಿಕತೆಯಲ್ಲಿ ನಮ್ಮ ದೃಷ್ಟಿಕೋನ ಸಂಕುಚಿತವಾಗಿಲ್ಲ"— ಎಂದರು ಕುರ್ತಕೋಟಿ.

ಡಾ. ಜಿ.ಎಸ್. ಶಿವರುದ್ರಪ್ಪನವರು ೧೯೬೮–೭೦ರ ನಡುವಿನ ಕಾವ್ಯಕ್ಷೇತ್ರವನ್ನು ಸಮೀಕ್ಷಿಸಿದರು. ಸುಮಾರು ೨೦ ಕವನಸಂಕಲನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರು "ಕಾವ್ಯದಲ್ಲಿ ನಡೆದಿರುವ ಚರ್ಚೆ–ಪ್ರತಿಚರ್ಚೆಗಳು ಕಾವ್ಯನಿರ್ಮಿತಿಗಿಂತಲೂ ಹೆಚ್ಚು ಆಸ್ಥೆಯನ್ನುಂಟುಮಾಡುವಂತಿವೆ" ಎಂದರು. "ಕಣ್ಣು ಸೆಳೆವ ಅಭಿವ್ಯಕ್ತಿಯ ಹೊಸತನ"ವನ್ನು ಈ ಅವಧಿಯಲ್ಲಿ ಕಂಡ ಆಧುನಿಕ ಸಂವೇದನೆ ಜನತೆಯಲ್ಲಿ ಮೂಡಿಸಿರುವ ಕುತೂಹಲವನ್ನು ನಿರೂಪಿಸಿದರು. ಮುಂದುವರಿದ ಅವರು ಇತ್ತೀಚೆಗೆ ಬಂದ "ಅಕ್ಷರ ಹೊಸ ಕಾವ್ಯ" ಸಹಜವಾಗಿಯೇ ವ್ಯಕ್ತಿಯ ಅಭಿರುಚಿಯ ಪಕ್ಷಪಾತಗಳಿಗೆ ಸಾಕ್ಷ್ಯದಂತಿದೆ. ಆದರೂ ಅದರ ಸಂಪಾದಕರು ಅಗತ್ಯವೆನಿಸಿದ್ದ ಇಂತಹ ಒಂದು ಸಂಕಲನದ ಕಾರ್ಯವನ್ನು ಧೈರ್ಯದಿಂದ ಪೂರೈಸಿದ್ದಾರೆ" ಎಂದು ನುಡಿದರು. "ಕವಿಗಳ ಕುರ್ಚಿಗಳನ್ನು ಅದಲುಬದಲು ಮಾಡುವ ಪ್ರವೃತ್ತಿ ಮುನ್ನುಡಿಗಳಲ್ಲಿ ಕಾಣುತ್ತದೆ. ಚರ್ಚೆಯ ನೆಪದಲ್ಲಿ ನಿರ್ಣಾಯಕವಾದ ಮಾತುಗಳನ್ನಾಡುವುದು ಆರೋಗ್ಯಕರವಲ್ಲ" ಎಂದು ಎಚ್ಚರ ನೀಡಿದರು.

ಕಳೆದ ಮೂರು ವರ್ಷಗಳ ನಾಟಕದ ಬೆಳವಣಿಗೆಯನ್ನು ಸ್ಥೂಲವಾಗಿ ಶ್ರೀ ಎಚ್. ಕೆ. ರಾಮಚಂದ್ರಮೂರ್ತಿ ಪರಿಚಯ ಮಾಡಿಕೊಟ್ಟರು. ಈ ಅವಧಿಯಲ್ಲಿ ಹೆಚ್ಚಾಗಲ್ಲದಿದ್ದರೂ 'ಕಣ್ಣು ಸೆಳೆವ ಕೃತಿ'ಗಳು ಈ ಕ್ಷೇತ್ರದಲ್ಲಿ ಬಂದಿವೆ ಎಂದ ಅವರು ಬೇಂದ್ರೆ, ಶ್ರೀರಂಗರ ಎಷ್ಟೋ ನಾಟಕಗಳಿಗೆ ರಂಗಭೂಮಿಯ ಸಂಸ್ಕಾರ ದೊರೆತಿಲ್ಲ ಎಂದರು. ಈಚೆಗೆ ಕೆಲವು ನಾಟಕಗಳು ಕನ್ನಡೇತರ ಭಾಷೆಗಳಿಗೆ ಅನುವಾದವಾಗಿರುವುದು ಮಾತ್ರವಲ್ಲದೆ ಪ್ರದರ್ಶಿಸಲ್ಪಟ್ಟಿರುವುದೂ 'ಅಭಿಮಾನದ ಸಂಗತಿ' ಎಂದು ತಿಳಿಸಿದರು. ಜೀವನದ ನಿರರ್ಥಕತೆ, ಅಸಂಬದ್ಧತೆ, ಗೊಂದಲದ ಪರಿಸ್ಥಿತಿಗಳನ್ನು 'absurd'ನಾಟಕಗಳು ಚೆನ್ನಾಗಿ ಚಿತ್ರಿಸುತ್ತವೆಂದೂ ನಿರ್ಮಾಪಕನ ಚಾಣಕ್ಯತನವನ್ನೆತ್ತಿ ತೋರುವ ಇವು 'ನಮ್ಮ ದುರಂತ ನಾಟಕಗಳಷ್ಟೇ ಹೊಸವು' ಎಂದೂ ಹೇಳಿದ ರಾಮಚಂದ್ರ ಮೂರ್ತಿ ಅವುಗಳ ಅರ್ಥವಾಗದಿರುವಿಕೆಯನ್ನು ಪ್ರತಿಭಟಿಸಿದರು. ನಾಟಕ ಕೇವಲ ಮನರಂಜನೆಯಲ್ಲ; ಪರಂಪರೆಯನ್ನು ಮರೆಯದೆ ಹೊಸತನ ಸಾಧಿಸಬೇಕೆಂಬುದು ಅವರ ಮತ್ತೊಂದು ಸಲಹೆ.

ಕನ್ನಡ ಕಾದಂಬರಿಗಳನ್ನು ಕುರಿತು ವಿವೇಚಿಸಿದ್ದವರು ಡಾ॥ ಶಂಕರ ಮೊಕಾಶಿ ಪುಣೇಕರ ಅವರು. ಮೂರು ವರ್ಷಗಳ ಅವಧಿಯಲ್ಲಿ ಲಂಕ್ಕೂ ಮೀರಿ ಕಾದಂಬರಿಗಳು ಬಂದಿದ್ದರೂ ಸು. ೫೫ ಸಾಹಿತ್ಯಕ ಮೌಲ್ಯವನ್ನು, ೮ ಪ್ರಾಯೋಗಿಕತೆಯನ್ನು ಪಡೆದಿವೆ ಎಂದರು. "ಪತ್ರಿಕೆಗಳ ಧಾರವಾಹಿಯ ಪ್ರಭಾವದಿಂದ ಉತ್ತೇಜನ ಪಡೆದು ಹೊರಬಂದಿರುವ ಕೃತಿಗಳಲ್ಲಿ ಕೆಲವನ್ನು ಬಿಟ್ಟರೆ, ಉಳಿದ ಕೃತಿಗಳಲ್ಲಿ ಪ್ರಸಂಗ ರಚನೆಯ ಕಲೆಯೇ ಸಿದ್ಧಿಸಿದಂತಿಲ್ಲ. ಚರ್ಚೆಯ ಜಾಬಾಳವೇ ಹೆಚ್ಚಾಗಿ ಕಾಣುತ್ತದೆ"—ಎಂದ ಡಾ॥ ಪುಣೇಕರ ಅವರು ಇಂದು "ಆಂತರಿಕ ತಾಕಲಾಟ ಸ್ವಗತ ಸಂಭಾಷಣೆಗಳನ್ನು ಕಾದಂಬರಿಯಲ್ಲಿ ಕಾಣಿಸಲೇಬೇಕೆಂಬ ಛಲದ ಹಿಂದೆ, ಅದು ಸಿನೆಮಾ ಆಗಬೇಕು ಎನ್ನುವ ತವಕವೇ ವ್ಯಕ್ತವಾಗುತ್ತಿದೆ"ಎಂದರು. ನಿಜವಾದ ಜೀವನ ನಿಷ್ಠೆ, ಪ್ರಯೋಗಶೀಲತೆ ವ್ಯಕ್ತವಾಗುವಂತಹ ಕೆಲವು ಕೃತಿಗಳು ಹೊರಬಂದಿರುವುದು ಈ ಕಾಲದ ವೈಶಿಷ್ಟ ಎಂದು ಕೊಂಡಾಡಿದರು. ಭಾರತೀಯ ಜೀವನ ಸಾಮಗ್ರಿಗಳನ್ನೊಳಗೊಂಡ, ಜೀವನಕ್ಕೆ ಸಮೀಪವಾದ ಭಾರತೀಯ ಜೀವನದ ಸಮಸ್ಯೆಗಳನ್ನೊಳಗೊಂಡ ಕೃತಿಗಳೂ ಈ ಅವಧಿಯಲ್ಲಿ ಹೊರಬಂದಿವೆ ಎಂದ ಅವರು ಮಹಿಳಾಕಾದಂಬರಿಕಾರ್ತಿಯರು ಶೈಲಿಯ ನಿರೂಪಣೆಯಲ್ಲಿ 'ಎತ್ತಿದ ಕೈ' ಎಂದರು.

ಶ್ರೀ ಗಿರಡ್ಡಿ ಗೋವಿಂದರಾಜ ಅವರು "ಕನ್ನಡದಲ್ಲಿ ನವೋದಯದ ಕಾಲದಿಂದಲೇ ಸಣ್ಣ ಕಥೆಗಳು ಸಮೃದ್ಧವಾಗಿ ಬೆಳೆದು ಬಂದಿವೆ. ಆದರೆ ಶ್ರೀನಿವಾಸರ ಅನಂತರ ಬರೆದ ಕಥೆಗಳಲ್ಲಿ, ಅವರಿಗೆ ಸಿದ್ಧಿಸಿದ್ದ ಜೀವನಮೌಲ್ಯ ಕಲಾವಂತಿಕೆಗಳು ಬಹಳ ಜನರಿಗೆ ದೊರಕಿಲ್ಲ" ಎಂಬ ಪೀಠಿಕೆಯೊಡನೆ ೧೯೬೭–೭೦ರ ಅವಧಿಯಲ್ಲಿ ಹೊರಬಂದಿರುವ ಸಣ್ಣಕಥೆಗಳನ್ನು ವಿಮರ್ಶಿಸಿದರು. ನವೋದಯದ ಸಂಪ್ರದಾಯದ ಲೇಖಕರಲ್ಲಿ ಕಲಾವಂತಿಕೆ, ಜೀವನದ ಪ್ರಜ್ಞೆಗಳಿಲ್ಲದೆ ಸುಂದರ ಭಾಷೆಯ ನಿರ್ಮಾಣ ಮಾತ್ರ ಆಗಿದೆ—ಹೀಗೆ ನುಡಿದ ಗಿರಡ್ಡಿಯವರು "ಈಚಿನ ಹೊಸ ಗಾಳಿ ಸಣ್ಣಕಥೆಗೆ ಹೊಸ ಸ್ವರೂಪ ತಂದು ಕೊಟ್ಟಿದೆ. ಹೊಸ ಪ್ರಜ್ಞೆ, ಸೂಕ್ಷ್ಮತೆ, ಕಲಾವಂತಿಕೆ, ಗಂಭೀರ ನಿರೂಪಣೆಗಳಿಂದ ಕೂಡಿದ ಕಥೆಗಳ ಜೊತೆಗೇ ನವ್ಯತೆಯ ವ್ಯಾಮೋಹಕ್ಕೆ ಒಳಗಾಗಿ ಬರೆದ ಕೃತಿಗಳಲ್ಲಿ ಕೈಚಳಕ ಮಾತ್ರ ಕಾಣುತ್ತದೆ" ಎಂದು ವಿಮರ್ಶಿಸಿದರು.

ಶ್ರೀ ಜೀ. ಶಂ. ಪರಮಶಿವಯ್ಯನವರು ಈ ದಶಕದಲ್ಲಿ ಜನಪದ ಸಾಹಿತ್ಯ ಕ್ಷೇತ್ರ ವಿಸ್ತೃತವಾಗಲು ನಡೆಸಿದ ಪ್ರಯತ್ನವನ್ನು ಪ್ರಸ್ತಾಪಿಸಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜಾನಪದ ಬೋಧನಾಂಗ, ಸಂಶೋಧನಾಂಗ ಆರಂಭವಾಗಿ ವ್ಯಾಪಕ ಆಧಾರ ಪಡೆದು ಕಾರ್ಯಾರಂಭ ಮಾಡಿದ ಮೇಲೆ ಉಳಿದೆರಡು ವಿಶ್ವವಿದ್ಯಾನಿಲಯಗಳೂ ಇದನ್ನನುಸರಿಸಿದುದು ದೊಡ್ಡ ಭರವಸೆ ಮೂಡಿಸಿದೆ ಎಂದು ತಿಳಿಸಿದರು. ಇತ್ತೀಚೆಗೆ ಬಂದ ಜಾನಪದ ಸಂಕಲನಗಳು ಐವತ್ತಕ್ಕೂ ಮೀರಿದ್ದು, ಶಾಸ್ತ್ರೀಯವಾಗಿ ನಡೆಯುತ್ತಿರುವ ಸಂಗ್ರಹಣಕಾರ್ಯ ಶ್ಲಾಘನೀಯವೆಂದರು.

ಕನ್ನಡ ವಿಶ್ವಕೋಶದಲ್ಲಿ ಅಳವಡಿಸಿರುವ ಜಾನಪದ ಅಂಶಗಳ ಮಹತ್ವವನ್ನು ಕುರಿತು ಶ್ರೀಯುತರು "ಕನ್ನಡ ವಿಶ್ವಕೋಶದಲ್ಲಿ ಬ್ರಿಟಾನಿಯಾ ವಿಶ್ವಕೋಶದಲ್ಲಿರುವುದಕ್ಕಿಂತ ಹೆಚ್ಚು ವಿವರಗಳು ಸೇರಿವೆ" ಎಂದು ಸಂತೋಷಿಸಿದರು. ಈ ನಿಟ್ಟಿನಲ್ಲಿ ಮೂವತ್ತು ವರ್ಷಗಳಿಗೂ ಮೀರಿದ ಶ್ರೇಯಸ್ಸನ್ನು ಮೂರು ವರ್ಷ ತಂದು ಕೊಟ್ಟಿದೆಯೆಂದು ಹಿಗ್ಗಿದರು.

ಕನ್ನಡದಲ್ಲಿ ಸಂಶೋಧನರಂಗದ ಬಗ್ಗೆ ವಿವೇಚಿಸಿದವರು ಡಾ|| ಎಂ. ಚಿದಾನಂದಮೂರ್ತಿ. ಭಾಷೆ, ಸಾಹಿತ್ಯಕ್ಕೆ ಸಂಬಂಧಿಸಿದಂತೆ "ಪದವಿಗಳಿಕೆಯ ತವಕಕ್ಕೊಳಗಾಗಿ ಬರೆದು ಪ್ರಕಟಿಸಿರುವ ಹಲವಾರು ಡಾಕ್ಟರೇಟ್ ಪ್ರಬಂಧಗಳಲ್ಲಿ ಗಾಢವಾದ ಸಂಶೋಧನೆಯನ್ನು ನಿರೀಕ್ಷಿಸುವಂತೆಯೇ ಇಲ್ಲ"—ಎಂದು ಕಡಾಖಂಡಿತವಾಗಿ ನುಡಿದರು. "ಅತಿರಂಜನೆ ಮತ್ತು ಕಲ್ಪನೆಗಳಿಗೆ ಮಾರುಹೋಗಿರುವುದು, ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಬರೆಯುವ, ಹೆಚ್ಚು ಬರೆಯುವ ಬಯಕೆ, ಕಷ್ಟಪಟ್ಟು ಕೆಲಸಮಾಡದೆ ಘೋಷಣೆಗಳಲ್ಲೇ ತೃಪ್ತಿ ಹೊಂದುವುದು, ಹೊಸದನ್ನು ಹೇಳಲೇಬೇಕೆಂಬ ಛಲವಿಲ್ಲದಿರುವುದು ಇವುಗಳ ದೆಸೆಯಿಂದ ಹಲವಾರು ಡಾಕ್ಟರಲ್ ಪ್ರಬಂಧಗಳು ಹತ್ತು ಸಮಾಧಿಗಳಿಂದ ಆರಿಸಿದ ಎಲುಬುಗಳಿಂದ ನಿರ್ಮಿಸಿದ ಹನ್ನೊಂದನೆಯ ಸಮಾಧಿಯಂತಿವೆ" ಎಂದು ಸಂಶೋಧನ ಕಾರ್ಯಕ್ಕೆ ಅಡೆತಡೆಯಾಗಿ ನಿಂತಿರುವ ಪ್ರವೃತ್ತಿಗಳನ್ನು ನಿರೂಪಿಸಿದ ಡಾ|| ಚಿದಾನಂದಮೂರ್ತಿ ಕೆಲವು ತರುಣಸಂಶೋಧಕರ ಆದರ್ಶದಿಂದಾಗಿ 'ನಿರಾಸೆಗೆ ಕಾರಣವಿಲ್ಲ' ಎಂದು ನುಡಿದರು.

ಗೋಷ್ಠಿಯ ಅಧ್ಯಕ್ಷ ಶ್ರೀ ಕುರ್ತಕೋಟಿ 'ದಿಟ್ಟ ವಿಚಾರ ವಿಮರ್ಶೆ'ಯ ಬಗ್ಗೆ ಸಮಾರೋಪದಲ್ಲಿ ತೃಪ್ತಿಯನ್ನು ವ್ಯಕ್ತಪಡಿಸಿದರು.

ಗ್ರಂಥಾಲಯ ಗೋಷ್ಠಿ

ಪ್ರಥಮ ಬಾರಿಗೆ ಕನ್ನಡ ಸಾಹಿತ್ಯಸಮ್ಮೇಳನದಲ್ಲಿ 'ಗ್ರಂಥಾಲಯ ಗೋಷ್ಠಿ' ನಡೆದದ್ದು ಈ ಸಮ್ಮೇಳನದ ವೈಶಿಷ್ಟ್ಯ. ಶ್ರೀ ಕೆ. ಎಸ್. ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ಈ ಕಾರ್ಯಕ್ರಮ ೧೨ ಘಂಟೆಗೆ ಪ್ರಾರಂಭವಾಯಿತು. ಗೋಷ್ಠಿಯ ಅಧ್ಯಕ್ಷರು "ಗ್ರಂಥಾಲಯಗಳನ್ನು ನಾಡಿನ ನಂದಾದೀವಿಗೆಗಳೆಂದು ಪರಿಗಣಿಸಿ, ಆರದಂತೆ ನೋಡಿಕೊಂಡರೆ ನಾಡಿನ ಪ್ರಗತಿ ಹೆಚ್ಚು ಸುಗಮವಾಗುತ್ತದೆ" ಎಂದು ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳ ಸಂಗ್ರಹದ ಅಗತ್ಯ ಬಹಳವೆಂದರು. "ಐತಿಹಾಸಿಕ ಕಾರಣಗಳಿಂದಾಗಿ ೧೯೫೦ರ ವರೆಗೆ ಹೆಚ್ಚಿನ ಕೃತಿ ಸಂಗ್ರಹಕಾರ್ಯ ಸಾಧ್ಯವಾಗಲಿಲ್ಲ. ಸ್ವಾತಂತ್ರ್ಯಾನಂತರ ಭಾರತದಲ್ಲಿ ರಾಷ್ಟ್ರೀಯ ಗ್ರಂಥಾಲಯ ಹೆಮ್ಮರವಾಗಿ ಬೆಳೆದಿದೆ" ಎಂದು ಹೆಮ್ಮೆಯನ್ನು ವ್ಯಕ್ತಪಡಿಸಿದರು. ಕನ್ನಡದಲ್ಲಿ ಒಟ್ಟು ೪೫,೦೦೦ ಪುಸ್ತಕಗಳು ಪ್ರಕಟವಾಗಿದ್ದು ಸುಮಾರು ೧೧,೦೦೦ ಈಗ

ಸಿಗುತ್ತಿಲ್ಲವೆಂದು, ಅದಕ್ಕಾಗಿ ರಚನಾತ್ಮಕ ಯೋಜನೆ ಅಗತ್ಯವೆಂದರು. ವಿಚಾರ ವಿನಿಮಯ ನಡೆಯಬೇಕಾದರೆ ಗ್ರಂಥಗಳ ಆವಶ್ಯಕತೆ ಬಹಳವೆಂದ ಶ್ರೀ ದೇಶಪಾಂಡೆ ಸಾರ್ವಜನಿಕ ಗ್ರಂಥಾಲಯಗಳು ಉತ್ತಮ ಪುಸ್ತಕಗಳನ್ನು ಕೊಂಡು ಒದಗಿಸ ಬೇಕೆಂಬ ಸೂಕ್ತಸಲಹೆ ನೀಡಿದರು. ಪ್ರಕಟಿತ ಗ್ರಂಥಗಳ ಬಗ್ಗೆ ಮಾಹಿತಿ ಇರಬೇಕಾದರೆ "ಸಹಾಯಕ ಸೂಚಿ"ಗಳ ಅಗತ್ಯ ತುಂಬಾ ಇದೆಯೆಂದರು. ಮತ್ತು ಹಿರಿಯ ಸಾಹಿತಿಗಳನ್ನು ಕುರಿತ ದಾಖಲೆ ಚಿತ್ರ ತಯಾರಿಸುವ ಯೋಜನೆ ಹಾಗು ಗ್ರಂಥಪ್ರಕಾಶನಕ್ಕೆ ರಾಜ್ಯಸರ್ಕಾರ ನೆರವಿತ್ತಿರುವುದರ ಬಗ್ಗೆ ತಮ್ಮ ಕೃತಜ್ಞತೆ ಯನ್ನು ಸೂಚಿಸಿದರು.

ಅನಂತರ ಶ್ರೀ ಶ್ರೀನಿವಾಸ ಹಾವನೂರ ಅವರು ವಿಶಿಷ್ಟ ಗ್ರಂಥಾಲಯಗಳ ಸೇವೆಯನ್ನು ಕುರಿತು ಮಾತನಾಡಿದರು. ಕೇವಲ ಹಣವಸೂಲಿ ಕಾರ್ಯದಲ್ಲೇ ಸಾರ್ವಜನಿಕ ಗ್ರಂಥಭಂಡಾರಗಳು ಹೆಚ್ಚು ಆಸಕ್ತಿ ತಳೆದಿವೆಯೆಂದೂ ಇದರಿಂದ ಮನರಂಜನೆಯಲ್ಲದೆ ಬೇರಲ್ಲವೆಂದೂ ಆದರೆ ವಿಶಿಷ್ಟ ಗ್ರಂಥಾಲಯಗಳು, ಸಂಶೋಧನೆ ಯತ್ತ ಬೆರಳುಮಾಡುತ್ತವೆಂದೂ ಹೇಳಿದರು. ಗ್ರಂಥಪ್ರಕಟಣೆಯೊಡನೆ ಸಂಗ್ರಹ ಕಾರ್ಯವೂ ಅವಿರತವಾಗಿ ನಡೆಯಬೇಕೆಂದು ಹೇಳಿದ ಅವರು ವೃತ್ತಪತ್ರಿಕೆಗಳು, ವಾಚನಸಾಮಗ್ರಿಗಳ ಸಂಗ್ರಹ ಆಗಬೇಕಾಗಿದೆ ಎಂದರು. ಅವರು ಕೊಟ್ಟ ಮತ್ತೊಂದು ಸೂಚನೆಯೆಂದರೆ 'ನವ್ಯಕಾವ್ಯ'ದ ಬಗ್ಗೆ ಇತ್ತೀಚೆಗೆ ನಡೆದಿರುವ ಪತ್ರವ್ಯವಹಾರದ "ಕಟಿಂಗ್ಸ್" ಕಾಯ್ದಿರಿಸಬೇಕೆಂಬುದು.

"ಆಧುನಿಕ ಗ್ರಂಥಾಲಯದ ರೂಪರೇಷೆ"ಯನ್ನು ಕುರಿತ ಶ್ರೀ ಆರ್. ಎಸ್. ಗುಂಜಾಳ ಅವರು ವಿಚಾರಮಾಡಿದರು. "ಗ್ರಂಥಾಲಯಗಳು ಜನಜೀವನದ ನಾಡಿ ಎಂದು ಈಗ ಜನ ಪರಿಗಣಿಸುತ್ತಾರೆ. ಇಂದು ಕೇವಲ ಗ್ರಂಥಗಳನ್ನು ಕಾಯ್ದಿಡುವ ಉದ್ದೇಶದಿಂದ ಗ್ರಂಥಾಲಯಗಳಲ್ಲಿ ಜ್ಞಾನಾರ್ಜನೆಯ ಬಗ್ಗೆ ಜನ ಆಸಕ್ತರಾಗಿದ್ದಾರೆ" ಎಂದು ತಿಳಿಸಿದ ಅವರು ಗ್ರಂಥಾಲಯಗಳ ಮಹತ್ವದ ಪಾತ್ರವನ್ನು ವಿವರಿಸಿದರು. ಅನೇಕ ತೊಡಕುಗಳು ಪರಿಹಾರವಾಗಲು ಗ್ರಂಥಾಲಯ ಕಾಯಿದೆ ಸರಿಯಾಗಿ ಅನುಷ್ಠಾನಕ್ಕೆ ಬರಬೇಕೆಂದು ಅದಕ್ಕಾಗಿ ತ್ವರೆಪಡಿಸಿದರು.

ಶ್ರೀ ಅ. ರಾ. ಮಿತ್ರ ಅವರು ಗೋಷ್ಠಿಯನ್ನು ನಿರ್ದೇಶಿಸಿದರು. ಒಟ್ಟಿನಲ್ಲಿ ಈ ಗೋಷ್ಠಿಯಿಂದ ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಗ್ರಂಥಾಲಯಗಳು ಯಾವ ಪಾತ್ರವಹಿಸುತ್ತವೆ; ವಹಿಸಬೇಕಾಗಿದೆ ಎಂಬುದನ್ನು ಜನತೆ ಮನ ಗಂಡಂತಾಯಿತು.

ಗಮಕಗೋಷ್ಠಿ

ಸಾಹಿತ್ಯಸಮ್ಮೇಳನಗಳಿಗೆ ತೀರಾ ಅಪರೂಪವೆನಿಸುವ ಗಮಕಗೋಷ್ಠಿ ಎರಡನೆಯ ಸಲ ನಡೆದದ್ದು ಅಂದಿನ ಸಮ್ಮೇಳನದಲ್ಲಿ ಮಧ್ಯಾಹ್ನ ೩ ಗಂಟೆಗೆ. ಕನ್ನಡ,

ತಮಿಳು, ತೆಲುಗು, ಮಲೆಯಾಳ, ತುಳು, ಮರಾಠಿ ಮತ್ತು ಸಂಸ್ಕೃತ ಭಾಷೆಗಳಲ್ಲಿ ಗಮಕದ ಹುಟ್ಟು, ವ್ಯಾಪ್ತಿಯನ್ನು ತೌಲನಿಕವಾಗಿ ನೋಡಿ ನಿರೂಪಿಸಿದ 'ಗಮಕ ಗೋಷ್ಠಿ' ಸಾಹಿತ್ಯಪರಿಷತ್ತಿನ ಹಿರಿಮೆಯನ್ನು ಸಂಸ್ಥಾಪಿಸಿತು. "ಪರಂಪರೆಯಿಂದ ಬೆಳೆದು ಬಂದ ಗಮಕ ಇಲ್ಲವೇ ಕಾವ್ಯವಾಚನ ಕಲೆ ಕನ್ನಡನಾಡಿನಲ್ಲಿ ಬೇರು ಬಿಟ್ಟಿರುವಷ್ಟು ಮತ್ತೆಲ್ಲೂ ಬಿಟ್ಟಿಲ್ಲ"—ಇದು ಗೋಷ್ಠಿಯಿಂದ ಕೊನೆಯಲ್ಲಿ ವಿದಿತ ವಾದ ತಿರುಳು. ಗೋಷ್ಠಿಯ ನಿರ್ದೇಶಕರಾದ ಶ್ರೀ ಹು. ಮ. ರಾಮಾರಾಧ್ಯ ಅವರು ಹೇಳಿದಂತೆ, "ಗಮಕಕಲೆಯನ್ನು ಕುರಿತ ಪ್ರಾಚೀನ ಲಕ್ಷಣ ಗ್ರಂಥಗಳಿಲ್ಲ. ಸಂಶೋಧಕರ ಗಮನವೂ ಇತ್ತ ಹರಿದಿಲ್ಲ. ಆದ್ದರಿಂದ ಇತರ ಭಾಷೆಗಳಲ್ಲಿ ಈ ಕಲೆಯ ಬೆಳವಣಿಗೆಯನ್ನು ವಿಚಾರವಿನಿಮಯದ ಮೂಲಕ ತಿಳಿಯುವ ಪ್ರಯತ್ನ" ವಾಗಿತ್ತು ಈ ಗೋಷ್ಠಿ.

ಮೊದಲು ಗಮಕಕಲಾನಿಧಿ ಜೋಳದ ರಾಶಿ ದೊಡ್ಡನಗೌಡರು "ಕವಿ ಗಮಕಿ ಯಾಗಿ ಗಮಕಿ ಕವಿಯಾಗಿ ಬೆಳೆದ ನಾಡಿನಲ್ಲಿ ಕವಿಗೆ ಇತಿಹಾಸವಿದೆ, ಆದರೆ ಗಮಕಿ ಇತಿಹಾಸ ವಿಹೀನ—ಇದೊಂದು ದುರ್ದೈವ" ಎಂದು ಅಭಿಪ್ರಾಯಿಸಿದರು. ಗಮಕಿಗೆ ಇತಿಹಾಸ ನಿರ್ಮಿಸಿ, ಪ್ರೌಢಶಾಲೆಯಲ್ಲಿ ಗಮಕ ಶಿಕ್ಷಣ ಆರಂಭಿಸಬೇಕೆಂದು ಸಲಹೆಯನ್ನಿತ್ತರು.

ಶ್ರೀಮತಿ ಟಿ. ಕೆ. ನಾಗಾಂಬಾಳ್ "ತಮಿಳುನಾಡಿನಲ್ಲಿ ದೇವಾಲಯಗಳ 'ತಿರುಮುಡಿ', 'ತಿರುಪುಗಳ್', 'ತೇವಾರಂ'ಗಳನ್ನು ಹಾಡುವ ಪರಿಪಾಠ ಬಹು ಕಾಲದಿಂದಿದ್ದು ಕಾವ್ಯವಾಚನ ಕಲೆ ಎಂದು ಕರೆಸಿಕೊಂಡಿದೆ" ಎಂದರು.

ಮಲೆಯಾಳಿ ಭಾಷೆಯಲ್ಲಿ ಗಮಕದ ಪರಂಪರೆಯನ್ನು ರೂಪಿಸಿದ ಶ್ರೀ ಬಿ.ಎಂ ಇದಿನಬ್ಬ " ಪಾಠಕಮ್" ಎಂದು ವ್ಯಾಖ್ಯಾನಸಹಿತವಾಗಿ ಮತ್ತು ಆದಿಲ್ಲದೆ ಬೆಳೆದುಬಂದಿರುವ ಕಲೆ ಗಮಕದ ಪರಿಧಿಗೆ ಒಳಪಡುತ್ತದೆಂದರು. "ಮಲಯಾಳ ದಲ್ಲಿ ಇತ್ತೀಚಿನ ಸಮಾಜವಾದೀ ಕಾವ್ಯಗಳೂ ಗಮಕದ ಪರಿಧಿಗೆ ಒಳಗಾಗಿವೆ. ಶೋಷಣೆ, ಬಡತನ, ಕೂಲಿಕಾರರ ಸಮಸ್ಯೆಗಳನ್ನು ಒಳಗೊಂಡ ಕಥಾಭಾಗದ ಕಾವ್ಯವಾಚನದ ಜೊತೆಗೇ ಮುಸ್ಲಿಮರ ಮನೆಗಳಲ್ಲಿ ಮದುವೆ ಮತ್ತಿತರ ಸಮಾರಂಭ ಗಳಲ್ಲಿ "ಪಾಟು" ಕಾವ್ಯಾವಚನದ ಭಾಗವಾಗಿದೆ" ಎಂದು ಹಾಡಿ ತೋರಿಸಿದರು.

ಶ್ರೀಕೃಷ್ಣದೇವರಾಯನಿಂದ ತುಳುವಿನ ಅವನತಿಯನ್ನು ಗುರುತಿಸಿದ ಶ್ರೀ ಕಲ್ಲೆ ಶಿವೋತ್ತಮ ರಾವ್ ಅವರು ಈಗ ಕರ್ಣಾಟಕದ ಭಾಗವಾಗಿರುವ ೨೦ ಲಕ್ಷ ಜನರಾಡುವ ತುಳುವಿಗೆ ಮನ್ನಣೆ ಇಲ್ಲ ಎಂದರು. ತುಳುವಿನಲ್ಲಿ ಗಮಕವನ್ನು ಗುರುತಿಸಲು ಆಧಾರಸಾಮಗ್ರಿಯ ಅಭಾವ ಬಹಳವಿದೆಯೆಂದ ಅವರು ೧೫ನೇ ಶತಮಾನದ ಕನ್ನಡ ಶಾಸನದ ಆಧಾರ ನೀಡಿ ಅಂದಿನಿಂದ ಗಮಕಕಲೆಯ ಬೆಳವಣಿಗೆಯನ್ನು ಅನ್ವೇಷಿಸಿದರು.

"ಯಕ್ಷಗಾನ ಗಮಕಕ್ಕಿಂತ ವಿಸ್ತಾರವಾದ ಕಲೆ. ಆದರೆ ಗುಣ ಎರಡಕ್ಕೂ

ಒಂದೇ. ಎರಡಕ್ಕೂ ಸಾಹಿತ್ಯವೇ ಪ್ರಧಾನ; ಸಂಗೀತ ಪೋಷಕ'' ಎಂದು ಶ್ರೀ ಟಿ. ಕೇಶವಭಟ್ಟರು ಕನ್ನಡ ಯಕ್ಷಗಾನ ಮತ್ತು ಗಮಕಕಲೆಗಳ ಅನ್ಯೋನ್ಯತೆಯನ್ನು ನಿರ್ದೇಶಿಸಿದರು.

'' ಮರಾಠಿಯಲ್ಲಿ ' ಅಭಂಗ ಆರ್ಯ ಸಖಿ 'ಗಳು ಪ್ರಾಚೀನ ಕಾವ್ಯವಾಚನ ರೀತಿಗಳು " ಎಂದ ಶ್ರೀ ವಿ. ಎಸ್. ದೇಶಪಾಂಡೆ " ರಾಜಾಶ್ರಯ, ಪೇಷ್ವೆಗಳ ಆಡಳಿತದಲ್ಲಿ ಕಾವ್ಯವಾಚನ ಬೆಳೆದಿದ್ದರೂ ವಿಶಿಷ್ಟಶಾಸ್ತ್ರ ನಿರ್ಮಾಣವಾಗಿಲ್ಲ. ಮಹಾರಾಷ್ಟ್ರದಲ್ಲಿ ಕವಿಗಳ ಸ್ವಕೃತಿ ವಾಚನ ಬಹು ಪ್ರಚುರವಾಗುತ್ತಿದೆ " ಎಂದರು.

ಶ್ರೀ ತಾತಾಚಾರ್ಯರು " ಛಂದೋಬದ್ಧವಾದ ವೇದಗಳೇ ಗಮಕಕ್ಕೆ ಅಗತ್ಯ ಸತ್ವ ನೀಡಿವೆ. ಸಂಸ್ಕೃತದಿಂದಲೇ ಸ್ಫೂರ್ತಿ ಪಡೆದು ಉಳಿದ ಭಾಷೆಗಳಲ್ಲಿ ಗಮಕಕಲೆ ಬೆಳೆದುಬಂದಿದೆ " ಎಂದು ಅಭಿಪ್ರಾಯಿಸಿದರು.

ಗಮಕಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಶ್ರೀ ರಾಳ್ಲಪಳ್ಳಿ ಅನಂತಕೃಷ್ಣ ಶರ್ಮರು " ಸಾಮಾನ್ಯವಾದುದನ್ನು ದಿವ್ಯವಸ್ತುವನ್ನಾಗಿ ಅನುಭವಿಸಬೇಕಾದರೆ ಸಾಮಾನ್ಯ ಭಾಷೆ ಸಾಲದು. ಅಲೌಕಿಕ ಅನುಭೂತಿ ಪಡೆಯಬೇಕಾದರೆ ಲೌಕಿಕ ವಾಕ್ಯಕ್ಕೆ ಸಂಗೀತದ ಮೆರುಗು ಅವಶ್ಯ. ಕಾವ್ಯವಾಸನಾ ಪರಿಪಕ್ವ ಬುದ್ಧಿ ಇದ್ದವರಿಗೆ ಮಾತ್ರವೇ ಕಾವ್ಯಸಿದ್ಧಿ " ಎಂದು ಸಭೆಯನ್ನುದ್ದೇಶಿಸಿ ತಿಳಿಸಿದರು. ತೆಲುಗಿನಲ್ಲಿ ಗಮಕದ ಆದಿಯನ್ನು ಚರ್ಚಿಸುತ್ತಾ ೧೬ನೆಯ ಶತಮಾನದಲ್ಲಿ '' ನನ್ನಿ ತೋಡ ಚೂಡ "ನೆಂಬ ಕವಿ ಬರೆದ ' ಕುಮಾರ ಸಂಭವಮ್ 'ನಲ್ಲಿ ಗಮಕದ ಪ್ರಸ್ತಾಪವಿದೆ ಎಂದು ಹೇಳಿದರು. ಹೀಗೆ ಗಮಕಗೋಷ್ಠಿ ಸಮ್ಮೇಳನಕ್ಕೆ ಹೊಸ ಮೆರುಗನ್ನು ತಂದುಕೊಟ್ಟಿತು.

ಮಹಿಳಾಗೋಷ್ಠಿ

ಈ ಗೋಷ್ಠಿಯ ಅಧ್ಯಕ್ಷಿಣಿ ಶ್ರೀಮತಿ ವಾಣಿಯವರು '' ಕನ್ನಡ ನುಡಿಯ ಬಗ್ಗೆ ಅಭಿಮಾನ ಮೂಡಲು, ಆಂಗ್ಲಭಾಷೆಯ ಮೋಹದಿಂದ ಮುಕ್ತಿಪಡೆಯಲು, ಸಮಾಜದ ಧೋರಣೆ ಸಮಗ್ರವಾಗಿ ಬದಲಾಗಬೇಕು. ಅಂತಹ ಅಭಿಮಾನ ತುಂಬುವುದು ಸ್ತ್ರೀಯರಾದ ನಮ್ಮ ಹೊಣೆ " ಎಂದರು. ಕನ್ನಡ ಇಂದು ಸರ್ವಾಂಗ ಸುಂದರವಾಗಲು ಹಿಂದೆ ಶ್ರಮಿಸಿದ ಮಹನೀಯರನ್ನು ಸ್ಮರಿಸಿ " ಕನ್ನಡ ಬಿಟ್ಟು ಉಳಿದ ಯಾವ ಭಾಷೆಯಾದರೂ ಸೋದರನಂತಿರಲಿ; ಯಾಜಮಾನ್ಯ ವಹಿಸುವುದು ಬೇಡ "ವೆಂದ ಅವರು ' ಹಿಂದಿ ಮಾಧ್ಯಮ ಒಪ್ಪುವುದಿಲ್ಲ 'ವೆಂದರು.

ಶ್ರೀಮತಿ ಹೆಚ್. ವಿ. ಸಾವಿತ್ರಮ್ಮನವರು ಮಹಿಳೆಯರಿಂದ ರಚಿತವಾದ ಪ್ರಬಂಧ, ಹರಟೆ, ವಿಮರ್ಶೆಯನ್ನು ಉದ್ದೇಶಿಸಿ ಭಾಷಣಮಾಡಿದರು. ಸಾಹಿತ್ಯ ರಚನೆಗೆ ಅನುಭವ, ಆಳವಾದ ಅಧ್ಯಯನ ಅವಶ್ಯಕವೆಂದು, ಮಧ್ಯಮ ವರ್ಗದ ಹೆಣ್ಣುಮಕ್ಕಳು ಕಲಿತು ಸಾಧಾರಣವಾಗಿ ಕೃತಿರಚನೆಗೆ ತೊಡಗುವುದರಿಂದ ಅವರಿಗೆ

'ಅನುಭವದ ಮಿತಿ' ಒಂದು ತೊಡಕಿನ ಪ್ರಶ್ನೆ ಎಂಬುದನ್ನು ಮುಚ್ಚುಮರೆಯಿಲ್ಲದೆ ಬಹಿರಂಗಪಡಿಸಿದರು.

ಮೂರು ವರ್ಷದ ಅವಧಿಯಲ್ಲಿ ಮಹಿಳಾ ಕತೆ–ಕಾದಂಬರಿಯ ಪ್ರಗತಿ ಸಮೃದ್ಧವಾಗಿದೆ ಎಂದವರು ಶ್ರೀಮತಿ ಗೀತಾ ಕುಲಕರ್ಣಿ. 'ಮಹಿಳೆಯರಿಂದ ನೂರಕ್ಕೂ ಹೆಚ್ಚು ಕೃತಿಗಳು ಕಾದಂಬರಿ ಕ್ಷೇತ್ರದಲ್ಲಿ ಬಂದಿದ್ದರೂ ಸಾಹಿತ್ಯವೌಲ್ಯ ಮಾಪನದ ದೃಷ್ಟಿಯಿಂದ ಕೆಲವು ಸ್ಮರಣೀಯ' ಎಂದು ಹೇಳಿದರು. ಹುಲುಸಾದ ಬೆಳೆಯಲ್ಲಿ ಜೊಳ್ಳಿನ ಅಂಶದ ಆಧಿಕ್ಯವನ್ನು ಪತ್ತೆಹಚ್ಚಿದರು.

ಶ್ರೀಮತಿ ಶಾಂತಾದೇವಿ ಮಾಳವಾಡ ಅವರು ಬರದಿದ್ದುದರಿಂದ ಅವರ "ವಿಚಾರ ಸಾಹಿತ್ಯ–ನಾಟಕ" ಪ್ರಬಂಧವನ್ನು ಶ್ರೀಮತಿ ಸರೋಜಿನಿ ಚಿಕ್ಕೋಡಿ ಓದಿದರು. ಶ್ರೀಮತಿ ಶಾಂತಾದೇವಿ ಮಾಳವಾಡರು ಮಹಿಳಾ ವಿಚಾರಸಾಹಿತ್ಯದ ಪ್ರಕಟಣೆಯ ಹೊರೆಯನ್ನು ಸಾಹಿತ್ಯಪರಿಷತ್ತು ಹೊತ್ತು ಸರ್ಕಾರದ ಮುಂದಿಡ ಬೇಕೆಂದು ತಮ್ಮ ಲಿಖಿತ ಭಾಷಣದಲ್ಲಿ ಮಂಡಿಸಿದರು.

ಸಮಾರೋಪ ಭಾಷಣದಲ್ಲಿ ಶ್ರೀಮತಿ ವಾಣಿಯವರು ಕನ್ನಡಕ್ಕೆ ದಿ. ಶ್ರೀಮತಿ ತ್ರಿವೇಣಿಯವರ ಸಾಹಿತ್ಯಸೇವೆಯನ್ನು ಸ್ಮರಿಸಿ ಶ್ರದ್ಧಾಂಜಲಿ ಅರ್ಪಿಸಿದರು. "ಕಛೇರಿಯ ಕೆಲಸದಿಂದ ಹಿಡಿದು ಪ್ರಧಾನಿಯ ಕೆಲಸದ ನಿರ್ವಹಣೆಯವರೆಗೆ, ಸಫಲಳಾದ ಸ್ತ್ರೀಯ ಸಾಹಿತ್ಯಸೃಷ್ಟಿಯ ಸಾಮರ್ಥ್ಯದ ಬಗ್ಗೆ ಬೇಜವಾಬ್ದಾರಿ ಯುತ ವಿಮರ್ಶೆ ಸಲ್ಲದು" ಎಂದು ಗೋಷ್ಠಿಯ ನಿರ್ದೇಶಕ ಸ್ಥಾನದಿಂದ ಶ್ರೀಮತಿ ಎಚ್. ಎಸ್. ಪಾರ್ವತಿಯವರು ಆರಿಕೆ ಮಾಡಿಕೊಂಡರು.

ಮಹಿಳಾ ಗೋಷ್ಠಿಯಿಂದ ಮಹಿಳಾ ಸಾಹಿತ್ಯದ ಹಲವು ಇತಿಮಿತಿ ಮತ್ತು ಅದು ನಡೆದುಬಂದಿರುವ ಮಾರ್ಗ ಚೆನ್ನಾಗಿ ಗಮನಕ್ಕೆ ಬಂದಿತು. ತಾ. ೨೮–೧೨–೭೦ರ ಕಾರ್ಯಕ್ರಮಗಳು ಹೀಗೆ ಬಹು ಯಶಸ್ವಿಯಾಗಿ ನೆರವೇರಿ ದುವು. ಒಟ್ಟು ನಾಲ್ಕು ಗೋಷ್ಠಿಗಳು ಕನ್ನಡಸಾಹಿತ್ಯದ ನಾಲ್ಕು ಮುಖಗಳನ್ನು ಕುರಿತು ವಿವೇಚಿಸಿ ಸಾರ್ಥಕತೆ ಪಡೆದುವು.

ಚಿನ್ನದ ಹಬ್ಬ ಮತ್ತು ಸಾಹಿತ್ಯಸಮ್ಮೇಳನಗಳ ಮುಕ್ತಾಯ : ತಾ ೨೬–೧೨–೧೯೭೦

ಅಂದು ೪೭ನೆಯ ಕನ್ನಡ ಸಾಹಿತ್ಯಸಮ್ಮೇಳನದ ಕೊನೆಯ ದಿನ. ಬೆಳಗ್ಗೆ ೯ ಗಂಟೆಗೆ 'ಜಿಲ್ಲಾ ಸಮಿತಿಗಳ, ಸಂಘಸಂಸ್ಥೆಗಳ ಮತ್ತು ಹೊರನಾಡ ಕನ್ನಡಿಗರ ಸಭೆ' ನಡೆಯಿತು. ಕನ್ನಡಸಾಹಿತ್ಯ ಪರಿಷತ್ತಿನ ಅಧ್ಯಕ್ಷರೇ ಈ ಸಭೆಗೂ ಅಧ್ಯಕ್ಷರಾಗಿದ್ದರು. ಈ ಸಭೆಯಿಂದ ನಾಗರಿಕರ ಲಕ್ಷ್ಯಕ್ಕೆ ಬಂದ ಅಂಶವೆಂದರೆ ಕನ್ನಡ ಸಾಹಿತ್ಯಪರಿಷತ್ತಿನ ವ್ಯಾಪ್ತಿ ವಿಸ್ತಾರವಾಗಿ ಹಿಗ್ಗಿದೆ; ನಾನಾ ಶಾಖೋಪ ಶಾಖೆಗಳು ಕವಲೊಡೆದಿವೆ; ಅಷ್ಟೇ ಅಲ್ಲ, ಹೊಸ ಹೊಸ ಸಮಸ್ಯೆಗಳೂ ಕೂಡ

ಅವತರಿಸಿವೆ ಎಂಬುದು. ಪರಿಷತ್ತಿನ ಮತ್ತು ಅದರ ಶಾಖೆಗಳ ನಡುವಣ ಸಂಬಂಧ, ಅನುಕೂಲ ಇತ್ಯಾದಿ ವಿಚಾರಗಳು ಚರ್ಚೆಗೊಳಗಾದವು. ಬಳಿಕ ಹೊರನಾಡ ಕನ್ನಡಿಗರು ತಮ್ಮ ಚಟುವಟಿಕೆ, ಚಾಕಚಕ್ಯತೆಗಳನ್ನು ವೇದಿಕೆಯ ಮೇಲೆ ಬಣ್ಣಿಸಿದರು. ಗಡಿನಾಡಿನ ಕನ್ನಡಿಗರಾದರೆ ತಮ್ಮ ಕರ್ಮ – ಕತೆಯನ್ನು ನಿವೇದಿಸಿದರು. ಸಭೆಯ ನಡುವೆ ಅಲ್ಲಲ್ಲಿ ಆಗಾಗ ಕೂಗುಗಳು ಕೇಳಿಬಂದು ಪರಿಷತ್ತಿನ ಜವಾಬ್ದಾರಿಯನ್ನು ಎತ್ತಿಹೇಳುವಂತೆ ತೋರುತ್ತಿತ್ತು. ಪರಿಷತ್ತಿನ ಅಧ್ಯಕ್ಷರು ಒಪ್ಪಬೇಕಾದುದನ್ನು ನಿಸ್ಸಂಕೋಚವಾಗಿ ಒಪ್ಪಿ ತಿರಸ್ಕರಿಸ ಬೇಕಾದುದನ್ನು ಅಷ್ಟೇ ನಿಸ್ಸಂಕೋಚವಾಗಿ ತಿರಸ್ಕರಿಸಿದರು ತಮ್ಮ ಭಾಷಣದಲ್ಲಿ. "ಜಾತೀಯತೆಯ ಮಾತನ್ನಾಡಬೇಡಿ. ನನಗೆ ಅದು ಗೊತ್ತೇಯಿರಲಿಲ್ಲ. ಮೊದಲು ಗೊತ್ತಾಗಿದ್ದು ಕಾರ್ಪೊರೇಷನ್ನಿಗೆ ಆರಿಸಿ ಬಂದಮೇಲೆ. ಹೆಚ್ಚು ಚೆನ್ನಾಗಿ, ಶಾಸ್ತ್ರೀಯವಾಗಿ ಅರ್ಥವಾಗಿರುವುದು ಸಾಹಿತ್ಯಪರಿಷತ್ತಿಗೆ ಬಂದಮೇಲೆ........ ನಿಮಗೇನು ಬೇಕು ಹೇಳಿ. ಅದನ್ನು ಮಾಡಿಕೊಡಲು ನಾನು ಸಿದ್ಧ. ಬರಲಿಲ್ಲವೋ, ಹಿಂದೆ ಉಳಿದಿರೋ ನಿಮಗೆ ಅಸೂಯೆ ಎಂದೆನ್ನುತ್ತೇನೆ"—ಎಂದು ನುಡಿದ ಪರಿಷತ್ತಿನ ಅಧ್ಯಕ್ಷರು "ನಮ್ಮಿಂದಲೇ ಎಲ್ಲ ಆಗುತ್ತಿದೆ ಎನ್ನುವ ಭಾವನೆ ಬೇಡ. ನಮ್ಮನ್ನೇ ನಾವು ದೂಂಕೊಳ್ಳುವುದೂ ಬೇಡ. ಬನ್ನಿ, ಜೊತೆಗೂಡಿ" ಎಂದು ಎಲ್ಲರಿಗೂ ಕರೆಕೊಟ್ಟರು.

ಅಂದು ಮಧ್ಯಾಹ್ನ ೩ ಗಂಟೆಗೆ 'ಬಹಿರಂಗ ಅಧಿವೇಶನ, ಸಮ್ಮೇಳನದ ನಿರ್ಣಯಗಳ ಅಂಗೀಕಾರ, ಸಮ್ಮೇಳನಾಧ್ಯಕ್ಷರಿಂದ ಸಮಾರೋಪ ಭಾಷಣ' ನೆರವೇರಿತು. "ನಮ್ಮೆಲ್ಲರನ್ನೂ ಒಂದುಗೂಡಿಸಿದ ಈ ಸಂದರ್ಭದಲ್ಲಿ ಯಾರು ಯಾರನ್ನು ನೆನೆಯಲಿ?" ಎಂದು ಸಮಾರೋಪ ಭಾಷಣ ಮಾಡಿದ ಸಮ್ಮೇಳನಾಧ್ಯಕ್ಷ ಶ್ರೀ ದೇ. ಜವರೇಗೌಡರು ಕೃತಜ್ಞತಾಪೂರ್ವಕವಾಗಿ ಹರ್ಷಿಸಿದರು. "ನನ್ನ ಮಾತು ಟೀಕೆಗೊಳಗಾಗಬೇಕೆಂಬುದೇ ನನ್ನ ಇಚ್ಛೆ. ಅದರಿಂದ ಹಿಮ್ಮೆಟ್ಟುವ ಪ್ರವೃತ್ತಿ ನನ್ನದಲ್ಲ. ನನ್ನ ಗುರಿ ಸ್ಪಷ್ಟ; ಧ್ಯೇಯ ಅಚಲ"—ಇದು ಸಮ್ಮೇಳನಾಧ್ಯಕ್ಷ ಭಾಷಣದ ಬಗ್ಗೆ ಮೂಡಿದ ಪ್ರತಿಕ್ರಿಯೆಗೆ ಶ್ರೀ ದೇ. ಜವರೇಗೌಡರ ಮರುಪ್ರತಿಕ್ರಿಯೆ. ಶ್ರೀ ಜವರೇಗೌಡರು, ಸಂಚುಹೂಡಿ ಎಲ್ಲಿಗೋ ದೊರಕಬೇಕಾಗಿದ್ದ ಕೇಂದ್ರ ಭಾಷಾ ಅಧ್ಯಯನ ಸಂಸ್ಥೆಯನ್ನು ಮೈಸೂರಿಗೆ ತರಿಸಿಕೊಂಡ ತಾವು ಅನ್ಯಭಾಷಾ ದ್ವೇಷಿಯಲ್ಲವೆಂಬ ಅಂಶವನ್ನು ಮೇಲಿಂದ ಮೇಲೆ ಸ್ಪಷ್ಟಪಡಿಸಿದರು. ವಿದೇಶೀ ಭಾಷಾ ಅಧ್ಯಯನಕೇಂದ್ರದ ಆರಂಭಕ್ಕೆ ತಾವು ಯೋಜಿಸಿರುವುದನ್ನು ತಿಳಿಸಿ ಹಿಂದಿಯನ್ನರಿತಿರುವ ತಾವು ಹಿಂದೀ ಭಾಷಾ ದ್ವೇಷಿಯಲ್ಲವೆಂದು ಸಾರಿ, ಇಂಗ್ಲಿಷ್ ಹಾಗೂ ಹಿಂದಿ–ಇವುಗಳ ಸ್ಥಾನನಿರ್ದೇಶವಾಗಬೇಕೆಂದರು. "ಕನ್ನಡದ ಹಿತಕ್ಕೆ ಯಾವ ವಲಯದಿಂದ ಧಕ್ಕೆ ತಗುಲಿದರೂ ನಾನದನ್ನು ಸಹಿಸಲಾರೆ" ಎಂಬ ಅವರ ಘೋಷಣೆ ಅವರ ನಿಲುವನ್ನು ದೃಢ ಪಡಿಸಿತು.

ಕನ್ನಡ ನಾಡಿನಲ್ಲಿ ಕನ್ನಡಕ್ಕೇ ಸಾರ್ವಭೌಮ ಪದವಿ ಮೀಸಲಾಗಬೇಕೆಂಬ ತಮ್ಮ ಉದ್ದೇಶ ಅಚಲವೆಂದ ಶ್ರೀಯುತರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾಗುವವರು ಕನ್ನಡದ ಜ್ಞಾನ ಪಡೆದಿರಲೇಬೇಕಾಗುತ್ತದೆಂಬ ನಿಯಮ ವನ್ನು ಜಾರಿಗೆ ತರಲಿರುವುದಾಗಿ ಹೇಳಿದರು. "ಅನ್ಯಭಾಷೆಯನ್ನಾಡುವವರಲ್ಲಿ ಕನ್ನಡದ ಬಗ್ಗೆ ಗೌರವ, ಒಲವುಗಳನ್ನು ಮೂಡಿಸಿ ನಮ್ಮ ಕವಿಗಳ ಪರಿಚಯ ಮಾಡಿಕೊಡಿ. ಅವರ ಉತ್ತಮ ಕೃತಿಗಳನ್ನು ಕನ್ನಡಕ್ಕೆ ತಂದು, ನಮ್ಮ ಉತ್ತಮ ಕೃತಿಗಳನ್ನು ಅವರ ಭಾಷೆಗೆ ಅನುವಾದಿಸಿ"—ಇದು ಸಮ್ಮೇಳನಾಧ್ಯಕ್ಷರು ಹೊರನಾಡ ಕನ್ನಡಿಗರಿಗೆ ಮುಖ್ಯವಾಗಿ ಕೊಟ್ಟ ಸೂಚನೆ. ಪರಿಷತ್ತು ಸಾಹಿತ್ಯ ನಿರ್ಮಿತಿಗೆ ಯೋಗ್ಯ ವಾತಾವರಣ ಕಲ್ಪಿಸಬೇಕೆಂದ ಅವರು ತಮ್ಮ ಶ್ರೇಯಸ್ಸಿಗೆ ಕಾರಣರಾದ ಎಲ್ಲರನ್ನೂ ಸ್ಮರಿಸಿದರು. "ನನ್ನ ದಾರಿ ನನಗೆ ಜಯ ಕೊಟ್ಟಿದೆ, ಯಶಸ್ಸು ತಂದುಕೊಟ್ಟಿದೆ. ಆದರೆ ಇದು ತಲೆ ತಿರುಗಿಸಿಲ್ಲ. ಕನ್ನಡದ ಕೆಲಸದಲ್ಲಿ ಮಾತ್ರ ಅಹಂಕಾರ ಹೆಡೆ ಎತ್ತುತ್ತದೆ" ಎಂದರು. ಪ್ರತಿನಿಧಿಗಳನ್ನುದ್ದೇಶಿಸಿ ಲೋಕಸೇವಾ ಆಯೋಗದ ಪರೀಕ್ಷೆಗಳನ್ನು ಕನ್ನಡದಲ್ಲಿ ನಡೆಸಬೇಕೆಂದು ಒತ್ತಾಯ ಪೂರ್ವಕವಾಗಿ ತಿಳಿಸಿದರು.

ತರುವಾಯ ರಾಜ್ಯದ ಸಾಹಿತ್ಯ, ಲಲಿತಕಲೆ, ನಾಟಕ ಅಕಾಡೆಮಿಗಳು ಸಮ್ಮೇಳನಾಧ್ಯಕ್ಷರನ್ನು ಸನ್ಮಾನಿಸಿದವು. ಶಿಕ್ಷಣ ಸಚಿವ ಶ್ರೀ ಕೆ. ವಿ. ಶಂಕರ ಗೌಡರು ಅಧ್ಯಕ್ಷಸ್ಥಾನದಿಂದ ಅವರಿಗೆ ಹಾರ ಅರ್ಪಿಸಿ ಶಾಲು ಹೊದಿಸಿ ನಟರಾಜನ ವಿಗ್ರಹವನ್ನರ್ಪಿಸಿದರು. ಅಕಾಡೆಮಿಗಳ ಪರವಾಗಿ ಶ್ರೀ ಅ.ನ.ಕೃ. ಅವರು, "... ಜವರೇಗೌಡರು ನಾಯಕರು, ನಾನು ಸೇನಾನಿ. ನನಗಿಂತ ಹತ್ತು ವರ್ಷ ಕಿರಿಯರಾಗಿರುವ ಅವರು ಯೋಗ್ಯತೆ, ಅನುಭವ ಮತ್ತು ಮಾಡಿರುವ ಕೆಲಸದ ದೃಷ್ಟಿಯಿಂದ ೨೦ ವರ್ಷ ಹಿರಿಯರು. . . .ಕನ್ನಡ ಪರವಾದ ಸರ್ಕಾರದ ಧನಶಕ್ತಿ, ಉಪಕುಲಪತಿ ಶ್ರೀ ದೇ. ಜವರೇಗೌಡರ ಜ್ಞಾನಶಕ್ತಿ ಮತ್ತು ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ನಾರಾಯಣರ ಕ್ರಿಯಾಶಕ್ತಿಗಳ ಸಂಗಮ ಸಾಹಿತ್ಯದ ಸೌಭಾಗ್ಯ. ಈ ಸದವಕಾಶದಲ್ಲಿ ಶ್ರೀ ಜವರೇಗೌಡರಿಗೆ ನಮ್ಮ ಕೋಟಿ ಬಾಹುಬಲಗಳ ರಕ್ಷೆ ಕಟ್ಟೋಣ"—ಎಂದು ಒಕ್ಕೊರಲಿನಿಂದ ಹಾರೈಸಿದರು. ಚಿನ್ನದ ಹಬ್ಬ ಹಾಗೂ ಸಾಹಿತ್ಯಸಮ್ಮೇಳನಗಳಿಗೆ ಜಯಪ್ರದವಾದ ಮುಕ್ತಾಯ ಲಭಿಸಿತು.

—ಕೆ. ಎಸ್. ನರಸಿಂಗರಾವ್

ಸಂಪಾದಕೀಯ

ಸಾಹಿತ್ಯ ಅಕಾಡೆಮಿ ಬಹುಮಾನ

ಈ ವರ್ಷ ಕೇಂದ್ರ ಸಾಹಿತ್ಯ ಅಕಾಡೆಮಿಯ ಪಾರಿತೋಷಕ ಕನ್ನಡದಲ್ಲಿ ಶ್ರೀ ಶಂ. ಬಾ. ಜೋಶಿಯವರ 'ಕರ್ಣಾಟ ಸಂಸ್ಕೃತಿಯ ಪೂರ್ವಪೀಠಿಕೆ'ಗೆ ಲಭಿಸಿರುವುದು ಕನ್ನಡಿಗರಿಗೆ ಅಭಿಮಾನಾಸ್ಪದ ವಿಷಯ. ಶ್ರೀ ಜೋಶಿಯವರು ವಯೋವೃದ್ಧರೂ ಶ್ರೇಷ್ಠ ವಿದ್ವಾಂಸರೂ ಆಗಿದ್ದು, ನಾಡಿನ ಗೌರವಾದರಗಳಿಗೆ ಪಾತ್ರರಾಗಿದ್ದಾರೆ. ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಅವರ ದೀರ್ಘ ಕಾಲದ ವಾಙ್ಮಯ ತಪಸ್ಸಿಗೆ ಸಂದ ಸುಯೋಗ್ಯ ಪುರಸ್ಕಾರ. ಶ್ರೀಯುತರು ಕನ್ನಡದ ಕೆಲವೇ ಮಂದಿ ಸಮರ್ಥ ಸಂಶೋಧಕರಲ್ಲಿ ಒಬ್ಬರು; ಅವರ ವಿದ್ವತ್ತೆಲ್ಲ ಕನ್ನಡ ಸಂಸ್ಕೃತಿಯ ಅಧ್ಯಯನ ಅನಾವರಣಗಳಿಗೆ ಮೀಸಲಾಗಿದೆ. ಅವರಿಂದ ರಚಿತವಾಗಿರುವ 'ಕನ್ನಡದ ನೆಲೆ', 'ಕನ್ನಡ ನುಡಿಯ ಜೀವಾಳ' 'ಕನ್ನುಡಿಯ ಹುಟ್ಟು', 'ಮಹಾರಾಷ್ಟ್ರದ ಮೂಲ' 'ಹಾಲು ಮತದರ್ಶನ' ಮುಂತಾದುವು ಕನ್ನಡ ಸಂಶೋಧನೆಯ ವಲಯದಲ್ಲಿ ಬಹಳ ಗಮನಾರ್ಹ ಕೃತಿಗಳು. 'ಕರ್ಣನ ಮೂರು ಚಿತ್ರಗಳು' ಎಂಬ ಪುಸ್ತಕದಲ್ಲಿ ಅವರು ತೌಲನಿಕ ವಿಮರ್ಶೆಯನ್ನು ಕೊಟ್ಟಿದ್ದಾರೆ.

ಶ್ರೀ ಶಂ. ಬಾ. ಜೋಶಿಯವರನ್ನು ಹೃತ್ಪೂರ್ವಕವಾಗಿ ಅಭಿನಂದಿಸಿ, ಅವರ ಪರಿಣತ ಪಾಂಡಿತ್ಯದ ಫಲವನ್ನು ನಾಡು ಮುಂದೆಯೂ ಪಡೆಯುವಂತಾಗಲೆಂದು ಹಾರೈಸುತ್ತೇವೆ.

ಪ್ರೊ. ಮಾಳವಾಡ: ಅರುವತ್ತು

ಪ್ರೊ. ಸ. ಸ. ಮಾಳವಾಡರಿಗೆ ಅರುವತ್ತು ವರ್ಷಗಳು ತುಂಬಿದುವು; ಈ ಸಂದರ್ಭದಲ್ಲಿ ಅವರನ್ನು 'ಪ್ರಬುದ್ಧ ಕರ್ಣಾಟಕ' ಹಾರ್ದಿಕವಾಗಿ ಅಭಿನಂದಿಸುತ್ತದೆ. ಶ್ರೀಯುತರು ಖ್ಯಾತ ವಿದ್ವಾಂಸರು ಮತ್ತು ವಿಮರ್ಶಕರು. 'ಕರ್ಣಾಟಕ ಸಾಹಿತ್ಯ ಸಂಸ್ಕೃತಿ ದರ್ಶನ', 'ಸಾಹಿತ್ಯ ಸಮಾಲೋಚನೆ', 'ಹರಿಹರನ ರಗಳೆಗಳಲ್ಲಿ ಜೀವನ ದರ್ಶನ', 'ಪುಸ್ತಕ ಪ್ರಪಂಚ' ಮುಂತಾದ ಕೃತಿಗಳು ಮತ್ತು ಇತ್ತೀಚೆಗೆ ಪ್ರಕಟವಾದ 'ಸಾಹಿತ್ಯ ಸಂಗಮ'ವೆಂಬ ಹೆಬ್ಬೊತ್ತಗೆ ಅವರ ಸಾಹಿತ್ಯ ಕೃಷಿಯ ವ್ಯಾಪ್ತಿ ವಿಸ್ತಾರಗಳಿಗೆ ದ್ಯೋತಕವಾಗಿವೆ. ಶ್ರೀ ಮಾಳವಾಡರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಪಠ್ಯಪುಸ್ತಕ

ವಿಭಾಗದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಅವರು ಬಹುಕಾಲ ಸಮ್ಮೋದಸಿದ್ದು ಕನ್ನಡದ ಕೆಲಸವನ್ನು ಇತೋಪ್ಯತಿಶಯವಾಗಿ ಮುಂದುವರಿಸಲೆಂದು ಹಾರೈಸುತ್ತೇವೆ.

ವೀರಕೇಸರಿಯವರ ನಿಧನ

ಶ್ರೀ ವೀರಕೇಸರಿ ಸೀತಾರಾಮಶಾಸ್ತ್ರಿಗಳ ನಿಧನದಿಂದ ಕನ್ನಡದ ಹಿರಿಯ ತಲೆಯೊಂದು ಉರುಳಿಬಿದ್ದಂತಾಯಿತು. ಶ್ರೀ ಶಾಸ್ತ್ರಿಗಳು ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ಪ್ರಕಾಂಡ ಪಂಡಿತರಾಗಿದ್ದು, ಸಾರ್ವಜನಿಕ ಜೀವನದಲ್ಲಿ ಪ್ರಮುಖ ಪಾತ್ರ ವಹಿಸಿದವರು. ಕನ್ನಡ ಪತ್ರಿಕೋದ್ಯಮ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಅವರು ಸಲ್ಲಿಸಿದ ಸೇವೆ ಚಿರಸ್ಮರಣೀಯವಾದುದು. ತಮ್ಮ 'ವೀರಕೇಸರಿ' ಎಂಬ ಪತ್ರಿಕೆಯ ಮೂಲಕ ಅವರು ನಾಡಿನ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ, ಬ್ರಿಟಿಷ್ ಸರ್ಕಾರಕ್ಕೆ ಸಣ್ಣ ಮುಳ್ಳಾದರು. ಆ ಪತ್ರಿಕೆಯ ಹೆಸರೇ ಶಾಸ್ತ್ರಿಗಳಿಗೆ ಬಿರುದಾಯಿತು.

ಸಾಹಿತ್ಯ ಪ್ರಪಂಚಕ್ಕೆ ವೀರಕೇಸರಿಯವರ ಕೊಡುಗೆ ಕಡಮೆಯೇನಲ್ಲ. ಬಹು ಸಂಖ್ಯೆಯ ಕೃತಿಗಳು ಅವರ ಲೆಕ್ಕಣಿಯಿಂದ ಹೊರಬಂದಿವೆ. ಐತಿಹಾಸಿಕ ಕಾದಂಬರಿಗಳ ರಚನೆಯಲ್ಲಿ ಅವರದು ಎತ್ತಿದ ಕೈ. 'ದೌಲತ್' 'ಶ್ರೀರಂಗ ರಾಯ', 'ನಗರದ ರಾಣಿ' ಮುಂತಾದುವು ಶಾಸ್ತ್ರಿಗಳ ಐತಿಹಾಸಿಕ ಕಾದಂಬರಿಗಳು; ಇವುಗಳಲ್ಲಿ 'ದೌಲತ್' ಅತ್ಯಂತ ಜನಪ್ರಿಯವೂ ರಸಭರಿತವೂ ಆದ ಕಾದಂಬರಿ. 'ಚಿತ್ರಕೂಟ', 'ಬೃಂದಾವನ' ಇತ್ಯಾದಿ ಸಾಮಾಜಿಕ ಕಾದಂಬರಿಗಳನ್ನೂ ಅವರು ಬರೆದಿದ್ದಾರೆ. ವಾಲ್ಮೀಕಿ ರಾಮಾಯಣದ ಸರಳ ಗದ್ಯಾನುವನ್ನು ಕನ್ನಡಿಗರಿಗೆ ನೀಡಿದ್ದಾರೆ.

ಹೀಗೆ ನಾನಾ ರಂಗಗಳಲ್ಲಿ ದುಡಿದು ನಾಡಿಗೆ ಉಪಕರಿಸಿದ ವೀರಕೇಸರಿಯವರು ಇನ್ನಿಲ್ಲ ಎಂಬುದು ವಿಷಾದದ ಸಂಗತಿ. ಅವರ ಆತ್ಮಕ್ಕೆ ಚಿರಶಾಂತಿ ಲಭಿಸಲಿ.

ಕನ್ನಡಸಾಹಿತ್ಯ ಪರಿಷತ್ತಿನ ಸುವರ್ಣಮಹೋತ್ಸವ ಮತ್ತು ನಲವತ್ತೇಳನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಸರ್ ಎಂ. ವಿಶ್ವೇಶ್ವರಯ್ಯನವರು, ಎಚ್. ವಿ. ನಂಜುಂಡಯ್ಯನವರು, ಕರ್ಪೂರ ಶ್ರೀನಿವಾಸರಾಯರು ಮುಂತಾದ ಲೋಕಸೇವಾಧುರೀಣರಾದ ಕೆಲವು ಮಹನೀಯರ ದೂರದರ್ಶಿತ್ವದ ಫಲವಾಗಿ ಈಗ್ಗೆ ಸು. ಐವತ್ತೈದು ವರ್ಷಗಳಷ್ಟು ಹಿಂದೆ ಕರ್ಣಾಟಕದ ಹೃದಯಸ್ಥಾನವಾದ ಬೆಂಗಳೂರು ನಗರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪಿತವಾಯಿತು. ಅಂದಿನಿಂದ ಕನ್ನಡಿಗರ ಒಕ್ಕೂಟ

ಕ್ಕಾಗಿಯೂ ಕನ್ನಡ ಭಾಷೆ ಸಾಹಿತ್ಯಗಳ ಏಳಿಗೆಗಾಗಿಯೂ ಪರಿಷತ್ತು ವಿವಿಧ ಕಾರ್ಯಕ್ರಮಗಳನ್ನು ಯೋಜಿಸಿಕೊಂಡು ಅವಿಶ್ರಾಂತವಾಗಿ ಕೆಲಸಮಾಡುತ್ತ ಬಂದಿದೆ. ಈ ಕಾರ್ಯಕ್ರಮಗಳ ಯೋಜನೆ ಸಾಧನೆಗಳನ್ನು ತಮ್ಮ ಜೀವನದ ದೀಕ್ಷೆಯೆಂಬುದಾಗಿ ತಿಳಿದು ಅನೇಕ ಶಕ್ತ್ಯುತ್ಸಾಹಸಂಪನ್ನರಾದ ಮಹಾವ್ಯಕ್ತಿಗಳು ಪ್ರತಿಫಲಾಪೇಕ್ಷೆಯಿಲ್ಲದೆ ತಮ್ಮ ಜೀವನಸಾರವನ್ನೇ ಅವಕ್ಕೆ ಧಾರೆಯೆರೆದಿದ್ದಾರೆ, ಕನ್ನಡ ಸರಸ್ವತಿಯ ಗುಡಿಯನ್ನು ಕಟ್ಟಿ ಬೆಳೆಸಿದ ಮಹಾಶಿಲ್ಪಿಗಳಾಗಿದ್ದಾರೆ. ಪರಿಷತ್ತು ಆ ಮಹನೀಯರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸುವುದು ಮಾತ್ರವಲ್ಲದೆ, ಮುನ್ನಡೆಗೆ ಅವರಿಂದ ನಿರಂತರವಾದ ಸ್ಫೂರ್ತಿಯನ್ನು ಪಡೆಯುತ್ತ ಬಂದಿದೆ.

ವ್ಯಕ್ತಿಯ ಬದುಕಿನಲ್ಲಿ ಎಂತೋ ಅಂತು ಕನ್ನಡ ಸಾಹಿತ್ಯ ಪರಿಷತ್ತಿನ ಬದುಕಿನಲ್ಲಿಯೂ ಹಲವು ಬಗೆಯ ಏರಿಳಿತಗಳು ಬಂದು ಹೋಗಿವೆ. ಆದರೂ ನಡೆಯುವ, ದಿಟ್ಟವಾಗಿ ಮುನ್ನಡೆಯುವ ಅದರ ಸಾಂಸ್ಕೃತಿಕ ಯಾತ್ರೆ ಮಾತ್ರ ಅವಿರಾಮಶೀಲವಾದದ್ದಾಗಿದೆ. ಅದು ಕನ್ನಡದ ಜನರನ್ನು ಒಗ್ಗೂಡಿಸುವ, ಅವರಲ್ಲಿ ಭಾಷೆ ಸಾಹಿತ್ಯಗಳ ಬಗೆಗೆ ಆದರಾಭಿಮಾನಗಳನ್ನು ಬೆಳೆಸುವ ಕಾರ್ಯದಲ್ಲಿ ಅನೇಕ ಸಫಲ ಪ್ರಯತ್ನಗಳನ್ನು ನಡೆಸಿದೆ. ಸಾಹಿತ್ಯಿಕ ಪತ್ರಿಕೆಗಳ ಪ್ರಕಟನೆ, ಪ್ರಾಚೀನ ಗ್ರಂಥಗಳ ಸಂಪಾದನೆ, ನವೀನ ಗ್ರಂಥಗಳ ರಚನೆ, ಗಮಕ ತರಗತಿಗಳು, ಸಾಹಿತ್ಯ ಸಮ್ಮೇಳನಗಳು, ಸಾಹಿತ್ಯೋತ್ಸವಗಳು, ಸಾಹಿತ್ಯ ಪರೀಕ್ಷೆಗಳು, ಸಂಚಾರೋಪನ್ಯಾಸಗಳು, ದತ್ತಿ ಉಪನ್ಯಾಸಗಳು, ಕನ್ನಡ ನಿಘಂಟು ನಿರ್ಮಾಣ—ಈ ಹಲವು ಕಾರ್ಯಕ್ರಮಗಳು ಕಾಲದಿಂದ ಕಾಲಕ್ಕೆ ವಿದ್ವಜ್ಜನರ ಮುಂಗಾಣ್ಕೆಯಿಂದಲೂ ಶ್ರಮಸಹಿಷ್ಣುವಾದ ಕಾರ್ಯಶೀಲತೆಯಿಂದಲೂ ರೂಪ ಗೊಂಡು ಸಾರೋದ್ಧಾರವಾಗಿ ನಡೆದುಕೊಂಡು ಬರುತ್ತಿವೆ. ಈಚೆಗೆ ತ್ರೈಮಾಸಿಕ ಯೋಜನೆಯೆಂಬ ವ್ಯಾಪಕವಾದ ಕಾರ್ಯಕ್ರಮವೂ ರೂಪಿತವಾಗಿದೆ. ಕನ್ನಡ ಜನರ ಬೌದ್ಧಿಕ ಪ್ರಗತಿಗಾಗಿ ವ್ಯವಸ್ಥಿತವಾದ ಈ ಕಾರ್ಯಕ್ರಮಗಳನ್ನು ಅಂದಂದಿನ ಪರಿಷತ್ತಿನ ಕಾರ್ಯಕಾರಿವರ್ಗವೂ ಅದರ ಬೆಂಬಲಿಗ ಮಹನೀಯರೂ ಸೇವೆಯ ಹಾಗೂ ಭಾಷಾಭಿಮಾನದ ಮನೋಭಾವದಿಂದಲೇ ಮಾಡಿರುವುದನ್ನು, ಮಾಡು ತ್ತಿರುವುದನ್ನು ಎಲ್ಲ ಕನ್ನಡಿಗರೂ ಕೃತಜ್ಞತೆಯಿಂದ ಸ್ಮರಿಸಿಕೊಳ್ಳಬೇಕಾಗಿದೆ. ಕನ್ನಡ ಜನ ಪರಿಷತ್ತಿನ ಒಳಾಂಗಣದಲ್ಲಿ ಅನೇಕ ಕನಸುಗಳನ್ನು ಕಟ್ಟಿದ್ದಾರೆ, ಆಶೆ ಆಶೋತ್ತರಗಳಿಗೆ ರೂಪ ಕೊಟ್ಟಿದ್ದಾರೆ, ಅವೆಲ್ಲ ಫಲಿಸಿದಾಗ ಸಂತೋಷಿಸಿದ್ದಾರೆ. ಐವತ್ತು ವರ್ಷಗಳಿಗೂ ಮೇಲ್ಪಟ್ಟ ಸಾರ್ಥಕವಾದ ಬದುಕನ್ನು ನಡಸಿರುವ ಕನ್ನಡ ಸಾಹಿತ್ಯ ಪರಿಷತ್ತು ಈಗ ಚಿನ್ನದ ಹಬ್ಬವನ್ನು ಮಾಡಿಸಿಕೊಂಡಿರುವುದು ಸ್ತುತ್ಯರ್ಹ ವಾದ ಅಭಿಮಾನಾಸ್ಪದವಾದ ಸಂಗತಿ. ಅದರ ಕಾರ್ಯರಂಗ ಇನ್ನೂ ವ್ಯಾಪಕ ವಾಗಲಿ, ಅದರ ಇತಿಹಾಸ ಇನ್ನೂ ಭವ್ಯವಾಗಲಿ, ವಜ್ರಮಹೋತ್ಸವ ಶತಮಾ

ನೋತ್ಸವಗಳು ಮುಂಬರುವ ಕಾಲಕ್ಕೆ ಇನ್ನೂ ವೈಭವದಿಂದ ಜರುಗುವಂತಾಗಲಿ, ಕನ್ನಡ ಸರಸ್ವತಿ ತನ್ನ ಮಕ್ಕಳನ್ನು ನಾಡಿನಲ್ಲಿ ಹಿರಿಯ ಒಕ್ಕಲಾಗಿ ಮಾಡಲಿ—ಎಂಬುದಾಗಿ 'ಪ್ರಬುದ್ಧ ಕರ್ಣಾಟಕ'ವು ಹೃತ್ಪೂರ್ವಕವಾಗಿ ಹಾರೈಸುತ್ತದೆ.

ಪರಿಷತ್ತಿನ ಚಿನ್ನದ ಹಬ್ಬವೂ ನಲವತ್ತೇಳನೆಯ ಕನ್ನಡ ಸಾಹಿತ್ಯ ಸಮ್ಮೇಳನವೂ ಈ ಬಾರಿ ಒಟ್ಟಿಗೆ ನಡೆದುದು ಅಪೂರ್ವವಾದ ಒಂದು ಯೋಗ. ಈ ಸಮ್ಮೇಳನದ ವ್ಯವಸ್ಥಾಪಕರು, ಕಾರ್ಯಕರ್ತರು ಹಾಗೂ ಸಮ್ಮೇಳನದ ನಾನಾ ಸಮಾರಂಭಗಳಲ್ಲಿ ಗೋಷ್ಠಿಗಳಲ್ಲಿ ಪಾಲುಗೊಂಡ ವಿದ್ವಜ್ಜನರು ಎಷ್ಟು ಭಾಗ್ಯಶಾಲಿಗಳೋ ಅದರಲ್ಲಿ ಭಾಗವಹಿಸಿದ ಪ್ರತಿನಿಧಿಗಳೂ ಅಷ್ಟೇ ಮಟ್ಟಿಗೆ ಭಾಗ್ಯಶಾಲಿಗಳೆನ್ನಬಹುದು. ಚಿನ್ನದ ಹಬ್ಬ ಜೊತೆಗೂಡಿದ್ದು, ಬೆಂಗಳೂರಿನಲ್ಲಿ ನಡೆದದ್ದು, ತಮ್ಮ ಕನ್ನಡದ ಕಟ್ಟೊಲುಮೆಯಿಂದ ಕನ್ನಡ ಜನರಿಗೆ ಬಹುಪ್ರಿಯರಾಗಿರುವ ಕನ್ನಡ ವಿದ್ವಾಂಸರು ಸಮ್ಮೇಳನಾಧ್ಯಕ್ಷರಾದುದು, ಕನ್ನಡದ ಹಿರಿಯ ಸಾಹಿತಿಗಳೆಲ್ಲ ವೇದಿಕೆಯ ಮೇಲೆಯೂ ಸಭಾಂಗಣದಲ್ಲಿಯೂ ಸರಳವಾಗಿ ಸುಲಭವಾಗಿ ನೋಡಲು ಸಿಕ್ಕುತ್ತಿದ್ದುದು—ಇವೆಲ್ಲ ಈ ಬಾರಿಯ ಸಮ್ಮೇಳನಕ್ಕೆ ಹೊಸ ತೇಜಸ್ಸನ್ನು ತಂದುಕೊಟ್ಟವೆಂದು ಹೇಳಬಹುದು. ಈ ವಿವಿಧ ಗೋಷ್ಠಿಗಳ ಮೂಲಕವಾಗಿ ನಡೆದ ಸಾಹಿತ್ಯ ಸಮಾರಾಧನೆಯ ಸಡಗರ ಸವಿಸೊಗಸುಗಳು ಅನನ್ಯ ರೀತಿಯವಾಗಿದ್ದವು. ಯಾವುದೇ ಒಂದು ಸಾಹಿತ್ಯಿಕ ಸಮಾರಂಭದಲ್ಲಿ ಖಂಡಿತವಾಗಿ ಕಾಣಲು ದೊರೆಯದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಮಹಾಜನರು ಸಭಾಂಗಣದಲ್ಲಿ ಸೇರಿದ್ದುದು ಒಂದು ಮರೆಯಲಾಗದ ಅನುಭವವಾಯಿತು. ಕನ್ನಡನುಡಿ ಕನ್ನಡಿಗರ ಜೀವನದಲ್ಲಿ ಒಂದು ಜೀವಂತಶಕ್ತಿಯಾಗಿ ನೆಲೆಗೊಂಡಿದೆ, ಅವರ ವ್ಯವಹಾರದ ಬದುಕಿನಲ್ಲಿಯೂ ಅದರ ಮಿಡಿತವನ್ನು ಸ್ಪಷ್ಟವಾಗಿ ಕೇಳಬಹುದು–ಎನ್ನುವುದನ್ನು ಆ ಮಹಾಸಭೆ ರುಜುವಾತುಮಾಡಿಕೊಟ್ಟಿತು.

ಕನ್ನಡ ಭಾಷೆ ಸಾಹಿತ್ಯಗಳ ಸಾಧನೆ ಸಾಮರ್ಥ್ಯಗಳ ತುಲನೆಯ ಜತೆಗೆ ಅವರ ಆಸೆ ಆಕಾಂಕ್ಷೆಗಳು, ಕಷ್ಟನಷ್ಟಗಳು, ಏಳಿಗೆಯ ಹೊಲಬುಗಳು, ಹೊರನಾಡವರ ಜತೆಯ ಒಡನಾಟ ಹೋರಾಟಗಳು ಮೊದಲಾದ ಹಲವು ಸಂಗತಿಗಳು ಕಳಕಳಿಯಿಂದ ಚರ್ಚಿಸಲ್ಪಟ್ಟವು. ಸಾಹಿತ್ಯ ಸಮ್ಮೇಳನಾಧ್ಯಕ್ಷರ ಭಾಷಣದಲ್ಲಿಯೂ ಈ ಸಂಬಂಧವಾದ ವಿಚಾರಗಳು ಬಿಚ್ಚುಮನಸ್ಸಿನಿಂದ ಪ್ರಸ್ತಾಪಿಸಲ್ಪಟ್ಟವು. ಕನ್ನಡದ ಹಿತಚಿಂತಕರು ಎದುರಿಸಬೇಕಾದ ಗಂಭೀರ ಸಮಸ್ಯೆಗಳು ನೂಕುತಾಕಾಟಗಳು ಈ ಸಾರಿಯ ಸಮ್ಮೇಳನದಲ್ಲಿ ಮುನ್ನೆಲೆಗೆ ಎದ್ದು ಕಾಣುವಂತಾದುದು ಕೂಡ ಒಂದು ವಿಶೇಷ. ಈ ಬಾರಿಯ ಸಾಹಿತ್ಯ ಸಮ್ಮೇಳನ ಹೀಗೆ ಯಶಸ್ವಿಯಾದುದಕ್ಕೆ ಕಾರಣರಾದ ಎಲ್ಲ ಕಾರ್ಯಕರ್ತರನ್ನೂ ಅವರ ವಿವಿಧ ಚಟುವಟಿಕೆಗಳಲ್ಲಿ ಆಸಕ್ತಿಯಿಂದ ಪಾಲುಗೊಂಡ ಕನ್ನಡಿಗರನ್ನೂ 'ಪ್ರಬುದ್ಧ ಕರ್ಣಾಟಕ' ಅಭಿನಂದಿಸುತ್ತದೆ.

ಸಾದರ ಸ್ವೀಕಾರ

ಆಧುನಿಕ ಜರ್ಮನ್ ಕತೆಗಳು, ಅನು : ಪಾ.ಶ. ಶ್ರೀನಿವಾಸ, ಉಷಾದೇವಿ; ಪ್ರ : ದಕ್ಷಿಣ ಭಾಷಾ ಪುಸ್ತಕ ಸಂಸ್ಥೆ ಮತ್ತು ಹಾರ್ಸ್ಟ್ ಎರ್ಡ್‌ಮನ್ ವೆರ್ಲಾಗ್; ಪುಟ : ೨೩೨; ಬೆಲೆ : ರೂ. ೩-೦೦ (೪-೨೫); ೧೯೭೦.

ಬೆಳಗಾವಿ ಜಿಲ್ಲೆಯ ಬರಹಗಾರರು, ಪ್ರ : ಪುಸ್ತಕ ಪ್ರಕಾಶನ ಸಮಿತಿ, ಬೆಳಗಾವಿ ಜಿಲ್ಲೆಯ ಬರಹಗಾರರ ಬಳಗ, ಬೆಳಗಾವಿ; ಪುಟ : ೩೨; ಬೆಲೆ : ?; ೧೯೭೦.

ಸಮರ್ಪಣೆ (ಕುವೆಂಪು ಸನ್ಮಾನ ಸ್ಮರಣ ಸಂಚಿಕೆ), ಪ್ರ : ಕನ್ನಡ ಸಂಘ, ಸಾಗರ; ಪುಟ : ೮೪; ೧೯೭೦.

೧೫ ಪದ್ಯಗಳು, ಕವಿ : ಯು. ಆರ್. ಅನಂತಮೂರ್ತಿ; ಪ್ರ : ಅಕ್ಷರ ಪ್ರಕಾಶನ, ಸಾಗರ; ಪುಟ : ೪೦; ಬೆಲೆ : ರೂ. ೩-೦೦; ೧೯೭೦.

ಅಕ್ಷರ ಹೊಸ ಕಾವ್ಯ, ಸಂ : ಪಿ. ಲಂಕೇಶ್; ಪ್ರ : ಅಕ್ಷರ ಪ್ರಕಾಶನ, ಸಾಗರ; ಪುಟ : ೩೩೬; ಬೆಲೆ : ರೂ. ೧೫-೦೦; ೧೯೭೦.

ಮುಡಿಪು (ನಾಟಕಗಳು), ಲೇ : ನಾ. ಮ. ಗಂ; ಪ್ರ : ಎಂ. ಜಿ. ನಾಗರಾಜರಾವ್; ಭಾರತೀಯ ಕನ್ನಡಿಗರ ಸಂಘ, ಬೆಂಗಳೂರು-೮; ಪುಟ : ೧೩೮; ಬೆಲೆ : ರೂ. ೩-೦೦; ೧೯೭೦.

ಜ್ಞಾನಗಂಗೋತ್ರಿ (ಕಿರಿಯರ ವಿಶ್ವಕೋಶ), ಸಂಪುಟ ೧; ಪ್ರ : ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ, ಬೆಂಗಳೂರು; ಪುಟ : ೭೪೬; ಬೆಲೆ : ರೂ. ೫೦-೦೦; ೧೯೭೦.

ಧರ್ಮಸ್ಥಳದ ಯಾತ್ರೆ, ಲೇ : ಎಂ. ಎಸ್. ಶೇಷಾದ್ರಿ ಅಯ್ಯಂಗಾರ್; ಪ್ರ : 'ಅರುಣೋದಯ ನಿಲಯ', ಬೂವನಹಳ್ಳಿ ಅಂಚೆ, ಹಾಸನ ತಾಲ್ಲೂಕು; ಪುಟ : ೧೬೨; ಬೆಲೆ : ರೂ. ೨-೫೦; ೧೯೬೯.

O-ಓ (ಕವನ), ಕವಿ : ಜಿ. ರಾಮರಾಯ ಆಚಾರ್ಯ, ಶಂಕರನಾರಾಯಣ ಅಂಚೆ, ದಕ್ಷಿಣ ಕನ್ನಡ ಜಿಲ್ಲೆ; ಪುಟ : ೪೬; ಬೆಲೆ : ರೂ. ೧೧-೦೦; ೧೯೬೮.

ಶಿವಮೊಗ್ಗಾ ಜಿಲ್ಲಾ ಪ್ರಕಾಶಿಕೆ (ರಾಜ್ಯೋತ್ಸವ ಸಂಚಿಕೆ), ಪ್ರ : ಕನ್ನಡ ರಾಜ್ಯೋತ್ಸವ ಸಮಿತಿ, ಶಿವಮೊಗ್ಗ; ಪುಟ : ೯೪; ಬೆಲೆ : ?; ೧೯೭೦.

ಲೇಪಾಕ್ಷಿ ಸ್ವಪ್ನದರ್ಶನಮು (ತೆಲುಗು ಕಾವ್ಯ), ಕವಿ ಮತ್ತು ಪ್ರಕಾಶಕರು : ಬಾಡಾಲ ರಾಮಯ್ಯ, ಕನ್ನಡ ಅಧ್ಯಯನಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ೬; ಪುಟ : ೧೨೦; ಬೆಲೆ : ೩-೦೦; ೧೯೭೦.

ದಾಸಸಾಹಿತ್ಯ : ದ್ವಿತೀಯ ಘಟ್ಟದ ಸಾಧನೆ (ಆರು ಉಪನ್ಯಾಸಗಳು); ಪ್ರ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩; ಪುಟ : ೧೩೨; ಬೆಲೆ : ರೂ. ೨-೫೦; ೧೯೭೦.

ಬೆಂಕಿಯ ಮಡಿಲಲ್ಲಿ (ಕಾದಂಬರಿ), ಲೇ : ರಾ. ಸು. ಮಣಿ; ಪ್ರ : ಮಣಿ ಪ್ರಕಾಶನ, ೨೮೪೭/೯, ಜಯನಗರ, ಮೈಸೂರು ೯; ಪುಟ : ೧೫೦; ಬೆಲೆ : ೨-೫೦; ೧೯೭೦.

ಹೊನ್ನಾರು (ಕಥಾಸಂಕಲನ), ಲೇ : ಎಚ್. ಜಿ. ಲಕ್ಕಪ್ಪಗೌಡ; ಪ್ರ : ಪಲಚಂವಿ ಪ್ರಕಾಶನ, ಮಂಗಳೂರು ೩ ; ಪುಟ : ೧೨೨ ; ಬೆಲೆ : ರೂ. ೪–೦೦ (೭–೦೦) ; ೧೯೭೦.

ತ್ರಿಪದಿಯ ಚತುರ್ಮುಖ (ವಿಚಾರ), ಸಂ : ಎಸ್. ವಿ. ಪರಮೇಶ್ವರಭಟ್ಟ; ಪ್ರ : ಪಲಚಂವಿ ಪ್ರಕಾಶನ, ಮಂಗಳೂರು–೩ ; ಪುಟ : ೧೨೬ ; ಬೆಲೆ : ರೂ. ೪–೦೦ ; ೧೯೭೦.

ಸಮಾರಾಧನ (ವಿಮರ್ಶೆ), ಲೇ : ಗುಂಡ್ಮಿ, ಚಂದ್ರಶೇಖರ ಐತಾಳ ; ಪ್ರ : ಪಲಚಂವಿ ಪ್ರಕಾಶನ, ಮಂಗಳೂರು ೩ ; ಪುಟ : ೧೨೨ ; ಬೆಲೆ : ರೂ. ೪–೦೦ (೭–೦೦) ; ೧೯೭೧.

ರುದ್ರಶಿಲೆ ಸಾಕ್ಷಿ (ಕಥೆಗಳು), ಲೇ : ಅಮೃತ ಸೋಮೇಶ್ವರ; ಪ್ರ : ಸಾಹಿತ್ಯಾಂಜಲಿ ಗ್ರಂಥಮಾಲೆ, ಕೋಟೆಕಾರು, ದ. ಕ. ; ಪುಟ : ೯೮ ; ಬೆಲೆ : ರೂ. ೨–೦೦ ; ೧೯೭೦.

ಕನ್ನಡ ವಿಶ್ವಕೋಶ (ಸಂಪುಟ ಎರಡು), ಪ್ರ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ; ಪುಟ : ೯೫೬ ; ಬೆಲೆ : ರೂ. ೪೦–೦೦ ; ೧೯೭೦.

ಉಷಾ ಸಾಹಿತ್ಯಮಾಲೆ, ಮೈಸೂರು—ಇವರ ಪ್ರಕಟಣೆಗಳು

ಇಂದ್ರಗೋಪ (ಕವನ ಸಂಗ್ರಹ), ಕವಿ : ಎಸ್. ವಿ. ಪರಮೇಶ್ವರಭಟ್ಟ ; ಪುಟ : ೫೩ ; ಬೆಲೆ : ರೂ. ೨–೦೦ ; ೧೯೬೦.

ಕೃಷ್ಣಮೇಘ (ಕವನ ಸಂಗ್ರಹ), ಕವಿ : ಎಸ್. ವಿ. ಪರಮೇಶ್ವರಭಟ್ಟ ; ಪುಟ : ೫೬ ; ಬೆಲೆ : ರೂ. ೨–೦೦ ; ೧೯೭೦.

ಉಪ್ಪುಕಡಲು (ವಚನಗಳು), ಲೇ : ಎಸ್. ವಿ. ಪರಮೇಶ್ವರಭಟ್ಟ; ಪುಟ : xix + ೧೫೪ ; ಬೆಲೆ : ರೂ. ೬–೦೦ (೯–೦೦) ; ೧೯೭೦.

ನಾನು ಕಂಡ ರಶಿಯಾ (ಪ್ರವಾಸ ಕಥನ), ಲೇ : ಬಸವರಾಜ ಕಟ್ಟೀಮನಿ ; ಪುಟ : ೧೨೬ ; ಬೆಲೆ : ರೂ. ೩–೦೦ (೫–೦೦) ; ೧೯೭೦.

ಸ್ವರ್ಗಕ್ಕೆ ಮೂರೇ ಬಾಗಿಲು (ನಾಟಕ), ಶ್ರೀರಂಗ; ಪುಟ : ೧೦೨ ; ಬೆಲೆ : ರೂ. ೩–೦೦ (೫–೦೦) ; ೧೯೭೦.

* * * *

ಶರಾವತಿ (ಕವನ ಸಂಗ್ರಹ), ಕವಿ : ನಾರಾಯಣ ಕಾಗಾಲ ; ಪ್ರ : ನಾರಾಯಣ ಕಾಗಾಲ, ಕುಮಟಾ, (ಉತ್ತರ ಕನ್ನಡ) : ಪುಟ : ೭೨ ; ಬೆಲೆ : ರೂ. ೧–೫೦ ; ೧೯೭೦.

ಬಿಲ್ಲು–ಬಾಣ (ಬೇಟೆಯ ಕತೆಗಳು), ಲೇ : 'ಕಾಕೆಮಾನಿ': ಪ್ರ : ಕಾವೇರಿ ಪ್ರಕಾಶನ, ಮಡಿಕೇರಿ ; ಪುಟ : ೧೧೦ ; ಬೆಲೆ : ರೂ. ೨–೨೫ ; ೧೯೭೦.

ಪೂಗವಾಟೀಶತಕ (ಸಂಸ್ಕೃತ), ಲೇ : ನಾರ್ಣಪ್ಪನ ವೆಂಕಪ್ಪ ; ಪ್ರ : ನಡಹಳ್ಳಿ ಸೀತಾರಾಮಪ್ಪನವರು, ನಿಸರಾಣಿ, ಹೊಸಬಾಳೆ ಅಂಚೆ, ಸೊರಬ ತಾಲ್ಲೂಕು ; ಪುಟ : ೩೯ ; ಬೆಲೆ : ರೂ. ೧–೦೦ ; ೧೯೭೧.

ಮೇಲಿನ ಕೋರ್ಟು (ಕಾದಂಬರಿ), ಲೇ : ಕೆ. ಮಹಾಬಲ ಭಂಡಾರಿ; ಪ್ರ : ಗೀತಾ ಪ್ರಕಾಶನ, ಶ್ರೀರಾಮಪೇಟೆ, ಕಾಸರಗೋಡು ; ಪುಟ : ೧೭೧ ; ಬೆಲೆ : ರೂ. ೩–೦೦ ; ೧೯೭೦.

ಅಥಣಿ ತಾಲೂಕಾ ಕನ್ನಡ ಲೇಖಕರ ಪರಿಚಯ, ಸಂ : ಎಲ್. ಎಸ್. ಬಳ್ಳೊಳ್ಳಿ ಅಥಣಿ; ಪ್ರ : ಅಥಣಿ ತಾಲೂಕಾ ಕನ್ನಡ ಬರಹಗಾರರ ಬಳಗ, ಅಥಣಿ; ಪುಟ : ೫೦; ಬೆಲೆ : ರೂ. ೧–೦೦ ; ೧೯೭೧.

ಜನಪದ ಸಂಸ್ಕೃತಿ (ವಿಮರ್ಶೆ), ಲೇ : ನಂ. ತಪಸ್ವೀಕುಮಾರ್; ಪ್ರ : ಪ್ರಬುದ್ಧ ಪ್ರಕಾಶನ, ಮೈಸೂರು ೨ ; ಪುಟ : ೧೩೨ ; ಬೆಲೆ : ೩–೦೦ ; ೧೯೭೮.


ಸಾಹಿತ್ಯಾರಾಧನೆ (ಕುವೆಂಪು ಸಾಹಿತ್ಯ ವಿಮರ್ಶೆ), ಸಂ : ದೇಜಗೌ, ಸಿ.ಪಿ.ಕೆ.; ಪ್ರ : ಮೋಹನ ಪ್ರಕಾಶನ, ಜಯನಗರ, ಮೈಸೂರು ; ಪುಟ : ೨೦೪; ಬೆಲೆ : ೮–೫೦ (೧೨–೦೦) ; ೧೯೭೦.

ಇತ್ಯಾದಿ (ವಿಮರ್ಶ ಲೇಖನಗಳು), ಲೇ : ಕುವೆಂಪು; ಪ್ರ : ಉದಯರವಿ ಪ್ರಕಾಶನ, ವಾಣೀವಿಲಾಸಪುರಂ ; ಮೈಸೂರು ೫; ಪುಟ : ೧೩೦ ; ಬೆಲೆ : ೩–೦೦ (೫–೫೦); ೧೯೭೦.

ಪ್ರಬುದ್ಧ ಕರ್ಣಾಟಕ

ಸಂಪುಟ ೫೨

ಸಾಧಾರಣ ಸಂವತ್ಸರ



ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೦-೭೧

ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯ, ಮೈಸೂರು

ವಿಷಯಸೂಚಿ

೧. ಕವನಗಳು

		ಶ್ರೀಯುತರಾದ	ಸಂಚಿಕೆ	ಪುಟ
೧.	ದ್ವಂದ್ವ	ಎನ್. ಎಚ್. ನಾಗರಾಜ್	i	೧೦
೨.	ಯಾರ ಬಯಕೆಯ ಗೊಸೆಯೊ !	ಮಾ. ನಾ. ಶ್ರೀಧರ ಉಪ್ಪೂರ್	i	೩೦
೩.	ಪೂಜಾರಿ	ಸದಾಶಿವ, ಎಣ್ಣೆಹೊಳೆ	i	೬೪
೪.	ಕೋಟೆಯಿಲ್ಲದ ಗೋಡೆ	ಆರ್. ಕೆ. ದಿವಾಕರ್	i	೮೮
೫.	ಸಾಧಾರಣ	ಜಿ. ವರದರಾಜರಾವ್	i	೮೯
೬.	ಭೂತ	ಚೆನ್ನಣ್ಣ ವಾಲೀಕಾರ	i	೯೨
೭.	ಕರ್ಣ	ಎಂ. ಸಿ. ವಸಂತಕುಮಾರ್	ii	೩೬
೮.	ವಿವೇಕಾನಂದ	ಕೆ. ನ. ಶಿವತೀರ್ಥನ್	ii	೯೦
೯.	ಶೂನ್ಯ	ತೀರ್ಥಹಳ್ಳಿ ಜೈಪ್ರಕಾಶ	ii	೯೪
೧೦.	ಚಂದ್ರಯಾನ	ಎಸ್. ಕೃಷ್ಣಮುಕಾರಿ	ii	೯೮
೧೧.	ಕೆಲವು ಸುಭಾಷಿತಗಳು	ಮೈಲಾರಗೌಡ ಪಾಟೀಲ	ii	೧೧೯
೧೨.	ಹೆಣ್ಣು	' ಕನ್ನಡ ಕುವರ '	ii	೧೨೬
೧೩.	ನಕ್ಷತ್ರ	ರಾಮಚಂದ್ರ	ii	೧೩೮
೧೪.	ನಿರಾಶಾವಾದಿ	ಕೊವಾನಾ	ii	೧೫೪
೧೫.	ಕರುಣೆಸೆನಗೆ	ನ. ಭ. ನೆಂಪು	iii	೯೩
೧೬.	ನಿರೀಕ್ಷೆ	ಕಮಲ ಹೆಮ್ಮಿಗೆ	iii	೯೪
೧೭.	ನುಡಿನತ್ತುಗಳು	ಅನಂತಕೃಷ್ಣ ಹೆಬ್ಬಾರ್	iii	೧೦೮
೧೮.	ಕದೀಮರು	ಕೆ. ಎಸ್. ಮಧುಸೂದನ	iii	೧೦೯
೧೯.	ಶ್ರಾವಣದ ಸೋನೆ ಮಳೆ	ಸಿ. ಪಿ. ಹೇಮಗಿರಿಮಠ	iii	೧೧೦
೨೦.	ಕೆರೆಯ ನೀರನು ಕೆರೆಗೆ ಚೆಲ್ಲಿ	ಆರ್. ಕೆ. ದಿವಾಕರ್	iii	೧೩೬
೨೧.	ಶಿಲಾಸ್ಮಾರಕ	ನೀಲತ್ತಹಳ್ಳಿ ಕಸ್ತೂರಿ	iii	೧೩೭
೨೨.	ಯಾರ್ಧ್ಯಾರ ನನಗ ನಿನ ಹೊರತು	ಚೆನ್ನಣ್ಣ ವಾಲೀಕಾರ	iv	೩೦
೨೩.	ಪ್ರಶ್ನೆ	ತೀರ್ಥಹಳ್ಳಿ ಜೈಪ್ರಕಾಶ	iv	೪೮
೨೪.	ಮುದಿಮರ	' ನೇತ್ರಾವತೀತನಯ '	iv	೭೬
೨೫.	ನರರೆ ?	ರಾಮಚಂದ್ರ	iv	೮೪
೨೬.	ಬಡಿತ	ಎಚ್. ಆರ್. ದೊರೆಸ್ವಾಮಿ	iv	೧೦೮
೨೭.	ಬಯಕೆ	ಅನಂತಪದ್ಮನಾಭರಾವ್	iv	೧೨೬

೨. ಕಥೆ-ಪ್ರಬಂಧ

೧.	ಚಿತ್ರಾ	ಎಚ್. ಎಸ್. ಕಾತ್ಯಾಯಿನಿ	i	೧೪೫
೨.	ಹೂ	ಏರ್ಯ ಲಕ್ಷ್ಮೀನಾರಾಯಣ ಆಳ್ವ	ii	೯೧
೩.	ಟಾಂಗಾವಾಲ	ಗುಲಾಬ್‌ದಾಸ್ ಬ್ರೋಕರ್ (ಅನು : ಹ. ಕ. ರಾಜೇಗೌಡ)	ii	೧೩೯

೪.	ನಿರೀಕ್ಷೆಯ ಕೋಣೆ	ಸುಬೋಧ್ ಘೋಷ್ (ಅನು : ಎನ್. ಎಚ್. ನಾಗರಾಜ್)	iii	೭೫
೫.	ಖೋಟಾ ನಾಣ್ಯ	ರಾಮದಾಸ್ (ಅನು : ಹ. ಕ. ರಾಜೇಗೌಡ)	iv	೧೦೯

೩. ನಾಟಕ

೧.	ಸ್ಯಾಂಸನ್ ಅಗೋನಿಸ್ಟಸ್	ಮಿಲ್ಟನ್ (ಅನು : ಎಂ. ಆರ್. ನರಸಿಂಹನ್)	i ii iii	೩೯ ೩೭ ೨೧
೨.	ದಾನಚಿಂತಾಮಣಿ ಅತ್ತಿಮಬ್ಬೆ	ಶಾಶ್ವತ ಮುಕ್ಕುಂದಿಮಠ	i	೧೦೩
೩.	ದೂತವಾಕ್ಯ	ಭಾಸಕವಿ (ಅನು : ಎಚ್. ಎಲ್. ಎನ್. ಭಾರತಿ)	iv	೭

೪. ವಿಚಾರ–ವಿಮರ್ಶೆ

೧.	ಕದಂಬರ ಬನವಾಸಿ ಶಾಸನ	ಎ. ವಿ. ನರಸಿಂಹಮೂರ್ತಿ	i	೨೫
೨.	ಪ್ರಾಚೀನ ಕಾವ್ಯಗಳಲ್ಲಿ ಪದ್ಯಗಳ ಪುನರಾವೃತ್ತಿ	ಭೀಮರಾವ್ ಚಿಟಗುಪ್ಪಿ	i	೩೧
೩.	ಮನೋವಿಜ್ಞಾನ ಮತ್ತು ಸಾಹಿತ್ಯ	ಸಿ. ಜಿ. ಯೂಂಗ್ (ಅನು : ಸಿ.ಪಿ.ಕೆ.)	i	೬೫
೪.	ಓಲೆಗ್ರಂಥಗಳು	ಬಿ. ಎಸ್. ಸಣ್ಣಯ್ಯ	i	೯೩
೫.	'೧೯ನೆಯ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ' : ಒಂದು ಸಮೀಕ್ಷೆ	ಶ್ರೀನಿವಾಸ ಹಾವನೂರ	i	೧೨೧
೬.	ಭಾಷಾವಿಜ್ಞಾನದ ಇತ್ತೀಚಿನ ಪ್ರವೃತ್ತಿಗಳು	ಕೆ. ಕೆಂಪೇಗೌಡ	i	೧೫೧
೭.	ಹರಿದಾಸರ ಕೀರ್ತನೆಗಳಲ್ಲಿ ಮಹಾಭಾರತ	ಪಿ. ಎಸ್. ಲೀಲಾವತಿ	ii	೬೩
೮.	ನಾಟ್ಯಾಚಾರ್ಯ ನಂದಿಕೇಶ್ವರ	ಎಂ. ಜಿ. ನಂಜುಂಡಾರಾಧ್ಯ	ii	೯೯
೯.	'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಕೆಲವು ಪ್ರತೀಕ–ಪ್ರತಿಮೆಗಳು	ಗಜಾನನ ಈಶ್ವರ ಹೆಗಡೆ	ii	೧೨೭
೧೦.	ದಾಸಸಾಹಿತ್ಯದ ನುಡಿನಡೆಯ ವಿನ್ಯಾಸ	ಗುಂಡ್ಮಿ, ಚಂದ್ರಶೇಖರ ಐತಾಳ	iii	೪೫
೧೧.	ಕನ್ನಡದಲ್ಲಿ ಪ್ರವಾಸ ಸಾಹಿತ್ಯ	ಬಿ. ಎ. ವಿವೇಕ ರೈ	iii	೯೫
೧೨.	ಅಲಂಕಾರಶಾಸ್ತ್ರ ಪರಿಚಯ	ಎಂ. ಜಿ. ವೆಂಕಟೇಶಯ್ಯ	iv	೩೧
೧೩.	ನವ್ಯಕಾವ್ಯ : ಒಂದು ವಿವರಣೆ	'ವಿಹಂಗಮ'	iv	೪೯
೧೪.	ಕನ್ನಡ ಕಾವ್ಯದಲ್ಲಿ ಕಡಲ ದರ್ಶನ	ರಾ. ಲಕ್ಷ್ಮೀನಾರಾಯಣ	iv	೫೯
೧೫.	ತೆಲುಗಿನಲ್ಲಿ ರಾಮಾಯಣಗಳು	ಎಸ್. ಎಸ್. ದಕ್ಷಿಣಾಮೂರ್ತಿ	iv	೭೭

೫. ಸಂಶೋಧನೆ-ಸಂಪಾದನೆ

೧.	ಯೂಪಸ್ತಂಭಗಳು	ಎಂ. ಚಿದಾನಂದಮೂರ್ತಿ	i	೧೧
೨.	ಯಾಕಮ್ಮ	ಸಂ. ಕಾಳೇಗೌಡ, ನಾಗವಾರ	i	೧೨೦
೩.	ಚಾಳುಕ್ಯ ಗೊಗ್ಗಿರಾಜ	ಎ. ವಿ. ನರಸಿಂಹಮೂರ್ತಿ	ii	೯೫
೪.	ಪಾರ್ವತೀವಲ್ಲಭ ಶತಕ	ಸಂ. ಕೆಳದಿ ಗುಂಡಾ ಜೋಯಿಸ್	iii	೧೧೧
೫.	ಗಿರಿಜೆಯ ಮಹಾನೋಂಪಿ	ಸಂ. ಎಸ್. ಎನ್. ಕೃಷ್ಣಜೋಯಿಸ್	iv	೮೫

೬. ಸ್ಮೃತಿಗಳು

ಸ್ವಾಮಿ ವಿವೇಕಾನಂದರ ಕೆಲವು ಸ್ಮೃತಿಗಳು	ಕೆ. ಎಸ್. ರಾಮಸ್ವಾಮಿ ಶಾಸ್ತ್ರಿ (ಅನು : 'ಇಂ')	i	೧
	ಹರಿಪಾದ ಮಿತ್ರ (ಅನು : 'ಇಂ')	ii	೧
	ಸ್ವಾಮಿ ಶುದ್ಧಾನಂದ (ಅನು : 'ಇಂ')	iii	೧
	ಮೇಡಂ ಇ. ಕಾಲ್ವೆ (ಅನು : 'ಇಂ')	iv	೧

೭. ಕಮ್ಮಟದ ಕಿಡಿಗಳು

೧.	ಚಿಕುಪಾಧ್ಯಾಯನು ತೆರಕಣಾಂಬಿಯಲ್ಲಿ ಹುಟ್ಟಿದವನೆ ?	ಎಸ್. ಎನ್. ಕೃಷ್ಣಜೋಯಿಸ್	i	೧೫೮
೨.	ಬೂತು : ಒಂದು ಟಿಪ್ಪಣಿ	ಆರ್. ರಾಚಪ್ಪ	i	೧೯೧
೩.	ಕವಳಿಗೆ	ಮ. ಸು. ಕೃಷ್ಣಮೂರ್ತಿ	i	೧೬೭
೪.	'ವಡ್ಡಾರಾಧನೆ'ಯಲ್ಲಿ ಆಡುಮಾತಿನ ಶೈಲಿ	ಎಚ್. ಎಸ್. ಬಿಳಿಗಿರಿ	ii	೧೫೫
೫.	'ಮದನಮೋಹಿನೀ ಕಥೆ'ಯ ಕರ್ತೃ ಯಾರು ?	ಎಸ್. ಎನ್. ಕೃಷ್ಣಜೋಯಿಸ್	ii	೧೫೬
೬.	"ಸಟ್ಟಿಬಿಜ್ಜ" ಪದದ ಅರ್ಥವೇನು ?	ಎಂ. ಹನುಮಂತರಾವ್	iii	೧೩೯
೭.	"ಒಸಿ" ವಿಚಾರ	ಎಂ. ಚಿದಾನಂದ ಮೂರ್ತಿ	iii	೧೪೪
೮.	"ಇಟ್ಟಿಗೆಯ ಸುಟ್ಟವನು"	ಆರ್. ರಾಚಪ್ಪ	iii	೧೪೭
೯.	ಕೇಶಿರಾಜನ ಪ್ರಯೋಗಗಳ ಆಕರಗಳು	ಎಸ್. ಶಿವಣ್ಣ	iv	೧೨೭

೮. ಕಾವ್ಯಾವಲೋಕನ

೧-೩.	ಶ್ರೀಮಾತಾ, ಸಂದೀಕೋಲು, ಒಳದನಿ	ಎಸ್. ಬೋರಲಿಂಗಯ್ಯ	i	೧೬೯
೪.	ಇಲಿಯಡ್	ಎಂ. ರಾಮ[illegible]ನ್	i	೧೭೫
೫.	ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು			

೬.	ತುಳುನಾಡಿನ ಇತಿಹಾಸ	ಎ. ವಿ. ನರಸಿಂಹಮೂರ್ತಿ	i	೧೭೮
೭.	ವೈದಿಕ ಪುರಾಣಗಳು	ಗುಂಡ್ಮಿ, ಚಂದ್ರಶೇಖರ ಐತಾಳ	i	೧೮೦
೮.	ಚಿನ್ನದ ಗೆರೆ	ಕಾಳೇಗೌಡ, ನಾಗವಾರ	i	೧೮೧
೯.	ಚಂದ್ರಮಾಯೆ	ಪಿ. ಕೆ. ರಾಜಶೇಖರ	i	೧೮೩
೧೦.	ಎರಡು ಉಂಗುರ	ಕೈ. ಭೈರವಮೂರ್ತಿ	i	೧೮೫
೧೧.	ಕರ್ನಾಟಕದಲ್ಲಿ ಗ್ರಂಥಾಲಯಗಳು	ಟಿ. ವಿ. ಸುಬ್ರಹ್ಮಣ್ಯಂ	i	೧೮೬
೧೨.	ಗತಿಬಿಂಬ	ಸಂಗಮನಾಥ ಜಿ. ಹಂಡಿ	ii	೧೬೧
೧೩.	ಪ್ರತಿಬಿಂಬ	ಎಂ. ಸಿ. ವಸಂತಕುಮಾರ್	ii	೧೬೫
೧೪.	ಚದುರಂಗ	ಎಂ. ಸಿ. ವಸಂತಕುಮಾರ್	ii	೧೬೫
೧೫.	ವಿನಾಯಕ ಕೃಷ್ಣ ಗೋಕಾಕ	ಶ್ರೀಸಂತ	ii	೧೬೯
೧೬.	ವಿ.ಸೀ.–ಎಪ್ಪತ್ತೊಂದು	ಶ್ರೀಸಂತ	ii	೧೭೦
೧೭.	ಬಿಡಿ ಮುತ್ತುಗಳು	ಜಿ.ವಿ.ಡಿ.	ii	೧೭೧
೧೮.	ನಾ ಕಂಡ ಜರ್ಮನಿ	ಕೆ. ರಾಘವೇಂದ್ರರಾವ್	ii	೧೭೨
೧೯.	ಬಸವ ಪ್ರಕಾಶ	ಕೆ. ರಾಘವೇಂದ್ರರಾವ್	ii	೧೭೨
೨೦.	ವಚನ ಪಿತಾಮಹ	ಎಂ. ಜಿ. ನಂಜುಂಡಾರಾಧ್ಯ	iii	೧೫೧
೨೧.	ಹರಿಶ್ಚಂದ್ರ ಸಾಂಗತ್ಯ	ಗುಂಡ್ಮಿ, ಚಂದ್ರಶೇಖರ ಐತಾಳ	iii	೧೫೩
೨೨.	ವಿಮರ್ಶೆಯ ವ್ರತ	ಕೆ. ಎಸ್. ನರಸಿಂಗರಾವ್	iii	೧೫೭
೨೩.	ಆಂಡಾಳ್, ಮಹದೇವಿ, ಮೀರ	ಟಿ. ಎನ್. ನಾಗರತ್ನ	iii	೧೬೧
೨೪.	ಮಾತೃಸಂಹಿತೆ	ಕೆ. ಎಸ್. ಕುಮಾರಸ್ವಾಮಿ	iv	೧೪೩
೨೫.	ಸಕಲ ಜೀವಪ್ರೇಮಿ	ಶ್ರೀಸಂತ	iv	೧೪೮
೨೬.	ಶಿವಲಿಂಗಾರ್ಚನಾ ರಹಸ್ಯ	ಎಂ. ಜಿ ನಂಜುಂಡಾರಾಧ್ಯ	iv	೧೫೦
೨೭.	ಬಸವಾದಿ ಗಣಚರಿತ್ರೆ ಮತ್ತು ಗಣವಚನ ಮಂಜರಿ	ಎಂ. ಜಿ ನಂಜುಂಡಾರಾಧ್ಯ	iv	೧೫೦
೨೮.	ಯುಗಾವತಾರಿ ಗಾಂಧೀಜಿ	ಜಿ.ವಿ.ಡಿ.	iv	೧೫೫
೨೯.	ದೀವಿಗೆ	ಸದಾಶಿವ, ಎಣ್ಣೆಹೊಳೆ	iv	೧೫೬

೯. ವಸ್ತುಕೋಶ

೧.	ಭಾರತೀಯ ಸಾಹಿತ್ಯದಲ್ಲಿ ಗಾಂಧೀಜಿ	ಶ್ರೀಪಾದ ಜೋಶಿ (ಅನು : ಕುಸುಮಗೀತಾ)	i	೧೮೮
೨.	ಕನ್ನಡ ವಿಶ್ವಕೋಶದ ದ್ವಿತೀಯ ಸಂಪುಟದ ಬಿಡುಗಡೆ ಸಮಾರಂಭ	'ಉಮಾಶಂಕರ'	iii	೧೬೪
೩.	ಎಪ್ಪತ್ತೆರಡು ತುಂಬಿದ ವಿ.ಸೀ. ಅವರಿಗೆ ಸನ್ಮಾನ	ಗುಂಡ್ಮಿ, ಚಂದ್ರಶೇಖರ ಐತಾಳ	iii	೧೭೧
೪.	೪೭ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಮತ್ತು ಕನ್ನಡ ಸಾಹಿತ್ಯಪರಿಷತ್ತಿನ ಸುವರ್ಣ ಮಹೋತ್ಸವ	ಕೆ. ಎಸ್. ನರಸಿಂಗರಾವ್	iv	೧೫೮

೧೦. ಸಂಪಾದಕೀಯ

೧.	ಸಾಹಿತ್ಯ ಅಕಾಡೆಮಿ ಬಹುಮಾನ	i	೧೯೫
೨.	ಡಾ. ಆರ್. ಸಿ ಹಿರೇಮಠ : ಐವತ್ತು	i	೧೯೫
೩.	ಸುಬೋಧ ರಾಮರಾಯರ ನಿಧನ	i	೧೯೬
೪.	ಹೊಸ ಸಂಪಾದಕರು	i	೧೯೭
೫.	ಅಭಿನಂದನೆ : ಐವತ್ತು ತುಂಬಿದ ತ.ರಾ.ಸು.	ii	೧೭೬
೬.	ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು	ii	೧೭೬
೭.	ಸನ್ಮಾನಗಳು	iii	೧೭೭
೮.	ವಿಶ್ರಾಂತಿ ವೇತನಗಳು	iii	೧೭೮
೯.	ಕನ್ನಡ ವಿಶ್ವಕೋಶದ ಎರಡನೆಯ ಸಂಪುಟದ ಬಿಡುಗಡೆ	iii	೧೭೯
೧೦.	'ಜ್ಞಾನಗಂಗೋತ್ರಿ'ಯ ಮೊದಲನೆಯ ಸಂಪುಟದ ಬಿಡುಗಡೆ	iii	೧೮೦
೧೧.	ಸಾಹಿತ್ಯ ಅಕಾಡೆಮಿಯ ಬಹುಮಾನ	iv	೧೯೯
೧೨.	ಪ್ರೊ. ಮಾಳವಾಡ : ಅರುವತ್ತು	iv	೧೯೯
೧೩.	ವೀರಕೇಸರಿಯವರ ನಿಧನ	iv	೨೦೦
೧೪.	೪೭ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಮತ್ತು ಪರಿಷತ್ತಿನ ಸುವರ್ಣೋತ್ಸವ	iv	೨೦೦

೧೧. ಸಾದರ ಸ್ವೀಕಾರ

i ೧೯೮, ii ೧೮೮, iii ೧೮೨, iv ೨೦೩

WQ 8726—MUPM—2,000+25—2-6-71

‘ಪ್ರಬುದ್ಧ ಕರ್ಣಾಟಕ’ಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

Annals of Oriental Research, University of Madras; *Brahmavidya*, Adyar, Madras; *Bulletin of the School of Oriental and African Studies*, London; *Journal of the Andhra Historical Research Society* Rajahmundry; *Journal of the Karnataka Historical Research Society* Dharwar; *Quarterly Journal of the Mythic Society*, Bangalore; *The Indian P.E.N.* Bombay; *Annals of the Venkateswara Oriental Institute*, Tirupati; *The Jaina Siddhanta Bhaskara and the Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *Annals of the Bhandarkar Oriental Research Institute*, Poona; *Journal of the Karnatak University*, Dharwar; *Public Affairs*, Bangalore.

‘ಪ್ರಪಂಚ’. ಹುಬ್ಬಳ್ಳಿ; ‘ಕರ್ಮವೀರ’, ಹುಬ್ಬಳ್ಳಿ; ‘ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ (ತೆಲುಗು), ಕಾಕಿನಾಡ; ‘ಜಯಕರ್ನಾಟಕ’, ಧಾರವಾಡ; ‘ಜಯಂತಿ’, ಧಾರವಾಡ, ‘ವಿದ್ಯಾದಾಯಿನಿ’, ಮೈಸೂರು; ‘ಶರಣ ಸಾಹಿತ್ಯ’, ಬೆಂಗಳೂರು; ‘ಶಿವಾನುಭವ’, ಬಿಜಾಪುರ; ‘ಸುಬೋಧ’, ಬೆಂಗಳೂರು; ‘ಜೀವನ’, ಬೆಂಗಳೂರು; ‘ಪುಸ್ತಕ ಪ್ರಪಂಚ’, ಮೈಸೂರು; ‘ಕನ್ನಡ ನುಡಿ’, ಬೆಂಗಳೂರು; ‘ಸೋವಿಯೆತ್ ದೇಶ’, ಮದ್ರಾಸು; ‘ಪ್ರಕಾಶ’, ಉಡುಪಿ; ‘ಭಾರತವಾಣಿ’ (ಹಿಂದಿ), ಧಾರವಾಡ; ‘ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ’, ಬೆಂಗಳೂರು; ‘ಕರ್ಣಾಟಕ ಭಾರತಿ’, ಧಾರವಾಡ.

Reg. No. R. N. 17184/57